ರೈತರ ನೆಚ್ಚುಮೆಚ್ಚಿನ ಮರಗಳು

ಮ ಲ ನರಸಿಂಹ ಅಯ್ಯಂಗಾರ್

ಕನ್ನಡ ಅಧ್ಯಯನ ವಿಭಾಗ

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು-24

ಪ್ರಕಟಣೆ — ೯

ರೈತರ ನೆಚ್ಚುಮೆಚ್ಚಿನ ಮರಗಳು

ಮ. ಲ. ನರಸಿಂಹ ಅಯ್ಯಂಗಾರ್

ನಿವೃತ್ತ ಫಾರಂ ರೇಡಿಯೋ ಆಫೀಸರ್

ಕೇಂದ್ರ ಕೃಷಿ ಮಂತ್ರಾಲಯ

1973

ಕನ್ನಡ ಅಧ್ಯಯನ ವಿಭಾಗ

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು-೨೪

RYTARA NECHCHU - MECHCHINA MARAGALU

FARMERS' FAVOURITE TREES

By

M. L. Narasimha Iyengar

Published by the University of Agricultural Sciences. under the Centrally Sponsored Scheme of Production of Books and Literature in Regional Languages at the University level, of Government of India in the Ministry of Education and Social Welfare.

Pages : Demmy-octavo 273 XX+253 PP.

Price : Ordinary Rs. 12/- Calico Rs. 15/-

U.A.S., BANGALORE-24

First Edition 1973

Copies 2000

Publishers

Secretary, Publicatons Council

University of Agricultural Sciences

BANGALORE - 24

ಮೊದಲ ಮುದ್ರಣ — 1973

ಬೆಲೆ : ಸಾದಾಪ್ರತಿ ರೂ. 12/-

ಕ್ಯಾಲಿಕೊಪ್ರತಿ ರೂ. 15/-

ಪ್ರಕಾಶಕರು

ಕಾರ್ಯದರ್ಶಿ, ಪ್ರಕಟಣಾ ಸಮಿತಿ

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು – 24

ಮುದ್ರಕರು

ರಾಷ್ಟ್ರೋತ್ಥಾನ ಮುದ್ರಣಾಲಯ

ಕೆಂಪೇಗೌಡ ನಗರ

ಬೆಂಗಳೂರು–19

ಅರ್ಪಣೆ

ಎಲ್ಲೋ ಮೂಲೆಯಲ್ಲಿ ಬಿದ್ದಿದ್ದವನನ್ನು ಹೊರಗೆಳೆದು ತಮ್ಮ ತಾಂತ್ರಿಕ ಸಹಾಯಕನನ್ನಾಗಿ ನೇಮಿಸಿಕೊಂಡು, ನನ್ನ ಬರಹ ಮತ್ತು ಇತರ ಬಗೆಯ ಅಲ್ಪ 'ಸಾಮರ್ಥ್ಯ'ವನ್ನು ನನಗೆ ಅರಿವುಮಾಡಿ ಕೊಟ್ಟು, ಲೇಖನ ಮತ್ತು ಪುಸ್ತಕಗಳನ್ನು ಬರೆಯಲು ಪ್ರೇರೇಪಿಸಿ ನನ್ನನ್ನು ಮುಂದಕ್ಕೆ ತಂದ

ಮೈಸೂರು ವ್ಯವಸಾಯ ಇಲಾಖೆಯ ನಿವೃತ್ತ ನಿರ್ದೇಶಕರೂ,
ಇಲಾಖೆಯನ್ನು ಅನೇಕ ರೀತಿ ಬೆಳೆಸಿ ಕೃತಾರ್ಥರೂ ಆದ

ಶ್ರೀ ಕೆ. ಎಚ್. ಶ್ರೀನಿವಾಸನ್

ಅವರಿಗೆ—

ಈ ಪುಸ್ತಕವನ್ನು ಗೌರವ ಮತ್ತು ವಿಶ್ವಾಸದಿಂದ
ಕಾಣಿಕೆಯಾಗಿ ಒಪ್ಪಿಸುತ್ತಿದ್ದೇನೆ.

ಅವರ ಅಭಿಮಾನ, ಆದರ ಅಪಾರ ; ನನ್ನದು ಕೇವಲ ಕುಚೇಲನ ಕಾಣಿಕೆ.

ಪರಿವಿಡಿ

ಮುನ್ನುಡಿ

ಭಾರತದಲ್ಲಿ ಬೇಸಾಯ ಇದುವರೆವಿಗೂ ರೈತನಿಗೆ ತಲೆಮಾರಿನಿಂದ ಅನೂಚಾನವಾಗಿ ಬಂದ ಕಸುಬಾಗಿಯೇ ಉಳಿದಿತ್ತು. ಇತ್ತೀಚಿನ ಒಂದೆರಡು ವರ್ಷಗಳಲ್ಲಿ ಈ ದಿಕ್ಕಿನಲ್ಲಿ ಕ್ರಾಂತಿ ಕಾರಕ ಬದಲಾವಣೆಗಳಾಗಿವೆ. ವಿಜ್ಞಾನ ಮತ್ತು ತಾಂತ್ರಿಕತೆಗಳ ಬಳಕೆಯಿಂದ ಕೃಷಿ ಲಾಭ ದಾಯಕ ಉದ್ಯಮವಾಗಬಲ್ಲದು ಎಂಬ ಅಂಶ ಎಲ್ಲರಿಗೂ ಮನವರಿಕೆಯಾಗಿದೆ. ಈಗಿನ ರೈತ, ಅವನ ಪೂರ್ವಜರಂತಲ್ಲದೆ, ವ್ಯವಸಾಯ ತಜ್ಞರ ಸಹಾಯದಿಂದ ತನ್ನ ಉದ್ಯಮದಲ್ಲಿ ದಕ್ಷತೆಯನ್ನು ಪಡೆಯಲು ಕಾತರನಾಗಿದ್ದಾನೆ.

ನಮ್ಮ ಕೃಷಿ ವಿಶ್ವವಿದ್ಯಾನಿಲಯ ರಾಜ್ಯದ ಬೇಸಾಯ ಪ್ರಗತಿಗೆ ದ್ಯೋತಕ. ಸಂಶೋಧನೆಯಿಂದ ಹೊರಬಂದ ಮಾಹಿತಿಗಳನ್ನು, ಹಸ್ತಪತ್ರಿಕೆ, ಕೈಪಿಡಿ, ವೃತ್ತಪತ್ರಿಕೆ, ಲೇಖನ, ಹೊಲಮನೆ ಭೇಟಿ ಮತ್ತು ಕ್ಷೇತ್ರೋತ್ಸವಗಳೇ ಮೊದಲಾದ ಚಟುವಟಿಕೆಗಳ ಮೂಲಕ ಮುಟ್ಟಿಸಿ ಅವನ ಬೇಸಾಯಕ್ರಮಗಳನ್ನು ಸುಧಾರಿಸುವ ಪ್ರಯತ್ನ ಸತತವಾಗಿ ನಡೆದಿದೆ.

ಕಳೆದ ಕೆಲವು ವರ್ಷಗಳಲ್ಲಿ ರೈತರ ಅಕ್ಷರಜ್ಞಾನ ಗಣನೀಯ ಪ್ರಮಾಣದಲ್ಲಿ ಬೆಳೆದಿದೆ. ಅಲ್ಲದೆ, ಬೇಸಾಯವನ್ನು ಕಸುಬಾಗಿ ಸ್ವೀಕರಿಸಿ ಹಳ್ಳಿಗಾಡಿನಲ್ಲಿ ನೆಲೆಸಿರುವ ವಿದ್ಯಾವಂತರ ಸಂಖ್ಯೆ ಕ್ರಮೇಣ ಬೆಳೆಯುತ್ತ ಬಂದಿದೆ. ಈ ಸಂದರ್ಭದಲ್ಲಿ ಪ್ರಾಯೋಗಿಕ ವಿಜ್ಞಾನ ವಿಷಯವಷ್ಟೇ ಅಲ್ಲದೆ, ಮೂಲಭೂತ ವಿಜ್ಞಾನ ಸಾಹಿತ್ಯವನ್ನು ಕನ್ನಡದಲ್ಲಿ ಒದಗಿಸುವುದು ಅವಶ್ಯಕವಾಗುತ್ತದೆ. ಇದನ್ನು ಮನಗಂಡ ಭಾರತ ಸರ್ಕಾರ, ಪ್ರತಿಯೊಂದು ರಾಜ್ಯದಲ್ಲಿ ಅಲ್ಲಿನ ಪ್ರಾದೇಶಿಕ ಭಾಷೆಗಳಲ್ಲಿ ವಿಜ್ಞಾನ ಸಾಹಿತ್ಯ ವಿಪುಲವಾಗಿ ಬೆಳೆಯುವುದಕ್ಕೆ ಪ್ರೋತ್ಸಾಹ ಕೊಡಲು ಮುಂದೆ ಬಂದಿದೆ. ಪಠ್ಯ ಮತ್ತು ಪೋಷಕ ಸಾಹಿತ್ಯ ನಿರ್ಮಾಣಕ್ಕೆ ಒಂದು ಯೋಜನೆ ಅಂಗೀಕರಿಸಲ್ಪಟ್ಟಿದೆ ಮತ್ತು ಎಲ್ಲ ರಾಜ್ಯಗಳಲ್ಲೂ ಕಾರ್ಯಗತವಾಗಿದೆ. ಉತ್ತಮ ಮಟ್ಟದ ಸಾಹಿತ್ಯ ಬೆಳೆದು ಸರಸ್ವತೀ ಭಂಡಾರ ವೃದ್ಧಿಯಾದಾಗ ವಿಶ್ವವಿದ್ಯಾನಿಲಯದ ಮಟ್ಟದಲ್ಲಿ ಶಿಕ್ಷಣಮಾಧ್ಯಮ, ಇಂಗ್ಲಿಷಿನಿಂದ ಪ್ರಾದೇಶಿಕ ಭಾಷೆಗೆ ಬದಲಾವಣೆ ಸಾಧ್ಯವಾಗ ಬಹುದು. ಈ ಯೋಜನೆಯ ಅಂಗವಾಗಿ ಕೃಷಿ ವಿಜ್ಞಾನದ ಎಲ್ಲ ಪಠ್ಯ ಹಾಗೂ ಪೋಷಕ ವಿಷಯಗಳಲ್ಲಿ ಸಾಹಿತ್ಯ ನಿರ್ಮಾಣದ ಹೊಣೆಯನ್ನು ನಮ್ಮ ವಿಶ್ವವಿದ್ಯಾನಿಲಯ ಒಪ್ಪಿ

ಕೊಂಡಿದೆ. ಮೂಲಗ್ರಂಥ ಬರವಣಿಗೆ ಮತ್ತು ಇಂಗ್ಲಿಷ್ ಮತ್ತಿತರ ಭಾಷೆಗಳಿಂದ ಅನುವಾದ, ಇವೆರಡೂ ಕ್ರಮಗಳಿಂದ ಸಾಹಿತ್ಯಾಭಿವೃದ್ಧಿ ಕಾರ್ಯಕ್ರಮ ಪ್ರಾರಂಭವಾಗಿದೆ.

ಈ ಪ್ರಕಟಣೆಗಳು ರೈತಬಾಂಧವರಿಗೆ, ವಿದ್ಯಾರ್ಥಿಗಳಿಗೆ ಮತ್ತು ವ್ಯವಸಾಯದಲ್ಲಿ ಆಸಕ್ತಿಯುಳ್ಳ ಇತರರಿಗೆ ಉಪಯೋಗವಾಗುವುದೆಂದು ಆಶಿಸಲಾಗಿದೆ.

ಕೃಷಿ ವಿಶ್ವವಿದ್ಯಾನಿಲಯ
ಬೆಂಗಳೂರು
ತಾರೀಖು 15-3-1973

ಕೆ. ಸಿ. ನಾಯಕ್
ಉಪಕುಲಪತಿ

ಕೃಷಿ ವಿಶ್ವವಿದ್ಯಾನಿಲಯದಲ್ಲಿ ಕನ್ನಡದಲ್ಲಿ ಪ್ರಕಟವಾಗುವ ಕೃಷಿ ವಿಜ್ಞಾನ ಪುಸ್ತಕಗಳನ್ನು ಕುರಿತು

ಸಾವಿರದ ಒಂಬತ್ತು ನೂರ ನಲವತ್ತೇಳನೆಯ ವರ್ಷ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದುದು ಎಲ್ಲರಿಗೂ ತಿಳಿದಿರುವ ವಿಷಯ. ನೂರಾರು ವರ್ಷ ಪರಕೀಯರ ಪ್ರಭಾವಕ್ಕೆ ಒಳಗಾದ ನಾಡು ನಾನಾವಿಧದಲ್ಲಿ ಜರ್ಝರಿತವಾಗಿತ್ತು. ಅಜ್ಞಾನ, ಬಡತನ, ಆಲಸ್ಯಗಳು ತಾಂಡವವಾಡುತ್ತಿದ್ದವು. ಜನತೆ ಕಂಗೆಟ್ಟಿತ್ತು. ನಾಡಿನ ಸರ್ವಾಂಗ ಸುಂದರ ಅಭಿವೃದ್ಧಿ ಕಾರ್ಯವನ್ನು ಸ್ವತಂತ್ರ ಸರಕಾರವು ಪ್ರಪ್ರಥಮ ಕರ್ತವ್ಯವೆಂದು ಕೈಗೆತ್ತಿಕೊಂಡಿತು. ಅದರಲ್ಲಿ ಭಾಷೆ ಹಾಗೂ ಸಾಹಿತ್ಯಗಳ ಬೆಳವಣಿಗೆಯೂ ಒಂದಾಗಿತ್ತು.

ಮೂರು ಪಂಚವಾರ್ಷಿಕ ಯೋಜನೆಗಳ ಅವಧಿಯಲ್ಲಿ ದೇಶದ ಅಭಿವೃದ್ಧಿ ಕಾರ್ಯವು ಮುಂದುವರಿಯಿತು. ಇಡೀ ದೇಶಕ್ಕೆ ಒಂದು ಶಿಕ್ಷಣ ಧೋರಣೆ ಇರಬೇಕಾದುದು ಅವಶ್ಯವೆಂದು ಮನಗಂಡು ಸಾವಿರದ ಒಂಭತ್ತುನೂರ ಅರವತ್ತನಾಲ್ಕರಲ್ಲಿ ರಾಷ್ಟ್ರದಲ್ಲಿ ಒಂದು ಶಿಕ್ಷಣ ಆಯೋಗದ ಸ್ಥಾಪನೆಯಾಯ್ತು. ಅದು ಎರಡು ವರ್ಷಗಳ ದೀರ್ಘ ಪ್ರಯತ್ನಪಟ್ಟು ರಾಷ್ಟ್ರೀಯ ಶಿಕ್ಷಣ ಧೋರಣೆಯನ್ನು ರೂಪಿಸಿತು.

ರಾಷ್ಟ್ರೀಯ ಶಿಕ್ಷಣ ಧೋರಣೆ :

> ಭಾರತದಲ್ಲಿ ಭಾಷೆಗಳ ಹಾಗೂ ಸಾಹಿತ್ಯಗಳ ಚೇತನಾವೃದ್ಧಿಯು ಶಿಕ್ಷಣ ಮತ್ತು ಸಂಸ್ಕೃತಿಗಳ ಬೆಳವಣಿಗೆಯನ್ನು ಅವಲಂಬಿಸಿದೆ. ಇವು ಕೈಗೂಡಿ ಬರದಹೊರತು, ಜನತೆಯ ಸೃಜನಾತ್ಮಕ ಚೇತನವು ಕುದುರಲಾರದು ; ದೇಶದಲ್ಲಿಯ ಶಿಕ್ಷಣ ಮಟ್ಟವು ಸುಧಾರಿಸಲಾರದು ; ಜನತೆಯಲ್ಲಿ ಜ್ಞಾನಪ್ರಸಾರ ಕಾರ್ಯ ನಡೆಯಲಾರದು ; ಬುದ್ಧಿವಂತರು ಹಾಗೂ ಸಾಮಾನ್ಯರ ನಡುವಣ ಅಂತರ ಹಾಗೆಯೇ ಉಳಿಯುವುದು.

ಸಂಸತ್ತಿನ ಎರಡೂ ಮನೆಗಳಲ್ಲಿ ಕೂಲಂಕಷವಾಗಿ ಚರ್ಚೆ ನಡೆದು ಭಾರತ ಸರಕಾರವು ಸಾವಿರದ ಒಂಭತ್ತುನೂರ ಅರವತ್ತೆಂಟರಲ್ಲಿ ಮೇಲಿನ ರಾಷ್ಟ್ರೀಯ ಶಿಕ್ಷಣ ಧೋರಣೆಯನ್ನು ಅಂಗೀಕರಿಸಿತು.

ಭಾರತದಲ್ಲಿ ಹದಿನಾಲ್ಕು ಮುಖ್ಯ ಪ್ರಾದೇಶಿಕ ಭಾಷೆಗಳ ಬೆಳವಣಿಗೆಯು ಹಿಂದಿಯ ಬೆಳವಣಿಗೆಯೊಂದಿಗೇ ನಡೆಯಬೇಕು; ಆಗ ನಿಜವಾದ ರಾಷ್ಟ್ರದ ಶಿಕ್ಷಣ ಹಾಗೂ ಸಂಸ್ಕೃತಿಗಳ ಮುನ್ನಡೆಗೆ ಒಂದು ಚಾಲನೆ ದೊರೆಯುತ್ತದೆ; ಈ ರಾಜ್ಯ ಭಾಷೆಗಳೆಲ್ಲವೂ ಸಂಪದ್ಭರಿತವಾಗಿ ಬೆಳೆದು ಆಧುನಿಕ ಕಾಲದ ಜ್ಞಾನಪ್ರಸಾರ ಸಾಧನಗಳಾಗುವಂತೆ ಕೇಂದ್ರ ಸರಕಾರವು ರಾಜ್ಯ ಸರಕಾರಗಳ ಸಹಯೋಗ ದೊಂದಿಗೆ ಸಂಯೋಜಿತ ಯತ್ನ ನಡೆಸಬೇಕು.

ಇದು ಸಂಸತ್ತು ಕೈಗೊಂಡ ನಿರ್ಧಾರ.

ಈ ನಿರ್ಧಾರದೊಂದಿಗೆ ನಾಡಿನಲ್ಲಿ ಕಾರ್ಯವು ಪ್ರಾರಂಭವಾಗಿದೆ. ಭಾರತ ಸರಕಾರದಲ್ಲಿ ಶಿಕ್ಷಣ ಹಾಗೂ ಯುವಜನ ಸಚಿವಾಲಯ ಮತ್ತು ರಾಜ್ಯ ಸರಕಾರಗಳಲ್ಲಿ ಶಿಕ್ಷಣ ಇಲಾಖೆಗಳು ಈ ಮಹಾನ್ ಕಾರ್ಯದ ಹೊಣೆ ಹೆಗಲಿಗೇರಿಸಿಕೊಂಡಿವೆ. ಈ ಕಾರ್ಯಕ್ಕಾಗಿ ಕೇಂದ್ರವು, ಒಂದೊಂದು ರಾಜ್ಯಕ್ಕೆ ನಾಲ್ಕನೆಯ ಪಂಚವಾರ್ಷಿಕ ಯೋಜನಾವಧಿ ಪೂರ್ತಿಗೊಳ್ಳುವ ಅವಧಿಯಲ್ಲಿ ವೆಚ್ಚಕ್ಕೆಂದು ಒಂದು ಕೋಟಿ ರೂಪಾಯಿಗಳ ಮೊತ್ತವನ್ನು ಕೊಡುತ್ತದೆ.

ದೇಶದಲ್ಲಿ ಆಂಗ್ಲ ಆಳ್ವಿಕೆ ಇದ್ದಾಗ ಆಡಳಿತ ಭಾಷೆ ಹಾಗೂ ಶಿಕ್ಷಣ ಮಾಧ್ಯಮ ಗಳು ಇಂಗ್ಲಿಷ್ ಭಾಷೆಯಲ್ಲಿ ನಡೆಯಲು ಅವಕಾಶ ಕಲ್ಪಿಸಿಕೊಡಲಾಯಿತು. ಹೀಗೆ ಮಾಡುವಲ್ಲಿ ದೇಶದ ಹಾಗೂ ದೇಶಿಗರ ಹಿತಸಾಧನೆಗೆ ಎಳ್ಳಷ್ಟೂ ಆದ್ಯತೆ ಕೊಡಲಿಲ್ಲ. ಪರಕೀಯರಾದ ಆಡಳಿತಗಾರರು ತಮ್ಮ ಆಡಳಿತವನ್ನು ಸರಾಗವಾಗಿ ನಡೆಯಿಸಿಕೊಂಡು ಹೋಗಲು, ಆಳ್ವಿಕೆಯ ಬೇರುಗಳನ್ನು ಭದ್ರಗೊಳಿಸಲು ಹಾಗೂ ಆಳ್ವಿಕೆಗೆ ಬೇಕಾದ ಸಿಬ್ಬಂದಿಯನ್ನು ಸಿದ್ಧಗೊಳಿಸಲು ಯೋಚನೆ ಮಾಡಿದರೇ ಹೊರತು, ಅದರ ಪರಿಣಾಮವು ಭಾಷೆ, ಸಂಸ್ಕೃತಿಗಳ ಮೇಲೆ ಏನಾದೀತೆಂಬುದನ್ನು ಗಣನೆಗೆ ತಂದು ಕೊಳ್ಳಲಿಲ್ಲ. ಇಲ್ಲವೆ ಅವುಗಳನ್ನು ಹತ್ತಿಕ್ಕಿ ತಮ್ಮ ಭಾಷೆ ಹಾಗೂ ಸಂಸ್ಕೃತಿಗಳ ಮುದ್ರೆಯೊತ್ತುವ ಸಂಚುಗಾರಿಕೆಯೂ ಆಗಿರಬೇಕು. ದೇಶಕ್ಕೆ ಸ್ವಾತಂತ್ರ್ಯ ಬಂದಿದೆ; ಆದರೂ ಇಂಗ್ಲಿಷ್‌ಗೆ ಆಡಳಿತ ಹಾಗೂ ಶಿಕ್ಷಣ ಮಾಧ್ಯಮದ ಸ್ಥಾನ ಅನೇಕ ಕಡೆಗಳಲ್ಲಿ ದೇಶವು ದಾಸ್ಯದಲ್ಲಿರುವಾಗಿನಂತೆಯೇ ಮುಂದುವರಿದಿದೆ.

ಶಿಕ್ಷಣವು ಜನತೆಯ ತಲೆ, ಕಣ್ಣುಗಳು. ವಿಚಾರಶಕ್ತಿಯ ಬೆಳವಣಿಗೆ ನಡೆದು ಜ್ಞಾನಚಕ್ಷು ಕಾಂತಿಯುತವಾದಾಗ ಯಾವುದೊಂದು ಜನಾಂಗ ಸುಸಂಸ್ಕೃತವೆನ್ನಿಸಿ ಕೊಳ್ಳುತ್ತದೆ; ಅಭಿವೃದ್ಧಿ ಹೊಂದಲು ಅದಕ್ಕೆ ಬಲಸಂಚಯವಾಗುತ್ತದೆ. ಅಂತೆಯೇ ಜಾಗೃತನಾಡಿನಲ್ಲಿ ಯೋಗ್ಯ ಶಿಕ್ಷಣದ ಏರ್ಪಾಡಿಗೆ ಅವಕಾಶವಿರುತ್ತದೆ. ಶಿಕ್ಷಣವು ಪರಿಣಾಮಕಾರಿಯಾಗಬೇಕಾಗಿದ್ದಲ್ಲಿ ಅದರ ಮಾಧ್ಯಮವು ಪ್ರಾದೇಶಿಕ ಭಾಷೆ ಇಲ್ಲವೆ ತಾಯಿ ನುಡಿಯಾಗಿರಬೇಕಾದುದು ಅವಶ್ಯವೆಂದು ಎಲ್ಲ ಶಿಕ್ಷಣತಜ್ಞರು ಅಭಿಪ್ರಾಯ ಪಟ್ಟಿದ್ದಾರೆ. ನೂರಾರು ವರ್ಷಗಳಿಂದ ಉಚ್ಚಮಟ್ಟದಲ್ಲಿ ಶಿಕ್ಷಣ

ಮಾಧ್ಯಮವಾಗಿ ಸಾಗಿಬಂದ ಇಂಗ್ಲಿಷ್ ಭಾಷೆಯ ಪ್ರಭಾವವು ನಮ್ಮ ಶಿಕ್ಷಣದಲ್ಲಿ ಆಳವಾಗಿ ಬೇರು ಬಿಟ್ಟುದನ್ನು ಕಾಣುತ್ತೇವೆ. ವಿಜ್ಞಾನ ವಿಷಯದಲ್ಲಿಯಂತೂ ಈ ಪ್ರಭಾವವು ಭಾರಿ ಎದ್ದು ಕಾಣುವಂತಹುದು. ಅಪಾರ ಜ್ಞಾನರಾಶಿಯು ಆಂಗ್ಲಭಾಷೆಯಲ್ಲಿರುವಷ್ಟು ಭಾರತೀಯ ಯಾವುದೇ ಭಾಷೆಗಳಲ್ಲಿ ಇಲ್ಲ. ಅಲ್ಲದೆ ವಿಶ್ವದ ಬಹುಜನರ, ಅದರಲ್ಲಿಯೂ ಮುಂದುವರಿದ ಜನಾಂಗದ ಭಾಷೆ ಇದಾದುದ ರಿಂದ ದಿನ ದಿನಕ್ಕೂ ಇದು ಬೆಳೆಯುತ್ತಲೇ ಇದೆ. ಇದರ ಪ್ರಯೋಜನವನ್ನು ನಾವು ಪಡೆಯಲೇಬೇಕಾಗಿದೆ.

ದೇಶಭಾಷೆಯಲ್ಲಿ ಬೋಧೆ ನಡೆದಾಗ, ಜ್ಞಾನದ ಸ್ಪಷ್ಟ ತಿಳುವಳಿಕೆಯಾಗು ತ್ತದೆ ; ಬುದ್ಧಿ ಪುಷ್ಟಿಗೊಳ್ಳುತ್ತದೆ ; ಸಾಹಿತ್ಯ, ಸಂಸ್ಕೃತಿ ಹಾಗೂ ವಿಜ್ಞಾನಗಳ ಬೆಳವಣಿಗೆಗೆ ರೆಕ್ಕೆ ಮೂಡುತ್ತದೆ. ಇದನ್ನು ಮನಗಂಡಾಗ, ವಿದ್ಯಾಭ್ಯಾಸದ ಎಲ್ಲ ಮಟ್ಟಗಳಲ್ಲಿ ದೇಶ ಭಾಷೆಯೇ ಶಿಕ್ಷಣಮಾಧ್ಯಮವಾಗುವುದು ಅಗತ್ಯವೆನಿಸುವುದು ; ಅನಿವಾರ್ಯವೂ ಆದೀತು.

ಈ ಬದಲಾವಣೆಯು ಇಂದೇ ನಡೆಯಬೇಕೇ ? ಇದಕ್ಕೆ ಸಿದ್ಧತೆಗಳನ್ನೇನಾ ದರೂ ಮಾಡಿಕೊಳ್ಳುವುದಿದೆಯೇ ? ಮಾಡಿಕೊಳ್ಳಬೇಕಾಗಿದ್ದಲ್ಲಿ ಅವು ಯಾವುವು ? ಅವುಗಳ ಸಾಧನೆಯಲ್ಲಿ ಯಾವ ದಿಶೆಯಲ್ಲಿ ಯತ್ನಗಳು ನಡೆಯಬೇಕು ?

ಈ ಕೆಲವು ಪ್ರಶ್ನೆಗಳಿಗೆ ಉತ್ತರ ರೂಪವಾಗಿ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಹಲವು ಕಾರ್ಯಗಳನ್ನು ಕೈಗೊಂಡಿವೆ.

ಶಿಕ್ಷಣಮಾಧ್ಯಮವು ಪ್ರಾದೇಶಿಕ ಭಾಷೆಗಳಲ್ಲಿ ನಡೆಯಬೇಕಾಗಿದ್ದಲ್ಲಿ ಹಲಕೆಲವು ಸಿದ್ಧತೆಗಳು ಅವಶ್ಯವಿದೆ. ಪಠ್ಯ ಪುಸ್ತಕಗಳು, ಪೂರಕ ಪಠ್ಯ ಪುಸ್ತಕಗಳು, ಆಧಾರ ಗ್ರಂಥಗಳು, ಸಹಾಯಕ ಗ್ರಂಥಗಳು ಹಾಗೂ ಸಾಮಾನ್ಯಜ್ಞಾನ ಪುಸ್ತಕಗಳು ಪ್ರಾದೇ ಶಿಕ ಭಾಷೆಯಲ್ಲಿ ಸಿದ್ಧವಾಗಬೇಕು. ಈ ಕೆಲಸ ಸುಲಭವಲ್ಲ. ಒಂದು ನಾಡನ್ನು ಸುಲಭ ವಾಗಿ ಕಟ್ಟಿಬಿಡಬಹುದು ; ಆದರೆ ಒಂದು ನುಡಿ ಅಭಿವೃದ್ಧಿಗೊಳಿಸುವ ಕೆಲಸವು ಅತೀವ ಕಷ್ಟಸಾಧ್ಯವಾದ ಕಾರ್ಯ. ಹಲವಾರು ಜನ ತಂತ್ರಜ್ಞರು, ಶಿಕ್ಷಕರು, ಬರಹಗಾರರು ಬಹುಕಾಲ ಶ್ರಮಿಸಬೇಕಾಗುವುದು. ಅಪಾರ ಹಣ ವೆಚ್ಚವಾಗುವುದು. ಪ್ರಾದೇಶಿಕ ಭಾಷೆಯಲ್ಲಿ ಗ್ರಂಥರಚನೆಗೆ ತಾಂತ್ರಿಕ ಶಬ್ದಾವಳಿಗಳು ಮೊದಲು ಸಿದ್ಧವಾಗಬೇಕು. ಪ್ರಾದೇಶಿಕ ಭಾಷೆಯಲ್ಲಿ ಗ್ರಂಥಗಳು ಲಭ್ಯವಿರುವುದರ ಜೊತೆಗೆ ಶಿಕ್ಷಕರಿಗೆ ಪ್ರಾದೇಶಿಕ ಭಾಷೆಯಲ್ಲಿ ಬೋಧನೆ ಮಾಡುವ ಸಾಮರ್ಥ್ಯ ಬಂದಾಗ ಪ್ರಾದೇಶಿಕ ಭಾಷೆಯಲ್ಲಿ ಶಿಕ್ಷಣ ಕೊಡುವುದು ಸಾಧ್ಯವಾಗುತ್ತದೆ. ಜೀವಮಾನವೆಲ್ಲ ಒಂದು ಭಾಷೆಯಲ್ಲಿ ಪಳಗಿ, ಅದರಲ್ಲಿಯೇ ಬೋಧೆ ಮಾಡುತ್ತಾ ಬಂದವರನ್ನು, ಒಮ್ಮೆಲೇ ಬೇರೊಂದು ಭಾಷೆಯಲ್ಲಿ ಬೋಧೆ ಮಾಡೆಂದು ಹೇಳಿದರೆ, ಅದು ಅವರ ತಾಯಿ ನುಡಿಯಾಗಿದ್ದರೂ ಅದರಲ್ಲಿ ಬೋಧೆಮಾಡಲು ಅವರಿಗೆ ಕಷ್ಟವಾಗುತ್ತದೆ.

ಪ್ರಯತ್ನಪೂರ್ವಕವಾಗಿ ಅಂಥವರು ಸಾಧನೆಯನ್ನು ಮಾಡಬೇಕಾಗುತ್ತದೆ. ಇವರಿಗೆ ಈ ದಿಶೆಯಲ್ಲಿ ತರಬೇತಿಯೂ ಬೇಕಾಗುತ್ತದೆ. ಇದು ಕೂಡ ಈ ಯತ್ನದ ಒಂದಂಶವಾಗಿದೆ.

ಮೂಲಗ್ರಂಥರಚನೆ ಮಾಡುವುದೊಂದರಿಂದಲೇ ಗ್ರಂಥಭಂಡಾರ ಬೆಳೆಯುವುದಿಲ್ಲ. ಬೇರೆ ಬೇರೆ ಭಾಷೆಗಳಲ್ಲಿರುವ ಜ್ಞಾನರಾಶಿಯನ್ನು ತರ್ಜುಮೆಗೊಳಿಸಿ ಒಳಹಾಕಿ ಕೊಳ್ಳುವುದರಿಂದ ಪ್ರಾದೇಶಿಕ ಭಾಷಾಭಂಡಾರವನ್ನು ತ್ವರಿತವಾಗಿ, ಸಂಪದ್ಭರಿತವಾಗಿ ಬೆಳೆಯಿಸಬಹುದಾಗಿದೆ. ಅದರಲ್ಲಿಯೂ ಇಂಗ್ಲಿಷ್ ಭಾಷೆಯಲ್ಲಿರುವ ಅಪಾರವಾದ ಜ್ಞಾನವು ಪ್ರಾದೇಶಿಕ ಭಾಷೆಗಳಿಗೆ ಸಾಗಿ ಬರಬೇಕಾಗಿದೆ. ಈ ಪ್ರಯತ್ನವನ್ನು ವಿಶ್ವವಿದ್ಯಾನಿಲಯಗಳು, ಸಾಹಿತ್ಯಸಂಸ್ಥೆಗಳು, ಹಾಗೂ ಇತರ ಶಿಕ್ಷಣ ಕೇಂದ್ರಗಳು ಮಾಡಬಲ್ಲವು.

ಕನ್ನಡದಲ್ಲಿ ಕೃಷಿವಿಜ್ಞಾನ ಸಾಹಿತ್ಯ ನಿರ್ಮಾಣದ ಹೊಣೆಯು ಬೆಂಗಳೂರಿನ ಕೃಷಿ ವಿಶ್ವವಿದ್ಯಾನಿಲಯದ್ದಾಗಿದೆ. ಕೃಷಿವಿಜ್ಞಾನವು ವ್ಯಾಪಕವಾಗಿದೆ. ಅದರಲ್ಲಿ ವ್ಯವಸಾಯ, ಪಶುಸಂಗೋಪನೆ, ತೋಟಗಾರಿಕೆ, ಮತ್ಸ್ಯಪರಿಪಾಲನೆ, ವನ ಸಂಪತ್ತು, ಗೃಹವಿಜ್ಞಾನಗಳು ಸಮಾವೇಶವಾಗುತ್ತವೆ. ಈ ಎಲ್ಲ ವಿಷಯಗಳಿಗೆ ಸಂಬಂಧಪಟ್ಟ ಗ್ರಂಥನಿರ್ಮಾಣ ಕಾರ್ಯವು ನಡೆಯುತ್ತದೆ. ಸ್ವತಂತ್ರ ಕೃತಿರಚನೆಯ ಜೊತೆಗೆ ಬೇರೆ ಬೇರೆ ಭಾಷೆಗಳಲ್ಲಿಯ ಉಪಯುಕ್ತ ಗ್ರಂಥಗಳ ಭಾಷಾಂತರವನ್ನೂ ಹಮ್ಮಿಕೊಳ್ಳಲಾಗಿದೆ. ಸ್ಥೂಲವಾಗಿ ಈ ಗ್ರಂಥಗಳನ್ನು ಮೂರು ವಿಧವಾಗಿ ವಿಂಗಡಿಸಬಹುದು.

1. ಪಠ್ಯಪುಸ್ತಕಗಳು.
2. ಪೂರಕ ಪಠ್ಯಪುಸ್ತಕಗಳು.
3. ಸಹಾಯಕ ಜ್ಞಾನಪುಸ್ತಕಗಳು.

ಮೊದಲಿನ ಎರಡು ವಿಧವಾದ ಗ್ರಂಥಗಳು ವ್ಯವಸಾಯ ಶಿಕ್ಷಣದ ವಿದ್ಯಾರ್ಥಿಗಳಿಗೆ ಉಪಯುಕ್ತವಾದರೆ, ಮೂರನೆಯ ಗುಂಪಿಗೆ ಸೇರಿದ ಪುಸ್ತಕಗಳು ಜನ ಸಾಮಾನ್ಯರಿಗೆ ಜ್ಞಾನ ನೀಡುವುದರಲ್ಲಿ ಸಹಕಾರಿಯಾಗುತ್ತವೆ.

ವ್ಯವಸಾಯವು ನಮ್ಮ ರಾಜ್ಯದ ಬಹು ಜನರ ಉದ್ಯೋಗವಾಗಿದೆ. ಮಾನವನ ಜೀವನಾವಶ್ಯಕಗಳಲ್ಲಿ ಪ್ರಾಮುಖ್ಯವಾದ ಅನ್ನ, ವಸ್ತ್ರಗಳ ಪೂರೈಕೆಯು ಈ ಉದ್ಯೋಗವನ್ನೇ ಅವಲಂಬಿಸಿದೆ. ರಾಜ್ಯದ ಆರ್ಥಿಕ ಭದ್ರತೆಯೂ ಇದರ ಬೆಳವಣಿಗೆಯನ್ನೇ ಅವಲಂಬಿಸಿದೆ.

ವ್ಯವಸಾಯ ವಿಜ್ಞಾನವಿಂದು ಬಹುಬಗೆಯಾಗಿ ಮೈದುಂಬಿ ಬೆಳೆಯುತ್ತ ನಡೆದಿದೆ. ವ್ಯವಸಾಯೋತ್ಪಾದನೆಯಲ್ಲಿ ಬೆರಳು ಕಚ್ಚುವ ಹೆಚ್ಚಳವು ಇದರಿಂದ

ಸಾಧ್ಯವಾಗಿದೆ. ಅನ್ನಾನ್ನಗತಿಕವಾದ ನಾಡನ್ನು ಹಸಿವೆಯಿಂದ ಮುಕ್ತಮಾಡಿದ ಕೀರ್ತಿ ಈ ಬೃಹದಾಕಾರವಾಗಿ ಬೆಳೆಯುತ್ತಿರುವ ವ್ಯವಸಾಯ ವಿಜ್ಞಾನಕ್ಕೆ ಸಲ್ಲುತ್ತದೆ. ಶಕ್ತಿಗುಂದಿದ, ನಿರ್ವೀರ್ಯನಾದ ರೈತನಿಂದು ಬಲಿಷ್ಠನಾಗಿ, ಚೇತರಿಸಿಕೊಳ್ಳಲು ಸಹಾಯಕವಾಗಿದೆ. ಹಲವರು ಇದನ್ನು ನಾಡಿನಲ್ಲಿ ಒಂದು ಕ್ರಾಂತಿಯೇ ನಡೆದಿದೆ ಯೆಂದು ಕರೆಯುತ್ತಾರೆ. ಅದೇ **'ಹಸುರು ಕ್ರಾಂತಿ'**! ನಿಜಕ್ಕೂ ಎಷ್ಟು ಅರ್ಥ ಗರ್ಭಿತವಾಗಿದೆ ಈ ನುಡಿ! ಕ್ರಾಂತಿಯ ಬಣ್ಣ ಕೆಂಪು; ಹಸುರು ಬಣ್ಣಕ್ಕೇಕೆ ಈ ನಂಟು? ಕ್ರಾಂತಿ ಭಯಾನಕ; ನಾಶ ಅದರ ಕಾರ್ಯ! ಕ್ರಾಂತಿಯ ಬೆನ್ನ ನ್ನೇರಿ ಬರುವುದು ಶಾಂತಿ; ಕ್ರಾಂತಿಯ ಛಾಯೆ ಸಂತೃಪ್ತಿ!! ಕೆಂಪು ಬಣ್ಣದ ಕ್ರಾಂತಿಯ ಲಕ್ಷಣಗಳಿವು. ಹಸುರು ಕ್ರಾಂತಿ ಆದಾಗ ನಿಸರ್ಗವೆಲ್ಲ ರಮಣೀಯ ವಾಗಿ ತೋರುವುದು. ಧರಿತ್ರಿ, ಆಗ ಸಸ್ಯ ಶಾಮಲೆ! ಎಲ್ಲೆಲ್ಲಿಯೂ ಚೆಲುವು! ತೆನೆತೂಗಿನಿಂತ ಬೆಳೆಯ ನಿಲುವಿಗಿಂತ ಹೆಚ್ಚಿನ ಚೆಲುವುಂಟೇ? ಆ ಚೆಲುವು ವಿಶ್ವದ ತುಷ್ಟಿ, ಸಂತುಷ್ಟಿಗಳಿಗೆ ಆಧಾರ! ಶಾಂತಿಗೆ ನೆಲೆ! ಕ್ರಾಂತಿಯ ಬಣ್ಣ ವನ್ನೂ ಬದಲಾಯಿಸಿದ ಕೀರ್ತಿ ಕೃಷಿ ವಿಜ್ಞಾನಿಯದು. ಅತನ ಕನಸನ್ನು ನನಸಾಗಿಸಿದ ಧೀರ, ನೇಗಿಲಯೋಗಿ!

ಈ ಹಸುರು ಕ್ರಾಂತಿಯ ಯಶಸ್ಸಿನ ಗುಟ್ಟು ವ್ಯವಸಾಯದ ವಿಜ್ಞಾನ ಹಾಗೂ ತಾಂತ್ರಿಕತೆಗಳನ್ನು ತಿಳಿದು ಬೆಳೆಸಿಕೊಳ್ಳುವುದರಲ್ಲಿ ಅಡಗಿದೆ. ಜನರಿಗೆ ಅರ್ಥವಾಗುವ ಸರಳ ನುಡಿಯಲ್ಲಿ ಅದರ ಬೋಧೆ ನಡೆದಾಗ ಇದು ಸಾಧ್ಯ. ಕೃಷಿ ವಿಶ್ವವಿದ್ಯಾನಿಲಯದಲ್ಲಿ ಕನ್ನಡದಲ್ಲಿ ಕೃಷಿಸಾಹಿತ್ಯ ನಿರ್ಮಾಣವಾಗುತ್ತಿರು ವುದು ಈ ಮಹಾಸಾಧನೆಗೋಸುಗವಾಗಿಯೇ.

ವ್ಯವಸಾಯದ ಉನ್ನತಿಯು ಕೃಷಿ ವಿಶ್ವವಿದ್ಯಾನಿಲಯದ ಹೊಣೆ. ರೈತನೇ ಕೃಷಿ ವಿಶ್ವವಿದ್ಯಾನಿಲಯದ ಅಂತಿಮ ಆರಾಧ್ಯ ದೈವ. ಕೃಷಿಯ ನುಡಿ, ಕೃಷಿಕನ ನುಡಿ – ಕನ್ನಡ. ಕೃಷಿ ವಿಶ್ವವಿದ್ಯಾನಿಲಯದ ಸಕಲ ಸಾಧನೆಗಳ ವಿವರ ಕನ್ನಡದಲ್ಲಿ ಮೂಡಿ ಬಂದಾಗ ಅದಕ್ಕೊಂದು ಅರ್ಥ! ಅದರ ಅಸ್ತಿತ್ವಕ್ಕೊಂದು ಸಾರ್ಥಕತೆ!!

ಈ ಕೆಲವು ಉದ್ದೇಶ ಸಾಧನೆಗಾಗಿ ಕೃಷಿ ವಿಶ್ವವಿದ್ಯಾನಿಲಯವು ಕನ್ನಡ ದಲ್ಲಿ ಗ್ರಂಥ ಪ್ರಕಟಣೆಯನ್ನು ಕೈಗೆತ್ತಿಕೊಂಡಿದೆ. ಕೃಷಿಯ ವಿವಿಧ ರಂಗಗಳಲ್ಲಿ ಹಲವಾರು ಗ್ರಂಥಗಳು ಮೂಡಿಬಂದಾಗ ಕನ್ನಡ ಸಾಹಿತ್ಯ ಶಾರದೆಯ ಹೊನ್ನ ಕಿರೀಟಕ್ಕೆ ಕುಂದಣವಿಟ್ಟಂತಾದೀತು! ಕನ್ನಡ ಭೂದೇವಿ, ಶ್ರೀದೇವಿಯಾಗಿ ನಲಿಯು ವಳು!! ಕನ್ನಡ ರೈತರ ಬಾಳು ಸುಖ, ಸಮೃದ್ಧಿ, ಸಂತಸಗಳ ಸಂಗಮ ವಾಗುವುದು!!!

ಕೃಷಿ ವಿಶ್ವವಿದ್ಯಾನಿಲಯದಲ್ಲಿ ಗ್ರಂಥರಚನೆಯ ಕಾರ್ಯ, **ಕನ್ನಡ ಅಭಿವೃದ್ಧಿ ಸಮಿತಿಯ** ಮಾರ್ಗದರ್ಶನದಲ್ಲಿ ನಡೆಯುತ್ತಿದೆ. ಅದರ ಸಂಘಟನೆ ಇಂತಿದೆ :

1.	ಡೀನ್	ಕಾರ್ಯಾಧ್ಯಕ್ಷರು
2.	ಕೃಷಿ ಶಿಕ್ಷಣ ನಿರ್ದೇಶಕರು (ಹೆಬ್ಬಾಳ)	ಸದಸ್ಯರು
3.	ಪಶು ವೈದ್ಯಕೀಯ ಶಿಕ್ಷಣ ನಿರ್ದೇಶಕರು	,,
4.	ಶಿಕ್ಷಣ ನಿರ್ದೇಶಕರು (ಸ್ನಾತಕೋತ್ತರ ಅಧ್ಯಯನ)	,,
5.	ವಿಸ್ತರಣ ನಿರ್ದೇಶಕರು	,,
6.	ಸಂಶೋಧನಾ ನಿರ್ದೇಶಕರು	,,
7.	ಹಣಕಾಸು ನಿಯಂತ್ರಕರು	,,
8.	ಗ್ರಂಥ ಭಂಡಾರಿಗಳು	,,
9.	ಪ್ರಕಟನಾ ಸಮಿತಿ ಕಾರ್ಯದರ್ಶಿಗಳು	,,
10.	ಕನ್ನಡ ಅಧ್ಯಯನ ವಿಭಾಗ ಪ್ರಾಧ್ಯಾಪಕರು, ಕಾರ್ಯದರ್ಶಿಗಳು	

ಈ ಕಾರ್ಯಕ್ಕಾಗಿ ಕೃಷಿ ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಅಧ್ಯಯನ ವಿಭಾಗ ಪ್ರಾರಂಭವಾಗಿದೆ. ಅದರ ಸಿಬ್ಬಂದಿ ವರ್ಗ ಇಂತಿದೆ :

1.	ಶ್ರೀ ವಿ. ಸಿ. ಹಿತ್ತಲಮನಿ	.....	ಪ್ರಾಧ್ಯಾಪಕರು
2.	ಶ್ರೀ ಎಚ್. ಕೆ. ನರಸಿಂಹೇಗೌಡ	.....	ಸಹಾಯಕ ಪ್ರಾಧ್ಯಾಪಕರು
3.	ಶ್ರೀ ಡಿ. ಮುನಿಸ್ವಾಮಿ	.....	,,
4.	ಶ್ರೀ ಕೆ. ಎಸ್. ಪ್ರತಾಪ್‌ಕುಮಾರ್	.....	ಸಂಶೋಧನಾ ಸಹಾಯಕರು
5.	ಕುಮಾರಿ ಪಿ. ಕೆ. ಕುಮುದಿನಿ	.....	,,
6.	ಶ್ರೀ ಬಿ. ಎಲ್. ಶಂಕರಪ್ಪ	.....	,,
7.	ಶ್ರೀ ಎನ್. ಸಿ. ನಂಜುಂಡಪ್ಪ	.....	ಕಲಾವಿದ ಹಾಗೂ ಛಾಯಾ ಚಿತ್ರಗಾರರು

ಕೃತಜ್ಞತೆಗಳು :

ನಮ್ಮ ಉಪಕುಲಪತಿಗಳಾದ **ಡಾ. ಕೆ. ಸಿ. ನಾಯಕ್** ಅವರು ಕೃಷಿ ಸಾಹಿತ್ಯ ನಿರ್ಮಾಣ ಕಾರ್ಯಕ್ಕೆ ಪುರೋಹಿತರಾಗಿದ್ದಾರೆ. ಅವರ ಹಿರಿತನ ಮಾರ್ಗದರ್ಶನಗಳು ನಮ್ಮ ಕಾರ್ಯದಲ್ಲಿ ದಾರಿದೀಪಗಳಾಗಿವೆ. ವಿಶ್ವಾಸದಿಂದಲೂ, ಪ್ರೇಮ

ದಿಂದಲೂ ಮುನ್ನಡಿಯನ್ನು ಬರೆದು ಸಾಹಿತ್ಯದೇವಿಯ ರಥ, ಮುನ್ನಡೆಯಲೆಂದು ಹರಸಿದ್ದಾರೆ.

ಕೃಷಿ ವಿಶ್ವವಿದ್ಯಾನಿಲಯದ **ಆಡಳಿತ ಮಂಡಲಿ (ಬೋರ್ಡ್ ಆಫ್ ರೀಜೆಂಟ್ಸ್)**ಯು ಕನ್ನಡದ ಅಭಿಮಾನ ಧನ. ಕೃಷಿ ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಬೆಳವಣಿಗೆಯಾಗಬೇಕಾದುದು ಅವರಿಗೆ ಅತ್ಯಂತ ಪ್ರಿಯವಾಗಿದೆ. ಅವರ ಕನ್ನಡದ ಮೇಲಿನ ಉತ್ಕಟವಾದ ಪ್ರೀತ್ಯಾದರಗಳು ನಮ್ಮ ಕಾರ್ಯಕ್ಕೆ ರಕ್ಷೆ.

ಈಗ ನಿಮ್ಮ ಕೈಯಲ್ಲಿಡುತ್ತಿರುವ **'ರೈತರ ನೆಚ್ಚುಮೆಚ್ಚಿನ ಮರಗಳು'** ಗ್ರಂಥವನ್ನು ಬರೆದವರು ನಿವೃತ್ತ ಬೇಸಾಯಬಾನುಲಿ ಅಧಿಕಾರಿಗಳೂ ಹಾಗೂ ಹಲವಾರು ಜನಪ್ರಿಯ ಗ್ರಂಥಗಳನ್ನು ರಚಿಸಿ ವಿಜ್ಞಾನಸಾಹಿತ್ಯ ಕ್ಷೇತ್ರದಲ್ಲಿ ಹೆಸರು ಗಳಿಸಿದವರೂ ಆದ **ಶ್ರೀ ಮ. ಲ. ನರಸಿಂಹ ಅಯ್ಯಂಗಾರ್** ಅವರು.

ಈ ಗ್ರಂಥವನ್ನು ತಾಂತ್ರಿಕವಾಗಿ ಪರಿಶೀಲಿಸಿದವರು ನಮ್ಮ ಕೃಷಿ ವಿಶ್ವವಿದ್ಯಾನಿಲಯದ ತೋಟಗಾರಿಕೆ ವಿಭಾಗದ ಸಹಪ್ರಾಧ್ಯಾಪಕರಾದ **ಡಾ. ಕೆ. ಆರ್. ತಿಮ್ಮರಾಜು** ಅವರು.

ಈ ಗ್ರಂಥದ ಪ್ರಕಟಣಾಹೊಣೆಯನ್ನು ಹೊತ್ತವರು **ಕೃಷಿ ವಿಶ್ವವಿದ್ಯಾನಿಲಯದ ಪ್ರಕಟಣಾ ವಿಭಾಗದವರು.**

ಈ ಪುಸ್ತಕದಲ್ಲಿಯ ಸಸ್ಯನಾಮಗಳನ್ನು ಪರಿಷ್ಕರಿಸುವುದರಲ್ಲಿ ಸಹಾಯ ನೀಡಿದವರು ಮೈಸೂರು ವಿಶ್ವವಿದ್ಯಾನಿಲಯದ ಸಸ್ಯಶಾಸ್ತ್ರ ಪ್ರಾಧ್ಯಾಪಕರಾದ **ಡಾ॥ ಬಿ.** ಎ. **ರಾಷ್ಟಿ** ಅವರು ಹಾಗೂ ಭಾರತ ಸರಕಾರದ ಭಾರತೀಯ ವನಸ್ಪತಿ ಸರ್ವೇಕ್ಷಣ ವಿಭಾಗದ ನಿರ್ದೇಶಕರಾಗಿರುವ **ಡಾ॥ ಕೆ. ಸುಬ್ರಹ್ಮಣ್ಯಂ** ಅವರು.

ಈ ಗ್ರಂಥದ ಭಾಷಾಸಂಪಾದನೆ ಮಾಡಿದವರು ಸಹಾಯಕ ಪ್ರಾಧ್ಯಾಪಕರಾದ **ಶ್ರೀ ಎಚ್. ಕೆ. ನರಸಿಂಹೇಗೌಡ** ಅವರು.

ಈ ಪುಸ್ತಕವನ್ನು ಮುದ್ರಣಕ್ಕೆ ಹೊಂದಿಸಿ ಕೊಟ್ಟವರು ಸಂಶೋಧನಾ ಸಹಾಯಕರಾದ **ಶ್ರೀ. ಕೆ. ಎಸ್. ಪ್ರತಾಪ್ ಕುಮಾರ್** ಅವರು.

ಈ ಗ್ರಂಥದ ಕರಡು ಅಚ್ಚು ತಿದ್ದಿದವರು ಸಹಾಯಕ ಪ್ರಾಧ್ಯಾಪಕರಾದ **ಶ್ರೀ ಎಚ್. ಕೆ. ನರಸಿಂಹೇಗೌಡ** ಅವರು ಮತ್ತು ಸಂಶೋಧನಾ ಸಹಾಯಕರಾದ **ಕುಮಾರಿ ಸಿ. ಕೆ. ಕುಮುದಿನಿ** ಅವರು.

ಈ ಪುಸ್ತಕದ ಮುಖಚಿತ್ರವನ್ನು ಚಿತ್ರಿಸಿದವರು ಕನ್ನಡ ಅಧ್ಯಯನ ವಿಭಾಗದ

ಕಲಾವಿದರಾದ **ಶ್ರೀ ನ. ಚಿ. ನಂಜುಂಡಪ್ಪ** ಅವರು ಹಾಗೂ ಒಳಗಿನ ರೇಖಾ ಚಿತ್ರ ಗಳನ್ನು ಚಿತ್ರಿಸಿದವರು **ಶ್ರೀ ಎಚ್. ಎಸ್. ರಾಜಾರಾಂ** ಅವರು.

ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿ ಕೊಟ್ಟವರು **ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–19.**

ಈ ಪುಸ್ತಕ ಹೊರಬರಲು ಸಹಕರಿಸಿದ ಈ ಎಲ್ಲ ಮಹನೀಯರುಗಳನ್ನು ಕೃತಜ್ಞತೆಯಿಂದ ಸ್ಮರಿಸುವೆ.

ಎ. ಸಿ. ಹಿತ್ತಲಮನಿ
ಕನ್ನಡ ಪ್ರಾಧ್ಯಾಪಕರು
ಹಾಗೂ
ಕನ್ನಡ ಅಭಿವೃದ್ಧಿ ಸಮಿತಿ
ಕಾರ್ಯದರ್ಶಿಗಳು

ಫಾಲ್ಗುಣಮಾಸ
ಪರೀಧಾವಿ ಸಂವತ್ಸರ, ಶಾಲಿವಾಹನ ಶಕ 1894.

ಅರಿಕೆ

ಮರಗಳೂ ಬೆಳೆ ; ರೈತರಿಗೆ, ಅನೇಕ ಕೆಲಸಗಳಿಗೆ ಒದಗಿಬರುವ ಬೆಳೆ. ವೃಕ್ಷಗಳು ಕೃಷಿಕರ ಆಪ್ತ ಮಿತ್ರರು ಎಂಬ ವಿಷಯವನ್ನು ಸಮರ್ಥಿಸುವುದೇ ಈ ಸಣ್ಣ ಹೊತ್ತಿಗೆಯ ಬಯಕೆ. ಬಯಸಿದ್ದೆಲ್ಲಾ ಕೈಗೂಡುವುದಿಲ್ಲ ; ಇದೂ ಹಾಗೆಯೆ. ಮರಗಳ ಬಗ್ಗೆ, ಬೆಳೆಗಳ ವಿಷಯದಲ್ಲಿರುವಷ್ಟು ಮಾಹಿತಿ ಇಲ್ಲ. ಇರುವ ಮಾಹಿತಿಯೂ ಕೂಡ, ಪುಸ್ತಕಗಳಲ್ಲಿ, ವರದಿಗಳಲ್ಲಿ, ನಿಯತಕಾಲಿಕ ಪತ್ರಿಕೆಗಳ ಲೇಖನಗಳಲ್ಲಿ ಸೇರಿಕೊಂಡು ಬಿಟ್ಟಿವೆ. ಈ ಎಲ್ಲಾ ಮಾಹಿತಿಗಳನ್ನೂ ಒಳಗೊಂಡ ಪುಸ್ತಕ, ಅಪಾರ ಗ್ರಂಥಸಂಪತ್ತಿರುವ ಇಂಗ್ಲಿಷ್ ಭಾಷೆಯಲ್ಲೇ ಇಲ್ಲ ; ಹಾಗೆಂದಮೇಲೆ ಕನ್ನಡದಲ್ಲಿ ಹೇಗಿರಬೇಕು ? ಈ ಕೊರತೆಯನ್ನು ನೀಗಲು, ತಲೆಯಲ್ಲಿ ಮಾಹಿತಿ ತುಂಬಿಕೊಂಡಿರುವವರು, ಇಬ್ಬರು ಮೂವರು ವಿನಾ, ಮತ್ತ್ಯಾರೂ ಆಸಕ್ತಿ ತೋರಿಲ್ಲ. ರೈತರು ಬೆಳೆಸಬೇಕಾದ, ಬೆಳೆಸಬಹುದಾದ ಮರಗಳ ಬಗ್ಗೆಯಂತೂ ಯಾವ ಕನ್ನಡ ಪುಸ್ತಕವೂ ನನ್ನ ಕಣ್ಣಿಗೆ ಬಿದ್ದಿಲ್ಲ. ನನ್ನ ಕಸುಬು ವ್ಯವಸಾಯವಾದರೂ, ನನಗೆ ಸಾಮರ್ಥ್ಯವಿಲ್ಲದಿದ್ದರೂ, ಎಲ್ಲಾ ಮಾಹಿತಿಗಳನ್ನು ಕೂಡಿಹಾಕುವ ವ್ಯವಧಾನವಿಲ್ಲದಿದ್ದರೂ, ನಾನೇ ಈ ತೆರನಾದ ಪುಸ್ತಕವೊಂದನ್ನು ಬರೆಯಲು ದುಡುಕಿದೆ. ಸುಮಾರು ಮೂರು ದಶಕಗಳಿಂದ ನಾನು, ಮರಗಳ ಬಗ್ಗೆ ವಿಷಯಗಳನ್ನು ಸಂಗ್ರಹಿಸುತ್ತ ಬಂದಿದ್ದೇನೆ. ಇದಕ್ಕೆ ಕಾರಣ, ವನವೃಕ್ಷಗಳ, ಸಸ್ಯಪ್ರಾಣಿಗಳ ಬಗ್ಗೆ ನನಗಿರುವ ಅಪಾರ ಒಲವು ಒಂದೇ ಅಲ್ಲ ; ಕನ್ನಡ ಜನಕ್ಕೆ, ನನಗೆ ಪಾಂಡಿತ್ಯವಿರಲೀ, ಬಿಡಲೀ, ಈ ಸಂಪತ್ತಿನ ಬಗ್ಗೆ ತಿಳಿಸಿ ಕೊಡುವುದು ಕನ್ನಡ ನಾಡು, ನುಡಿಗೆ ನಾನು ಸಲ್ಲಿಸಬೇಕಾದ ಋಣವೆಂಬ ಭಾವನೆಯೂ ಕೂಡ. ಈ ಪುಸ್ತಕವನ್ನು ಓದಿದ ತಜ್ಞರು, ಇದರ ನ್ಯೂನತೆಗಳನ್ನು ಕಂಡು 'ಇದು ಎಂಥ ಹೆಡ್ಡತನ ! ದಿಟ್ಟತನ ! ಎಷ್ಟು ವಿಷಯ ಹೇಳೋದಿದೆ ? ಎಷ್ಟು ವಿಷಯ ಬಿಟ್ಟಿದ್ದಾನೆ ?' ಎಂದು ರೋಸಿ, ಉತ್ತಮವಾದ, ಪರಿಪೂರ್ಣವಾದ ಪುಸ್ತಕವನ್ನು ಬರೆಯಲು ಪ್ರೇರೇಪಿತರಾಗಬಹುದು. ಹಾಗಾದಲ್ಲಿ, ನನ್ನ ಪುಸ್ತಕ ಸಾರ್ಥಕವಾಯಿತೆಂದು ಎಣಿಸುತ್ತೇನೆ. ಸದ್ಯಕ್ಕೆ, ಈ ಪುಸ್ತಕ, ಕನ್ನಡಮ್ಮನ ಗುಡಿಯಲ್ಲಿ ಒಂದು, ಬಣ್ಣವಿಲ್ಲದ, ಗಂಧವಿಲ್ಲದ, ನನಗೆ ಎಟುಕಿದ ಹೂವು ; ಆದರೆ ಅಮ್ಮನ ಕಾಲಡಿಯಲ್ಲಿ ತಲೆಬಾಗಿ ಇರಿಸಿದ ಹೂ. ಇತರ ಭಕ್ತಾದಿಗಳು ಇನ್ನೂ ಚೆಲುವಿನ, ವರ್ಣರಂಜಿತ, ಗಂಧಭರಿತ ಪುಷ್ಪಗಳನ್ನು ತಂದು ಅರ್ಚಿಸಲೆಂದು ಹಾರೈಸುತ್ತೇನೆ.

ಈ ಪುಸ್ತಕದಲ್ಲಿ, ರೈತರು ಬೆಳೆಯಬಹುದಾದ ಎಲ್ಲಾ ಮರಗಳನ್ನೂ ಪ್ರಸ್ತಾಪಿಸಿಲ್ಲ. ಹೂವು ಮತ್ತು ಅಲಂಕಾರದ ಮರಗಳ ವಿಷಯವಾಗಿ, 10 ವರ್ಷಗಳ ಕೆಳಗೆ 'ಇದು ಯಾವ ಮರ ?' ಎಂಬ ಪುಸ್ತಕದಲ್ಲಿ ವಿವರಣೆಗಳನ್ನು ಕೊಟ್ಟೆ. ಹಣ್ಣಿನ ಮರಗಳ ವಿಷಯವಾಗಿ 'ನಮ್ಮ ಹಣ್ಣುಗಳು' ಎಂಬ ಪುಸ್ತಕವನ್ನು ಬರೆದಿದ್ದಾಗಿದೆ; ಸದ್ಯದಲ್ಲೇ ಮೈಸೂರು ವಿಶ್ವವಿದ್ಯಾನಿಲಯದವರಿಂದ ಪ್ರಕಟವಾಗುವುದರಲ್ಲಿದೆ. ಆದುದರಿಂದ, ಈ ಪುಸ್ತಕದಲ್ಲಿ, ಇವೆರಡು ಬಗೆಯ ಮರಗಳನ್ನುಳಿದು, ರೈತರು ನೆಟ್ಟಬಹುದಾದ, ಮೆಚ್ಚತಕ್ಕ, ಬೆಳೆಯಬಹುದಾದ, ಬೆಳೆಯಿಸಬೇಕಾಗಿರುವ ತೊಂಬತ್ತೈದು ಮರಗಳ ಬಗ್ಗೆ ಮಾತ್ರ ಪ್ರಸ್ತಾಪ ಮಾಡಿದ್ದೇನೆ.

ಈ ಪುಸ್ತಕವನ್ನು ಬರೆದು ನಾಲ್ಕು ವರ್ಷಗಳಾಯ್ತು. ಸಹೃದಯರೂ, ಕನ್ನಡಾಭಿಮಾನಿಗಳೂ ಆದ ವ್ಯವಸಾಯ ಕಾಲೇಜಿನ ಪ್ರಾಧ್ಯಾಪಕ ಶ್ರೀ. ವೀ. ಚ. ಹಿತ್ತಲಮನಿಯವರೂ, ಕೃಷಿ ವಿಶ್ವವಿದ್ಯಾನಿಲಯದ ಅಧಿಕಾರಿಗಳೂ, ಇದರ ಪ್ರಕಟನೆಯನ್ನು ಕೈಗೊಳ್ಳದಿದ್ದರೆ, ಇದು ನನ್ನ ಬಳಿಯೇ ಕರಡಾಗಿ ಉಳಿಯುತ್ತಿತ್ತು. ಆದುದರಿಂದ ನಾನು ಇವರಿಗೆ ಎಷ್ಟು ಋಣಿಯೆಂಬುದನ್ನು ಹೇಳಲು ಅಶಕ್ತ.

ಈ ಪುಸ್ತಕದ ಉಪಯುಕ್ತತೆಯನ್ನು ಹೆಚ್ಚಿಸಲು ಮರಗಳ ರೂಪ ಚಿತ್ರಗಳನ್ನೂ, ಮರಗಳನ್ನು ಗುರುತಿಸಲು ಎಲೆ, ಹೂವು, ಕಾಯಿಗಳ ರೇಖಾ ಚಿತ್ರಗಳನ್ನೂ, ಅಂದವಾಗಿ ಬರೆದುಕೊಟ್ಟ ನನ್ನ ಸನ್ಮಿತ್ರ ಶ್ರೀ. ಎಚ್. ಎಸ್. ರಾಜಾರಾಂ ಅವರಿಗೂ, ಮೈಗಳ್ಳತನದಿಂದ ಹಿಂದೂಡುತ್ತಿದ್ದಾಗ, ನನ್ನನ್ನು ಕಾಡಿ, ಕೆಣಕಿ, ಪೊಂಪುಹಿಡಿದು, ಇದನ್ನು ಮುಂದುವರಿಸುವಂತೆ ಮಾಡಿದ ನನ್ನ 'ಜೀವ್ಸ್' ಚಿ॥ ಬಿ. ಸಿ. ಗಂಗಾರಾಮನಿಗೂ ನನ್ನ ವಂದನೆಗಳು.

84, 8ನೆಯ ಅಡ್ಡರಸ್ತೆ
ವಿಲ್ಸನ್‌ಗಾರ್ಡನ್ಸ್
ಬೆಂಗಳೂರು–27

ಮ. ಲ. ನರಸಿಂಹ ಅಯ್ಯಂಗಾರ್

1–1–1973

ಅಧ್ಯಾಯ

1

ರೈತರು ಮರಗಳನ್ನು ಏಕೆ ಬೆಳೆಸಬೇಕು ?

ಒಬ್ಬ ಪ್ರವೀಣರು ಹೇಳಿದ್ದಾರೆ : 'ಜನಪ್ರಗತಿಯ ಪಥ ಸಾಲುವೃಕ್ಷಗಳ ಮೂಲಕ ಹಾದುಹೋಗುತ್ತದೆ.' ಈ ಮಾತು, ನಿಜಕ್ಕೂ, ತುಂಬ ದಿಟ. ಹಿಂದೆ, ನಮ್ಮ ದೇಶದಲ್ಲಿ, ಸಾಲುಮರಗಳು ಇಲ್ಲದ ರಸ್ತೆಯೇ ಇರಲಿಲ್ಲವೆನ್ನಬಹುದು. ಮರಗಳಿಲ್ಲದ ಮಾರ್ಗ ಕುಂಕುಮವಿಲ್ಲದ ಹೆಣ್ಣಿನ ಹಣೆಯಂತೆ. ಕುಂಕುಮ, ಹೆಣ್ಣಿಗೆ ಹೇಗೆ ಶೋಭಾಯಮಾನವೋ, ಶುಭವೋ, ಮಂಗಳಕರವೋ, ಮರಗಳೂ ಕೂಡ ಮಾರ್ಗಗಳಿಗೆ ಶೋಭಾಯಮಾನ; ರಾಷ್ಟ್ರಕ್ಕೆ ಶುಭ; ಜನಕ್ಕೆ ಮಂಗಳಕರ. ಇದನ್ನು ನಮ್ಮ ಪೂರ್ವಿಕರು ಚೆನ್ನಾಗಿ ಅರಿತುಕೊಂಡಿದ್ದರು. ಇಪ್ಪತ್ತುಮೂರು ಶತಮಾನಗಳ ಹಿಂದೆಯೇ, ಅಶೋಕ ಚಕ್ರವರ್ತಿ, ಪ್ರತಿ ರಸ್ತೆಯ ಇಬ್ಬದಿಗಳಲ್ಲಿಯೂ, ಪ್ರಯಾಣಿಕರು ದಣಿವು ಆರಿಸಿಕೊಳ್ಳಲು, ನೆರಳು ಕೊಡುವ, ಹಸಿವನ್ನು ಅಡಗಿಸಿಕೊಳ್ಳಲು ಹಣ್ಣು ನೀಡುವ, ಸಾಲುಮರಗಳನ್ನು ನೆಡುವಂತೆ ತನ್ನ ಅಧಿಕಾರಿಗಳಿಗೆ ಆಜ್ಞಾಪಿಸಿದ್ದನಂತೆ.

ಸಾಲುಮರಗಳನ್ನು ನೆಡುವುದು, ಕಾಪಾಡುವುದು ಪ್ರತಿಯೊಬ್ಬ ಪ್ರಜೆಯ ಕರ್ತವ್ಯವೆಂದು ನಮ್ಮ ಹಿರಿಯರು ಮೊನ್ನೆಮೊನ್ನೆಯ ತನಕ ತಿಳಿದುಕೊಂಡಿದ್ದರು. ಅವರು ಆಗ ಹಾಕಿದ ಮರಗಳೇ ಇಂದಿಗೂ ಕೆಲವು ರಸ್ತೆಗಳನ್ನು ಅಲಂಕರಿಸುತ್ತಿವೆ. ಆದರೆ, ಈಗಿನ ತಲೆಮಾರಿನವರು, ಮರಗಳನ್ನು ಬೆಳೆಸುವುದರ ಬದಲು ಅವನ್ನು ಸೌದೆ ಸೊಪ್ಪಿಗಾಗಿ ಕಡಿದು, ಕತ್ತರಿಸಿ, ತರಿದು, ಬೋಳುಮಾಡುವ ಪ್ರವೃತ್ತಿಯನ್ನು ಬೆಳೆಸಿಕೊಂಡಿರುವಂತಿದೆ.

ಹಿಂದಿನ ಕಾಲದ ಸಮೃದ್ಧಿಯ ಕುರುಹು ಅವರು ಬಿಟ್ಟುಹೋದ ಮರಗಳು, ತೋಪುಗಳು ಹಾಗೂ ವನವೃಕ್ಷಗಳು. ಇಂದಿನ ಕಾಲದ ಕ್ಷೋಭೆಯ ಚಿಹ್ನೆ, ಈ ವನಮರಗಳ ನಾಶನ, ಮಾಯ.

ಹಿಂದೆ, ಪ್ರತಿ ಗ್ರಾಮದಲ್ಲೂ, ಪ್ರತಿ ಊರು ಸುತ್ತಲೂ ತೋಪುಗಳು, ತೋಟಗಳು, ಗೋಕಾಡುಗಳು ಹಾಗೂ ವನಗಳು ಇರುತ್ತಿದ್ದವು. ವನಭೋಜನ, ವನವಿಹಾರ ಮುಂತಾದ ಸತ್‌ಸಂಪ್ರದಾಯಗಳು ಬೆಳೆದು ಬಂದಿದ್ದವು. ಮಾವಿನ

ಮತ್ತು ಹಲಸಿನ ತೋಟಗಳು, ಹುಣಸೆ, ನೇರಳೆ, ಬೇವು, ಹಿಪ್ಪೆ ಮತ್ತು ಹೊಂಗೆ ತೋಪುಗಳು ಹೇರಳವಾಗಿದ್ದವು. ಒಂದು ಕಾಲದಲ್ಲಿ, ಬತ್ತದ ಗದ್ದೆಪಾಲುಗಳನ್ನು ಗುರುತಿಸಲು, ಈಗಿನಂತೆ ಬಾಂದುಕಲ್ಲುಗಳನ್ನು ನೆಡುವುದರ ಬದಲು ಜಾಲೀ ಮರಗಳನ್ನೇ ಗಡಿಮರಗಳಾಗಿ ಬೆಳೆಸುತ್ತಿದ್ದರು. ನಾಲಾದಂಡೆಗಳಲ್ಲಿ ಎತ್ತರವಾದ ಶೀಷ ಮುಂತಾದ ಮರಗಳನ್ನು ಹಾಕುತ್ತಿದ್ದರು. ಅಲ್ಲಲ್ಲೇ, ಅಲಂಕಾರಕ್ಕಾಗಿ, ಕಾಲ್ಪುರಿ (ಬೂರಗ) ಮರಗಳನ್ನು ನೆಡುತ್ತಿದ್ದರು.

ಹೀಗೆ ಗಿಡ ಮರಗಳ ಬಗ್ಗೆ ಹೆಚ್ಚು ಆಸ್ಥೆ ವಹಿಸುತ್ತಿದ್ದುದರಿಂದ ಪ್ರತಿ ಗ್ರಾಮಕ್ಕೂ, ಪ್ರತಿ ಗ್ರಾಮಸ್ಥನಿಗೂ ಬೇಕಾದ ವಸ್ತುಗಳು ಹಳ್ಳಿಯ ಸಮೀಪದ ವನವೃಕ್ಷಗಳಿಂದಲೇ ಸಿಗುತ್ತಿತ್ತು.

ಅಡಿಗೆಮನೆಗೆ ಸೌದೆ; ಊಟಕ್ಕೆ ಮುತ್ತುಗದೆಲೆ; ಬಾಯಿ ಚಪ್ಪರಿಸುವುದಕ್ಕೆ ಹಾಗೂ ಆರೋಗ್ಯಕ್ಕೆ, ಮಾವು, ಹಲಸು, ನೇರಳೆ, ಯಲಚಿ, ಬೇಲ ಮುಂತಾದ ಅನೇಕ ಬಗೆಯ ಹಣ್ಣುಗಳು; ದನಗಳಿಗೆ ಮೇವು; ಗದ್ದೆ ತೋಟಗಳಿಗೆ ಹಸುರೆಲೆ ಗೊಬ್ಬರ; ನೇಗಿಲು, ಕುಂಟೆ, ಹಲುಬೆ ಮತ್ತು ಗಾಡಿಗಳಿಗೆ ಮರ; ಗುಡಿಸಲು, ಜೋಪಡಿ ಮತ್ತು ಕಿಟಕಿ ಬಾಗಿಲುಗಳಿಗೆ ಹಲಗೆ; ದೀಪಗಳಿಗೆ ಹೊಂಗೆ ಮತ್ತು ಬೇವಿನ ಎಣ್ಣೆ; ರೋಗಗಳಿಗೆ ಮೂಲಿಕೆ ಮದ್ದು; ಬಟ್ಟೆಗೆ ಕಟ್ಟಲು ಬಣ್ಣ; ಬುಟ್ಟಿ ಹೆಣಿಕೆಗೆ ಬೊಂಬು; ಹಗ್ಗ ಹೊಸೆಯುವುದಕ್ಕೆ ನಾರು; ಚರ್ಮ ಹದ ಮಾಡುವುದಕ್ಕೆ ಒಗಚು; ವಿಗ್ರಹ ಕೆತ್ತುವುದಕ್ಕೆ ಶ್ರೀಗಂಧ; ಬೊಂಬೆ ಹಾಗೂ ಬಾಚಣಿಗೆಗಳಿಗೆ ಬೆಪ್ಪಾಲೆ; ಮಂಚ ಹಾಗೂ ಕಾಲ್ಮಣೆಗಳಿಗೆ ಜೌಬೀನೆ; ಪೂಜೆ ಹಾಗೂ ಪುನಸ್ಕಾರಗಳಿಗೆ ಧೂಪ; ಭೋಗಕ್ಕೆ ಸುಗಂಧದ್ರವ್ಯಗಳನ್ನು ಒದಗಿಸಲು ಪರಿಮಳಯುಕ್ತ ಎಲೆ, ಹೂವು, ಹಾಗೂ ತೊಗಟೆಗಳು; ಹೋಮಕ್ಕೆ ಸಮಿತ್ತು ಹಾಗೂ ಧರ್ಬೆ; ಅರ್ಚನೆಗೆ ಪುಷ್ಪ ಪತ್ರಾದಿಗಳು; ಮುಡಿಯುವುದಕ್ಕೆ ಸಂಪಿಗೆ ಹಾಗೂ ಸುರುಹೊನ್ನೆ ; ದಿಂಬಿಗೆ ಬೂರಗದ ಮಡ್ಡಿ ರೇಷ್ಮೆ; ಉಪ್ಪಿನಕಾಯಿಗೆ ನೆಲ್ಲಿ, ಅಮಟೆ ಹಾಗೂ ಮಾಕಳಿಬೇರು; ಕಷಾಯಕ್ಕೆ ಸೊಗದೇಬೇರು; ಮೈ ತೊಳೆಯುವುದಕ್ಕೆ ಸೀಗೆ, ಬಟ್ಟೆ ಒಗೆಯುವುದಕ್ಕೆ ಅಂಟುವಾಳ, ಮಡಿವಾಳನಿಗೆ ಗೇರು; ನೇಕಾರನಿಗೆ ಅಂಟುಸರಿ; ಕಮ್ಮಾರನಿಗೆ ಇದ್ದಿಲು; ಬಡಗಿಗೆ ಮರ; ಅಕ್ಕಸಾಲಿಗನಿಗೆ ಅರಗು, ಗುಲಗಂಜಿ ಮುಂತಾದ ಅನೇಕ ಬಗೆಯ ವಸ್ತುಗಳು ಸುಲಭವಾಗಿ, ಅಗ್ಗವಾಗಿ, ಹೇರಳವಾಗಿ ಹಳ್ಳಿಯ ಹತ್ತಿರದಲ್ಲೇ ಸಿಗುತ್ತಿದ್ದವು. ಹೀಗೆ ಗ್ರಾಮದ ಸಮೀಪದಲ್ಲೇ ವನವೃಕ್ಷಗಳು ಇದ್ದುದರಿಂದ ಒಕ್ಕಲಿಗನಿಗೇ ಅಲ್ಲದೆ ಗ್ರಾಮದ ಬಡಗಿ, ಕಮ್ಮಾರ, ನೇಕಾರ, ಅಗಸ, ವೈದ್ಯ, ಪೂಜಾರಿ, ಪುರೋಹಿತ ಎಲ್ಲರಿಗೂ ಅವರ ಕಸಬು, ವೃತ್ತಿಗಳಿಗೆ ಬೇಕಾದ ವಸ್ತುಗಳು ಹತ್ತಿರದಲ್ಲಿ ದೊರೆತು ಗ್ರಾಮಜೀವನ ಮತ್ತು ಜನಜೀವನ ಸುಗಮವಾಗಿ, ಕಷ್ಟ ಕಾರ್ಪಣ್ಯಗಳಿಲ್ಲದೆ, ಸಾಗುತ್ತಿತ್ತು. ಬೆಳೆ–ಮಳೆಗಳಿಗೂ, ಜನ–ದನ–ವನಗಳಿಗೂ ಸೌಹಾರ್ದವಿದ್ದು ನಾಡಿಗೂ, ನೆಲಕ್ಕೂ ನೆಮ್ಮದಿ ಇತ್ತು.

ಈಗ ಈ ಸೌಹಾರ್ದ, ಈ ನೆಮ್ಮದಿ, ಮಾಯವಾಗಿದೆ. ಗ್ರಾಮದ, ಗ್ರಾಮಸ್ಥರ ಆರ್ಥಿಕ ಸ್ಥಿತಿ ಅಡ್ಡಾದಿಡ್ಡಿಯಾಗಿ ವಿಷಮಿಸಿದೆ; ಬಡತನ ಕಟುವಾಗಿದೆ. ಗ್ರಾಮಜೀವನ ಅಸ್ತವ್ಯಸ್ತವಾಗಿದೆ.

ಈ ಪರಿಸ್ಥಿತಿಗೆ ಅನೇಕ ಕಾರಣಗಳನ್ನು ಕೊಡಬಹುದು; ಅನೇಕ ಸಬೂಬು ಗಳನ್ನು ಹುಡುಕಬಹುದು. ಆದರೆ, ಇದು ನಮ್ಮ ಜನರಲ್ಲಿ ವನವೃಕ್ಷಗಳ ಬಗ್ಗೆ ಬೆಳೆಯುತ್ತಿರುವ ತಾತ್ಸಾರ, ಗಿಡಮರಗಳನ್ನು ಕಡಿಯುವ ಪ್ರವೃತ್ತಿ, ಕಾಡುಗಳನ್ನು ಬೋಳಿಸಿ ಜಮೀನಿನ ದಾಹವನ್ನು ಅಡಗಿಸಿಕೊಳ್ಳುವ ಚಪಲ ಇವುಗಳ ದುಷ್ಪರಿ ಣಾಮವೆಂದು ಹೇಳಿದರೆ ಅನೇಕರು ನಂಬದಿರಬಹುದು. ಆದರೆ ವನವೃಕ್ಷಗಳಿಗೂ ನಾಡು ನೆಲದ ನೆಮ್ಮದಿಗೂ ಇರುವ ಸಂಬಂಧವನ್ನು ಅರಿತವರಿಗೆ ಇದು ಆಶ್ಚರ್ಯ ವೇನೂ ಅಲ್ಲ.

ಅಧ್ಯಾಯ

2

ವನವೃಕ್ಷಗಳನ್ನು ಕಡಿಯುವುದರಿಂದ ಆಗುವ ಪರಿಣಾಮಗಳೇನು ?

ವನಗಳು ಆ ಪ್ರದೇಶದ ಹವಾಗುಣವನ್ನು ಸುಧಾರಿಸುವ ವೃಕ್ಷಸಮೂಹ ! 'ಕಾಡಿದ್ದರೆ ಕಾರ್ಮೋಡ' ಎಂಬ ಗಾದೆಯನ್ನು ಕಟ್ಟಿದ ನಮ್ಮ ಹಿರಿಯರಿಗೆ ವನಗಳಿಗೂ, ಹವಾಗುಣಕ್ಕೂ ಇರುವ ಸಂಬಂಧ ಸ್ಪಷ್ಟವಿದ್ದಿರಬೇಕು. ವನದ ಗಿಡಮರಗಳು ಮೋಡದಿಂದ ಮಳೆಯನ್ನು ಇಳಿಸಬಲ್ಲವು. ವನವೃಕ್ಷಗಳು ಸುತ್ತಮುತ್ತಲಿನ ಪ್ರದೇಶವನ್ನು ತಂಪುಗೊಳಿಸುವುದು ಎಲ್ಲರಿಗೂ ತಿಳಿದ ವಿಷಯ. ಗಾಳಿಯ, ಅದರಲ್ಲೂ ಬಿರುಗಾಳಿಯ, ಹೊಡೆತವನ್ನು ತಗ್ಗಿಸಲು ಮರಗಳ ತಡೆಗಳಿಗಿಂತ ಬೇರೊಂದು ದಕ್ಷ ವ್ಯವಸ್ಥೆಯಿಲ್ಲ. ವನವೃಕ್ಷಗಳಿದ್ದೆಡೆ ಧೂಳಿಲ್ಲದ ನಿರ್ಮಲ ಗಾಳಿ ಬೀಸುವುದು. ಈಗಿನ ಮರಗಳ, ವನಗಳ ನಾಶದಿಂದಲೇ ಮಳೆಬೆಳೆ ಕೆಟ್ಟಿರುವುದು. ಬೇಸಿಗೆಯ ಬೇಗೆ ಹತ್ತಿ ಬೇಯುತ್ತಿರುವುದೂ, ವನನಾಶದಿಂದಲೇ !

ವನಗಳು ಭಾರಿ ಜಲಾಶಯಗಳು ! ಎಲೆ, ತರಗು, ಸೊಪ್ಪು, ಉದುರಿ, ಕೊಳೆತು, ಮಣ್ಣನ್ನು ಸೇರಿ, ಸಡಿಲಗೊಳಿಸಿ, ಮಳೆಯ ನೀರು ಹೀರುವಂತೆ, ಇಂಗುವಂತೆ ಮಾಡುತ್ತವೆ. ಗಿಡಮರಗಳ ಬೇರುಗಳು ಕೊಳೆತ ನಂತರ ನೆಲದಲ್ಲಿ ಬಿರುಕುಗಳು ಬಿದ್ದು ಹೆಚ್ಚು ನೀರು ಭೂಮಿಯಲ್ಲಿ ಇಂಗುತ್ತದೆ. ಹೀಗಾದಾಗ ಬಾವಿ, ಕಟ್ಟೆಗಳ ಧ್ರುವ ಜಲ ಹೆಚ್ಚುತ್ತದೆ. ಮಳೆಯನೀರು ನೆಲದಮೇಲೆ ಹೊರಳದಂತೆ, ಹಳ್ಳಕೊಳ್ಳಗಳನ್ನು ಸೇರದಂತೆ, ನದಿಗಳಲ್ಲಿ ಪ್ರವಾಹವನ್ನು ಉಕ್ಕಿಸದಂತೆ ಎಲೆ ತರಗುಗಳು ಅಡ್ಡ ಕಟ್ಟುತ್ತವೆ; ಕಟ್ಟಿ ನೀರನ್ನು ಭೂಮಿಗೆ ಇಂಗಿಸುತ್ತವೆ; ನೀರನ್ನು ಭೂಮಿಯೊಳಗೆ ಕೂಡಿಸುತ್ತವೆ – ಜಲಾಶಯ ನೀರನ್ನು ಕೂಡಿಡುವಂತೆ. ಇತ್ತೀಚೆಗೆ ಮಳೆಗಾಲದಲ್ಲಿ ಪ್ರವಾಹದ ಹಾವಳಿ ಹೆಚ್ಚುತ್ತಿರುವುದು, ನದೀ ಕ್ಷೇತ್ರದಲ್ಲಿ ಬಿದ್ದ ಮಳೆ, ಗಿಡಮರಗಳ ಅಡಚಣೆಯಿಲ್ಲದೆ ಸಲೀಸಾಗಿ ಹರಿದು, ಹೊರಳಿ, ಹಳ್ಳಕೊಳ್ಳಗಳನ್ನು ಸೇರುತ್ತಿರುವುದರಿಂದ.

ವನಗಳು ಮಣ್ಣಿನ ರಕ್ಷಾಕವಚಗಳು ! ಮಣ್ಣಿಗೆ ಸಹಜವಾದ ರಕ್ಷಾಕವಚ, ಸಸ್ಯಗಳು. ಮಾನವನ ಕೈವಾಡವಿಲ್ಲದ ಯಾವ ಜಮೀನನ್ನಾದರೂ ನೋಡಿ. ಅದರ ಮೇಲೆ ಹುಲ್ಲೋ, ಜೊಂಡೋ, ಕುರುಚಲುಗಿಡವೋ ಇದ್ದೇ ಇರುತ್ತವೆ. ಇವು ಇರುವುದರಿಂದ, ದೊಡ್ಡ ಮಳೆ ಬಿದ್ದರೂ, ಮಣ್ಣಿನ ಕಣಗಳು ಚದರುವುದಿಲ್ಲ ; ಮಣ್ಣು ಕೊಚ್ಚುವುದಿಲ್ಲ. ಮಳೆ ಹನಿಗಳ ಹೊಡೆತವನ್ನು ಈ ಸಸ್ಯಗಳ ಎಲೆಗಳು ತಡೆದು ಹನಿಗಳನ್ನು ತುಂತುರು, ತುಂತುರಾಗಿ ಒಡೆದು, ಮಣ್ಣಿಗೆ ಇಳಿಸುತ್ತವೆ. ಈ ದುರ್ಬಲಗೊಂಡ ತುಂತುರು, ಮಣ್ಣಿನ ಕಣಗಳನ್ನು ಚದುರಿಸಲು ಅಶಕ್ತ. ಆದುದರಿಂದ, ಮಣ್ಣಿನ ಕಣಗಳು ಇದ್ದಲ್ಲಿಯೇ ಇದ್ದು ತುಂತುರು ಜಲವನ್ನು ಹೀರಿಕೊಂಡು ಮಣ್ಣಿನ ಜಲಗ್ರಹಣವನ್ನು ಹೆಚ್ಚಿಸುತ್ತವೆ. ಈ ಹಸುರು ಹೊದಿಕೆಯನ್ನು ಎಳೆದುಹಾಕುವುದರಿಂದ ಮಣ್ಣಿನ ಫಲವತ್ತಿನ ಆಗರಗಳಾದ ಗೋಡು, ಜೇಡಿಕಣಗಳು ಮಣ್ಣಿನಿಂದ ಬೇರ್ಪಟ್ಟು, ಹೊರಳುವ ನೀರಿನೊಂದಿಗೆ ಕೊಚ್ಚಿಹೋಗಿ, ಮಣ್ಣನ್ನು ನಿಸ್ಸಾರಗೊಳಿಸುತ್ತವೆ. ಹುಲ್ಲು, ಕಳೆ ಕಸಗಳೇ ಮಣ್ಣನ್ನು ಈ ರೀತಿ ಕಾಪಾಡುವಾಗ, ದಟ್ಟವಾಗಿ ಬೆಳೆದ, ಅಗಲವಾದ ಎಲೆಗಳುಳ್ಳ ಮರಗಳ ವನ, ಇನ್ನೆಷ್ಟರಮಟ್ಟಿಗೆ ಮಣ್ಣನ್ನು ಕಾಪಾಡುತ್ತಿರಬಹುದು ?

ಆದುದರಿಂದ, ಗಿಡ ಮರಗಳು ನಮ್ಮ ಸಂಪನ್ಮೂಲಗಳಾದ ಹವಾಗುಣವನ್ನೂ, ಜಲವನ್ನೂ, ಮಣ್ಣನ್ನೂ, ಪಾಲಿಸುವ, ಪ್ರಕೃತಿಯು ರೂಪಿಸಿರುವ ರಕ್ಷಾಕವಚ ! ಇಂತಹ ಗಿಡ ಮರಗಳನ್ನು ಬೋಳಿಸುತ್ತಿರುವುದರಿಂದ ಮಾನವನ ಸಂಪನ್ಮೂಲಗಳೇ ಕ್ಷಯಿಸುತ್ತಿವೆ. ಈ ನಾಶದಿಂದಲೇ, ಮಳೆಬೆಳೆ ಕೆಡುತ್ತಿದೆ; ಬಿಸಿಲಿನ ತಾಪ ಚುರುಕಾಗುತ್ತಿದೆ; ಧೂಳು ತುಂಬುತ್ತಿದೆ; ನಿರ್ಮಲವಾಯು ಅಪರೂಪವಾಗುತ್ತಿದೆ; ಬಾವಿಗಳು ಬತ್ತುತ್ತಿವೆ, ಕೆರೆ ಕಟ್ಟೆಗಳಿಗೆ ಹೂಳು ತುಂಬುತ್ತಿದೆ; ಹೊಳೆಗಳು ಬಗ್ಗಡವಾಗುತ್ತಿವೆ; ಮೀನು ಕಡಿಮೆಯಾಗುತ್ತಿವೆ; ಮಣ್ಣಿನ ಫಲವತ್ತು ಕ್ಷೀಣಿಸುತ್ತಿದೆ ; ನೆಲ ಕೊರಕಲು ಬೀಳುತ್ತಿದೆ; ಬೇಸಾಯ ಕೈಹತ್ತದಾಗಿದೆ; ಬಡತನ ಹೆಚ್ಚುತ್ತಿದೆ; ಜನತೆಯ ಶಕ್ತಿ ಉತ್ಸಾಹ ಕುಂದುತ್ತಿವೆ.

ಗಿಡಮರಗಳ ನಾಶನದಿಂದ ಆದ ದುಷ್ಪರಿಣಾಮ ! ಇಷ್ಟೇ ಅಲ್ಲ, ಗಿಡಮರಗಳ ನಾಶನದಿಂದ ನಮ್ಮ ಜನಜೀವನ, ರೈತ ಜೀವನದ ಮೇಲೆ ವಿಪರೀತ ದುಷ್ಪರಿಣಾಮಗಳು ಸಂಭವಿಸಿವೆ. ಅವುಗಳು ಇಂತಿವೆ :

ಮೊದಲನೆಯದು - ಸೌದೆ ಅಭಾವದಿಂದ ಸಗಣಿಯನ್ನು ಬೆರಣಿಯಾಗಿ ಉರಿಸುವ ಪರಿಪಾಟ ಅಗಾಧವಾಗಿ ಬೆಳೆಯುತ್ತಿದೆ.

ಸಗಣಿಯನ್ನು ಬೆರಣಿಮಾಡಿ ಸುಡುವುದು ಪ್ರಕೃತಿ ನಿಯಮಕ್ಕೆ ವಿರೋಧ ಕ್ರಮ. ಪ್ರಕೃತಿಯಲ್ಲಿ ಪ್ರತಿಯೊಂದು ವಸ್ತುವಿಗೂ – ಜೀವಿಯಾಗಿರಲಿ, ನಿರ್ಜೀವಿಯಾಗಿರಲಿ – ಪ್ರತಿಯೊಂದಕ್ಕೂ, ಒಂದೊಂದು ಗೊತ್ತಾದ ಸ್ಥಾನವಿದೆ; ನಿರ್ದಿಷ್ಟ ಉಪ

ಯೋಗಪಿದೆ. ಪ್ರಕೃತಿ ನಿಯಮ, ಬಂಡಿಚಕ್ರದಂತೆ. ಒಂದು ಅರೆಕಾಲು ಮುರಿದು ಬಿದ್ದರೂ, ಒಂದು ಪ್ರಟ್ಟಿಮರ ಕಳಚಿಹೋದರೂ ಬಂಡಿಚಕ್ರ ಉರುಳಲಾರದು. ಹಾಗೆಯೇ ಪ್ರಕೃತಿಯ ಚಕ್ರ.

ಸಗಣಿ, ಭೂಫಲವತ್ತಿನ ಚಕ್ರದ ಮುಖ್ಯ ಭಾಗ. ಬೆಳೆ ಮತ್ತು ಹುಲ್ಲು, ಜನಗಳ ಮತ್ತು ದನಗಳ ಆಹಾರ. ಜನರ ಮಲಮೂತ್ರ, ಹಾಗೂ ದನಗಳ ಸಗಣಿ ಗಂಜಲ, ಬೆಳೆ ಮತ್ತು ಹುಲ್ಲುಗಳ ಆಹಾರ. ಜಮೀನು, ಈ ಚಕ್ರದ ಗುಂಬ. ಜಮೀನು, ಬೆಳೆ ಮತ್ತು ಹುಲ್ಲಿನ ರೂಪದಲ್ಲಿ, ಜನಗಳಿಗೂ, ದನಗಳಿಗೂ ಆಹಾರ ಕೊಟ್ಟು ಸಲಹುತ್ತದೆ. ಅವುಗಳ ಮಲಮೂತ್ರವನ್ನು ಜಮೀನು ಆಹಾರವಾಗಿ ರೂಪಿಸಿ, ತನ್ನಲ್ಲಿ ಬೆಳೆದ ಬೆಳೆ ಮತ್ತು ಹುಲ್ಲುಗಳಿಗೆ ಕೊಟ್ಟು ಅವನ್ನೂ ಸಲಹುತ್ತದೆ. ಭೂಫಲವತ್ತಿನ ಚಕ್ರ ನಿರಂತರವಾಗಿ ಉರುಳಿ ಅನೇಕಾನೇಕ ಪ್ರಾಣಿಗಳಿಗೆ ಆಹಾರವನ್ನು ಒದಗಿಸಲು, ಬೆಳೆ, ಜಮೀನಿನಿಂದ ಹಳ್ಳಿಯ ಕಡೆ ಸೇರಿದರೆ ಸಾಲದು ; ಹಳ್ಳಿಯಿಂದ ಸಗಣಿ ಮತ್ತು ಗಂಜಲ ಜಮೀನಿನ ಕಡೆ ಸಾಗಬೇಕು; ಸಾಗುತ್ತಲೇ ಇರಬೇಕು. ಸಗಣಿಯನ್ನು ಬೆರಣಿಯಾಗಿ ಸುಟ್ಟಲ್ಲಿ ಭೂಫಲವತ್ತಿನ ಪ್ರವಾಹ ಒಂದೇ ದಿಕ್ಕಿನಲ್ಲಿ – ಜಮೀನಿನಿಂದ ಊರಿನ ಕಡೆ ಮಾತ್ರ, ಹರಿಯುತ್ತದೆ. ಹೀಗೆ ಹರಿಯುತ್ತಿರುವುದರಿಂದಲೇ ನಮ್ಮ ಜಮೀನುಗಳು ನೀರಸವಾಗಿ, ಸತ್ವಹೀನವಾಗಿ, ಅವುಗಳ ಇಳುವರಿ ಕುಗ್ಗಿ, ಆಹಾರದ ಅಭಾವ ಹೆಚ್ಚುತ್ತಿರುವುದು. ಜಮೀನಿಗೆ ಸಗಣಿ ರೂಪದಲ್ಲಿ ತಿರುಗಿಸಬೇಕಾದ ಪ್ರವಾಹ ಬೆರಣಿ ರೂಪದಲ್ಲಿ ತಡೆಗಟ್ಟಿರುವುದರಿಂದಲೇ ನಮಗೆ ಅನ್ನ, ಬಟ್ಟೆಯ ಕೊರತೆ. ಪ್ರಕೃತಿಯಲ್ಲಿ, ಸಗಣಿಯ ನಿಯಾಮಕ ಕಾರ್ಯ ಭೂಫಲವತ್ತನ್ನು ಹೆಚ್ಚಿಸುವುದು; ಸುಟ್ಟು ಬೂದಿಯಾಗುವುದಲ್ಲ. ಆದುದರಿಂದ, ಭೂಫಲವತ್ತನ್ನು ಹೆಚ್ಚಿಸಲು ಇರುವ ಒಂದೇ ಮಾರ್ಗ, ಸಗಣಿಯನ್ನು ಜಮೀನಿಗೆ ವಿಾಸಲಾಗಿಡುವುದು. ಇದಕ್ಕೆ ಒಂದೇ ಉಪಾಯ, ಸೌದೆ ಮರಗಳನ್ನು ಹೆಚ್ಚು ಹೆಚ್ಚಾಗಿ ಬೆಳೆಯುವುದು; ವನವೃಕ್ಷಗಳನ್ನು ಕಾಪಾಡಿಕೊಂಡು ಬರುವುದು. ಹೀಗೆ ಮಾಡಿದರೆ ಫಲವತ್ತಿನ ಚಕ್ರ ಜಮೀನಿನಿಂದ ಊರಿಗೆ, ಊರಿನಿಂದ ಜಮೀನಿಗೆ ದುಂಡು ಸುತ್ತುತ್ತಿರುತ್ತದೆ.

ಒಂದು ದೃಷ್ಟಿಯಲ್ಲಿ, ನಮ್ಮ ಈಗಿನ ಪರಿಸ್ಥಿತಿ ಹೇಗಿದೆಯೆಂದರೆ ಅನ್ನ ಬೇಯಿಸಲು, ಹಿಟ್ಟು ತಿರುವಲು, ರೊಟ್ಟಿ ಸುಡಲು, ಅಕ್ಕಿ, ರಾಗಿ, ಜೋಳ ಹಾಗೂ ಗೋಧಿಗಳನ್ನೇ ಸುಡುತ್ತಿದ್ದೇವೆ ಎನ್ನಬಹುದು. ಏಕೆಂದರೆ, ಇವನ್ನು ಬೇಯಿಸಲು, ಸುಡಲು, ಸಗಣಿಯ ಬೆರಣಿಯನ್ನೇ ಬಳಸುತ್ತಿದ್ದೇವೆ. ಈ ಸಗಣಿ ಜಮೀನಿಗೆ ಸೇರಿದ್ದರೆ ಬತ್ತವಾಗುತ್ತಿತ್ತು: ರಾಗಿ, ಜೋಳ, ಗೋಧಿಗಳಾಗುತ್ತಿತ್ತು. ಹೀಗೆ ಹೆಚ್ಚಿಗೆ ಉತ್ಪತ್ತಿಯಾಗಬಲ್ಲ ಧಾನ್ಯಗಳನ್ನು ಬೆರಣಿ ರೂಪದಲ್ಲಿ ಸುಡುತ್ತಿದ್ದೇವೆ.

ಸೌದೆ ಮರಗಳನ್ನು ಸಾಕಷ್ಟು ಬೆಳೆದರೆ ಈಗ ಹೂಡುತ್ತಿರುವ ಗೊಬ್ಬರಕ್ಕಿಂತ ಕನಿಷ್ಠಪಕ್ಷ ಶೇಕಡ ೪೦ ರಷ್ಟು ಹೆಚ್ಚು ಗೊಬ್ಬರವನ್ನು ಬೆಳೆಗಳಿಗೆ ಒದಗಿಸಬಹುದು.

ಹೀಗೆ ಮಾಡಿದಲ್ಲಿ ನಮ್ಮ ಆಹಾರದ ಉತ್ಪತ್ತಿಯೂ ಕನಿಷ್ಠಪಕ್ಷ ಶೇಕಡ ೩೦ ರಷ್ಟಾದರೂ ಹೆಚ್ಚಬಹುದು. ಈಗ ನಮ್ಮ ದೇಶದಲ್ಲಿ ಆಹಾರದ ಕೊರತೆ ಅಲ್ಪಸ್ವಲ್ಪ ವಾಗಿ ನೀಗಿದೆ ಎಂದೇ ಹೇಳಬೇಕು. ಆದರೂ, 'ಹೆಚ್ಚು ಆಹಾರ ಬೆಳೆಯಿರಿ' ಅನ್ನುವುದಕ್ಕೆ ಬದಲು 'ಹೆಚ್ಚು ಸೌದೆ ಬೆಳೆಯಿರಿ' ಎಂಬುದೇ ನಮಗೆ ಸೂಕ್ತವಾದ ಸೂತ್ರ. ಹೆಚ್ಚು ಸೌದೆ ಬೆಳೆದರೆ, ಸಗಣಿ ಜಮೀನು ಸೇರಿ, ಆಹಾರದ ಸಮಸ್ಯೆ ತನ್ನಷ್ಟಕ್ಕೆ ತಾನೆ ಪರಿಹಾರ ಹೊಂದುತ್ತದೆ. ಹೆಚ್ಚು ಸೌದೆ – ಹೆಚ್ಚು ಸಗಣಿ ; ಹೆಚ್ಚು ಸಗಣಿ – ಹೆಚ್ಚು ಬೆಳೆ.

ಎರಡನೆಯದು – ರೈತ ಜೀವನದ ಮೇಲೆ ಕಾಡುಮೇಡುಗಳನ್ನು, ಗಿಡಮರ ಗಳನ್ನು ಕಡಿದುಹಾಕಿರುವುದರಿಂದ ಆಗಿರುವ ಪರಿಣಾಮ, ನಮ್ಮ ದನಗಳಿಗೆ ಸಾಕಷ್ಟು ಮೇವು, ಗದ್ದೆ ತೋಟಗಳಿಗೆ ಸಾಕಷ್ಟು ಹಸುರುಸೊಪ್ಪು, ಸಿಗದೆ ಇರುತ್ತಿರುವುದು.

ಹಿಂದೆ ಹಳ್ಳಿಗಳ ಹತ್ತಿರವೇ ಕಾಡುಮೇಡುಗಳು ಇದ್ದುದರಿಂದ, ಅಲ್ಲಿ, ದನಗಳು ಮೇಯಲು ಸಾಕಷ್ಟು ಹುಲ್ಲುಸೊಪ್ಪು ಸಿಗುತ್ತಿತ್ತು. ಹುಲ್ಲುಸೊಪ್ಪಿಗೆ ಗಿಡಮರಗಳ ಆಶ್ರಯ ತಪ್ಪಿದ ಮೇಲೆ, ಹುಲ್ಲು ಮಾಯವಾಗುತ್ತ ಬಂದಿತು. ಈಗಿನ ಗೋಮಾಳ, ಗೋಕಾಡುಗಳ ಹೀನಸ್ಥಿತಿಗೆ ದನಗಳ ಸಂಖ್ಯೆ ಹುಚ್ಚಾ ಪಟ್ಟೆ ಏರುತ್ತಿರುವುದು ಮಾತ್ರವಲ್ಲ, ಅವುಗಳಿಗೆ ಹಿಂದೆ ಇದ್ದ ಗಿಡಮರಗಳ ರಕ್ಷಾ ಕವಚ ಜಾರಿದುದೇ ಪ್ರಬಲ ಕಾರಣ.

ಗೋಮಾಳಗಳನ್ನು ಪುನರ್‌ಜೀವನಗೊಳಿಸಲು ಹುಲ್ಲು ಹಾಕಿದರೆ ಸಾಲದು. ಜತೆಗೆ ಮರಗಳನ್ನು ನೆಡಬೇಕು. ಈ ಮರಗಳು ದೊರೆತಲ್ಲಿ ಮಣ್ಣಿನ ಕೊಚ್ಚಣೆ ಕಡಿಮೆಯಾಗಿ ಮಳೆಯ ನೀರಿನ ಹೆಚ್ಚು ಪಾಲು ನೆಲದಲ್ಲಿ ತಂಗಿ, ಇಂಗಿ, ಈ ಗಿಡ ಮರಗಳಿಂದ ಉದುರುವ ಎಲೆ, ಹೂವು ಮುಂತಾದವು ಮಣ್ಣನ್ನು ಒಳಸೇರಿ ಅದರ ಸತ್ವವನ್ನು ಕುದುರಿಸಿ ಹುಲ್ಲು ಬೆಳೆದು ತಲೆಯೆತ್ತುವಂತೆ ಆಗುತ್ತದೆ.

ಕಾಡುಮೇಡುಗಳು ಊರಿನ ಸಮೀಪದಲ್ಲೇ ಇದ್ದಾಗ, ಅಲ್ಲಿ ಬೆಳೆಯುವ ಸೊಪ್ಪನ್ನು ವಿತರಣೆಯಿಂದ ತರಿದು ತಂದು, ಗದ್ದೆಗಳಿಗೆ ತುಳಿದು ಬೆಳೆ ಇಳುವರಿ ಯನ್ನು ಅಧಿಕಗೊಳಿಸಿಕೊಳ್ಳಲು ಸಾಧ್ಯವಿತ್ತು. ಈಗ ಸೊಪ್ಪಿಗಾಗಿ ದೂರದ ಕಾಡುಗಳಿಗೆ ಹೋಗಲು ಸಾಧ್ಯವಿಲ್ಲ. ಅಂದರೆ ಗದ್ದೆಗಳಿಗೆ ಸೊಪ್ಪು ಕೊರತೆ ಬಿತ್ತು; ಬೆಳೆ ಇಳುವರಿ ಕುಗ್ಗಿ ಬಿತ್ತು.

ಮೂರನೆಯದು – ನಮ್ಮ ರೈತರಿಗೆ ನೇಗಿಲು, ಕುಂಟೆ ಮುಂತಾದ ಬೇಸಾಯದ ಮುಟ್ಟುಗಳನ್ನು ಮಾಡಿಕೊಳ್ಳಲು ಮರ, ಸುಲಭವಾಗಿ ದೊರೆಯುತ್ತಿಲ್ಲ. ಹಿಂದೆ, ರೈತರಿಗೆ ಬೇಕಾದ, ಬೇಕಾದಷ್ಟು ಮರಗಳನ್ನು ಹತ್ತಿರದ ಕಾಡಿನಲ್ಲೇ, ಹೊಲಗದ್ದೆ ಗಳಲ್ಲಿದ್ದ ವೃಕ್ಷಗಳಿಂದಲೇ ಪಡೆಯಬಹುದಾಗಿತ್ತು – ಖರ್ಚಿಲ್ಲದೆ. ಈಗ ಇವನ್ನು ದೂರದ ಅರಣ್ಯಗಳಿಂದಲೇ ತರಿಸಬೇಕಾಗಿದೆ. ಮರದ ಬೆಲೆ, ಜತೆಗೆ ಅದನ್ನು ಸಾಗಿಸುವ ಖರ್ಚು ಸೇರಿ, ರೈತರು ಇವುಗಳಿಗಾಗಿ ಹೆಚ್ಚು ಹಣ ತೆರಬೇಕಾಗಿ ಬಂದಿದೆ.

ನಾಲ್ಕನೆಯದು – ಊರಿನ ಹತ್ತಿರವಿದ್ದ ಕಾಡುಗಳಿಂದ, ರೈತರಿಗೇ ಅಲ್ಲದೆ, ಅನೇಕ ಬಗೆಯ ಕಸಬುದಾರರಿಗೆ, ಅವರಿಗೆ ಬೇಕಾದ ಬೊಂಬು, ನಾರು, ಒಗಚು, ಅಂಟು, ಗೇರು, ಅರಗು, ಸರಿ ಮುಂತಾದ ಕಚ್ಚಾ ವಸ್ತುಗಳು ಸುಲಭವಾಗಿ ಸಿಗುತ್ತಿದ್ದವು. ಈಗ ಇವುಗಳಿಗೆಲ್ಲಾ ಹಣ ತೆರಬೇಕಾದುದರಿಂದ ಈ ಕಸಬುಗಳು ಲಾಭದಾಯಕವಲ್ಲದೆ ಹೋಗಿ, ಇವುಗಳನ್ನು ಬಿಟ್ಟು ಬೇರೆ ಕಸಬುಗಳನ್ನು ಹಿಡಿದು ಹೊಟ್ಟೆ ಹೊರೆದುಕೊಳ್ಳಬೇಕಾಗಿದೆ. ಈ ಪರಿಸ್ಥಿತಿಯಿಂದ ಕಸಬುದಾರರಿಗೇ ಅಲ್ಲದೆ ರೈತರಿಗೂ ನಷ್ಟ. ಹಳ್ಳಿಯಲ್ಲೇ ಮಾಡಿಸಿಕೊಳ್ಳುತ್ತಿದ್ದ ರಿಪೇರಿಗಳನ್ನು, ಕೈಮಗ್ಗದ ಬಟ್ಟೆಗಳನ್ನು, ಮಂಕರಿ ಬುಟ್ಟಿಗಳನ್ನು, ಹಗ್ಗಗಳನ್ನು ಇನ್ನೂ ಅನೇಕ ವಸ್ತುಗಳನ್ನು ಪಟ್ಟಣಗಳಲ್ಲಿ ಮಾಡಿಸಿಕೊಳ್ಳಬೇಕು, ಇಲ್ಲದೇ ಕೊಳ್ಳಬೇಕಾಗಿದೆ.

ಐದನೆಯದು – ನಮ್ಮ ಹಳ್ಳಿಯ ಜಾನಪದಕಲೆಯೂ ಮಾಯವಾಗುತ್ತಿದೆ. ವನವೃಕ್ಷಗಳು ಜನತಾಕಲೆಯ ಪ್ರೇರಕಗಳು. ಜಾನಪದ ಗೀತೆ, ಕುಣಿತ, ಕೋಲಾಟ, ಚಿತ್ರ, ಪದ್ಯ, ಸಾಹಿತ್ಯ ಇವೆಲ್ಲದರ ಬೆಳವಣಿಗೆಗೆ ವನವೃಕ್ಷಗಳ ಪ್ರೇರೇಪಣೆ ಇದೆ. ಹಿಂದೆ, ನಮ್ಮ ಜನ ಕಟ್ಟುತ್ತಿದ್ದ, ಹಾಡುತ್ತಿದ್ದ ಹಾಡುಗಳಷ್ಟು ಈಗಿನ ಜನ ಕಟ್ಟುತ್ತಿಲ್ಲ : ಹಾಡುತ್ತಿಲ್ಲ. ನಮ್ಮ ಜನಜೀವನ ಬರಡಾಗುತ್ತಿರುವುದಕ್ಕೆ ಇದೇ ಕಾರಣವಿರಬಹುದು. ಬಿಸಿಲಿನತಾಪದಲ್ಲಿ ಬೇಯುತ್ತಿರುವಾಗ, ಗ್ರಾಮಗಳು ಧೂಳಿನ ಕೊಂಪೆಗಳಾಗಿರುವಾಗ, ಕಣ್ಣಿಗೆ ಹಸುರಿನ ಶಾಂತಿ, ತೃಪ್ತಿ ದೊರೆಯದಿದ್ದಾಗ ಯಾವನು ತಾನೇ ಹಾಡಬಲ್ಲ, ಹಾಡನ್ನು ಕಟ್ಟಬಲ್ಲ ? ನೆಲ, ತಂಪಗೆ ಹಸುರು ಹೊದ್ದು, ಗಾಳಿ ತಣ್ಣಗೆ, ಮೆಲ್ಲಗೆ, ವನಸುಮಗಳ ಪರಿಮಳವನ್ನು ಹೊತ್ತು ಸುಳಿಯುತ್ತಿದ್ದರೆ, ಹಕ್ಕಿಗಳು ಗರಿಗೆದರಿ ಹಾಡುತ್ತಿದ್ದರೆ, ಎಂತಹ ಮುದಿಗೊಡ್ಡೂ ಚೇತನಗೊಂಡು, ತನ್ನ ಹರ್ಷವನ್ನೂ, ತೃಪ್ತಿಯನ್ನೂ, ನೆಮ್ಮದಿಯನ್ನೂ ಹಾಡಿನ ಮೂಲಕ ಸಾರುತ್ತಿದ್ದ. ನಮ್ಮ ಜಾನಪದ ಗೀತೆಗಳು ರಚಿತವಾಗಿದ್ದೇ ಹೀಗೆ. ಆದರೆ ವನವೃಕ್ಷಗಳು ಮಾಯವಾಗಿ, ನೆಲ ಬೋಳಾಗಿ ಬರಡಾದಾಗ, ನಮ್ಮ ಜನಜೀವನವೂ, ನಮ್ಮ ಕಲೆಯೂ ಬರಡಾಯಿತು.

ಹೀಗೆ ಎಲ್ಲ ರೀತಿಯಲ್ಲೂ ಗಿಡಮರಗಳ ನಾಶನದಿಂದ ಅತಿ ತೀವ್ರವಾದ ದುಷ್ಪರಿಣಾಮಗಳು ಉಂಟಾಗಿವೆ. ರೈತ ಜೀವನ, ಜನಜೀವನ, ಹದಗೆಟ್ಟಿವೆ.

ಈ ದುಷ್ಪರಿಣಾಮಗಳನ್ನು ಎದುರಿಸುವ ಬಗೆ : ಈ ದುಷ್ಪರಿಣಾಮಗಳನ್ನು ಎದುರಿಸುವ, ನಿವಾರಿಸುವ ಶಕ್ತಿ ನಮ್ಮ ಕೈಯಲ್ಲೇ ಇದೆ. ನಮ್ಮ ಜನ, ಪೂರ್ವಜರಂತೆ, ನಮ್ಮ ಗಿಡಮರಗಳ ಬಗ್ಗೆ, ವನವೃಕ್ಷಗಳ ಬಗ್ಗೆ ಆಸಕ್ತಿ ತೋರಿದರೆ, ಶ್ರದ್ಧೆ ವಹಿಸಿದರೆ, ಪೂಜ್ಯ ಭಾವವನ್ನು ಬೆಳೆಸಿಕೊಂಡರೆ, ಹತ್ತಿಪ್ಪತ್ತು ವರ್ಷಗಳಲ್ಲಿ ನಾವು ಈ ಪರಿಣಾಮಗಳಿಂದ ಪಾರಾಗಬಹುದು.

ಈ ದಿಸೆಯಲ್ಲಿ ಮೊದಲನೆಯ ಹೆಜ್ಜೆ ನಮ್ಮ ಜನರಲ್ಲಿ ವನವೃಕ್ಷಗಳ ಬಗ್ಗೆ ಬೆಳೆದಿ

ರುವ ದೃಷ್ಟಿಮಾಂದ್ಯವನ್ನು ಸರಿಸುವುದು. ಈ ದೃಷ್ಟಿದೋಷ, ಮರವೂ ಒಂದು ಬೆಳೆಯೆಂದು ಕಾಣಲಾರದ, ಕಣ್ಣುಕುರುಡು. ಕೆಲವು ತಿಂಗಳುಗಳಲ್ಲೇ ಫಲ ಕೊಡುವ ಕಾಳುಕಡ್ಡಿಯೇ ಬೆಳೆ ಎಂದು ಅನೇಕರು ತಿಳಿದಿದ್ದಾರೆ. ಆಹಾರದ ಅವಶ್ಯಕತೆಯನ್ನು ಪೂರೈಸುವ ಸಸ್ಯಗಳೇ ಬೆಳೆಯೆಂದು ಅರಿತುಕೊಂಡಿದ್ದಾರೆ. ಧಾನ್ಯವೇ ಸರ್ವಸ್ವವಲ್ಲ. ಆಹಾರ ಒಂದೇ ನಮ್ಮ ಗುರಿಯಲ್ಲ. ತುಂಬು ಜೀವನಕ್ಕೆ ಧಾನ್ಯಗಳಿದ್ದರೇ ಸಾಲದು. ಈ ಬಗೆಯ ತುಂಬು ಜೀವನ ನಡೆಸಲು ಹಾಲು ಬೇಕು; ಹಣ್ಣು ಬೇಕು; ನೆಲೆಸಲು ಮನೆ ಬೇಕು; ಕೂಡಲು ಕುರ್ಚಿ, ಬೆಂಚು, ಮಣೆ ಬೇಕು; ಮಲಗಲು ಮಂಚ ಬೇಕು; ಪೂಜಿಸಲು ವಿಗ್ರಹ ಬೇಕು; ಓದಲು, ಬರೆಯಲು ಕಾಗದ ಬೇಕು; ಭೂಮಿ ಸಾಗುಮಾಡಲು, ನೇಗಿಲು, ಕುಂಟೆ ಮುಂತಾದವು ಬೇಕು; ಸುತ್ತಾಡಲು, ಪ್ರಯಾಣ ಮಾಡಲು ಗಾಡಿ, ರೈಲು, ಬಸ್ಸು, ಮೋಟಾರು ಬೇಕು. ಇವೆಲ್ಲವೂ ತುಂಬು ಜೀವನದ ಅವಶ್ಯಕತೆಗಳು. ಇವನ್ನು ಪೂರೈಸತಕ್ಕವು ಗಿಡಮರಗಳು; ಕಾಳುಕಡ್ಡಿಗಳಲ್ಲ. ಆದುದರಿಂದ, ಮರವೂ ಒಂದು ಬೆಳೆ; ಮಾನವನ ಅನೇಕ ಬಗೆಯ ಬಯಕೆಗಳನ್ನು, ಅವಶ್ಯಕತೆಗಳನ್ನು, ಆಸೆಗಳನ್ನು ತುಂಬಿಸಬಲ್ಲ ಬೆಳೆ, ಎಂಬ ಭಾವನೆ ಜನತೆಯಲ್ಲಿ ಮೂಡಬೇಕು; ಅಂಥ ದೂರದೃಷ್ಟಿ ಅವರು ಪಡೆಯಬೇಕು. ಗಿಡಮರಗಳ ಫಲಗಳಿಗೆ ಕೆಲವಾರು ವರ್ಷಗಳು ಕಾಯಬೇಕಾದುದರಿಂದ, ಕಾಳುಕಡ್ಡಿಗಳ ಫಸಲನ್ನು ಕೆಲವಾರು ತಿಂಗಳುಗಳಲ್ಲೇ ಕಾಣುವುದರಿಂದ ನಾವು, ಈ ದೂರದೃಷ್ಟಿಯನ್ನು ಕಳೆದುಕೊಂಡಿದ್ದೇವೆ. ಆದರೆ ಜನ ಜೀವನ, ರೈತ ಜೀವನ ಒಂದು ವರ್ಷದಲ್ಲೇ ಮುಕ್ತಾಯವಾಗುವುದಲ್ಲ. ಅನಾದಿ ಕಾಲದಿಂದಲೂ ಹರಿದುಬಂದು ಈಗಲೂ ಹರಿಯುತ್ತಿರುವ, ನಿರಂತರವಾಗಿ ನೂರಾರು ವರ್ಷ ಹರಿಯಬೇಕಾಗಿರುವ ಜೀವದ ಹೊಳೆಯೇ ಅದು ಎಂಬ ದೂರದೃಷ್ಟಿಯನ್ನು ನಾವೇಕೆ ಹೊಂದಿಲ್ಲ? ನಮ್ಮ ಅಪ್ಪ, ಅಜ್ಜ, ಹಾಕಿದ ತೆಂಗಿನಮರ, ಹಲಸಿನಮರ, ಮಾವಿನಮರ, ಹೊಂಗೆಮರದ ಫಲವನ್ನು ನಾವು ಈಗ ಉಣ್ಣುತ್ತಿದ್ದೇವೆಯಷ್ಟೆ! ಈ ಋಣ ತೀರಿಸಲು, ನಾವೂ ಕೂಡ ಹಾಗೆಯೇ, ನಮ್ಮ ಮುಂದಿನ ಪೀಳಿಗೆಗಳಿಗೆ ಈ ತೆರದ ಮರಗಳನ್ನು ನೆಟ್ಟು ಬೆಳೆಸುವುದೊಂದೇ ಮಾರ್ಗ. ನಮ್ಮ ಕಲ್ಯಾಣಕ್ಕಾಗಿ ನಮ್ಮ ಹಿರಿಯರು ಗಿಡ ಮರಗಳನ್ನು ನೆಟ್ಟರು. ನಮ್ಮ ಮುಂದಿನ ಪೀಳಿಗೆಯ ಕಲ್ಯಾಣಕ್ಕಾಗಿ ನಾವೂ ಕೆಲವು ಗಿಡ ಮರಗಳನ್ನು ನೆಡಬೇಡವೇ?

ಆದರೆ, ಈ ದೂರದೃಷ್ಟಿಯನ್ನೇಕೆ ನಮ್ಮ ಜನ ಹೊಂದಿಲ್ಲ? ಇದಕ್ಕೆ ಕೆಲವು ಕಾರಣಗಳಿವೆ. ನಮ್ಮಲ್ಲಿ ಅನೇಕರಿಗೆ ಮರ ಗಿಡಗಳ ಬಗ್ಗೆ ಒಂದು ಬಗೆಯ ಭೀತಿ ಇರುವಂತಿದೆ. ಅವರು, ಮರಗಳು, ಕಾಡುಗಳು, ಬೇಸಾಯದ ಹಗೆಯೆಂದೇ ಭಾವಿಸಿರುವಂತಿದೆ. ವನವೃಕ್ಷಗಳು ಕೃಷಿಯ ವೈರಿಗಳಲ್ಲ, ಮಿತ್ರರು ಎಂಬುದು ಅವರಿಗೆ ಸ್ಪಷ್ಟವಾದರೆ, ಬಹುಶಃ ಈ ಹೆದರಿಕೆ ಜಾರಿ ಅವರೂ ಕೂಡ ಗಿಡ ಮರಗಳ ಬಗ್ಗೆ ಉತ್ಸಾಹವನ್ನು ತಾಳಬಹುದು. ಹೆದರಿಕೆಗೆ ಮದ್ದು ತಿಳಿವಳಿಕೆ – ವನವೃಕ್ಷಗಳು

ಬೇಸಾಯದ ಬಂಧುಗಳೆಂಬ ತಿಳಿವಳಿಕೆ. ಇದಕ್ಕೆ ಮೊದಲು ಅವರ ಶಂಕೆ, ಸಂದೇಹ, ಆತಂಕಗಳು ನಿವಾರಣೆಯಾಗಬೇಕು. ಈ ಕೆಲವನ್ನು ಇಲ್ಲಿ ಚರ್ಚಿಸಿದೆ.

ಮೊದಲನೆಯ ಶಂಕೆ : ಮರಗಳು ಬೆಳೆಗಳನ್ನು ಕೆಡಿಸುತ್ತವೆ; ಅವುಗಳ ನೆರಳಿನಲ್ಲಿ ಬೆಳೆ ತಲೆಯೆತ್ತುವುದಿಲ್ಲ : ಈ ಆಕ್ಷೇಪಣೆಗೆ ಬುಡವಿಲ್ಲ. ಅಗಲವಾದ, ದಟ್ಟವಾದ ನೆತ್ತಿ ಇರುವ ಮರಗಳನ್ನು ಜಮೀನಿನ ಅಂಚು ಅಥವಾ ಬದುಗಳಲ್ಲಿ ಹಾಕಿದರೆ ಅವು ನೆರಳುಕಟ್ಟಿ ತಳದ ಬೆಳೆಯನ್ನು ತಲೆಯೆತ್ತಗೊಡಿಸುವುದಿಲ್ಲ, ನಿಜ. ಆದರೆ ಇಂತಹ ಮರಗಳನ್ನು ನೆಡಿ ಎಂದು ಯಾರು ಹೇಳುತ್ತಾರೆ? ರೈತರಿಗೆ, ವಿವಿಧ ಉದ್ದೇಶಗಳಿಗೆ, ವಿವಿಧ ಸ್ಥಳಗಳಿಗೆ, ವಿಧವಿಧವಾದ ಮರಗಳಿವೆ. ನೆರಳುಕಟ್ಟದ, ಆಳವಾಗಿ ಬೇರು ಇಳಿಸಿ ಭೂಮಿಯ ತಳಪದರಗಳಿಂದ ಪೋಷಕಗಳನ್ನೂ ನೀರನ್ನೂ ಪಡೆದು ಬೆಳೆಯುವ ಅನೇಕ ಮರ – ಜಾಲಿ, ಪ್ರಸ್ಣೆ, ಬೆಳ್ಯಾರಿ ಜಾಲಿ ಮುಂತಾದವು ಇವೆ. ರಾಜಾಸ್ಥಾನದಲ್ಲಿ, ಕಾಳುಕಡ್ಡಿ ಬೆಳೆಯುತ್ತಿರುವ ಜಮೀನುಗಳಲ್ಲೇ, ಎಕರೆಗೆ ಸುಮಾರು 50 – 60 ಮರಗಳನ್ನು ನೆಡುವ ವಾಡಿಕೆ ಇದೆ. ಈ ಮರಗಳಿಂದ ಬೆಳೆ ಕೆಡುವುದರ ಬದಲು ಬೆಳೆ ಕುದುರುತ್ತದೆ ಎಂಬುದೇ ಅಲ್ಲಿಯ ರೈತರ ಅನುಭವ. ಹಾಗೆಯೇ ತಮಿಳುನಾಡಿನ ತಂಜಾವೂರು, ತಿರುಚಿರಪಳ್ಳಿಯ ಕಡೆ, ಗದ್ದೆ ಬದುಗಳಲ್ಲಿ ಜಾಲಿಮರಗಳನ್ನು ಬೆಳೆಸುವುದು ಹಿಂದಿನ ಕಾಲದಿಂದ ನಡೆದುಬಂದ ಪದ್ಧತಿಯೇ ಆಗಿದೆ. ಆದರೂ ಅವರ ಬತ್ತದ ಬೆಳೆ ಕೆಟ್ಟಿಲ್ಲ. ಅವರ ಎಕರೆ ಉತ್ಪತ್ತಿ ದೇಶವ್ಯಾಪ್ತಂತ ಪ್ರಸಿದ್ಧಿಯಾಗಿದೆ. ಕ್ಯಾಸರಿಕೆ (ಸರ್ವೆ), ನುಗ್ಗೆ, ಬಿಳಿ ಜಾಲಿ, ಜಾವಾ ಬೂರಗ (ಬಿಳೀ ಬೂರಗ) ಮುಂತಾದ, ಜಮೀನಿನ ಅಂಚಿನಲ್ಲಿ, ಬದುಗಳಲ್ಲಿ ನೆಡಲು ಸೂಕ್ತವಾದ ಮರಗಳಿರುವಾಗ ಮರಗಳು ನೆರಳುಕಟ್ಟಿ ಬೆಳೆಗಳನ್ನು ಕೆಡಿಸುತ್ತವೆಯೆಂದು ಹೇಳುವುದು ಸತ್ಯಕ್ಕೆ ದೂರವಾದ ಮಾತು. ಜಮೀನಿನಲ್ಲೂ ಕೂಡ ಜಾಲಿ, ಅದರಲ್ಲೂ ಒಂದು ಜಾತಿ (ಕುಪ್ರೆಸಿಫಾರ್ಮಿಸ್), ಪ್ರಸ್ಣೆ ಮುಂತಾದವು ವಿರಳವಾದ ನೆತ್ತಿ, ಆಳವಾದ ತಾಯಿಬೇರು ಹೊಂದಿ, ಸ್ವಲ್ಪವೂ ಬೆಳೆ ಕೆಡಿಸುವುದಿಲ್ಲ. ಬೇರುಗಳಿಂದ ಬೆಳೆಗೆ ತೊಂದರೆಯಾಗದಂತೆ, ಬೇಕಾದರೆ, ಮರದ ಸುತ್ತಲೂ ಚರಂಡಿ (ತಗ್ಗು) ತೋಡಿದರೆ ಮತ್ತಷ್ಟು ಅನುಕೂಲ.

ಎರಡನೆಯ ಭೀತಿ : ಜಮೀನಿನ ಹತ್ತಿರ ಮರಗಳಿದ್ದರೆ ಅಲ್ಲಿ ಹಕ್ಕಿಗಳು ಸೇರಿಕೊಂಡು, ಕಾಳುಗಳನ್ನು ಕುಕ್ಕಿ ಬೆಳೆ ನಾಶ ಮಾಡುತ್ತವೆ ಎಂಬುದು : ಹಕ್ಕಿಗಳಿಗೆ ಬೆಳೆಗಳು ಹಾಗೂ ಕಾಳುಗಳೇ ಆಹಾರವಲ್ಲ. ಕಾಡಿನಲ್ಲಿ ಅನೇಕ ಹಕ್ಕಿಗಳಿವೆಯಲ್ಲ ; ಅವಕ್ಕೆ ಯಾರು ರಾಗಿ, ಜೋಳ, ಬತ್ತಗಳನ್ನು ಬೆಳೆಸಿ ತಿನ್ನಿಸುತ್ತಾರೆ. ಕಾಡಿನ ಹಣ್ಣು ಹೂವುಗಳೇ ಇವಕ್ಕೆ ಮುಖ್ಯ ಆಹಾರ. ಇವು ಸಿಗದಿದ್ದರೆ ಊರಿಗೆ ಬಂದು, ಮರಗಳಿರಲಿ ಇಲ್ಲದಿರಲಿ ಕಾಳುಗಳನ್ನು ಕುಕ್ಕಿ ತಮ್ಮ ಹೊಟ್ಟೆ ತುಂಬಿಕೊಳ್ಳುತ್ತವೆ. ಊರಿನ ಸಮೀಪದಲ್ಲೇ ವನವೃಕ್ಷಗಳು ಇದ್ದಲ್ಲಿ, ಊರಿನಲ್ಲೇ ಅನೇಕ ಮರಗಳಿದ್ದಲ್ಲಿ, ಹಕ್ಕಿಗಳು ಅಲ್ಲಿ ನೆಲೆಸಿ, ತಿಂದು ತೇಗಿ ಜಮೀನಿನ ಗೋಜಿಗೆ ಹೋಗುವುದಿಲ್ಲ.

ಅಲ್ಲದೆ ಹಕ್ಕಿಗಳೆಂದರೆ ಎಲ್ಲವೂ ಕಾಳು ತಿನ್ನುವ ಹಕ್ಕಿಗಳಲ್ಲ. ಅನೇಕ ಹಕ್ಕಿಗಳಿಗೆ ಹುಳು, ಹುಪ್ಪಟೆ, ಗೆದ್ದಿಲುಗಳೇ ಆಹಾರ. ಈ ಪೀಡೆಗಳನ್ನು ಹತೋಟಿಯಲ್ಲಿಡಲು ಹಕ್ಕಿಗಳು ಒಂದು ದಿನಕ್ಕೆ (24 ಗಂಟೆಗಳಲ್ಲಿ) ತಮ್ಮ ತೂಕದ ಎರಡರಷ್ಟು ಹುಳು ಹುಪ್ಪಟೆಗಳನ್ನು ತಿನ್ನುತ್ತವೆ. ಹೀಗಿರುವಾಗ ಮರ ನೆಟ್ಟರೆ ಹಕ್ಕಿ ಸೇರಿಕೊಂಡು ಬೆಳೆ ನಾಶಮಾಡುತ್ತವೆಯೆಂಬ ಭೀತಿಗೆ ಬುಡವಿಲ್ಲ.

ಮೂರನೆಯ ತೊಡಕು : ಮರಗಳನ್ನು ಬೆಳೆಸಲು ಜಮೀನು ಎಲ್ಲಿ ಇದೆ ಎಂದು ಕೇಳುವುದುಂಟು : ಗೋಮಾಳಗಳಿಲ್ಲವೇ, ಬಂಜರುಗಳಿಲ್ಲವೇ ಎಂದು ತಿಳಿಸಿದರೆ ಅದಕ್ಕೂ ಒಂದು ಆಕ್ಷೇಪಣೆಯನ್ನು ಮುಂದೊಡ್ಡುತ್ತಾರೆ. ಗೋಮಾಳಗಳಲ್ಲಿ ಬಂಜರು ಗಳಲ್ಲಿ ಮರನೆಟ್ಟರೆ ರೈತರು ದನಗಳನ್ನು ಮೇಯಿಸಲಿಕ್ಕೆ ಎಲ್ಲಿ ಹೋಗಬೇಕು ? ಈಗಿನ ಗೋಮಾಳಗಳು ಹೆಸರಿಗೆ ಮಾತ್ರ ಗೋಮಾಳ. ಅಲ್ಲಿ ಹುಲ್ಲು ಬೆಳೆಯುವುದೇ ಅಪರೂಪ. ಅಬ್ಬಬ್ಬ ಅಂದರೆ ನಿಸ್ಸಾರವಾದ ಒರಟು ಹುಲ್ಲು, ಕುರುಚಲು ಗಿಡ ಬೆಳೆದುಕೊಂಡಿರಬಹುದು ಅಷ್ಟೆ ! ಹುಲ್ಲುಗಾವಲಿಗಿಂತ ನಮ್ಮ ಗೋಮಾಳಗಳನ್ನು ಗೋವ್ಯಾಯಾಮ ಶಾಲೆ ಎನ್ನಬೇಕು, ಮೈ, ಕಾಲು ಆಡಿಸುವ ಜಾಗ ಮಾತ್ರ.

ಈ ಗೋಮಾಳಗಳಲ್ಲಿ ಮರಗಳನ್ನು ನೆಟ್ಟರೆ ಉತ್ತಮ ಬಗೆಯ ಹುಲ್ಲುಗಳನ್ನೂ ಬೆಳೆಯಲು ಸಾಧ್ಯವೆಂದರೆ ಕೆಲವರು ನಂಬುವುದಿಲ್ಲ. ಗೋಮಾಳಗಳಲ್ಲಿ, ಬಂಜರು ಗಳಲ್ಲಿ ವಿರಳವಾದ ನೆತ್ತಿ, ಆಳವಾದ ಬೇರುಬಿಡುವ ಮರಗಳನ್ನು ಆರಿಸಿಕೊಂಡರೆ ಈ ಮರಗಳ ಆಶ್ರಯದಲ್ಲಿ ಇವುಗಳು, ಕೊಡುವ ತಂಪಿನಲ್ಲಿ, ಎಲೆಗಳನ್ನು ಉದುರಿಸಿ ಸುಧಾರಿಸುವ ನೆಲದ ಮೇಲೆ, ಪುಷ್ಟಿಕರವಾದ, ಮೃದುವಾದ, ರುಚಿಯಾದ ಹುಲ್ಲು ಬೆಳೆಯುವುದು. ಇದಕ್ಕಾಗಿ ಒಂದು ಕ್ರಮಬದ್ಧವಾದ ವ್ಯವಸ್ಥೆಯನ್ನು ಮಾಡಿ ಕೊಳ್ಳಬೇಕು.

ಒಂದೊಂದು ವರ್ಷವೂ ಗೋಮಾಳದ ಹತ್ತನೆಯ ಒಂದು ಭಾಗದಲ್ಲಿ ಮರ ಗಳನ್ನು ನೆಟ್ಟು ಆ ತಾಕನ್ನು ಸುಭದ್ರವಾದ ಬೇಲಿಗಳಿಂದ ರಕ್ಷಿಸಬೇಕು. ಮೇಯಲು ದನಗಳನ್ನು ಈ ತಾಕಿಗೆ ಬಿಡಬಾರದು. ಮಳೆಗಾಲದಲ್ಲಿ ಇಲ್ಲಿ ಮರಗಳನ್ನು, ಒಳ್ಳೆಯ ಜಾತಿಯ ಸ್ಥಳದ ಹುಲ್ಲನ್ನು, ನೆಡಬೇಕು. 4 – 5 ವರ್ಷಗಳಲ್ಲಿ ಈ ಮರಗಳು ದನಗಳ ಬಾಯಿಗೆ ನಿಲುಕದಷ್ಟು ಎತ್ತರಕ್ಕೆ ಬೆಳೆಯುತ್ತವೆ. ಮತ್ತೆ 2 – 3 ವರ್ಷಗಳ ಕಾಲ ಈ ತಾಕಿನ ಹುಲ್ಲನ್ನು ದನಬಿಟ್ಟು ಮೇಯಿಸುವುದರ ಬದಲು ಅದನ್ನು ಕತ್ತರಿಸಿ ಸುಲಭ ದರದಲ್ಲಿ ರೈತರಿಗೆ ಒದಗಿಸಬಹುದು. ಹತ್ತು ವರ್ಷವಾದ ಮೇಲೆ ಈ ತಾಕಿಗೆ ದನಗಳನ್ನು ಮೇಯಲು ಬಿಡಬಹುದು. ಮರಗಳ ರೆಂಬೆ ಮುಂತಾದವುಗಳನ್ನು ವಿತರಣೆಯಿಂದ ಕಡಿದು ಸೌದೆ ಸೊಪ್ಪನ್ನು ಒದಗಿಸಬಹುದು. ಹೀಗೆ ಪ್ರತಿವರ್ಷವೂ ಒಂದೊಂದು ತಾಕಿನಲ್ಲಿ ಈ ಕ್ರಮ ಅನುಸರಿಸುತ್ತ ಬಂದರೆ ಹನ್ನೊಂದನೆಯ ವರ್ಷ ದಿಂದ ಈ ಜಾಗ, ನಿಜಕ್ಕೂ ಗೋಮಾಳವಾಗುತ್ತದೆ ; ಗೋಕಾಡಾಗುತ್ತದೆ. ಒಂದು

ವರ್ಷ ಮುಗಿದನಂತರ, ಆ ತಾಕನ್ನು ಮೇವಿನ ದನಗಳಿಗೆ ಮುಚ್ಚಿ ಪಕ್ಕದ ತಾಕನ್ನು ತೆರೆಯುತ್ತ ಬಂದರೆ ಈ ಗೋಮಾಳ ಪುನಃ ಈಗಿರುವಂತೆ ಕುಲಗೆಟ್ಟು ಹೋಗಲು ಆಸ್ಪದವಿರುವುದಿಲ್ಲ. ಈ ವ್ಯವಸ್ಥಿತ ಕ್ರಮದಿಂದ ಗೋಮಾಳ ಪುನರುತ್ಥಾನಗೊಂಡು ದನಗಳಿಗೆ ಮೇವು, ಗದ್ದೆಗಳಿಗೆ ಸೊಪ್ಪು, ರೈತರಿಗೆ ಸೌದೆ, ಮರಮುಟ್ಟುಗಳು ಸುಲಭವಾಗಿ ಸಿಗುವಂತಾಗುತ್ತದೆ.

ನಾಲ್ಕನೆಯ ಆಕ್ಷೇಪಣೆ : ಊರಿನ ಹತ್ತಿರ ಕಾಡುಗಳಿದ್ದರೆ ಇವುಗಳಲ್ಲಿ ದುಷ್ಟ ಮೃಗಗಳು ಸೇರಿಕೊಂಡು ಹಾವಳಿ ಮಾಡಿಯಾವು ಎಂದು : ದೊಡ್ಡ ದಟ್ಟ ಕಾಡುಗಳಾದರೆ ಈ ಮೃಗಗಳಿಗೆ ಆಶ್ರಯ ಸಿಗಬಹುದು. ಆದರೆ 10—20 ಎಕರೆಯ ಗ್ರಾಮ ಕಾಡುಗಳಲ್ಲಿ ಈ ಬಾಧೆ ಇರದು. ಹಂದಿ, ಮೊಲ ಸೇರಿಕೊಳ್ಳಬಹುದು. ಹಾಗೆ ಸೇರಿಕೊಂಡರೆ, ಹಳ್ಳಿಯವರು ಬೇಟೆಯಾಡಲು ಅವಕಾಶ ಸಿಕ್ಕಹಾಗಾಯಿತು.

ಐದನೆಯ ಸಂದೇಹ : ಕಾಳುಕಡ್ಡಿಗಳಾದರೆ ವರ್ಷದ ಕೊನೆಯಲ್ಲಿ ದವಸ, ಧಾನ್ಯ, ದುಡ್ಡು. ಮರಗಳನ್ನು ಹಾಕಿದರೆ ಫಲಕ್ಕೆ ವರ್ಷಾನುಗಟ್ಟಲೆ ಕಾಯಬೇಕಲ್ಲವೇ : ಈ ಸಂದೇಹವೂ ಅಷ್ಟು ಸಾಧುವಾದುದಲ್ಲ. ಅನೇಕ ಬಗೆಯ ಸೌದೆಮರಗಳು ಹಾಕಿದ ಮೂರು ನಾಲ್ಕು ವರ್ಷಗಳಲ್ಲೇ ಅಲ್ಪಸ್ವಲ್ಪ ಸೌದೆಯನ್ನೂ ರೆಂಬೆ ಮುಂತಾದುವನ್ನೂ ಕೊಡುತ್ತವೆ. ಕೆಲವು ಹಣ್ಣಿನ ಮರಗಳೂ ಕೂಡ, ಅದರಲ್ಲೂ ಕಸಿ ಹಾಕಿದ ಮರಗಳು, 4 – 5 ವರ್ಷಗಳಲ್ಲಿಯೇ ಅಲ್ಪಸ್ವಲ್ಪ ಫಲವನ್ನು ಕೊಡುತ್ತವೆ. ಗ್ಲಿರಿಸಿಡಿಯಾ ಮುಂತಾದವು ಒಂದೆರಡು ವರ್ಷಗಳಲ್ಲೇ ಹಸುರೆಲೆ ಗೊಬ್ಬರವನ್ನು ಕೊಡುತ್ತವೆ. ಒಳಮರಕ್ಕೆ ಮುಟ್ಟುಗಳನ್ನು ಮಾಡಲು ಯೋಗ್ಯವಾದ ಒಳಮರವನ್ನು ಪಡೆಯಲು ಮಾತ್ರ ಮರ ಬಲಿಯುವತನಕ ಕಾಯಬೇಕು.

ಕಾಳು ಇತ್ಯಾದಿ ಬೆಳೆಗಳಿಗೂ ಮರದ ಬೆಳೆಗಳಿಗೂ ಇರುವ ಒಂದು ವ್ಯತ್ಯಾಸವನ್ನು ಮರೆಯಬಾರದು. ಮರದ ಬೆಳೆ ಇತರ ಬೆಳೆಗಳಿಗಿಂತ ಸುಲಭ. ಇವಕ್ಕೆ ವರ್ಷ ವರ್ಷವೂ ಉಳಬೇಕಾಗಿಲ್ಲ ; ಬಿತ್ತಬೇಕಾಗಿಲ್ಲ, ಹರಗಬೇಕಾಗಿಲ್ಲ ; ಕೈ ಆಡಿಸಬೇಕಾಗಿಲ್ಲ ; ಹಣ್ಣು ಮರಗಳನ್ನು ಬಿಟ್ಟರೆ ಇತರ ಮರಗಳಿಗೆ ಗೊಬ್ಬರವನ್ನೂ ಕೊಡಬೇಕಾಗಿಲ್ಲ. ವಾರ್ಷಿಕ ಬೆಳೆಗಳಿಗೆ ಬೇಕಾದಷ್ಟು ಕೂಲಿನಾಲಿ ಖರ್ಚು ಬೇಕಿಲ್ಲ.

ಆದುದರಿಂದ, ಮರಗಳ ಬಗ್ಗೆ ರೈತರಿಗೆ ಇರಬಹುದಾದ ಆತಂಕ, ಸಂದೇಹ, ಶಂಕೆ, ಆಕ್ಷೇಪಣೆಗಳಿಗೆ ಕಾರಣವಿಲ್ಲ. ಮರಗಳು ರೈತನ ಶತ್ರುವಲ್ಲ ; ಪರಮಮಿತ್ರ. ಕೆಲವು ಮರಗಳಂತೂ ರೈತನ ಬಂಧುಗಳು. ಆದುದರಿಂದ ಪ್ರತಿಯೊಬ್ಬ ರೈತನೂ, ರೈತನ ಕುಟುಂಬದವರೂ ವರ್ಷವರ್ಷವೂ ಮಳೆಗಾಲದಲ್ಲಿ ಮರಗಳನ್ನು ನೆಡುವ ಸತ್ ಸಂಪ್ರದಾಯವನ್ನು ಬೆಳೆಸಬೇಕು. ಹುಟ್ಟಿದ ಹಬ್ಬದ ದಿವಸ ಒಬ್ಬೊಬ್ಬನೂ ಒಂದೊಂದು ಮರ ನೆಟ್ಟರೆ ಈ ಮರಗಳು ಅವನೊಡನೆ ಬೆಳೆದು ಅವನ ಸಂಗಾತಿಯಾಗಿ ಮುಂದೆ ಅವನಿಗೂ ಅವನ ಮಕ್ಕಳಿಗೂ, ಮರಿಮಕ್ಕಳಿಗೂ, ದೇಶಕ್ಕೂ ಶ್ರೇಯಸ್ಸು ತರು

ವುದರಲ್ಲಿ ಸಂದೇಹವಿಲ್ಲ. ಮರನೆಡುವುದಕ್ಕೆ ಬೇಕಾದಷ್ಟು ಜಾಗಗಳಿವೆ. ಹಿತ್ತಲು, ಅಂಗಳ, ಬಾವಿಸುತ್ತ, ಗೊಬ್ಬರದ ಗುಂಡಿಸುತ್ತ, ಜಮೀನಿನ ಮೂಲೆಗಳಲ್ಲಿ, ಬದುವಿನ ಮೇಲೆ, ದಾರಿ ಪಕ್ಕದಲ್ಲಿ, ಬಂಜರಿನಲ್ಲಿ, ಗೋಮಾಳದಲ್ಲಿ, ಶಾಲೆ ಮುಂದೆ, ಚಾವಡಿಯ ಮುಂದೆ, ಅನೇಕ ಮರಗಳನ್ನು ಅಲಂಕಾರಕ್ಕಾಗಿ, ಸೌದೆ ಸೊಪ್ಪಿಗಾಗಿ, ಹಣ್ಣಿಗಾಗಿ ಹಾಗೂವಿವಿಧ ಉದ್ದೇಶಗಳಿಗಾಗಿ ಬೆಳೆಸಬಹುದು. ಮರದ ಸಸಿಗಳನ್ನು ಸ್ವಂತ ವಾಗಿ ಎಬ್ಬಿಸಬಹುದು, ಹೆಚ್ಚು ಹಣ ತೆರಬೇಕಾಗಿಲ್ಲ.

ಮುಂದೆ ಯಾವ ಯಾವ ಮರಗಳನ್ನು ರೈತರು ಎಲ್ಲೆಲ್ಲಿ, ಯಾವ ಉದ್ದೇಶಗಳಿಗಾಗಿ, ಹೇಗೆ, ಯಾವಾಗ, ಬೆಳೆಯಬೇಕೆಂಬುದನ್ನು ತಿಳಿಸಲಾಗಿದೆ.

ಇದು ರೈತರು ವೈಯಕ್ತಿಕವಾಗಿ ಕೈಗೊಳ್ಳಬಹುದಾದ ಕೆಲಸ; ಕರ್ತವ್ಯ. ಆದರೆ ಗ್ರಾಮದ, ರಾಜ್ಯದ, ರಾಷ್ಟ್ರದ ಹಿತದೃಷ್ಟಿಯಿಂದ ವೈಯಕ್ತಿಕವಾಗಿ ಅಲ್ಲದೆ ಸಾಮೂಹಿಕವಾಗಿಯೂ, ಇತರರ ಜತೆಗೆ ಕಲೆತು ಹೊಸ, ನವೀನ ಕಾಡುಗಳನ್ನು ಎಬ್ಬಿಸಬೇಕು.

ಸಾಗುವನಗಳು

ಒಂದು ದೇಶದ, ಜನಾಂಗದ, ನೆಲದ ಹಿತದೃಷ್ಟಿಯಿಂದ ಭೂಮಿಯ ಮೈಮೇಲಿನ ಕನಿಷ್ಠ ಮೂರನೆಯ ಒಂದು ಭಾಗಕ್ಕಾದರೂ ಹಸುರು ಹೊದಿಕೆ ಅತಿ ಅವಶ್ಯಕವೆಂದು ಪ್ರವೀಣರು ಹೇಳುತ್ತಾರೆ. ಈ ಹಸುರುಹೊದಿಕೆ, ಗಿಡಮರಗಳ ರಕ್ಷಣೆ, ಭೂಮಿಗೆ ಇಲ್ಲದಿದ್ದರೆ ಜನಜೀವನಕ್ಕೆ ಬೇಕಾದ ಸೌದೆ, ಮರಮುಟ್ಟು, ಅರಣ್ಯದ ಉತ್ಪನ್ನಗಳು, ಕೈಗಾರಿಕೆಗೆ ಬೇಕಾದ ಕಚ್ಚಾವಸ್ತುಗಳು, ಸುಗಮವಾದ ಕೃಷಿಗೆ ಬೇಕಾದ ಸೊಪ್ಪು ಮೇವು ಮುಂತಾದವು ಸಿಗುವುದು ಕಷ್ಟವಾಗುವುದು ಮಾತ್ರವೇ ಅಲ್ಲ, ಈ ರಕ್ಷಣೆಯಿಲ್ಲದಿದ್ದರೆ ಮಣ್ಣು ಕೊಚ್ಚಿ ಜಮೀನು ಕೊರಕಲು ಬಿದ್ದು, ಪ್ರವಾಹಗಳು ಉಕ್ಕಿ, ಹವಾಗುಣ ಹದಗೆಟ್ಟು, ದೇಶದ ಸಂಪನ್ಮೂಲಗಳಿಗೆ ಧಕ್ಕೆ ತಗಲುತ್ತದೆ. ಆದರೆ ಈಗ ನಮ್ಮ ದೇಶದಲ್ಲಿ ಗಿಡಮರಗಳ, ವನವೃಕ್ಷಗಳ ರಕ್ಷಣೆ ಸಿಗುತ್ತಿರುವುದು ಸ್ವಲ್ಪ ಭಾಗಕ್ಕೆ ಮಾತ್ರ. ಅದೂ ಕೂಡ ಗುಡ್ಡಬೆಟ್ಟ ಪ್ರದೇಶಗಳಲ್ಲಿ ಮಾತ್ರ. ಬಯಲುಸೀಮೆಯಲ್ಲಿ ಕಾಡುಗಳು ಮಾಯವಾಗಿವೆ ಅಥವಾ ವೇಗವಾಗಿ ಮಾಯವಾಗುತ್ತಿವೆ. ಇಷ್ಟೇ ಅಲ್ಲ, ಜನಸಂಖ್ಯೆ, ಆಹಾರದ ಅಭಾವ ಮತ್ತು ಅದರ ಹಿಂಗುಟ್ಟೆಯೇ ಭೂದಾಹ ಹೆಚ್ಚುತ್ತಿರುವುದರಿಂದ ಗುಡ್ಡಬೆಟ್ಟದ ಅರಣ್ಯಗಳೂ ಶೀಘ್ರಗತಿಯಲ್ಲಿ ಮಾಯವಾಗುತ್ತಿವೆ. ಹೆಚ್ಚು ಆಹಾರ ಬೆಳೆಯಲು ಹೆಚ್ಚು ಜಮೀನುಗಳನ್ನು ಸರ್ಕಾರದಿಂದ ಬೇಡಿ, ಕಾಡಿ, ಪ್ರಭಾವ ಬೀರಿ, ಪಡೆಯುವ ಪ್ರವೃತ್ತಿ ಬಹಳ ಬೆಳೆಯುತ್ತಿದೆ. ಅನೇಕ ಉತ್ಕೃಷ್ಟವಾದ ಅರಣ್ಯಗಳನ್ನು ಕಡಿದು ಈ ಭೂದಾಹವನ್ನು ತಣಿಸಿಕೊಳ್ಳುವುದು ಪರಿಪಾಟ ವಾಗುತ್ತಿದೆ. ಈ ಪ್ರವೃತ್ತಿಯನ್ನು ತಡೆಗಟ್ಟದಿದ್ದರೆ, ದೇಶದ ವನಸಂಪತ್ತನ್ನು ಪೋಲು ಮಾಡಿದರೆ, ಜನಕ್ಕೆ, ಅದರಲ್ಲೂ ರೈತಜನಕ್ಕೆ ಕ್ಷೋಭೆ ಖಂಡಿತ. ಕಾಡು

ಕಡಿದು ಜಮೀನನ್ನು ಹಿಂಗಡಿಸುವುದಕ್ಕೆ ಅವಕಾಶ ಕೊಡುವುದು ಮೂಗು ಕುಯ್ದು ಕೈಗೆ ಕೊಟ್ಟಂತೆ. ಮೂಗೂ ಹೋಯಿತು ; ಕೈಯ್ಯಿಗೆ ಮೊಂಡು ಮೂಗಿನಿಂದ ಲಾಭವೂ ಇಲ್ಲ.

ಇನ್ನು ಕೆಲವೇ ದಶಕಗಳಲ್ಲಿ, ವನನಾಶದಿಂದ ಹುಟ್ಟುವ ಕ್ಷೋಭೆಯಿಂದ ಪಾರಾಗಲು ಒಂದೇ ಮಾರ್ಗ – ಎಲ್ಲಾ ಕಡೆಗಳಲ್ಲಿ, ಸಾಗುವಳಿ ಜಮೀನುಗಳಲ್ಲಿ, ಗೋಮಾಳಗಳಲ್ಲಿ, ಕೆರೆಕಟ್ಟೆಯ ಏರಿಗಳಲ್ಲಿ, ಉಪ್ಪು ಮಣ್ಣಿನಲ್ಲಿ, ಚೌಳಿನಲ್ಲಿ, ಕಲ್ಲು ಮಣ್ಣುಗಳಲ್ಲಿ, ಮನೆಸುತ್ತ, ಮನೆಹಿಂದೆ, ಸೀಳುದಾರಿಯಲ್ಲಿ, ಹೆದ್ದಾರಿಯಲ್ಲಿ ಮರಗಳನ್ನು ನೆಡುವುದು, ಬೆಳೆಸುವುದು, ಆರೈಕೆ ಮಾಡುವುದು, ಕಾಪಾಡುವುದು.

ಭೂಮಿ ಬಂಜೆಯಲ್ಲ : ಏನೂ ಬೆಳೆಯದ ಶಾಶ್ವತ ಬಂಜೆ ಮಣ್ಣು ಇಲ್ಲ. ಬೆಳೆಗಳಿಗೆ ಯೋಗ್ಯವಲ್ಲದಿದ್ದರೂ ಹುಲ್ಲುಸೊಪ್ಪು, ಗಿಡಮರಗಳಿಗಾದರೂ ಅದು ಯೋಗ್ಯವಾದೀತು ! ಬೆಳೆ ಕೊಡದ ನೆಲ, ಮರವನ್ನಾದರೂ ಕೊಟ್ಟೀತು !

ನಮ್ಮ ದೇಶದ ವೃಕ್ಷವೈವಿಧ್ಯ, ಗಿಡಮರ ಜಾತಿಗಳು, ಅಪಾರವಾದದ್ದು. ಎಲ್ಲಾ ಬಗೆಯ ನೆಲಗಳಿಗೂ, ಎಲ್ಲಾ ಬಗೆಯ ಹವಾಗುಣಕ್ಕೂ, ಎಲ್ಲಾ ಪರಿಸ್ಥಿತಿಗಳಿಗೂ ಸೂಕ್ತವಾದ ಗಿಡಮರಗಳಿವೆ. ರಾಜಾಸ್ಥಾನದ ಮರುಭೂಮಿಯಲ್ಲೂ, 500 ಸೆ. ಮೀ.(200 ಅಂಗುಲ)ಗಿಂತ ಹೆಚ್ಚು ಮಳೆ ಸುರಿಯುವ ಪ್ರದೇಶದಲ್ಲೂ, ಉರಿಬಿಸಿಲು, ಒಣಹವೆ ಇರುವ ಜಾಗಗಳಲ್ಲೂ, ಸದಾ ತಂಪಾಗಿರುವ ಗಿರಿಗಳ ಮೇಲೂ, ಫಲವತ್ತಾದ ಮಣ್ಣುಗಳಲ್ಲೂ, ಕಲ್ಲು ನೆಲದಲ್ಲೂ, ಇಳುಕುಗಳಲ್ಲೂ, ನೀರು ತಂಗುವ ತಗ್ಗುಗಳಲ್ಲೂ, ಕಣಿವೆಗಳಲ್ಲೂ, ಬೆಟ್ಟಗಳಲ್ಲೂ, ಬೆಳೆಯುವ ಗಿಡಮರಗಳಿವೆ.

ಇಂತಹ ವಿವಿಧ ಬಗೆಯ ಮರಗಳಿದ್ದರೂ ನಾವು ಅವುಗಳನ್ನು ಬೆಳೆಯದಿದ್ದರೆ ಪ್ರಕೃತಿದೇವಿ ಉದಾರವಾಗಿ, ತುಂಬು ಕೈಯ್ಯಿಂದ ವರಗಳನ್ನು ನಮ್ಮ ಕಾಲ್ಮುಂದೆ ಚೆಲ್ಲಿದ್ದರೂ ಅವನ್ನು ಕಾಣಲಾರದ ಕುರುಡರಾದರೆ, ನಮ್ಮ ಬಡತನವನ್ನು ನೀಗಿಸಿಕೊಳ್ಳಲು ದೈವದತ್ತವಾಗಿ ಬಂದ ಸಾಧನಗಳನ್ನು ರೂಢಿಸಿಕೊಳ್ಳದಿದ್ದರೆ, ನಾವು ಭಾರತ ಭೂಮಿಯಲ್ಲಿ ಬದುಕಲು ತಕ್ಕವರಲ್ಲ.

ರಾಷ್ಟ್ರದ ಮನವಾರ್ತೆಯಲ್ಲಿ, ಕಾಳು – ಕಡ್ಡಿ, ಧಾನ್ಯ – ಎಣ್ಣೆಬೀಜ, ರೊಕ್ಕದ ಬೆಳೆಗಳಿಗೆ ಎಷ್ಟು ಮಹತ್ವವನ್ನು ಕೊಟ್ಟಿದ್ದೇವೆಯೋ ಆ ಬೆಳೆಗಳಿಗೆ ಎಷ್ಟು ಪ್ರಶಸ್ತಿಯಿದೆಯೋ ಅಷ್ಟೇ ಮಹತ್ವ, ಪ್ರಶಸ್ತಿ, ಹುಲ್ಲಿಗೂ, ವನವೃಕ್ಷಗಳಿಗೂ ಇದೆ. ಇವನ್ನು ನಿಕೃಷ್ಟವಾಗಿ ಕಾಣುವುದು ಬುದ್ಧಿವಂತಿಕೆಯ ಕುರುಹಲ್ಲ. ಏನನ್ನೂ ಬೆಳೆಸದೆ ಅಂಗೈ ಅಷ್ಟು ನೆಲವನ್ನೂ ಬೀಡು ಬಿಡುವುದು ಸಂಪತ್ತಿನ ದುರ್ವ್ಯಯ ; ಪೋಲು ; ಒಲಿದು ಬಂದ ಲಕ್ಷ್ಮಿಯನ್ನು ಒದ್ದು ಓಡಿಸಿದಂತೆ !

ಹಿಂದೆ ಹೇಳಿದಂತೆ, ಭೂಮಿಯ ಮೈಯ್ಯಿನ ಮೂರನೆಯ ಒಂದು ಭಾಗವಾದರೂ ಹಸುರು ತಾಳಿರಬೇಕು. ಇದೇ, ನಮ್ಮ ನೆಲದ, ಜಮೀನಿನ, ಜನದ, ಕೃಷಿಯ ನೆಮ್ಮದಿಗೆ, ಆರೋಗ್ಯಕ್ಕೆ, ತಳಹದಿ.

ಆದರೆ ಹೀಗೆ ಪ್ರತಿ ನೂರು ಎಕರೆಗಳಲ್ಲೂ, 33 ಎಕರೆಗಳನ್ನು ವನವೃಕ್ಷಗಳಿಗೆ ಮೀಸಲಿಡುವುದು ಎಲ್ಲ ಕಡೆಯೂ ಅಸಾಧ್ಯ. ಕನಿಷ್ಠ, ಬೆಟ್ಟದ ಪ್ರದೇಶಗಳಲ್ಲಿ ಶೇಕಡ 60 ರಷ್ಟು, ಬಯಲು ಪ್ರದೇಶಗಳಲ್ಲಿ ಶೇಕಡ 20 ರಷ್ಟು ವನರಕ್ಷಣೆಯನ್ನು ಅಳವಡಿಸಿಕೊಳ್ಳಲು ಪ್ರಯತ್ನ ಪಡಬೇಕು. ಹೀಗೆ ಮಾಡಲು ಜಮೀನಿನ ಅಂಚು, ಬದು ಮುಂತಾದೆಡೆ ಬಿಡಿ ಬಿಡಿಯಾಗಿ ಮರಗಳನ್ನು ಬೆಳೆಸುವುದರ ಜತೆಗೆ ಪ್ರತಿ ಹಳ್ಳಿಯಲ್ಲೂ ಸ್ವಲ್ಪ ಸಾಗುವನ, ಕೃಷಿವನ, ಸಾಗುವಳಿ ಮಾಡಿ ಕಾಡು ಬೆಳೆಸುವುದನ್ನು ಮಾಡಿದರೆ ಅರಣ್ಯಗಳು ಕೊಡುವ ಭೂ ರಕ್ಷಣೆಯನ್ನು ಈ ಬಿಡಿ ಮರಗಳು ಹಾಗೂ ಸಾಗುವನಗಳು ಕೊಡಬಲ್ಲವು.

ಬಿಡಿ ಬಿಡಿಯಾಗಿ ಮರಗಳನ್ನು ನೆಟ್ಟರೆ ವನಗಳ – ವೃಕ್ಷಸಮೂಹದ ಲಾಭ ಹೇಗೆ ದೊರಕೀತು ಎಂದು ಕೆಲವರು ಸಂದೇಹಪಡಬಹುದು. ಈ ಸಂದೇಹಕ್ಕೆ ನಿವಾರಣೆ ಹೀಗೆ :

ಒಂದು ಎಕರೆ ಭೂಮಿಯಲ್ಲಿ 4.5 ಮೀಟರ್ (15 ಅಡಿ) ಅಂತರದಲ್ಲಿ ಮರಗಳನ್ನು ನೆಟ್ಟರೆ ಸುಮಾರು 200 ಮರಗಳಿರುತ್ತವೆ.

ಒಂದು ಎಕರೆ ಗದ್ದೆಯಲ್ಲಿ ಸುಮಾರು 180 ಮೀಟರ್ (600 ಅಡಿ) ಉದ್ದವಷ್ಟು ಬದುಗಳು, ಅಂಚುಗಳು ಇರುತ್ತವೆ. ಇವುಗಳ ಮೇಲೆ 4.5 ಮೀಟರ್ (15 ಅಡಿ) ಅಂತರಕ್ಕೆ ಸುಮಾರು 40 ಮರಗಳನ್ನು ನೆಡಬಹುದು. ಅಂದರೆ 5 ಎಕರೆ ಗದ್ದೆಯಲ್ಲಿ ಒಂದು ಎಕರೆ ವನದಲ್ಲಿರುವಷ್ಟು ಮರಗಳು ಇರುವಂತಾಗುತ್ತದೆ. ಅಂದರೆ ಐದನೆಯ ಒಂದು ಭಾಗ ನೆಲಕ್ಕಾದರೂ, ಶೇಕಡ 20 ಭಾಗಕ್ಕಾದರೂ, ರಕ್ಷಣೆ ದೊರಕಿದಂತಾಗುತ್ತದೆ.

ಬಿಡಿ ಮರಗಳಲ್ಲದೆ, ರೈತರು ಬೇಲಿಗಳಿಗಾಗಿ ಕಂಬ, ಕಂಬಿಯಲ್ಲದೆ ಉಪಯೋಗಕ್ಕೆ ಬರುವ ಜೀವಂತ ಬೇಲಿಗಳನ್ನು ಬೆಳೆಸಬಹುದು. ಪ್ರೊಸೋಪಿಸ್ (ಬಳ್ಳಾರಿ ಜಾಲಿ), ಕೊರಕಾಪುಳಿ ಮುಂತಾದವುಗಳು ದಟ್ಟವಾಗಿ ಬೆಳೆಯುವುದಲ್ಲದೆ ದನಗಳಿಗೆ ಪುಷ್ಟಿಕರವಾದ ಕಾಯಿಗಳನ್ನು ತಿನಿಸಿಗಾಗಿ ಕೊಡುತ್ತವೆ. ಈ ಬೇಲಿಗಿಡಗಳು ಜಮೀನಿನತ್ತ ಬೇರುಬಿಡದಂತೆ ಬೇಲಿ ಸಮೀಪದಲ್ಲಿ ತಗ್ಗು ತೋಡಿದರೆ ಬೇರುಗಳು ಇವನ್ನು ದಾಟಲಾರವು. ಬೇಲಿಗೆ ಸೂಕ್ತವಾದ ಗಿಡಮರಗಳನ್ನು ಮುಂದೆ ಪಟ್ಟಿಮಾಡಿದೆ.

ಇನ್ನೊಂದು ಕ್ರಮವೆಂದರೆ : ಹೊಲಗಳಿಗೆ, ಗದ್ದೆಗಳಿಗೆ, ತೋಟಗಳಿಗೆ ಗಿಡಮರಗಳ ಗಾಳಿ ತಡೆಯನ್ನು ಬೆಳೆಸುವುದು. ಈ ಗಾಳಿ ತಡೆಯಿಂದ ಬೆಳೆಗಳಿಗೆ ಎಷ್ಟು ಉಪಯೋಗವೆಂಬುದನ್ನು ಅನೇಕ ರೈತರು ಅರಿತಿಲ್ಲ. ಅಮೆರಿಕದಲ್ಲಿ, ರಷ್ಯದಲ್ಲಿ ಅಲ್ಲಿಯ ರೈತರು ಈ ತರದ ಗಾಳಿ ತಡೆಗಳನ್ನು ಸಾವಿರಾರು ಮೈಲಿಯುದ್ದಕ್ಕೆ ಬೆಳೆಸಿ, ತಮ್ಮ ಬೆಳೆಗಳನ್ನು ಗಾಳಿ, ಮಳೆ, ಬಿಸಿಲುಗಳಿಂದ ರಕ್ಷಿಸಿಕೊಂಡಿರುವುದಲ್ಲದೆ ಬೆಳೆ ಇಳುವರಿಯನ್ನೂ ಹೆಚ್ಚಿಸಿಕೊಳ್ಳುತ್ತಿದ್ದಾರೆ. ಕೆಲವೆಡೆ ಬೆಳೆ ಇಳುವರಿ ಸುಮಾರು ಶೇಕಡಾ 40 ರಷ್ಟು ಹೆಚ್ಚಿದೆ. ಇದು ಹೇಗೆಂದರೆ :

ಗಾಳಿ ಜೋರಾಗಿ ಬೀಸಿದರೆ ಮಣ್ಣಿನ ತೇವ ಬೇಗ ಆರುತ್ತದೆ. ಎಲೆಗಳು ಹೆಚ್ಚು ನೀರನ್ನು ಹೊರಗೆಡವಿ ಗಿಡಗಳು ಬಾಡುತ್ತವೆ. ಈ ಎರಡು ಬಗೆಯ ಜಲನಷ್ಟದಿಂದ ಬೆಳೆ ಕುಂದುತ್ತದೆ. ಗಾಳಿತಡೆ ಇದ್ದರೆ ಈ ನಷ್ಟ ಕಡಿಮೆ. ನೀರನ್ನು ಹೆಚ್ಚು ಬಾರಿ ಕಟ್ಟಬೇಕಿಲ್ಲ. ರಭಸದ ಗಾಳಿಯಿಂದ ಬೆಳೆ ಬೀಳುವುದು, ರೆಂಬೆ ಮುರಿಯುವುದು, ಮೊಗ್ಗು, ಹೂ, ಕಾಯಿ, ಹಣ್ಣು ಉದುರುವುದು, ಹೂವು ಒಣಗುವುದು, ಎಲೆಕೀಳು ವುದು ಎಲ್ಲರಿಗೂ ತಿಳಿದ ವಿಷಯವೇ. ತೋಟಕ್ಕೆ ಗಾಳಿ ಕೆಟ್ಟದ್ದು ಎಂದು ರೈತರು ಒಪ್ಪಿದರೂ ಈ ತೆರದ ಗಾಳಿ ಹೊಲಗಳಿಗೂ ಹಾನಿಯೆಂದರೆ ನಂಬಲಾರರು.

ಗಾಳಿ ಬೀಸುವುದರಿಂದ ಎಳೆಯ ಕಾಂಡಗಳು ಚಲಿಸಿ, ಬೇರುಗಳು ಜರುಗಿ ಅಥವಾ ಕಿತ್ತುಹೋಗಿ ಬೆಳೆಗೆ ನೆಮ್ಮದಿ ತಪ್ಪಿ ಬೆಳವಣಿಗೆ ಮತ್ತು ಫಲ ಕೆಡುತ್ತದೆ. ಯಾವ ಗಿಡಕ್ಕೂ ವಾಯು ಅವಶ್ಯಕ ; ಆದರೆ ಗಾಳಿ ಕೇಡು. ಈ ಕೇಡನ್ನು ತಪ್ಪಿಸಲು ಅಲ್ಲಲ್ಲಿ ಗಾಳಿ ದಿಕ್ಕಿಗೆ ಅಡ್ಡಲಾಗಿ – ಮುಂಗಾರು ಹಿಂಗಾರುಗಳಿಗೆ ಅಡ್ಡಲಾಗಿ 3–4 ಸಾಲು ವಿವಿಧ ಎತ್ತರದ, ವಿವಿಧ ಅಗಲದ ಗಿಡಮರಗಳನ್ನು ಎಬ್ಬಿಸಿದಲ್ಲಿ, ಗಾಳಿಯಿಂದ ಬೆಳೆಗಳನ್ನು ರಕ್ಷಿಸಬಹುದು.

ಈ ಗಾಳಿ ತಡೆಗಳು ಗಾಳಿಯನ್ನು ತಡೆಯುವುದೇ ಅಲ್ಲದೆ ಇತರ ರೀತಿಗಳಲ್ಲೂ ಬೆಳೆಯನ್ನು ಕಾಪಾಡುತ್ತವೆ. ಸೂರ್ಯನ ತಾಪದಿಂದ ಬೇಸಿಗೆಯಲ್ಲಿ ಬಿಸಿಗಾಳಿ ಬೀಸುವುದುಂಟು. ನಮ್ಮ ರಾಜ್ಯದಲ್ಲಿ ಈ ಬಗೆಯ ಬಿಸಿಗಾಳಿ ಕಲ್ಬುರ್ಗಿ, ವಿಜಾಪುರ, ಬಿದರೆ ಮುಂತಾದೆಡೆ ಬೀಸುವುದುಂಟು. ಈ ಗಾಳಿಯಿಂದ ಬೆಳೆ ಸೊಪ್ಪಲುಬೀಳು ತ್ತದೆ. ಗಾಳಿ ತಡೆಗಳಿದ್ದರೆ, ಈ ಬಿಸಿಗಾಳಿ ಅದರ ಮೂಲಕ ಹಾಯ್ದಾಗ ತಂಪು ಗೊಂಡು ಬೆಳೆಯನ್ನು ಕೆಡಿಸುವುದಿಲ್ಲ.

ಗಾಳಿ ತಡೆಗಳ ಮೂಲಕ ಹಾಯ್ದ ಗಾಳಿಯ ತೇವಾಂಶ ಹೆಚ್ಚು. ಈ ತೇವಾಂಶ ಬೆಳೆಗಳಿಗೆ ಅನುಕೂಲ.

ಗಾಳಿ ತಡೆಗಳಿಂದ ಬೆಳೆಗಳ ಸುತ್ತಣ ಹವಾಗುಣ ಸ್ವಲ್ಪಮಟ್ಟಿಗೆ ಸುಧಾರಣೆಯೂ ಯಾಗುತ್ತದೆ ; ಬೆಳೆಯ ಅಭಿವೃದ್ಧಿಗೆ ಸಹಾಯವಾಗುತ್ತದೆ.

ಗಾಳಿ ತಡೆಗಳ ಮತ್ತೊಂದು ಲಾಭ ಮಣ್ಣಿನ ಪಾಲನೆ. ಇದು ಗಾಳಿಯಿಂದ, ಅದರಲ್ಲೂ, ಬಿರುಗಾಳಿಯಿಂದ ಮಣ್ಣು ತೂರಿ ಹೋಗುವುದನ್ನು ತಪ್ಪಿಸುತ್ತದೆ.

ಈ ಗಿಡಮರಗಳ ತಡಿಕೆಗೆ (ಗಾಳಿ ತಡೆ) ವಿವಿಧ ಜಾತಿಯ ಮರಗಳನ್ನು ಆರಿಸಿಕೊಂಡಲ್ಲಿ ಗಾಳಿತಡೆಯುವುದರ ಜತೆಗೆ ರೈತರಿಗೆ ಸೌದೆ – ಸೊಪ್ಪು, ಹಣ್ಣು – ಕಾಯಿ, ಸಣ್ಣಪುಟ್ಟ ಮುಟ್ಟುಗಳಿಗೆ ಮರ, ದನಗಳಿಗೆ ತಿಂಡಿ – ಕಾಯಿ ಸಿಗುತ್ತವೆ. ಜಮೀನಿನ ಶೇಕಡ ಏಳರಷ್ಟು ಜಾಗದಲ್ಲಿ ಮರಗಳ ತಡೆಯನ್ನು ಬೆಳೆಸಿದಲ್ಲಿ ಉಳಿದ ಜಮೀನಿಗೆ ಗಾಳಿಯಿಂದ ಪೂರ್ಣ ರಕ್ಷಣೆ ದೊರೆಯುತ್ತದೆಂದು ಪ್ರವೀಣರು ತಿಳಿಸುತ್ತಾರೆ.

ವನವೃಕ್ಷಗಳ ಲಾಭವನ್ನು ರೈತರು ಸಂಪಾದಿಸಲು ಮತ್ತೊಂದು ಕ್ರಮವೆಂದರೆ ಕೆರೆಕಟ್ಟೆಗಳ ಮೇಲೆ, ಕಾವಲಿಕಾಲುವೆಗಳ ಪಕ್ಕಗಳಲ್ಲಿ, ಹಳ್ಳಿಯ ಸೀಳುದಾರಿಗಳಲ್ಲಿ, ಶಾಲೆ, ಚಾವಡಿ ಸುತ್ತ, ಗಿಡಮರಗಳನ್ನು ನೆಡುವುದು. ಈ ಕೆಲಸವನ್ನು ಪಂಚಾಯತಿಯವರು ನಡೆಸಲು ರೈತರು ನೆರವಾಗಬೇಕು. ಕೆರೆಕಟ್ಟೆ ಮುಂತಾದವುಗಳು ಸಾರ್ವಜನಿಕ ಸಂಪತ್ತು; ಆದರೆ, ನಮ್ಮ ಜನರಲ್ಲಿ ತಮ್ಮ ಸ್ವಂತ ಸಂಪತ್ತಿನ ಬಗ್ಗೆ ತೋರುವ ಆಸಕ್ತಿ ಸಾರ್ವಜನಿಕ ಸಂಪತ್ತುಗಳ ಕಡೆ ಕಾಣಬರುವುದಿಲ್ಲ. ಈ ನಿರಾಸಕ್ತಿ, ಅಸಡ್ಡೆ, ಹಾಗೂ ವಿರೋಧಭಾವಗಳು, ಗಿಡಮರಗಳ ವಿಷಯದಲ್ಲಾದರೂ ತಪ್ಪಬೇಕು. ಏಕೆಂದರೆ, ಈಗಿಡಮರಗಳಿಂದ ರೈತರಿಗೆ ವೈಯಕ್ತಿಕವಾಗಿಯೂ ಲಾಭವೆ. ಇವುಗಳಿಂದ ಗ್ರಾಮದ ಹವೆ, ಜನಜೀವನ ಹಸನುಗೊಳ್ಳುತ್ತದೆ. ರೈತನಿಗೆ ನೆಮ್ಮದಿ ಸಿಗುತ್ತದೆ ಪಂಚಾಯತಿಯವರು ಮರಗಳ ಫಲದ ಹಕ್ಕನ್ನು ರೈತರಿಗೆ ಹಂಚಿದ ಪಕ್ಷದಲ್ಲಿ, ರೈತರೂ ಈ ಮರಗಳ ಪಾಲನೆ ಬಗ್ಗೆ ಹೆಚ್ಚು ಆಸ್ಥೆ ವಹಿಸಬಹುದು.

ಗೋಮಾಳ, ಗೋಕಾಡು, ಗೋಮಡುಗಳ ಪುನರುತ್ಥಾನ ಮಗದೊಂದು ಕಾರ್ಯಕ್ರಮ.

ಹಿಂದೆ ಜಮೀನುಗಳ ಒಡೆತನವನ್ನು ನಿರ್ದಿಷ್ಟಗೊಳಿಸಿದಾಗ, ಪ್ರತಿ ಗ್ರಾಮದಲ್ಲೂ ಮೂರನೆಯ ಒಂದು ಭಾಗ ಜಮೀನನ್ನು ಸಾರ್ವಜನಿಕ ಉಪಯೋಗಕ್ಕಾಗಿ, ಗೋಮಾಳ ಮುಂತಾದವುಗಳಿಗಾಗಿ, ಮೀಸಲು ಇಟ್ಟಿದ್ದರು. ಆದರೆ, ಈಚೆಗೆ, ಜನಸಂಖ್ಯೆ ಬೆಳೆದು, ಆಹಾರದ ಕೊರತೆ ಹೆಚ್ಚಿ, ಭೂದಾಹ ತೀಕ್ಷ್ಣವಾಗಿ ಈ ಸಾರ್ವಜನಿಕ ಜಮೀನುಗಳನ್ನು ಸಾಗುಮಾಡಲು ಆರಂಭಿಸಿದರು.

ಗೋಮಾಳಗಳ ಪುನರುತ್ಥಾನಕ್ಕೆ ಮೊದಲ ಹೆಜ್ಜೆ ಅವುಗಳಿಗೆ ಗಿಡಮರಗಳ ರಕ್ಷಾ ಕವಚವನ್ನು ಹೊದಿಸುವುದು. ಇದರಿಂದ ಆಗುವ ಒಳ್ಳೆಯ ಪರಿಣಾಮಗಳನ್ನು ಹಿಂದೆಯೇ ತಿಳಿಸಿದೆ. ಇದು ಅವಶ್ಯ ಕಾರ್ಯ.

ಕೊನೆಯದಾಗಿ, ಗೋಕಾಡು ಮುಂತಾದವುಗಳಿಗೆ ಮೀಸಲಿಟ್ಟಂತೆ ಪ್ರತಿಯೊಂದು ಗ್ರಾಮದಲ್ಲೂ, ಕನಿಷ್ಠ 10–20 ಎಕರೆ ವಿಸ್ತೀರ್ಣದಲ್ಲಿ ಗ್ರಾಮಕಾಡುಗಳನ್ನು ಬೆಳೆಸುವುದು ಅತ್ಯಾವಶ್ಯಕ. ಮೊದಲು ಈ ಜಮೀನನ್ನು ಸಾಗುಮಾಡಿ, ಆ ಸ್ಥಳಕ್ಕೆ, ಮಣ್ಣಿಗೆ, ಮತ್ತು ಹವಾಗುಣಕ್ಕೆ ಹೊಂದಿಕೊಂಡು ಬೆಳೆಯುವ ಗಿಡಮರಗಳನ್ನು ಕ್ರಮಪರಿತಂ ಬೆಳೆಸಬೇಕಾಗಿರುವುದರಿಂದ, ಇಂತಹ ಮನುಷ್ಯ ಪ್ರಯತ್ನದಿಂದ ಬೆಳೆಸುವ ಕಾಡುಗಳನ್ನು "ಸಾಗುವನ" ಎಂದು ಕರೆಯಬಹುದು.

ಈ ಸಾಗುವನಗಳನ್ನು ರೈತರು, ಇತರ ಸಾರ್ವಜನಿಕ ಸ್ವತ್ತಿನಂತೆ ಲಕ್ಷಿಸಿ, ತಮ್ಮ ಸ್ವಂತ ಸ್ವತ್ತೆಂದು ಪರಿಗಣಿಸದಿದ್ದರೆ ಇಡೀ ರೈತವರ್ಗಕ್ಕೆ ನಷ್ಟ. ಏಕೆಂದರೆ ವನವೃಕ್ಷಗಳ ಒತ್ತಾಸೆಯಿಲ್ಲದ ಕೃಷಿ, ನಾಯಿ ತಲೆಯ ಮೇಲಿನ ಬುತ್ತಿಯಂತೆ; ನೆಚ್ಚಿಗೆಯಿಲ್ಲ.

ಬೆಳೆಕೃಷಿ, ವನಕೃಷಿ ಗಾಡಿಯ ಜೋಡೆತ್ತು; ರೈತರ ಬದುಕನ್ನು ಉತ್ತಮಗೊಳಿಸುವ, ರೈತರ ನೆಮ್ಮದಿಯನ್ನು ಹೆಚ್ಚಿಸುವ, ರೈತರ ಆತಂಕಗಳನ್ನು ದೂರಗೊಳಿಸುವ ಸಾಧನಗಳು. ರೈತ ಪ್ರಗತಿಯ ಗಾಡಿ ಸಾಗಲು ಬೆಳೆಕೃಷಿ ಒಂದೇ ಸಾಲದು. ಒಂಟೆತ್ತು ಈ ಗಾಡಿಯನ್ನು ದುರ್ಗಮವಾದ ಹಾದಿಯಲ್ಲಿ ಎಳೆಯಲಾರದು. ಜತೆಗೆ ಮತ್ತೊಂದು ಎತ್ತು – ವನಕೃಷಿಯ ಎತ್ತನ್ನು ಹೂಡಿದರೆ ಮಾತ್ರ, ರೈತರ ಪ್ರಗತಿಯ ಗಾಡಿ ಸುಗಮವಾಗಿ ಸಾಗಬಲ್ಲದು.

ಬೇಸಾಯ, ನಮ್ಮ ರಾಷ್ಟ್ರದ ಮುಖ್ಯ ವೃತ್ತಿ; ಅನೇಕ ಜನಗಳ ಕಸಬು. ಈ ವ್ಯವಸಾಯ ಬಹುಪಾಲು ನಡೆಯುತ್ತಿರುವುದು ಮರದ ಮುಟ್ಟುಗಳಿಂದ. ಕಬ್ಬಿಣದ ಮುಟ್ಟುಗಳಿಂದ ಅಲ್ಪ ಸ್ವಲ್ಪ. ನೇಗಿಲು, ಕುಂಟೆ, ಕೂರಿಗೆ, ಮಣೆ, ಮರ, ಗಾಡಿ, ಎಲ್ಲಕ್ಕೂ ಮರಗಳು ಬೇಕೇ ಬೇಕು. ಈ ಅವಶ್ಯಕತೆಯನ್ನು ಪೂರೈಸಿಕೊಳ್ಳಲು ಈಗಿರುವ ಅರಣ್ಯಗಳನ್ನು ಉಳಿಸಿಕೊಳ್ಳುವುದರ ಜತೆಗೆ ಹೊಸ ಕಾಡುಗಳನ್ನು ಎಬ್ಬಿಸದಿದ್ದಲ್ಲಿ, ಸಾಗುವನಗಳನ್ನು ಬೆಳೆಸದಿದ್ದಲ್ಲಿ, ಬಯಲಿನ ಕಾಡುಗಳು ಬೋಳಾದಂತೆ, ಈಗ ಅಲ್ಪ ಸ್ವಲ್ಪ ಉಳಿದಿರುವ ಬೆಟ್ಟಗುಡ್ಡಗಳ ಅರಣ್ಯಗಳೂ ಮಾಯವಾಗುವುವು. ಇವು ಮಾಯವಾದಲ್ಲಿ ಆಹಾರವನ್ನು ಹೊರದೇಶಗಳಿಂದ ತರಿಸಿಕೊಂಡು ಹೊಟ್ಟೆ ಹೊರೆಮಕೊಳ್ಳುತ್ತಿರುವಂತೆ, ರೈತರ ಮುಟ್ಟುಗಳಿಗೆ ಬೇಕಾದ ಮರವನ್ನೂ ಹೊರದೇಶಗಳಿಂದ, ಅಪಾರ ಹಣತೆತ್ತು, ಒಳತರಿಸಿಕೊಳ್ಳಬೇಕಾಗಬಹುದು. ಇಲ್ಲವೆ ಮರ ಮುಟ್ಟುಗಳ ಅಭಾವದಿಂದ ಭಾರತದ ವ್ಯವಸಾಯ, ಭಾರತದ ಜನಾಂಗದ ಅಡಿಪಾಯ ಕುಸಿದುಬೀಳುವುದು ಅತಿ ಖಂಡಿತ ; ಖಚಿತ ; ಖಾತರಿ.

ಇಂತಹ ವಿಪತ್ತು ನಮ್ಮ ಮುಂದಿನ ಪೀಳಿಗೆಗೆ ಒದಗದಂತೆ ಮಾಡಲು ಸುಲಭೋಪಾಯ, ಸಾಗುವನಗಳು.

ಪ್ರತಿಯೊಬ್ಬ ರೈತನೂ ತನ್ನ ಹಿಡುವಳಿಯಲ್ಲಿ ಹತ್ತನೆಯ ಒಂದು ಭಾಗವನ್ನು ತನ್ನ ಮುಂದಿನ ಪೀಳಿಗೆಯ ಕ್ಷೇಮಕ್ಕಾಗಿ, ಮರದ ಬೆಳೆಗಳಿಗೆ ಮೀಸಲಿಡುವುದು ಮೇಲಾದ ಕ್ರಮ. ಹೀಗೆ ಮರಗಳಿಗೆ ಮೀಸಲಿಟ್ಟರೆ ಆಹಾರದ ಉತ್ಪತ್ತಿಗೆ ಧಕ್ಕೆ ಬರಬಹುದೆಂಬುದು ಸಟೆಮಾತು. ರೈತರಿಗೆ ಮೀಸಲು ಜಮೀನಿನಿಂದ ಸೌದೆ, ಸೊಪ್ಪು ಸಿಗುವುದರಿಂದ ಬೆರಣಿಯಾಗಿ ತಟ್ಟಿ ಸುಡುತ್ತಿರುವ ಸಗಣಿಯನ್ನು ಅದಕ್ಕೆ ನಿಜವಾದ ಹಕ್ಕುದಾರನಾದ ಜಮೀನಿಗೆ ಸಾಗಿಸಿದಲ್ಲಿ ಉಳಿದ ಒಂಬತ್ತು ಭಾಗಗಳಿಂದಲೇ ಹತ್ತು ಭಾಗಗಳಿಂದ ಬರುತ್ತಿರುವ ಬೆಳೆಗಿಂತ ಹೆಚ್ಚು ಬೆಳೆಯನ್ನು ಪಡೆಯಬಹುದು.

ಆದರೆ ಪ್ರತಿಯೊಂದು ಹಿಡುವಳಿಯಲ್ಲೂ, ಪ್ರತಿಯೊಬ್ಬ ರೈತನೂ ಹೀಗೆ ಮೀಸಲಿಡಲು ಸಾಧ್ಯವಾಗದೆ ಹೋಗಬಹುದು. ಆದರೆ ಒಂದು ಗ್ರಾಮದ ಜಮೀನಿನ ಪೈಕಿ ಹತ್ತನೆಯ ಒಂದು ಭಾಗವನ್ನು ಆ ಊರಿನ ಗ್ರಾಮವಾಸಿಗಳೆಲ್ಲರೂ ಸೇರಿ ಸಾಗುವನವನ್ನಾಗಿ ಬೆಳೆಸಬೇಕು. ಈ ಸಾಗುವನಕ್ಕೆ ಉತ್ಕೃಷ್ಟವಾದ, ಫಲವತ್ತಾದ ಮಣ್ಣು ಬೇಕಿಲ್ಲ. ಬಹಳ ಕೀಳಾದ ಹಿಡುವಳಿಗಳನ್ನು ಹಿಡುವಳಿದಾರರಿಂದ

ಪಡೆದು, ಅವನ್ನು ಸೂಕ್ತ ರೀತಿಯಲ್ಲಿ ಸಾಗು ಮಾಡಿ ವನಗಳನ್ನು ಬೆಳೆಸಬೇಕು. ಅಂತಹ ಹಿಡುವಳಿದಾರರಿಗೆ ಬೇರೆಡೆ, ಇತರ ರೈತರು ತಮ್ಮ ಜಮೀನಿನ ಸ್ವಲ್ಪ ಭಾಗವನ್ನು ವರ್ಗಮಾಡಿ ಕೊಡಬೇಕು. ಇದಕ್ಕೆ ಕಾರಣ ಇಷ್ಟೆ; ಅಲ್ಲಲ್ಲಿ ಕಾಲು ಎಕರೆ, ಅರ್ಧ ಎಕರೆಗಳಲ್ಲಿ ವನಗಳನ್ನು ಬೆಳೆದರೆ ವನದ ಪೂರ್ಣಲಾಭ– ಹವಾಗುಣದ ಸುಧಾರಣೆ, ಭೂಜಲರಕ್ಷಣೆ ಮುಂತಾದವು ಸಿಗುವುದಿಲ್ಲ. ವನಗಳ ವಿಸ್ತೀರ್ಣ ಕನಿಷ್ಠ ೧೦ ಎಕರೆಯಾದರೂ ಇದ್ದಲ್ಲಿ ಇದರಿಂದ ಈ ಬಗೆಯ ಲಾಭವನ್ನು ಸ್ವಲ್ಪ ಮಟ್ಟಿಗಾದರೂ ಪಡೆಯಬಹುದು. ಈ ತೆರನಾದ ಜಮೀನಿನ ಪುನರ್ ಹಂಚಿಕೆಯನ್ನು ಪಂಚಾಯತಿಯವರು ಕೈಗೊಳ್ಳಬೇಕು.

ಇದಲ್ಲದೆ ಸರ್ಕಾರಿ ಬಂಜರುಗಳಲ್ಲಿ, ಬೇಸಾಯಕ್ಕೆ ಅಯೋಗ್ಯ ವೆಂದು ಕೈಬಿಟ್ಟು ಕೊಚ್ಚಿಹೋದ, ಕೊರಕಲುಬಿದ್ದ ಬಂಜರುಗಳಲ್ಲಿ, ಬೆಟ್ಟಗುಡ್ಡಗಳ ಇಳುಕಲುಗಳಲ್ಲಿ, ಪ್ರವಾಹಕ್ಕೆ ತುತ್ತಾಗುತ್ತಿರುವ ಜಮೀನುಗಳಲ್ಲಿ, ಮರಳು ಮಣ್ಣಿ ನಲ್ಲಿ, ಉಪ್ಪೇರಿ ಚೌಳುಬಿದ್ದ ಜಮೀನುಗಳಲ್ಲಿ, ಈ ಬಗೆಯ ಸಾಗುವನಗಳನ್ನು ರೈತರೆಲ್ಲರೂ ಸೇರಿ ಬೆಳೆಸಬಹುದು. ಇಲ್ಲವೇ ಅರಣ್ಯ ಇಲಾಖೆಗೆ ನೆರವಾಗಿ ಬೆಳೆಸಬಹುದು.

ಸಾಗುವನದ ಫಲಕ್ಕೆ ಕನಿಷ್ಟ ಹತ್ತು ಹದಿನೈದು ವರ್ಷಗಳಾದರೂ ಕಾಯ ಬೇಕಾದುದರಿಂದ ಅನೇಕ ರೈತರಿಗೆ ಈ ವನಗಳು ಆಕರ್ಷಯುತವಾಗಿ ತೋರದಿರ ಬಹುದು. ಆದರೆ ರೈತರ ಮತ್ತು ಬೇಸಾಯದ ಉಳಿವು ಈ ವನಗಳಿಂದಲೇ ಎಂಬ ಸತ್ಯವನ್ನು ಮನಗಂಡಲ್ಲಿ ಈ ಸಾಮೂಹಿಕ ಕಾರ್ಯ ಅಷ್ಟು ಕಷ್ಟವಾದುದೇನಲ್ಲ.

ಸಾಗುವನಗಳು, ರೈತರನ್ನು ಸ್ವಾವಲಂಬಿಗಳಾಗಿ ಮಾಡುತ್ತವೆ. ರೈತರಿಗೆ ಬೇಕಾದ ಸೌದೆ, ಸೊಪ್ಪು, ಮೇವು, ಹಣ್ಣು, ಮರ, ಗೂಟ, ಕಂಬ, ನಾರು ಮುಂತಾ ದುವಕ್ಕೆ ರೈತರು, ಮಾಯವಾಗುತ್ತಿರುವ ಕಾಡುಗಳಿಗೆ ಹೋಗುವುದರ ಬದಲು, ಸಾಗುವನಗಳು, ಈ ಕಾಡುಗಳನ್ನು ರೈತರ ಹೊಸ್ತಿಲಿಗೇ ಬರಮಾಡಿಕೊಳ್ಳುವ ಸಾಧನ ವಾಗುತ್ತವೆ.

ಹೆಚ್ಚು ಆಹಾರ ಬೆಳೆಯುವ ಮಾರ್ಗ ಹೆಚ್ಚು ಜಮೀನನ್ನು ಸಾಗುಮಾಡುವು ದರಿಂದಲ್ಲ. ಇರುವ ಜಮೀನಿನಿಂದಲೇ ಅದರ ಭೂಸಾರವನ್ನು ಕಾಪಾಡಿಕೊಂಡು, ಮಳೆಯ ನೀರು ಮಣ್ಣಿನ ಮೇಲೆ ಹರಿದು ಹಾಳುಗೊಡಿಸುವುದರ ಬದಲು, ಮಣ್ಣಿ ನಲ್ಲೇ ಇಂಗುವಂತೆ ಜಲಪಾಲನೆ ಕ್ರಮಗಳನ್ನು ಕೈಕೊಂಡು, ಸೌದೆಸೊಪ್ಪನ್ನು ಬೆಳೆದು, ಉಳಿಯುವ ಸಗಣಿಯಿಂದ ಉತ್ತಮ ಗೊಬ್ಬರವನ್ನು ತಯಾರುಮಾಡಿ, ಹೂಡಿ, ಹಸುರೆಲೆ ಗಿಡಗಳನ್ನು ಗದ್ದೆ ತೋಟಗಳ ಬದುಗಳಲ್ಲೇ ಬೆಳೆಸಿ, ತುಳಿದು, ಹೆಚ್ಚು ಉತ್ಪತ್ತಿ ಕೊಡಬಲ್ಲ ತಳಿಗಳನ್ನು ಬಿತ್ತಿ, ಸೀಮೆ ಗೊಬ್ಬರದಿಂದ ಬೆಳೆ ಕುದುರಿಸಿ ಕೊಂಡು, ಅವುಗಳನ್ನು ರೋಗ ಮತ್ತು ಕೀಟ ಬಾಧೆಗಳಿಂದ ಕಾಪಾಡಿ, ಒಕ್ಕಿದ ಕಾಳುಗಳನ್ನು ಇಲಿ, ಹುಳಗಳ ಬಾಯಿಗೆ ಒಪ್ಪಿಸದೆ ನಮ್ಮ ಆಹಾರದ ಅಭಾವವನ್ನು

ನಿಭಾಯಿಸಬೇಕೇ ವಿನಾ, ಗಿಡಮರಗಳನ್ನು, ಸಾಲು ಮರಗಳನ್ನು ಸೌದೆ ಸೊಪ್ಪಿಗಾಗಿ ತರಿದು, ಕಾಡುಕಡಿದು, ಗೋಮಾಳಗಳನ್ನು ಕೆರೆದು, ನಿಸ್ಸಾರವಾದ ಒಣಗಿದ ಗೊಬ್ಬರವನ್ನು ಅಕ್ಷತೆ ಉದುರಿಸುವಂತೆ ಉದುರಿಸಿ, ಮಳೆಗಾಗಿ ಆಕಾಶದ ಕಡೆ ನೋಡುತ್ತ, ದೇವರ ಮೇಲೆ ಭಾರಹಾಕುವುದರಿಂದ ನಮ್ಮ ಆಹಾರದ ಕೊರತೆ ನೀಗದು.

ಹೆಚ್ಚು ಆಹಾರ ಬೆಳೆಯಲು ಹೆಚ್ಚು ಮರಗಳನ್ನು ಬಿಡಿ ಬಿಡಿಯಾಗಿ, ಗುಂಪು ತೋಪಾಗಿ, ಸಾಲು ಸಾಲಾಗಿ, ಸಾಗುವನಗಳಾಗಿ ಬೆಳೆಸುವುದೇ ಖಾತರಿಯ ಕಾರ್ಯಕ್ರಮ.

ಅಧ್ಯಾಯ

3

ರೈತರು ಮರಗಳನ್ನು ಬೆಳೆಸುವುದು ಹೇಗೆ?

ಅನೇಕ ಬಗೆಯ ಮರಗಳನ್ನು ಬೀಜಗಳಿಂದಲೇ ಬೆಳೆಸಬೇಕಾಗುತ್ತದೆ. ಹಣ್ಣಿನ ಮರಗಳನ್ನು ಮತ್ತು ಕೆಲವು ಜಾತಿ ಗಿಡಮರಗಳನ್ನು ಕಸಿಕಟ್ಟಿಯೋ, ತುಂಡು ಹೂಣಿ, ಬೇರು ಬಿಡಿಸಿಯೋ, ಗೂಟಿ ಹಾಕಿಯೋ (ಮಣ್ಣಿನ ಹೊರಗೇ ಬೇರು ಬಿಡಿಸುವ ಕ್ರಮವನ್ನು 'ಗೂಟಿ' ಎನ್ನುತ್ತಾರೆ) ಬೆಳೆಸಬೇಕು. ಎಲ್ಲಿ ಗುಣ ಮುಖ್ಯವೋ – ಹಣ್ಣು, ಹೂವು ಮುಂತಾದವು ಮುಖ್ಯವೋ – ಅಂತಹ ಕಡೆ ಬೀಜಗಳಿಂದ ಮರಗಳನ್ನು ಬೆಳೆಸುವುದು ಉಚಿತವಲ್ಲ.

ಬೀಜವನ್ನು ನೇರವಾಗಿ, ಗಿಡ ಅಥವಾ ಮರ ಬೆಳೆಯುವ ಕಡೆಯೇ ನೆಟ್ಟು ಬೆಳೆಸುವುದು ಸುಲಭವಾದ ಮತ್ತು ಅಗ್ಗದ ಕ್ರಮ. ತೇವಾಂಶ ಹೆಚ್ಚಾಗಿರುವ ಪ್ರದೇಶಗಳಲ್ಲಿ, ಮಳೆ ಚೆನ್ನಾಗಿ ಬೀಳುವ ಸ್ಥಳಗಳಲ್ಲಿ, ಫಲವತ್ತಿನ ಜಮೀನುಗಳಲ್ಲಿ ನೇರವಾಗಿಯೇ ಬೀಜ ಹೂಣಿ ಮರ ಬೆಳೆಸಬಹುದು. ಬೇಗ ಮೊಳೆಯುವ, ಬೇಗ ಬೆಳೆಯುವ ಜಾತಿಗಳನ್ನು ಈ ರೀತಿಯಾಗಿಯೇ ಬೆಳೆಸಿಕೊಳ್ಳಬಹುದು. ದಪ್ಪ ಬೀಜದ ಮರದ ಜಾತಿಗಳಿಗೆ ಈ ಕ್ರಮ ಸೂಕ್ತ ; ಆದರೆ ಎಳೆಯ ಸಸಿಗಳು ದೃಢಕಾಯವಾಗಿರದೆ, ಕೋಮಲವಾಗಿದ್ದಲ್ಲಿ, ಅಥವಾ ಮಣ್ಣು ಜಿಗಟಾಗಿದ್ದು, ಬೀಜ ಸುಲಭವಾಗಿ ಮೊಳೆಯದಿರುವ ಕಡೆ ಅಥವಾ ಮಣ್ಣು ಬೇಗ ಒಣಗುವದಾಗಿದ್ದರೆ ಅಥವಾ ಎಳೆಯ ಸಸಿಗಳು ಬೆಳೆಯಲು ಪ್ರತಿಕೂಲ ಹವಾಗುಣವಿರುವ ಕಡೆ (ಹೆಚ್ಚು ಬಿಸಿಲು, ಹೆಚ್ಚು ಗಾಳಿ, ಹೆಚ್ಚು ಶೀತ, ಹೆಚ್ಚು ಮಳೆ ಇರುವ ಕಡೆ) ಬೀಜಗಳನ್ನು ನೇರವಾಗಿ ಹೂಣುವುದರ ಬದಲು ಒಟ್ಲುಸಸಿಗಳನ್ನು ಎಬ್ಬಿಸಿ, ಅವು ಬಲಿಷ್ಠವಾದ ಮೇಲೆ ನೆಡಬೇಕಾಗುತ್ತದೆ.

ಬೀಜದ ಮೊಳಕೆ, ಒಟ್ಲು, ಜಯಪ್ರದವಾಗಬೇಕಾದರೆ, ಬೀಜಗಳ ವಿಷಯವನ್ನು ಸ್ವಲ್ಪ ಮಟ್ಟಿಗೆ ತಿಳಿದುಕೊಂಡಿರಬೇಕು. ಕೆಲವು ಇಂತಿವೆ :

(1) ಬೀಜ ಚೆನ್ನಾಗಿ ಬಲಿತಿರಬೇಕು; ತುಂಬಿಕೊಂಡಿರಬೇಕು; ರೋಗವಿಲ್ಲದ್ದಾಗಿರಬೇಕು; ಹುಳು ಬಿದ್ದಿರಬಾರದು.

(2) ಕೆಲವು ಬೀಜಗಳು ಸ್ವಲ್ಪಕಾಲ ಸುಪ್ತಾವಸ್ಥೆಯಲ್ಲಿರುತ್ತವೆ. ಹೀಗಿರುವಾಗ ಅವುಗಳನ್ನು ನೆಟ್ಟರೆ ಅವು ಮೊಳೆಯುವುದಿಲ್ಲ. ಅವು ಮೊಳೆಯಲು ಸ್ವಲ್ಪ ಹಳೆಯದಾಗಬೇಕು.

(3) ಮತ್ತೆ ಕೆಲವು ಬೀಜಗಳು ಹೊಸದಾಗಿದ್ದರೆ ಮಾತ್ರ ಮೊಳೆಯುತ್ತವೆ. ಹಳೆಯದಾದರೆ ಮೊಳಕೆಶಕ್ತಿ ಕುಂದುತ್ತದೆ. ಎಣ್ಣೆ ಅಂಶ ಹೆಚ್ಚಾಗಿರುವ ಬೀಜಗಳು ಹೀಗೆ.

(4) ಕೆಲವು ಬೀಜಗಳ ಹೊದಿಕೆ(ಚರ್ಮ) ಗಟ್ಟಿ; ಮಣ್ಣಿನಿಂದ ತೇವವನ್ನು ಸುಲಭವಾಗಿ ಅಥವಾ ಬೇಗ ಹೀರುವುದಿಲ್ಲ. ಇವುಗಳನ್ನು ಸೂಕ್ತವಾಗಿ ಪರಿಷ್ಕಾರಗೊಳಿಸಬೇಕು. ಈ ಪರಿಷ್ಕಾರ ಅಥವಾ ಬೀಜೋಪಚಾರ ಹಲವು ಬಗೆ :

(ಅ) ಕೆಲವನ್ನು ಸ್ವಲ್ಪ ಕಾಲ ತಣ್ಣೀರಿನಲ್ಲಿ ನೆನೆಸಬೇಕಾಗುತ್ತದೆ.

(ಆ) ಮತ್ತೆ ಕೆಲವನ್ನು ಸ್ವಲ್ಪ ನಿಮಿಷಗಳ ಕಾಲ ಬಿಸಿನೀರಿನಲ್ಲಿ ನೆನೆಸಬೇಕಾಗುತ್ತದೆ. ಬಿಸಿನೀರಿನ ಪರಿಷ್ಕರಣ ಹೀಗೆ. ನೀರನ್ನು ಮರಳಿಸಿ, ಒಲೆಯಿಂದ ತೆಗೆದಿಟ್ಟು ಬೀಜವನ್ನು ಈ ನೀರಿಗೆ ಸುರಿಯಬೇಕು. ನೀರು ಆರುವ ತನಕ ಹಾಗೇ ಬಿಡಬೇಕು. 12 ಗಂಟೆ ಕಾಲ ನೆನೆದ ಮೇಲೆ ಬೀಜವನ್ನು ಹೊರತೆಗೆದು, ನೆಡಬೇಕು.

(ಇ) ಕೆಲವು ಬಹು ಗಟ್ಟಿ ಬೀಜಗಳನ್ನು, ಅವುಗಳ ಹೊದಿಕೆ ನೀರು ಹೀರುವಂತೆ ಮಾಡಲು ಮರಳೊಂದಿಗೆ ಬೆರೆಸಿ ಉಜ್ಜಬೇಕು ; ಅಥವಾ ಕುಟ್ಟಬೇಕು.

ಯಾವ ಬೀಜಗಳನ್ನು ಹೇಗೆ ಕೂಡಿಡಬೇಕು ಮತ್ತು ಪರಿಷ್ಕರಿಸಬೇಕೆಂಬುದನ್ನು ಆಯಾ ಮರಗಳ ವಿವರಗಳನ್ನು ಕೊಡುವ ಭಾಗದಲ್ಲಿ ತಿಳಿಸಲಾಗುತ್ತದೆ.

ಬೀಜಗಳನ್ನು ಒಟ್ಲು ಹುಯ್ಯುವುದು: ಕೆಲವು ಬಗೆಯ ಗಿಡಮರಗಳನ್ನು ಒಟ್ಲು ಹುಯ್ದು, ಸಸಿ ಎಬ್ಬಿಸಿ, ನೆಟ್ಟು ಬೆಳೆಯಬೇಕಾಗುತ್ತದೆ.

ಒಟ್ಲು ಹಾಕುವುದರಿಂದ ಕೆಲವು ಅನುಕೂಲಗಳಿವೆ. ಒಟ್ಲುಪಾತಿ ಸಣ್ಣ ಜಾಗವಾಗಿರುವುದರಿಂದ ಸಸಿಗಳನ್ನು ಚೆನ್ನಾಗಿ ಆರೈಕೆ ಮಾಡಬಹುದು; ಕೀಟ ರೋಗಾದಿಗಳಿಂದ, ಹಕ್ಕಿ, ಕೋತಿ ಮುಂತಾದವುಗಳಿಂದ, ಕಾಪಾಡಬಹುದು; ದನ ಮೇಕೆಗಳು ಮೇಯದಂತೆ ನೋಡಿಕೊಳ್ಳಬಹುದು; ಬಿಸಿಲು, ಗಾಳಿ, ಮಳೆಹೊಡೆತಗಳಿಂದ ಸಸಿಗಳನ್ನು ಪಾರುಮಾಡಬಹುದು. ಬೀಜಗಳನ್ನು ನೇರವಾಗಿ ಅವು ಬೆಳೆಯುವ ಕಡೆಯೇ ನೆಟ್ಟರೆ, ಈ ಬಗೆಯ ತೀವ್ರ ಗಮನವನ್ನು ಸಸಿಗಳಿಗೆ ಕೊಡುವುದು ಸಾಧ್ಯವಿಲ್ಲ.

ಒಟ್ಲುಪಾತಿಯನ್ನು ಹಸನಾಗಿ ರಚಿಸಬೇಕು. ಬೀಜ, ತಡೆಯಿಲ್ಲದೆ, ಬೇಗ ಮೊಳೆಯಲು, ಸಸಿಗಳು ಬೇರು ಚೆನ್ನಾಗಿ ಊರಿ ಹರಡಲು, ಸಸಿಗಳಿಗೆ ಎರೆಯುವ

ನೀರು ತಂಗದೆ ಬಸಿದು ಹೋಗುವಂತೆ, ಮಣ್ಣನ್ನು ಹಸನುಗೊಳಿಸಬೇಕು. ಹೆಂಟೆ, ಕಳೆಗಳಿಲ್ಲದಂತೆ ಮಣ್ಣನ್ನು ಪುಡಿಗೊಳಿಸಬೇಕು.

ಒಟ್ಲುಪಾತಿಗಳನ್ನು, ಸರಿಯಾದ ಕಡೆ ಹಾಕಬೇಕು. ಶತ್ರುಬಾಧೆಯಿಲ್ಲದ ಕಡೆ, ಬಿಸಿಲು, ಚಳಿ, ಗಾಳಿ ಮತ್ತು ಮಳೆಗಳಿಂದ ಸುಲಭವಾಗಿ ಕಾಪಾಡಲು ಸಾಧ್ಯವಿರುವ ಕಡೆ, ಸಸಿಗಳಿಗೆ ತೀವ್ರ ಗಮನ ಕೊಡಲು ಅನುಕೂಲವಾದ ಕಡೆ, ಹತ್ತಿರದಲ್ಲೇ ನೀರಿನ ಸೌಕರ್ಯವಿರುವ ಜಾಗದಲ್ಲಿ, ಒಟ್ಲುಗಳನ್ನು ಹುಯ್ಯಬೇಕು. ಇವಕ್ಕೆ ದನ ಮೇಕೆಗಳ ಕಾಟವಿರದಂತೆ ಬೇಲಿ ಆಸರೆಯನ್ನು ಒದಗಿಸಬೇಕು.

ಒಟ್ಲಿನ ವಿಸ್ತೀರ್ಣ, ನಮಗೆ ಬೇಕಾಗುವ ಸಸಿಗಳ ಸಂಖ್ಯೆಗೆ ಅನುಗುಣವಾಗಿರುತ್ತದೆ. ಬಿಡಿಮರಗಳನ್ನು ಅಲ್ಲಲ್ಲೇ ಬೆಳೆಸಲು, ಸಣ್ಣ ಪಾತಿ, ಅಥವಾ ಕುಂಡ ಅಥವಾ ಬೀಜದ ತಟ್ಟೆ ಸಾಕು. ಆದರೆ ಹೆಚ್ಚು ಮರಗಳನ್ನು ಬೆಳೆಸಲು ದೊಡ್ಡ ಒಟ್ಲುಪಾತಿಗಳು ಬೇಕಾಗುತ್ತವೆ.

ಒಟ್ಲುಪಾತಿ ಅಥವಾ ಮಡಿಗಳನ್ನು, ಆದಷ್ಟು ಮಟ್ಟಿಗೆ, ಮರಳುಗೋಡು ನೆಲದಲ್ಲೇ ಹಾಕುವುದು ಸೂಕ್ತ. ಜಿಗಟುಮಣ್ಣು ವಿನಾ ಮತ್ತಾವ ತೆರದ ನೆಲವೂ ಸಿಗದಿದ್ದರೆ, ಈ ಜಿಗಟನ್ನು ತೆಗೆಯಲು ಅದರೊಂದಿಗೆ ಮರಳು ಮತ್ತು ಕಳಿತ ಗೊಬ್ಬರವನ್ನು ಹೆಚ್ಚು ಪ್ರಮಾಣದಲ್ಲಿ ಬೆರೆಸಿಕೊಳ್ಳಬೇಕು.

ಒಟ್ಲುಪಾತಿಗಳನ್ನು ಆಳವಾಗಿ ಅಗೆಯಬೇಕು. ಹೀಗೆ ಅಗೆದರೆ ಮಣ್ಣು ಸಡಿಲಗೊಂಡು ಚೆನ್ನಾಗಿ ಬಸಿಯುವುದಲ್ಲದೆ, ಮರದ ಸಸಿಗಳ ಬೇರು ಚೆನ್ನಾಗಿ ಬಿಡಲು ಅವಕಾಶ ಸಿಗುತ್ತದೆ. ಸುಮಾರು 30 ಸೆಂ. ಮೀ. ಆಳಕ್ಕೆ ಅಗೆದು, ಕಸಕಡ್ಡಿ, ಕಳೆಗಳನ್ನು ಆರಿಸಿ ಮಣ್ಣನ್ನು ಚೆನ್ನಾಗಿ ಶೋಧಿಸಬೇಕು. ಅಗೆದ ಮಣ್ಣು ಮಾಗಲು ಕೆಲವು ತಿಂಗಳುಗಳ ಕಾಲ ಹಾಗೆಯೇ ಬಿಡಬೇಕು. ಒಟ್ಲುಪಾತಿಗಳನ್ನು ಮಳೆಗಾಲವಾದ ನಂತರವೇ ಅಗೆದರೆ ಬೇಸಿಗೆಯ ತನಕ ಹೀಗೆ ಮಣ್ಣನ್ನು ಮಾಗಿಸಬಹುದು.

ಆಮೇಲೆ ಹೆಂಟೆ ಒಡೆದು ಮಣ್ಣನ್ನು ಹಸನು ಮಾಡಿ, ಚೆನ್ನಾಗಿ ಕಳಿತ, ಪುಡಿಬಿದ್ದ, ಕಸಕಡ್ಡಿ ಆರಿಸಿದ, ಕೊಟ್ಟಿಗೆ ಗೊಬ್ಬರವನ್ನು ಹೂಡಿ ಮೇಲಿನ 15 ಸೆಂ. ಮೀ. (ಅರ್ಧ ಅಡಿ) ಮಣ್ಣಿನೊಂದಿಗೆ ಚೆನ್ನಾಗಿ ಕಲಸಿ ಸೇರಿಸಬೇಕು. ಜತೆಗೆ, ಎಲೆಪುಡಿ, ಬೂದಿ, ಇದ್ದಿಲು ಪುಡಿಯನ್ನೂ ಮೇಲ್ಮಣ್ಣಿನೊಂದಿಗೆ ಬೆರೆಸುವುದು ಒಳ್ಳೆಯದು.

ಬೀಜ ಚೆಲ್ಲುವುದಕ್ಕೆ ಸ್ವಲ್ಪ ಮುಂಚೆಯೇ 1.2 ಮೀಟರ್ (4 ಅಡಿ) ಅಗಲದ ಪಾತಿಗಳನ್ನು ತಿರುವಬೇಕು. ಈ ಅಗಲವಿದ್ದರೆ ನೀರು ಎರೆಯುವುದಕ್ಕೂ, ಕಳೆ ಕೀಳುವುದಕ್ಕೂ, ಕೆದುಕುವುದಕ್ಕೂ ಅನುಕೂಲ. ಒಣ ಪ್ರದೇಶಗಳಲ್ಲಿ ಪಾತಿಗಳನ್ನು ಇಳಿಸಿ ಕಟ್ಟಬೇಕು. ಮಳೆ ಹೆಚ್ಚಾಗಿರುವ ಕಡೆ ಮತ್ತು ತಗ್ಗು ಜಮೀನುಗಳಲ್ಲಿ ಒಟ್ಲುಪಾತಿಗಳನ್ನು ಏರಿಸಿಕಟ್ಟಬೇಕು. ಪಾತಿಯ ಅಂಚಿನ ಮಣ್ಣು ಕುಸಿಯದಂತೆ ಇಟ್ಟಿಗೆಗಳನ್ನೋ ಬೊಂಬಿನ ತಟ್ಟಿಯನ್ನೋ ಜೋಡಿಸಬಹುದು.

ದೊಡ್ಡ ಬೀಜಗಳನ್ನು ಇಳಿಸಿದಪಾತಿಗಳಲ್ಲಿ ಊರಬಹುದು. ಆದರೆ ಬೀಜ ಸಣ್ಣವಾಗಿದ್ದರೆ ಎತ್ತರಿಸಿದಪಾತಿಗಳಲ್ಲಿ ಬಿತ್ತುವುದು ಒಳ್ಳೆಯದು.

ನೀರು ಸಮವಾಗಿ ಹರಡಲು ಮತ್ತು ತಂಗದಿರಲು, ಒಟ್ಲುಪಾತಿಗಳು ಮಟ್ಟವಾಗಿರಬೇಕು.

ಬೀಜಗಳನ್ನು ಸಾಲಿನಲ್ಲಿ ಬಿತ್ತುವುದು ಸರಿಯಾದ ಕ್ರಮ. ಕಳೆ ಕೀಳುವುದಕ್ಕೆ, ಕೆವಕುವುದಕ್ಕೆ, ಸಸಿಎಬ್ಬುವುದಕ್ಕೆ ಅಥವಾ ಎತ್ತುವುದಕ್ಕೆ ಸಾಲುಬಿತ್ತನೆ ಅನುಕೂಲ. ಸಣ್ಣ ಬೀಜಗಳನ್ನು, ತೆಳುವಾಗಿ ಸಾಲಿನಲ್ಲಿ ಬಿತ್ತಲು ಮರಳಿನೊಂದಿಗೆ ಬೆರೆಸಿ ಬೀಜ ಬಿಡಬೇಕು. ಬೀಜ ಹಾಕಿದನಂತರ ಅದನ್ನು ಪುಡಿಮಣ್ಣು ಮತ್ತು ಗೊಬ್ಬರದ ಮಿಶ್ರಣದಿಂದ ಮುಚ್ಚಬೇಕು. ಸಣ್ಣ ಬೀಜಗಳನ್ನು ತೆಳುವಾಗಿ ಮುಚ್ಚಬೇಕು. ದಪ್ಪ ಬೀಜಗಳನ್ನು ಸ್ವಲ್ಪ ಆಳಕ್ಕೆ ಹೂಣಬೇಕು.

ಬಿತ್ತಿದ ನಂತರ ಒಟ್ಲುಪಾತಿಗೆ, ಬೀಜಗಳು ಜರಗದಂತೆ ತುಂತುರು ತುಂತುರಾಗಿ ನೀರು ಹಾಕಬೇಕು. ಇದಕ್ಕೋಸ್ಕರ, ಸಣ್ಣ ಕಣ್ಣಿನ ಹೂವು (ರೋಸುದಾನಿ) ಇರುವ ಕೈತೊಟ್ಟಿಗಳಿಂದ ನೀರು ಎರೆಯಬೇಕು. ಬಿಂದಿಗೆಗಳಿಂದ ನೀರು ಎರೆದಲ್ಲಿ ಮಣ್ಣು ಕೊರೆದು ಹೋಗುವುದಲ್ಲದೆ ಬೀಜಗಳೂ, ಸಸಿಗಳೂ ಜರಗುತ್ತವೆ.

ಮೊಳಕೆ ಬರುವತನಕ ಮಡಿಯ ತೇವ ಆರದಂತೆ, ಮೊಳೆಯುತ್ತಿರುವ ಬೀಜಕ್ಕೆ ಸಾಕಷ್ಟು ತೇವ ಸಿಗುವಂತೆ ಒಣ ಹುಲ್ಲನ್ನು ಹೊದಿಸುವುದು ಒಳ್ಳೆಯದು.

ಒಟ್ಲುಪಾತಿಯ ತೇವ ಆರದಂತೆ, ಆದರೂ ಹೆಚ್ಚು ತೇವವಿರದಂತೆ, ಕ್ರಮ ಪರಿತಃ ನೀರು ಎರೆಯುತ್ತಿರಬೇಕು. ನೀರನ್ನು ಬೆಳಗಿನ ಹೊತ್ತು ಎರೆಯುವುದು ಸರಿಯಾದ ಕ್ರಮ.

ಮೊಳಕೆ ಕಂಡ ತಕ್ಷಣವೇ ಹೊದಿಸಿದ ಹುಲ್ಲನ್ನು ತೆಗೆದು ಹಾಕಬೇಕು.

ಸಸಿ ಬೆಳೆದಂತೆಲ್ಲಾ ಆಗಾಗ್ಗೆ ಮಣ್ಣನ್ನು ಕೆದಕಿ ಕಳೆ ತೆಗೆಯುತ್ತಿರಬೇಕು.

ಮೊಳಕೆ ಮುಗಿದ ಮೇಲೆ ಸಸಿಗಳು ಬಲಪುಷ್ಟಿಯಾಗಿ ಬೆಳೆಯಲು, ಸಸಿಗಳಿಗೆ ಸಾಕಷ್ಟು ಸ್ಥಳಾವಕಾಶವಿರುವಂತೆ ಪೈರನ್ನು ತೆಳುವು ಮಾಡಬೇಕು. ಕೆಲವು ವೇಳೆ ಈ ಸಸಿಗಳನ್ನು ಕಿತ್ತು ಬೇರೆ ಒಟ್ಲಿನಲ್ಲಿ ದೂರ ದೂರಕ್ಕೆ ಹೂಣಬೇಕಾಗಬಹುದು; ಇಲ್ಲವೆ ಕುಂಡ ಅಥವಾ ಬುಟ್ಟಿಗಳಲ್ಲಿ ಬಿಡಿ ಬಿಡಿಯಾಗಿ ಹಾಕಿ ಬೆಳೆಸಬೇಕಾಗಬಹುದು.

ಸಸಿಗಳನ್ನು ಮಡಿಯಿಂದ ಎತ್ತಲು, ಒಂದಿನ ದಿವಸ ನೀರು ಹಾಯಿಸಿಟ್ಟಿರಬೇಕು. ಸಸಿಗಳನ್ನು ಎತ್ತುವಾಗ ಒಂದು ಕ್ರಮದಿಂದ ಎತ್ತಬೇಕು. ಮಡಿಯ ಅಂಚಿನಲ್ಲಿ ಒಂದು ಕಿರಿದಾದ ಕಂದಕವನ್ನು ತೋಡಿ, ಮಣ್ಣನ್ನು ಒಂದೆಡೆ ಹಾಕಬೇಕು. ಆಮೇಲೆ ಕೆಳಗೆ ಮತ್ತು ಪಕ್ಕಗಳಿಂದ ಸಸಿಗಳನ್ನು ಎಬ್ಬುತ್ತ ಎತ್ತಬೇಕು. ಹೀಗೆ ಮಾಡಿದರೆ, ಬೇರುಗಳಿಗೆ ಗಾಯವಾಗುವುದಿಲ್ಲ. ಎತ್ತಿದ ಸಸಿಗಳನ್ನು ಆದಷ್ಟು ಬೇಗನೆ ಹೂಣಬೇಕು. ಸಸಿಗಳು ಬಿಸಿಲಿಗೆ ಸಿಗದಂತೆ ನೋಡಿಕೊಳ್ಳಬೇಕು.

ಕೆಲ ಸಸಿಗಳನ್ನು ಮಣ್ಣು ಸಹಿತ ಹೂಣಬೇಕಾಗುತ್ತದೆ. ಆಗ, ಉಂಡೆಸಹಿತ

ಎತ್ತಿದ ಸಸಿಗಳನ್ನು ನೆರಳಿನಲ್ಲಿ ಕೆಲವು ದಿವಸ ಇಟ್ಟರೆ, ಎತ್ತಿದಾಗ ಸಸಿಗಳಿಗೆ ಬೇರು ಕಿತ್ತು ಆದ ಪೆಟ್ಟಿನಿಂದ ಚೇತರಿಸಿಕೊಳ್ಳಲು ಅವಕಾಶ ಸಿಗುತ್ತದೆ. ಹೀಗೆ ಚೇತರಿಸಿಕೊಂಡನಂತರ, ಉಂಡೆ ಒಡೆಯದಂತೆ ಅವನ್ನು ನೆಡಬೇಕು. ಚೇತರಿಸಿಕೊಂಡ ಸಸಿಗಳನ್ನು ದೂರ ಸ್ಥಳಗಳಿಗೂ ಸಾಗಿಸಬಹುದು.

ಸಸಿಗಳನ್ನು ಅವು ಬೆಳೆಯಬೇಕಿರುವ ಸ್ಥಳಗಳಲ್ಲಿ ನೆಡಲು ಹದವಾದ ಕಾಲವೆಂದರೆ ಮಳೆಗಾಲದ ಆರಂಭ. ನಿಧಾನ ಮಾಡಿದರೆ, ಮಳೆಗಾಲದ ಅನುಕೂಲ ಪರಿಸ್ಥಿತಿ ಸಸ್ಯಗಳಿಗೆ ಹೆಚ್ಚು ಕಾಲ ಸಿಗುವುದಿಲ್ಲ. ಆ ಸಸಿಗಳನ್ನು ತುಂತುರು ಮಳೆ ಬೀಳುವಾಗ ಅಥವಾ ಮೋಡ ಕವಿದ ದಿನ ನೆಟ್ಟರೆ ಬೇಗ ಹತ್ತಿಕೊಳ್ಳುತ್ತವೆ. ನೆಡುವ ಸ್ಥಳ ತುಂಬ ಒದ್ದೆಯಾಗಿದ್ದರೆ ಅಥವಾ ಭಾರಿ ಮಳೆ ಬೀಳುವ ಸೂಚನೆ ಇದ್ದರೆ, ನಾಟಿ ಮಾಡುವುದನ್ನು ಮುಂದುಹಾಕಬೇಕು.

ನಾಟಿ : ಮರಗಳನ್ನು, ಬೆಳೆಯುವ ಕಡೆಯೇ ಬೀಜ ಹೂಣಿ ಬೆಳೆಸುವುದಾದರೆ, 30 ಸೆಂ.ಮೀ. ಉದ್ದ, ಅಗಲ, ಆಳವಿರುವ ಗುಣಿಗಳನ್ನು ತೋಡಿ, ತೋಡಿದ ಮಣ್ಣನ್ನು ಮಾಗಿಸಿ, ಮಳೆಗಾಲಕ್ಕೆ ಸ್ವಲ್ಪ ಮುಂಚೆಯೇ, ಕೂಳೆ, ಕಳೆ ಮತ್ತು ಕಲ್ಲುಗಳನ್ನು ಆರಿಸಿ, ಮಣ್ಣಿನೊಂದಿಗೆ ಸ್ವಲ್ಪ ಕಳಿತ ಗೊಬ್ಬರವನ್ನು ಬೆರೆಸಿ, ಗುಣಿ ತುಂಬಿ, ಒಂದೊಂದು ಗುಣಿಯಲ್ಲೂ 3–4 ಬೀಜಗಳನ್ನು ಮಳೆಗಾಲ ಆರಂಭವಾದ ನಂತರ ಹೂಣಬೇಕು. ಹೀಗೆ ಬೆಳೆಸುವ ಸಸಿಗಳನ್ನು ಕಳೆಗಳಿಂದಲೂ, ಮೇಕೆ ಮುಂತಾದವುಗಳಿಂದಲೂ ಕಾಪಾಡಬೇಕು.

ಒಟ್ಲುಹುಯ್ದು ಸಸಿಗಳನ್ನು ನೆಡಲು, ಮಳೆಗಾಲಕ್ಕೆ ಮುಂಚೆಯೇ 30 ಸೆಂ.ಮೀ. ಉದ್ದ, ಆಳ ಮತ್ತು ಅಗಲವಿರುವ ಗುಣಿಗಳನ್ನು ತೋಡಿ ಮಣ್ಣನ್ನು ಮಾಗಿಸಿ, ಶೋಧಿಸಿ, ಕಳಿತ ಗೊಬ್ಬರ ಬೆರೆಸಿ ತುಂಬಿಟ್ಟುಕೊಂಡಿರಬೇಕು. ಮೊದಲು ಮಳೆಗಳು ಬಿದ್ದು, ಗುಣಿಗಳಲ್ಲಿ ಮಣ್ಣು ಕೂತಮೇಲೆ ಸಸಿಗಳನ್ನು ನೆಡಬೇಕು.

ಸಸಿಗಳನ್ನು ನೆಡಲು, ಗುಣಿಯ ಮಧ್ಯದಲ್ಲಿ ದಸಿ ಊರಿ, ಕುಳಿ ಮಾಡಿ, ಈ ಕುಳಿಗಳಲ್ಲಿ ಸಸಿಗಳನ್ನು, ಬೇರುಗಳು ಬಾಗದಂತೆ ಮತ್ತು ಸಸಿ ನೆಟ್ಟಗೆ ನಿಲ್ಲುವಂತೆ ಕೂರಿಸಿ, ಒಣಮರಳು – ಗೊಬ್ಬರ ಮಿಶ್ರಣವನ್ನು ಕುಳಿಯೊಳಗೆ ಬಿಟ್ಟು, ಸಸಿಯಿಂದ, ಸ್ವಲ್ಪ ದೂರಕ್ಕೆ ಸುತ್ತಲೂ ಕೊತ್ತಬೇಕು. ಹೀಗೆ ಕೊತ್ತಿದರೆ ಮಣ್ಣು ಸಸಿಯ ಬೇರಿನೆಡೆಗೆ ಜರುಗಿ, ಬೇರಿಗೂ ಮಣ್ಣಿಗೂ ಸಂಪರ್ಕವನ್ನುಂಟುಮಾಡುತ್ತದೆ.

ನೆಡುವಾಗ ಸಸಿಯ ಕತ್ತು, ಗುಣಿಯ ಮಣ್ಣಿನ ಮಟ್ಟಕ್ಕೆ ಸ್ವಲ್ಪ ಕೆಳಗಿರುವಂತೆ ನೆಡಬೇಕು. ಹೀಗ ಮಾಡಿದರೆ, ಮಣ್ಣು ಕೂತಾಗ ಸಸಿಯ ಕತ್ತು, ಮಣ್ಣಿನ ಮಟ್ಟಕ್ಕೆ ನಿಲ್ಲುತ್ತದೆ. ಈ ಕತ್ತು ಮಣ್ಣಿನ ಮಟ್ಟಕ್ಕಿಂತ ಮೇಲೆ ಬಂದರೆ, ಸಸಿ ಒಣಗಿ ಸಾಯಬಹುದು. ಒಂದು ವೇಳೆ ಮಣ್ಣು ಕೂತಮೇಲೆ ಸಸಿಯ ಕತ್ತು ಹೊರಬಂದಿದ್ದರೆ ಮತ್ತಷ್ಟು ಮಣ್ಣನ್ನು ಹಾಕಿ ಕತ್ತನ್ನು ಮುಚ್ಚಬೇಕು.

ಸೌದೆ ಸೊಪ್ಪಿಗಾಗಿ ಬೆಳೆಸುವ ಅನೇಕ ಮರಗಳು ಕಾಡುಗಳಲ್ಲಿ ತಾವೇತಾವಾಗಿ ಬೆಳೆಯುತಕ್ಕ ಜಾತಿಗಳಾದುದರಿಂದ ಇವಕ್ಕೆ ಹೆಚ್ಚು ಆರೈಕೆ ಬೇಕಿಲ್ಲ. ಆದರೆ, ಹಣ್ಣು ಗಿಡಗಳು, ಸರ್ವೆಮರ ಮುಂತಾದ ರೊಕ್ಕದ ಮರಗಳಿಗೆ, ಮತ್ತು ಸಾಲುಮರಗಳಿಗೆ ಹೆಚ್ಚು ಮುತುವರ್ಜಿ ಮತ್ತು ಆರೈಕೆ ಅವಶ್ಯಕ. ಅವುಗಳಲ್ಲಿ ಯಾವ ಸಸಿಯೂ ಸಾಯ ದಂತೆ ನೋಡಿಕೊಳ್ಳಬೇಕು.

ಇಂತಹ ಬೆಲೆಯ ಮರಗಳನ್ನು ಬೆಳೆಸಲು ಇನ್ನೂ ದೊಡ್ಡ ಗುಣಿಗಳನ್ನು, ಸುಮಾರು 1.2 ಮೀಟರ್ (4 ಅಡಿ) ಆಳಕ್ಕೆ ತೋಡುವುದುಂಟು. ಗುಣಿಯನ್ನು ಕಳಿತ ಗೊಬ್ಬರ ಮತ್ತು ಮಾಗಿದ ಮಣ್ಣು ಬೆರೆಸಿ ತುಂಬುವುದು ಒಳ್ಳೆಯದು. ಜತೆಗೆ ಸ್ವಲ್ಪ ಮೂಳೆ ಪುಡಿಯನ್ನೊ, ಗೊರಸಿನ ಪುಡಿಯನ್ನೊ ಸೇರಿಸುವುದು ಇನ್ನೂ ಒಳ್ಳೆಯದು.

ಸಾಮಾನ್ಯವಾಗಿ ವನದ ಮರ ಜಾತಿಗಳಿಗೆ ಇಷ್ಟು ಮೆಹನತ್ತು ಬೇಕಿಲ್ಲ. ಆದರೆ ಇವುಗಳನ್ನು ಬರಡು ನೆಲಗಳಲ್ಲಿ, ಕಲ್ಲು ಭೂಮಿಯಲ್ಲಿ, ಸತ್ವಕಳೆದುಕೊಂಡಿರುವ ಗೋಮಾಳ, ಬಂಜರುಗಳಲ್ಲಿ ಬೆಳೆಸಿದಾಗ ಇವಕ್ಕೂ ಸ್ವಲ್ಪ ಆರೈಕೆ ಮಾಡುವುದು ಒಳ್ಳೆಯದು. ಸ್ವಲ್ಪ ಗೊಬ್ಬರ ಕೊಟ್ಟು, ಆಗಾಗ್ಗೆ ನೀರೆರೆದು, ಕಳೆ ಕಿತ್ತು, ಬೇಲಿಕಟ್ಟಿ ಬೆಳೆಸಿದರೆ ಇವು ಬೇಗ, ಚೆನ್ನಾಗಿ ಬೆಳೆಯುತ್ತವೆ. ಕಳೆಗಳು, ಈ ಬಗೆಯ ಮರಗಳ ಪರಮ ಶತ್ರುಗಳು. ಇವು ಮರಗಳನ್ನು ತಲೆಯೆತ್ತಗೊಡಿಸುವುದಿಲ್ಲ. ಆದುದರಿಂದ ಇವುಗಳನ್ನು ಕಳೆಗಳ ಕಾಟದಿಂದ ಆಗಾಗ್ಗೆ ಪಾರುಮಾಡುತ್ತಿರಬೇಕು. ಗುಣಿಗಳಲ್ಲಿ ನೀರು ತುಂಬ ದಂತೆ ನೋಡಿಕೊಳ್ಳಬೇಕು. ಮೇಲ್ಮಣ್ಣು ಹೆಕ್ಕಳ ಕಟ್ಟದಂತೆ ಕೆದಕುತ್ತಿರಬೇಕು. ಬಿಸಿಲು ಹೆಚ್ಚಾಗಿದ್ದರೆ, ಗುಣಿಯ ತೇವ ಆರದಂತೆ ಗುಣಿ ಮಣ್ಣಿನ ಮೇಲೆ ಹುಲ್ಲು ಸೊಪ್ಪು ಹರಡಬೇಕು. ಗಾಳಿಯಿಂದ ಬಾಗದಂತೆ ಮತ್ತು ಮುರಿಯದಂತೆ ಕಡ್ಡಿ ನೆಟ್ಟು ಸಸಿಗಳಿಗೆ ಊರೆ ಕೊಡಬೇಕು. ದನ, ಮೇಕೆಗಳು ತುಳಿಯದಂತೆ ಮತ್ತು ಮೇಯದಂತೆ ಗುಣಿ ಸುತ್ತ ಮುಳ್ಳು ಬೇಲಿ ಹಾಕಬೇಕು.

ಬೇಲಿಯನ್ನು ಕಲಸಿದ ಮಣ್ಣು ಮತ್ತು ಇಟ್ಟಿಗೆ, ಅಥವಾ ಬಿದಿರು ಚಾಪೆಗಳಿಂದಲೂ ಹಾಕಬಹುದು. ಹೀಗೆ ಮಾಡಿದಲ್ಲಿ ಈ ಬೇಲಿ ಗಾಳಿಯ ತಡೆಗಳಾಗಿ ಸಸಿಗಳನ್ನು ಗಾಳಿಯ ಹೊಡೆತದಿಂದ ಕಾಪಾಡುತ್ತದೆ.

ಗುಣಿಗಳನ್ನು ಎಷ್ಟೆಷ್ಟು ದೂರಕ್ಕೆ ತೆಗೆಯಬೇಕೆಂಬುದು ಮರದ ಜಾತಿ ಮತ್ತು ಬೆಳವಣಿಗೆ ಸ್ವಭಾವಕ್ಕೆ ತಕ್ಕಂತೆ ಇರುತ್ತದೆ. ಸಾಲುಸಾಲಾಗಿ ಬೆಳೆಯುವುದಾದರೆ ಅನೇಕ ಸಣ್ಣ ಮರಗಳನ್ನು 1.6 ಮೀಟರ್ (6 ಅಡಿ) ಅಂತರಕ್ಕೆ ನೆಟ್ಟು, ಬೆಳೆದಮೇಲೆ ತೆಳು ಮಾಡಬೇಕು. ಸಣ್ಣ ಮರಗಳ ಅಂತರವನ್ನು 6 ಮೀಟರ್ (20 ಅಡಿ), ಮಧ್ಯಮ ಗಾತ್ರದ ಮರಗಳ ಅಂತರವನ್ನು 10.5 ಮೀಟರ್ (35 ಅಡಿ), ದೊಡ್ಡ ಮರಗಳ ಅಂತರವನ್ನು ಸುಮಾರು 18 ಮೀಟರ್ (60 ಅಡಿ) ಇಡುವುದು ಸೂಕ್ತ.

ಅಧ್ಯಾಯ

4

ಯಾವ ಉದ್ದೇಶಕ್ಕೆ ಯಾವ ಗಿಡಮರಗಳು ?

ಯಾವ ಯಾವ ಉದ್ದೇಶಗಳಿಗಾಗಿ, ಉಪಯೋಗಗಳಿಗಾಗಿ ಯಾವ ಗಿಡಮರಗಳು ಒಪ್ಪು ಎಂಬುದನ್ನು ಕೆಳಗೆ ಪಟ್ಟಿ ಮಾಡಿದೆ. ಈ ಮರಗಳ ಬಗ್ಗೆ ಹೆಚ್ಚು ವಿವರಗಳನ್ನು ಮುಂದೆ ಕೊಟ್ಟಿದೆ.

ವ್ಯವಸಾಯದ ಮುಟ್ಟುಗಳಿಗೆ : ಮುಟ್ಟುಗಳಿಗೆ ಮರ ಗಡುಸಾಗಿರಬೇಕು ; ಬಲವಾಗಿರಬೇಕು ; ನಾರು ಗಟ್ಟಿಯಾಗಿದ್ದು ಮುರಿಯದ್ದಾಗಿರಬೇಕು. ಕಾರಣ, ಈ ಮುಟ್ಟುಗಳು ಬಿಸಿಲು, ಮಳೆ, ಗಾಳಿಯಲ್ಲೇ ಬಿದ್ದಿರಬೇಕಾಗಿರುವುದರಿಂದ ಈ ಮರಗಳು ಬೇಗ ಬಿರಿಯಬಾರದು. ಗಟ್ಟಿ ಮತ್ತು ಗಡಸು ಮಣ್ಣುಗಳಲ್ಲೂ ಕೆಲಸ ಮಾಡಬೇಕಾಗಿರುವುದರಿಂದ ಸುಲಭವಾಗಿ ಮುರಿಯಬಾರದು. ಕೆಲವು ವೇಳೆ ಈ ಮುಟ್ಟುಗಳು ಏರಿ ಧುಮುಕುತ್ತವೆ. ಕಲ್ಲು ಮುಂತಾದವು ಅಡ್ಡ ಸಿಕ್ಕಿದಾಗ, ಇವಕ್ಕೆ ಏಟು ತಗಲುತ್ತದೆ. ಈ ಧಕ್ಕೆಯನ್ನು ತಡೆಯಲು, ಈ ಮರಗಳ ನಾರು ಗಟ್ಟಿಯಾಗಿರಬೇಕು. ಮುಟ್ಟುಗಳು, ಅದರಲ್ಲೂ ಕೆಲ ಭಾಗಗಳು, ಭಾರವಾಗಿರಬೇಕು. ಇಲ್ಲದಿದ್ದರೆ, ಹೂಡಿದ ಮೇಲೆ ಮುಟ್ಟುಗಳು ಅಲುಗಾಡುತ್ತವೆ ; ಮೇಲೆ ತೇಲುತ್ತವೆ ; ನೆಟ್ಟಗೆ ಸಮಭಾರದಿಂದ ಮುಂದೆ ಸಾಗುವುದಿಲ್ಲ. ಆದುದರಿಂದ ಇವಕ್ಕೆ ಬಳಸುವ ಮರಗಳು ಭಾರವಾಗಿಯೂ ಇರಬೇಕು.

ಇಂತಹ ಮರಗಳನ್ನು ಒದಗಿಸುವ ವೃಕ್ಷಗಳು ಇವು :

ಗೊಬ್ಬಳಿ (ಜಾಲಿ), ಡಿಂಡಿಗ (ಬೆಜ್ಜಲು, ಬಕುಳ), ಕಕ್ಕೆ, ಹುರಗಲು (ಮಾಪೂಡ್ಲ, ಮಾಸಿ), ನೇರಳೆ, ತಡಸಲು (ತಡ್ಸಾಲ್, ಥಮಾರ್), ಮಲ್ಲಾಳಿ (ಅಬನಾಸಿ, ತಂಬುರುಸು), ಕಲ್‌ಮುತ್ತುಗ (ಕಲಹೊನ್ನೆ, ಕರಿಹೊನ್ನೆ, ನೇಹಿ), ನಾಗಕೇಸರಿ (ನಾಗಸಂಪಿಗೆ), ಒಳ್ಳೆ ಹೊನ್ನೆ (ಹನೆ), ಜಂಬೆ (ತಿರುವ, ಪಿಲ್ವೆ, ಇರುಳ್), ಯಲಚಿ.

ಈ ಮರಗಳು ನೇಗಿಲು, ಕುಂಟೆ, ಹೆಂಟೆ ಒಡೆಯುವ ಕೊಡತಿ, ಮಣೆ, ಉರುಳುದಿಂಡು ಇವುಗಳನ್ನು ಮಾಡಲು ಸೂಕ್ತ.

ಹಿಡಿ, ಕಾವುಗಳಿಗೆ : ಸನಿಕೆ, ಪಿಕಾಸಿ, ಕೊಡಲಿ, ಸುತ್ತಿಗೆ ಮುಂತಾದ ಮುಟ್ಟು ಗಳ ಕಾವು ಅಥವಾ ಹಿಡಿಗಳಿಗೆ ಧಕ್ಕೆ (ಏಟು) ಬೀಳುತ್ತಲೇ ಇರುತ್ತದೆ ; ಇರಬೇಕು. ಆದುದರಿಂದ ಇವುಗಳಿಗೆ ಬಳಸುವ ಮರಗಳು ಸ್ಪ್ರಿಂಗಿನಂತೆ ಈ ಧಕ್ಕೆಯನ್ನು ನುಂಗ ಬೇಕು. ಇವೂ ಕೂಡ ಬಿಸಿಲು, ಮಳೆ, ಗಾಳಿಗೆ ಜಗ್ಗ ಕೂಡದು ; ಬೇಗ ಒಡೆಯದೆ, ಸೀಳದೆ, ಗಟ್ಟಿ ಮುಟ್ಟಾಗಿರಬೇಕು ; ಬಲವಾಗಿರಬೇಕು ; ಹೆಚ್ಚು ಭಾರವಿರಬಾರದು.

ಇವುಗಳಿಗೆ ಸೂಕ್ತವಾದ ವೃಕ್ಷಗಳು, ಗಿಡಗಳು ಇವು :

ಕಲ್‌ಮುತ್ತುಗ, ಬೀಟೆ, ಕೂಲಿ (ಕುಮತಿ, ಕಾಶ್ಮೀರಿಮರ, ಹುಚ್ಚುನರವೆ), ಹೊಂಗೆ, ಗೊಬ್ಬಳಿ, ತಡಸಾಲ್, ಸಣ್ಣ ಬಿದಿರು (ಗಟ್ಟಿ ಬಿದಿರು), ಡಿಂಡಿಗ ಹಾಗೂ ಸೀಬೆ.

ಡಿಂಡಿಗ ಮತ್ತು ತಡ್ಸಾಲಿನಿಂದ ಅನೇಕ ಬಗೆಯ ಹತ್ಯಾರುಗಳಿಗೆ ಹಿಡಿಗಳನ್ನು ಮಾಡಬಹುದು. ಹಿಂದೆ, ಈ ಕೆಲಸಕ್ಕಾಗಿ ಹೊರದೇಶಗಳಿಂದ ಆಶ್ ಮತ್ತು ಹಿಕೊರಿ ಮರಗಳನ್ನು ತರಿಸಿಕೊಳ್ಳುತ್ತಿದ್ದರು. ಈ ಮರಗಳು ಮಾತ್ರ ಹತ್ಯಾರು ಹಿಡಿಗಳಿಗೆ ಸೂಕ್ತವೆಂದು ಅರಿತುಕೊಂಡಿದ್ದರು. ಆದರೆ ಎರಡನೆಯ ಮಹಾಯುದ್ಧದ ಕಾಲದಲ್ಲಿ ಪರೀಕ್ಷೆಗಳು ನಡೆದು ನಮ್ಮ ಡಿಂಡಿಗ ಮತ್ತು ತಡ್ಸಾಲು ಹಿಡಿ, ಆಮದು ಮಾಡಿ ಕೊಳ್ಳುತ್ತಿದ್ದ ಹಿಡಿಗಳಿಗಿಂತ ಗುಣದಲ್ಲಿ ಏನೂ ಕಡಿಮೆಯಿಲ್ಲವೆಂದು ತಿಳಿಯ ಬಂದಿತು.

ಗಾಡಿಗಳ ಗುಂಬಕ್ಕೆ : ನಮ್ಮ ದೇಶದಲ್ಲಿ ವ್ಯವಸಾಯದ ಉತ್ಪನ್ನಗಳ ಸಾಗಾಣಿಕೆ ಬಹುಭಾಗ ಎತ್ತಿನ ಗಾಡಿಗಳಿಂದ. ಈ ಸಾಗಾಣಿಕೆ ಸಮರ್ಪಕವಾಗಿರಬೇಕಾದರೆ ಗಾಡಿಗೆ ಬಳಸುವ ಮರಗಳು ಗಟ್ಟಿಮುಟ್ಟಾಗಿ, ಬಹಳ ಕಾಲ ಬಾಳಿಕೆ ಬರುವಂತಹವುಗಳಾಗಿರ ಬೇಕು.

ಚಕ್ರಗಳು ಸದಾ ಉರುಳುತ್ತಿರುವುದರಿಂದ, ಇವುಗಳ ಗುಂಬ ಕಬ್ಬಿಣದ ಅಚ್ಚನ್ನು ಉಜ್ಜುತ್ತಲೇ ಇರುತ್ತವೆ. ಆದುದರಿಂದ ಇವಕ್ಕೆ ಬಳಸುವ ಮರವೂ ಕೂಡ ಕಬ್ಬಿಣದಷ್ಟೆ ಗಟ್ಟಿಯಾಗಿಲ್ಲದಿದ್ದರೆ, ಗುಂಬ ಬೇಗ ಸವೆಯುತ್ತದೆ. ಎರಡನೆ ಯದಾಗಿ ಗಾಡಿಯ ಭಾರವೆಲ್ಲವೂ ಅಚ್ಚಿನ ಮೇಲೆ, ಗುಂಬದ ಮೇಲೆ ಬೀಳುವುದ ರಿಂದ ಈ ಭಾರವನ್ನು ತಡೆಯುವ ಧಾರಣಶಕ್ತಿ ಗುಂಬದ ಮರಕ್ಕೆ ಇರಬೇಕು. ಮೂರನೆಯದಾಗಿ ಈ ಮರ ಸೀಳದೆ, ನಾರು ಗಟ್ಟಿಯಾಗಿರಬೇಕು; ಬಿಗಿ ಯಾಗಿರಬೇಕು.

ಗುಂಬಕ್ಕೆ ಅನುಕೂಲವಾದ ಮರಗಳು :

ಗೊಬ್ಬಳಿ, ಕಗ್ಗಲಿ (ಕಾಚು), ಕಲ್‌ಮುತ್ತುಗ, ಕಾರಾಚಿ (ಕಮ್ರ – ಕಮ್ಮಾರ), ಬಿಳೀಭೋಗಿ (ಆಸಿನಮರ – ಸಾಲವೃಕ್ಷ), ನಾಗಕೇಸರಿ, ಹೊರಗಲು, ಡಿಂಡಿಗ, ಕಿರಲ್‌ಬೋಗಿ (ಬೋವು, ಹಿರಿ ಬೋಗಿ,) ಕಲ್‌ಬಾನೆ ಹಾಗೂ ಸಣ್ಣೆಲೆ ಬೋಗಿ.

ಗಾಡಿಗಳ ಪುಟ್ಟಿ ಮರಕ್ಕೆ : ಗಾಡಿಗಳ ಪುಟ್ಟಿ ಮರ (ಹೊಟ್ಟಿ ಮರ) ಭಾರ ತಡೆಯಬೇಕು ; ಜಜ್ಜುವುದನ್ನು ತಡೆಯಬೇಕು ; ಬಲವಾಗಿರಬೇಕು ; ಸ್ಪ್ರಿಂಗಿನಂತೆ ಏಟು ನುಂಗಬೇಕು (ಪುಟಪೇಳಬೇಕು); ಬಾಳಿಕೆ ಬರಬೇಕು ; ಗಟ್ಟಿಯಾಗಿರಬೇಕು ; ಸೀಳಬಾರದು; ಕೆಸರು, ನೀರು, ಧೂಳು, ಮತ್ತು ಮಣ್ಣಿನಿಂದ ಕೆಡಬಾರದು; ಕೊಳೆಯು ಬಾರದು ; ನೀರು ಹೀರಬಾರದು.

ಈ ಗುಣಗಳು ಇರುವ ಮರಗಳು ಇವು :

ತೇಗ, ಆಸಿನಮರ, ಗೊಬ್ಬಳಿ, ಒಳ್ಳೆ ಹೊನ್ನೆ, ತಡಸಾಲ್ ಹಾಗೂ ಬೀಟೆ.

ಮೂಕಿ, ದೂರಿ ಹಾಗೂ ಈಸು(ಈಚು)ಗಳಿಗೆ : ಈ ಭಾಗಗಳು ಗಟ್ಟಿಯಾಗಿ (ನಾರುಗಟ್ಟಿಯಾಗಿ)ರಬೇಕು ; ಬಲವಾಗಿರಬೇಕು ; ಮರದ ಎಳೆ ನೇರವಾಗಿರಬೇಕು ; ಡೊಂಕಾಗಿ ಗಂಟು ಕಟ್ಟಿಕೊಂಡಿರಬಾರದು. ಅಡ್ಡಾದಿಡ್ಡಿಯಾಗಿದ್ದರೆ, ಚಳಿಗಾಲ ದಲ್ಲಿ ಕುಗ್ಗುವಾಗ, ಬೇಸಿಗೆಯಲ್ಲಿ ಒಗ್ಗುವಾಗ, ಮಳೆಗಾಲದಲ್ಲಿ ನೀರು ಹೀರಿ ಕೊಂಡಾಗ ಡೊಂಕುಬೀಳುತ್ತದೆ.

ಈ ಭಾಗಗಳನ್ನು ಮಾಡಲು ಯೋಗ್ಯವಾದ ಮರಗಳು ಇವು :

ದಿಂಡಿಗ, ತಡಸಾಲ್, ಬಾಗೆ, ಹೊಟ್ಟೆಬಾಗೆ, ಮತ್ತಿ, ತಾರೆ, ಹೂವರಸಿ (ಜೋಗಿಯರಳೆ - ಬುಗರಿ) ಹಾಗೂ ಕಿರಲ್ ಬೋಗಿ.

ಪಾರಿಮರ, ಚೌಕಟ್ಟಿಗೆ : ಇವು ಬಲಯುತವಾಗಿರಬೇಕು; ಆದರೂ ಭಾರವಾಗಿರ ಬಾರದು.

ಇವಕ್ಕೆ ಸೂಕ್ತವಾದವು :

ಕಲ್‌ಮುತ್ತುಗ, ಇರುಗುಂಡಿ ಮಾವು (ಶಿಸ್ಸು, ಶಿಷ್ಟಬಾಗೆ, ಬಿಂಡಿ), ಧೂಮದ ಜಾತಿಗೆ ಸೇರಿದ ಮರಗಳು, ನೇರಳೆ, ತೇಗ, ಚೆಳ್ಳ (ಹೊಳೆ ದಾಸವಾಳ), ನಂದಿ ಹಾಗೂ ಚನ್ನಂಗಿ ಮರ.

ಆರೆಕಾಲಿ(ಆರೆ ಕಾಲು)ಗೆ : ಇದಕ್ಕೆ ಬಳಸುವ ಮರದ ಎಳೆಗಳು ನೇರವಾಗಿ ಬಲವಾಗಿರಬೇಕು ; ಪುಟಪೇಳಬೇಕು ; ಪುಟ್ಟಿ ಮರಕ್ಕೆ ಬೀಳುವ ಧಕ್ಕೆಯನ್ನು ಧರಿಸಬೇಕು. ಇಲ್ಲದಿದ್ದರೆ ಗುಂಬಕ್ಕೂ, ಪುಟ್ಟಿ ಮರಕ್ಕೂ ಅಪಾಯ.

ಆರೆಕಾಲುಗಳನ್ನು ಈ ಮರಗಳಿಂದ ತಯಾರು ಮಾಡಬೇಕು :

ತೇಗ, ಬೀಟೆ, ಸಿಸೂ, ತಡಸಾಲ್, ಒಳ್ಳೆಹೊನ್ನೆ, ಗೊಬ್ಬಳಿ, ಕಾರಾಚಿ ಹಾಗೂ ಆಸಿನ ಮರ.

ನೊಗಕ್ಕೆ : ಮರ ಮೃದುವಾಗಿ, ನಯವಾಗಿ ಇರಬೇಕು.

ಇದಕ್ಕಾಗಿ ಬಳಸುವ ಮರಗಳು :

ನೀರಂಜಿ ಹಾಗೂ ಬೆಂಡುಮರ (ಗೊರ್ಕುಲು, ಗೂರ್ಕಲ್).

ಮೇಲಿನವೆಲ್ಲ ಗಾಡಿಗಾಗಿ ಬಳಸುವ ಮರಗಳು. ರೈತರು ಮರಗಳನ್ನು ಮುಟ್ಟುಗಳಲ್ಲದೆ ಅನೇಕ ಕೆಲಸಗಳಿಗಾಗಿ ಬಳಸುತ್ತಾರೆ ; ಬೇಲಿಗಳಿಗೆ, ಗೂಟಗಳಿಗೆ ಇತ್ಯಾದಿ. ಇವುಗಳಿಗೆ ಸೂಕ್ತವಾದ ಮರಗಳನ್ನು ಕೆಳಗೆ ಕಾಣಿಸಿದೆ.

ಬೇಲಿ, ಗೂಟ, ಕಂಬಗಳಿಗೆ : ಹೆಚ್ಚು ಕಾಲ ಬಾಳತಕ್ಕ ಮರಗಳು.

ಅವು ಯಾವುವೆಂದರೆ :

ತೇಗ, ಆಸಿನ ಮರ, ನಾಗಸಂಪಿಗೆ, ಜಂಬೆ, ಕಿರಲ್‌ಬೋಗಿ, ಹಾಗೂ ಗೊಬ್ಬಳಿ.

ಕೊಟ್ಟಿಗೆಗೆ, ಕಟ್ಟಡಕ್ಕೆ : ಇವಕ್ಕೆ ಬಹಳ ಕಾಲ ಬಾಳಿಕೆ ಬರುವ, ಗಟ್ಟಿ ಮುಟ್ಟಾದ, ಬಲವಾದ, ಜಾವಣಿ ತೂಕ ಹೊರಬಲ್ಲ ಮರಗಳಾಗಬೇಕು.

ಅವು ಯಾವುವೆಂದರೆ :

ತೇಗ, ಆಸಿನ ಮರ, ಕಿರಲ್ ಬೋಗಿ, ನಾಗಕೇಸರಿ, ಒಳ್ಳೆ ಹೊನ್ನೆ, ಮತ್ತಿ ಹಾಗೂ ಜಂಬೆ.

ಸೌದೆಗೆ : ಐದು ಜನರಿರುವ ಮೂರು ಸಂಸಾರಕ್ಕೆ ವರ್ಷಕ್ಕೆ ಒಂದು ಎಕರೆ ಯಲ್ಲಿ ಬೆಳೆವ ಮರ, ಸೌದೆಗಾಗಿ ಬೇಕಾಗುತ್ತದೆಂದು ಅಂದಾಜು ಮಾಡಿದ್ದಾರೆ. ತಲಾ ಒಂದು ಕುಟುಂಬಕ್ಕೆ, ದಿನಕ್ಕೆ ಕನಿಷ್ಟ 5 ಕೆ. ಜಿ. ಸೌದೆಯಾದರೂ ಬೇಕು.

ನೂರು ಸಂಸಾರಗಳಿರುವ ಹಳ್ಳಿಗೆ ಪ್ರತಿ ವರ್ಷವೂ 30 ಎಕರೆ ಸೌದೆ ಕಾಡು ಬೇಕು.

ಒಳ್ಳೆಯ ಸೌದೆಯನ್ನು ಕೊಡತಕ್ಕ ಮರಗಳು ಇವು :

ಗೊಬ್ಬಳಿ, ಬಿಳಿ ಜಾಲಿ, ಬನ್ನಿ, ಕಗ್ಗಲಿ, ಮುಗ್ಗಿ, ಅಂಕೋಲೆ, ಬಾಗೆ, ಹೊಟ್ಟೆ ಬಾಗೆ, ಬಿಳುವಾರ, ದಿಂಡಿಗ, ಸೀಮೆ ತಂಗಡಿ, ಬಿರಡಿ, ಬಂದರಿಕೆ, ದೇವ ದಾರು, ಗೋಣಿ, ಗೊರವಿ, ಸರ್ವೆ, ಜಗಳಗಂಟಿ ಮರ, ಧೂಮ, ಅಣ್ಣಾತಮ್ಮನ ಮರ, ನೇರಳೆ, ಕಿರಲ್‌ಬೋಗಿ, ಪೊನಾಲ್, ಕರಿಮತ್ತಿ, ಇರುಳ್, ಕರ್ಪೂರದ ಮರ (ನೀಲಗಿರಿ ತೈಲದ ಮರ).

ಬೇಗ ಬೆಳೆಯುವ ಮರಗಳು ಇವು :

ಮುಗ್ಗಿ, ಅಗಸೆ, ಬೂರಗ, ಸೀಮೆತಂಗಡಿ, ಸರ್ವೆ, ಕರ್ಪೂರದ ಮರ, ಬಿಳಿ ಬೂರಗ, ಹಾಲಿವಾಣ, ಗೋಣಿ, ಬಿಳಿಬಸರಿ, ಸಿಲ್ವರ್ ಓಕ್, ರುದ್ರಾಕ್ಷಿ, ಶಿವಲಿಂಗ, ಕತ್ತಿಕಾಯಿ, ಕಾಟ ಕುಂಬಳ ಹಾಗೂ ಹೂವರಸಿ.

ಮೇವು, ಸೊಪ್ಪಿಗೆ : ಸಾಮಾನ್ಯವಾಗಿ ದನಗಳಿಗೆ ವರ್ಷದಲ್ಲಿ ಎರಡು

ಕಾಲದಲ್ಲಿ ಮೇವಿನ ಅಭಾವವಿರುತ್ತದೆ : ಅಕ್ಟೋಬರ್ – ಡಿಸೆಂಬರ್ ಮತ್ತು ಮೇ – ಜೂನ್. ಮೇವಿನ ಮರಗಳು ಈ ಕೊರತೆಯನ್ನು ನೀಗಬಲ್ಲವು.

ಈ ಮರಗಳಲ್ಲಿ ಕೆಲವು ಇವು :

ಗೊಬ್ಬಳಿ, ಕಗ್ಗಲಿ, ಬಾಗೆ, ಯಲಚಿ, ಅರಳಿ, ಮಾವು, ಹೂವರಸಿ, ಕಾಟು ಕುಂಬಳ, ನೇರಳೆ, ಆಲ (ಹೆಚ್ಚು ಸೊಪ್ಪು ಸಿಗುತ್ತದೆ), ಡಿಂಡಿಗ, ಬೇವು, ಹಿಪ್ಪೆ (ಎಲೆ, ಹೂವು, ಹಣ್ಣು), ಕಾರಾಚಿ, ಸೀಮೆ ಹುಣಿಸೆ, (ಕೊರಕಾಪುಳಿ), ಹೊಂಗೆ ಹಲಸು, ಉಳಿಪೆ, ಕಂಚುವಾಳ, ಅಗಸೆ, ಬಿಲ್ವಪತ್ರೆ, ಎಡಮುರಿ (ಮುರಿಗಿ ಕಾಯಿ), ಬೆಂಡೆ ಮರ (ಕೋಳಿಬೆಂಡೆ), ಗುಂಡು ಬಿದುರು ಇತ್ಯಾದಿ.

ಸೊಪ್ಪಿನ ಗೊಬ್ಬರಕ್ಕೆ : ಅನೇಕ ವೇಳೆ ನಮ್ಮ ಗದ್ದೆ ತೋಟಗಳಲ್ಲಿ ಸೊಪ್ಪಿನ ಗೊಬ್ಬರವನ್ನು ಬೆಳೆಯಲು ಅನುಕೂಲವಿರುವುದಿಲ್ಲ ; ಇದ್ದರೂ ಒಂದು ಬೆಳೆ ತಪ್ಪಿಸಬೇಕಾಗುತ್ತದೆ. ಇಲ್ಲದಿದ್ದರೆ ನೀರು ಇರುವುದಿಲ್ಲ ಅಥವಾ ಬೆಳೆದ ಸೊಪ್ಪಿಗೆ – ಹಪ್ಪೆಣಬಿಗೆ ಕೆಲವು ವೇಳೆ ಆಗುವಂತೆ, ಹುಳು ಹೊಡೆಯಬಹುದು. ಕಾರಣಾಂತರಗಳಿಂದ ಸೊಪ್ಪು ತಲೆಯೆತ್ತದಿರಬಹುದು. ಆದರೆ, ಕ್ರಮ ತಪ್ಪದೆ ಗದ್ದೆಗಳಿಗೆ ಹಸುರು ಗೊಬ್ಬರವನ್ನು ಹಾಕುವ ಪರಿಪಾಟವಿಟ್ಟುಕೊಂಡರೆ, ಜಮೀನಿನ ಫಲವತ್ತು ಹೆಚ್ಚಿ ಬೆಳೆ ಕುದುರುತ್ತದೆ ; ಕೈ ಹತ್ತುತ್ತದೆ.

ಈ ಹಸುರು ಗೊಬ್ಬರವನ್ನು ಈ ಗಿಡ ಮರಗಳಿಂದ ಪಡೆಯಬಹುದು:

ಹೊಂಗೆ, ಬಾಗೆ, ಗ್ಲಿರಿಸಿಡಿಯಾ, ಬೇವು, ಹೂವರಸಿ ಹಾಗೂ ಸುನ್‌ಕಟ್ಟೆ.

ಸಾಲು ಮರಗಳಿಗೆ : ಹಳ್ಳಿಯ ರಸ್ತೆಗಳ ಪಕ್ಕದಲ್ಲಿ ಹಾಕಲು ಯೋಗ್ಯವಾದ ಸಾಲು ಮರಗಳು, ಆಹಾರವನ್ನೋ, ಹಣ್ಣನ್ನೋ, ಇತರ ಬಗೆಯ ಉಪಯುಕ್ತ ವಸ್ತುಗಳನ್ನೋ ಕೊಡತಕ್ಕವಿರಬೇಕು ; ಬಹಳ ಕಾಲ ಬೆಳೆಯತಕ್ಕವಾಗಿರಬೇಕು ; ಚೆನ್ನಾದ ನೆರಳು ಕೊಡುವಂತಹವಾಗಿರಬೇಕು. ಇವರ ಸೊಪ್ಪು ಮೇವಿಗೆ ಅನುಕೂಲವಾಗಿರಬಾರದು. ಇದ್ದರೆ ಸೊಪ್ಪು ಕಡಿದು ಗಿಡ ತಲೆಯೆತ್ತುವುದಿಲ್ಲ.

ಇಂತಹ ಮರಗಳು ಇವು:

ಹುಣಿಸೆ, ನೇರಳೆ, ಮಾವು, ಹಿಪ್ಪೆ (ಎಣ್ಣೆ ಸಿಗುತ್ತದೆ), ಮಳೆ ಮರ (ಒಳ್ಳೆ ನೆರಳು ; ಹಣ್ಣುಗಳನ್ನು ಪ್ರಾಣಿಗಳಿಗೆ ತಿನ್ನಿಸಬಹುದು), ಕತ್ತಿಕಾಯಿ ಮರ (ಬಣ್ಣದ ಹೂವು ; ಅಲಂಕಾರ) ಇತ್ಯಾದಿ.

ಹಳ್ಳಿಯ ಸೀಳುದಾರಿ, ಗಾಡಿ ರಸ್ತೆಗಳ ಪಕ್ಕಕ್ಕೆ ಹಾಕಲು ಯೋಗ್ಯವಾದ ಮರಗಳು : ಎತ್ತರಕ್ಕೆ ಬೆಳೆಯಬೇಕು. ಇಲ್ಲದಿದ್ದರೆ ಗಾಡಿ ಓಡಾಡಲು ಅನುಕೂಲವಿರುವುದಿಲ್ಲ. ಇವು ರೈತರ ಹಿಡುವಳಿಗಳಲ್ಲೋ, ಅಂಚಿನಲ್ಲೋ ಇರಬೇಕಾಗಿರುವುದರಿಂದ, ಸೌದೆ, ಸೊಪ್ಪು ಅಥವಾ ಉಪಯುಕ್ತ ವಸ್ತುಗಳನ್ನು ಕೊಡುವಂತಹವಾಗಿರಬೇಕು.

ಈ ಉದ್ದೇಶದ ಪೂರೈಕೆಗೆ ಅನುಕೂಲವಾದ ಮರಗಳು ಇವು :

ಹೊಂಗೆ, ಕರ್ಪೂರದ ಮರ, ತೆಂಗು, ತಾಟಿನುಂಗು (ಕೆಲವೆಡೆ) ಹಾಗೂ ಉಡಿ-ಮರ (ಗೊಡ್ಡ ಸಿಂಟಿಮರ, ಗೋಗಲ್).

ಮನೆಗಳ ಸುತ್ತ, ಕೊಟ್ಟಿಗೆಗಳ ಸುತ್ತ, ಗೊಬ್ಬರದ ಗುಂಡಿ ಸುತ್ತ ಹಾಕಲು ಯೋಗ್ಯವಾದ ಮರಗಳು : ಇವು ಸೊಪ್ಪು ಅಥವಾ ಹಣ್ಣುಗಳನ್ನು ಕೊಡತಕ್ಕವಾಗಿರಬೇಕು; ನೆರಳು ಕೊಡಬೇಕು; ಅಲಂಕಾರವಾಗಿರಬೇಕು.

ಇಂತಹ ಮರಗಳು ಇವು :

ಹೂವರಸಿ, ಸೀಮೆ ಪುಂಡ್ರೀಕೆ, ನೀರಂಗಿ (ಸಣ್ಣಕತ್ತಿ, ವಾತನಾರಾಯಣ), ಕೆಂಪು ಕೆಂಜಿಗ, ಗ್ಲಿರಿಸೀಡಿಯ, ಬೇವು, ಸಪೋಟ, ಹಲಸು, ಮಾವು, ತೆಂಗು, ಸೀಬೆ, ದಾಳಿಂಬೆ ಇತ್ಯಾದಿ.

ಚಾವಡಿ, ಊರಿನ ಕಟ್ಟೆಗಳಿಗೆ : ಅಶ್ವತ್ಥ, ಬಾಗೆ, ಆಲ, ಮಾವು, ಬೇವು, ಪೆಲ್ಟೋಫೋರಂ (ಹಳದಿ ಹೂವಿನ ಅಲಂಕಾರದ ಗಿಡ) ಇತ್ಯಾದಿ.

· **ಕೆರೆ ಏರಿಗಳಿಗೆ :** ಮೂಗ್ಲಿ, ತಾಳೆ, ಸೀಮೆತಂಗಡಿ, ಸರ್ವೆ, ಬೆಟ್ಟದ ಕಣಗಲು, ಹೊಳೆತುಪ್ಪ ನೇರಳೆ, ಪನ್ನೇರಳೆ, ಕುನ್ನೇರಳೆ, ಹೊಂಗೆ, ನೀರಂಜಿ ಇತ್ಯಾದಿ.

ಅಲಂಕಾರ ಮತ್ತು ಹೂವಿಗೆ : ಅಲಂಕಾರದ ಮತ್ತು ಬಣ್ಣಬಣ್ಣದ ಹೂವು ಬಿಡುವ ಮರಗಳು ಅನೇಕವಿವೆ. ಕೆಲವನ್ನು ಮಾತ್ರ ಇಲ್ಲಿ ಸೂಚಿಸಿದೆ.

ವಸಂತ ಅಥವಾ ಮುಂಬೇಸಿಗೆಯಲ್ಲಿ ಹೂವು ಬಿಡುವ ಮರಗಳು :

ಕಂಚುವಾಳ, ಬೂರಗ, ಮುತ್ತುಗ, ಕತ್ತಿಕಾಯಿ ಮರ, ಹಿಪ್ಪೆ ಇತ್ಯಾದಿ.

ಬೇಸಿಗೆಯಲ್ಲಿ ಹೂ ಬಿಡುವ ಮರಗಳು :

ಓಪ್ಪೆ, ಬೇವು, ಹೊಂಗೆ, ಬಾಗೆ, ಕತ್ತಿಕಾಯಿ, ಜಕರಾಂಡ ಮತ್ತು ಕಕ್ಕೆ ಜಾತಿಯ ಮರಗಳು.

ಮಳೆಗಾಲದಲ್ಲಿ ಹೂ ಬಿಡುವ ಮರಗಳು :

ಸಂಪಿಗೆ ಹಾಗೂ ಲೊಡ್ಡುಗಿನ ಮರ.

ಬದುಗಳ ಮೇಲೆ : ಬದುಗಳ ಮೇಲೆ ಬೆಳಸುವ ಮರಗಳು ಆಳವಾಗಿ ಬೇರೂರಬೇಕು. ನೆತ್ತಿ ಹಗುರವಾಗಿದ್ದು, ಎಲೆ ಹರವು ತೆಳುವಾಗಿದ್ದು, ಕೆಳಗಿನ ಬೆಳೆಗಳಿಗೆ ನೆರಳು ಕಟ್ಟಬಾರದು. ಸೌದೆ, ಹಣ್ಣು, ಸೊಪ್ಪು ಕೊಡತಕ್ಕವಾಗಿರಬೇಕು.

ಇಂತಹ ಮರಗಳು ಇವು :

ಸರ್ವೆ (ಕ್ಯಾಸರಿಕೆ), ಸೀತಾಫಲ, ನುಗ್ಗೆ, ಗೊಬ್ಬಳಿ, ಬಿಳಿಜಾಲಿ, ಲುಕಾನಾ ಗ್ಲಾಕ (ಮೇವಿನ ಸೊಪ್ಪು ಕೊಡುವ ಮರ), ಅರ್ಜುನ, ಮುತ್ತುಗ ಇತ್ಯಾದಿ.

ನಾಲಾ, ಕಾಲುವೆ ಪಕ್ಕಗಳಿಗೆ : ಇವು ಬಗೆದ (ತೋಡಿದ) ನಿಸ್ಸಾರವಾದ ಮಣ್ಣಿನಲ್ಲಿ ಬೆಳೆಯುಬೇಕು. ದಿಂಡನ್ನು ಕಚ್ಚಿ ಹಿಡಿಯುಬೇಕು. ಗಾಳಿ ತಡೆಯುಬೇಕು. ಈ ಸ್ಥಳಗಳಲ್ಲಿ ನೀರಿನ ಅಭಾವವಿರುವುದಿಲ್ಲ. ಉಚಿತ ಮರಗಳು ಯಾವುಗಳೆಂದರೆ :

ಅಗಸೆ, ಅಡಿಕೆ, ತೆಂಗು, ಕಿರುನೆಲ್ಲಿ, ಕರಿಬೇವು ಹಾಗೂ ರೊಟ್ಟಿಹಣ್ಣಿನ ಮರ (ಹಲಸಿನ ಮರದಂತೆ ಇರುತ್ತದೆ), ತೇಗ, ಸಿಸು, ನೇರಳೆ, ಗೊಬ್ಬಳಿ, ಮಾವು, ಹೆಮ್ಮರ, ಅರ್ಜುನ, ತಾರೆ, ಹೊಂಗೆ, ಹಿಪ್ಪೆ, ಹುಣಿಸೆ, ಬೇವು ಹಾಗೂ ಕರ್ಪೂರದ ಮರ.

ಬೇಲಿಗಳಿಗೆ, ಗಾಳಿತಡೆಗೆ : ಪುತ್ರ ಜೀವಿ, ಹೆಸ್ಸರೆ, ಕಂಬದ ಮರ, ಕರ್ಪೂರದ ಮರ, ಸರ್ವೆ, ಹುಣಿಸೆ, ಬೇಲ, ತಾಟಿನುಂಗು, ಕೊರಕಾಪುಳಿ. ಸೀಮೆಗೊಬ್ಬಳಿ, ನೆಲ್ಲಿ, ಡಿಂಡಿಗ, ಗೋರಂಟಿ (ಮದರಂಗಿ), ರಂಗುಮಾಲೆ, ಮಹಾಸಾಕ್ಷಿ, ಗುಗ್ಗಳ, ಬೆಟ್ಟದ ಹರಳು, ಗೇರು, ಹೂವರಸಿ, ಯಲಚಿ ಮತ್ತು ಲಕ್ಕಿಗಿಡ (ನೆಕ್ಕಿ).

ಫಲವತ್ತಿಲ್ಲದ ಅಥವ ಮರಳು ನೆಲಗಳಿಗೆ : ಕೊಡೆಮುಳ್ಳು ಜಾಲಿ – ಬುಡ್ಡೆ ಜಾಲಿ, ಮೊಪೆಜಾಲಿ, ಸೀಮೆಜಾಲಿ, ಬಂದರಿಕೆ, ಗೇರು, ತಾಟಿನುಂಗು, ಸಿಸು, ಹೊಂಗೆ, ಕಸ್ತೂರಿ ಜಾಲಿ, ಸರ್ವೆ ಹಾಗೂ ಹೂವರಸಿ.

ಕಲ್ಲು ಜಮೀನುಗಳಿಗೆ : ಕರಿಜಾಲಿ, ಬಿಳಿಜಾಲಿ, ಬನ್ನಿ, ಕಗ್ಗಲಿ, ಅಂಕೋಲ, ಬಿಳಿವಾರ, ಹಿಪ್ಪೆ, ಕಾಡುಹಿಪ್ಪೆ, ಮುತ್ತುಗ, ಕಂಜುವಾಳ, ಕಕ್ಕೆ, ಹಾಲಿವಾಣ, ಆಲ, ಗೋಣಿ, ಅತ್ತಿ, ಕಲ್‌ಆಲ, ಗೊರವಿ, ಬೇವು ಹಾಗೂ ಹುಣಿಸೆ.

ಉಪ್ಪು, ಚೌಳು ಜಮೀನುಗಳಿಗೆ : ಗೊಬ್ಬಳಿ, ಮುತ್ತುಗ, ಬೇವು, ಕಗ್ಗಲಿ, ಹಿಪ್ಪೆ, ನೆಲ್ಲಿ, ಹಾಗೂ ಬುಡ್ಡೆ ಜಾಲಿ.

ಜೌಗು ಹತ್ತಿದ ಭೂಮಿಗೆ : ಗೊಬ್ರನೇರಳೆ (ನೀಲಿಮರ), ನೇರಳೆ, ಚೆಳ್ಳ, ನೀರಂಜಿ, ಮುತ್ತುಗ ಹಾಗೂ ಕೆಲವು ಬಗೆಯ ಕರ್ಪೂರದ ಮರಗಳು.

ಜಿಗಟು ಮಣ್ಣುಗಳಿಗೆ : ಗೊಬ್ಬಳಿ, ಮತ್ತಿ, ಮುತ್ತುಗ ಹಾಗೂ ಬಾಗೆ.

ಮಳೆ ಹೆಚ್ಚಿಲ್ಲದ ಕಡೆ : ಬಿಳಿಜಾಲಿ, ಆಲ, ಅಶ್ವತ್ಥ, ಕಾರಾಚಿ, ಸೀಮೆಜಾಲಿ (ಬಳ್ಳಾರಿ ಜಾಲಿ), ಚನ್ನಂಗಿ, ನೇರಳೆ, ಹೊಂಗೆ, ಕಲ್‌ಮುತ್ತುಗ, ಡಿಂಡಿಗ ಹಾಗೂ ಮಲ್ಲಾಳಿ.

ಜೇನು ಇಡುವುದಕ್ಕೆ : ದೊಡ್ಡದಗರಿ, ತೆಂಗು, ಸಿಲ್ವರ್ ಓಕ್, ನೀಲಿ ರಂಗು ಮರ, ಮಾವು, ಸಂಪಿಗೆ, ಅಂಗಾರಕನ ಗಿಡ, ಕಾಡುಮಂದಾರ, ಆನೆಪಾದ,

ಕಂಚುವಾಳ (ಕೆಂಪು ಮಂದಾರ), ಮರಕಲು, ಪಾರಿಜಾತ, ಹೊಂಗೆ, ನುಗ್ಗೆ, ಸೀಗೆ ಹಾಗೂ ನೇರಳೆ.

ಗ್ರಾಮ ವನಗಳಿಗೆ : ಇಲ್ಲಿ ಹಾಕುವ ಮರಗಳು ಬೇಗ ಬೆಳೆಯುತಕ್ಕ ಮರಗಳಾಗಿರಬೇಕು ; ಸುಲಭವಾಗಿ ಬೆಳೆಯುವಂತಹವಾಗಿರಬೇಕು ; ಒಳಮರ ಗಟ್ಟಿಯಾಗಿದ್ದು ಮರದ ಎಳೆಗಳು ಒತ್ತಾಗಿರಬೇಕು. ಇಂತಹ ಮರಗಳೇ ವ್ಯವಸಾಯದ ಮುಟ್ಟುಗಳಿಗೆ ಯೋಗ್ಯವಾದುವು ; ಗುಡಿಸಲು, ಕೊಟ್ಟಿಗೆ, ಒಪ್ಪಾರುಗಳಿಗೆ ತಕ್ಕವಾದವು.

ಈ ಮರಗಳು ಯಾವುವೆಂದರೆ :

ವಿವಿಧ ಜಾಲಿಗಳು, ಸರ್ವೆ, ಸೀಮೆತಂಗಡಿ, ಸಿಸು, ಹಿಪ್ನೇರಳೆ, ಕರ್ಪೂರದ ಮರಗಳು, ಉಣ್ಣೆ, ಕರೀಮತ್ತಿ ಹಾಗೂ ಯಲಚಿ.

ಮಾದರಿ ಭೂವಿನಿಯೋಗ : 1000 ಎಕರೆ ಒಳಗಿಂಡ ಗ್ರಾಮದಲ್ಲಿ ಮಾದರಿ ಭೂವಿನಿಯೋಗ ಈ ರೀತಿ ಇರಬೇಕು :

1. ಹಣ್ಣು ಮರಗಳಿಗೆ : 15–30 ಎಕರೆ.
2. ಗಾಳಿ ತಡೆ, ಸೌದೆ, ಹೂವಿನ ಮರಗಳಿಗೆ : 15–25 ಎಕರೆ.
3. ಹೂವು ಮತ್ತು ನೆರಳಿಗೆ (ಕಟ್ಟೆ, ರಸ್ತೆ, ಮನೆ ಅಂಗಳ, ಪಂಚಾಯತಿ ಮತ್ತು ಶಾಲೆ ಸುತ್ತ) : 15–25 ಎಕರೆ.
4. ಬಂಜರು, ಗ್ರಾಮವನ: 50–75 ಎಕರೆ (ನೆರಳು, ಸೌದೆಗಾಗಿ).
5. ಉಳಿದುದು : 800 ಎಕರೆ, ಸಾಗುವಳಿಗೆ.

ಅಧ್ಯಾಯ

5

ಬಗೆ ಬಗೆಯ ಮರಗಳು


(1) **ಬೆಟ್ಟದ ಕಣಗಲು:** (ಬೆಟ್ಟದ ಗಣಗಲು, ಗನಗಲು, *Dillenia indica* Linn.

ಇದು ಮಲೆನಾಡಿನ ಅಲಂಕಾರದ ಮರ. ಎಲೆ ಉದ್ದ–22–35 ಸೆಂ. ಮೀ. ದೊಡ್ಡ ಹೂವು; ಬಿಳಿದಳ; ಪರಿಮಳಯುಕ್ತ; ಹೂ ಬರುವುದು ಮಳೆಗಾಲದ ಆದಿಯಲ್ಲಿ. ದಪ್ಪ ಹಣ್ಣು–ಸೇಬಿನಷ್ಟು. ಮರದ ನೆತ್ತಿ ದುಂಡಾಗಿರುವುದರಿಂದ ಮತ್ತು ಒತ್ತಾಗಿರುವುದರಿಂದ ನೆರಳೂ ದಟ್ಟ. ಮಲೆನಾಡಿನಲ್ಲಿ ಸುಂದರ ವೃಕ್ಷವಾದರೂ ಬಯಲು ಸೀಮೆಯಲ್ಲಿ ಅಷ್ಟು ಸುಂದರವಾಗಿ ಬೆಳೆಯುವುದಿಲ್ಲ, ಬೆಳವಣಿಗೆಯೂ ಕೂಡ ನಿಧಾನ.

ಒಳಮರ ತಿಳಿ ಕಂದು. ಎಳೆಗಳು ನಯ ಮತ್ತು ಅಲಂಕಾರವಾಗಿರುತ್ತವೆ. ಆದುದರಿಂದ ಬಂದೂಕದ ಹಿಡಿಗಳನ್ನು ಮಾಡಲು ಉಪಯೋಗಿಸುತ್ತಾರೆ. ಸುಮಾರು 0.028 ಘನ ಮೀಟರ್ ಕಟ್ಟಿಗೆ 19½ ಕೆ. ಜಿ. (ಒಂದು ಘನ ಅಡಿ 44 ಪೌಂಡ್) ತೂಗುತ್ತದೆ. ಈ ಕಾರಣದಿಂದ ಇದನ್ನು ರೈಲು ಕಂಬಿ ಎಳೆಯಲು ಸ್ಲೀಪರುಗಳಾಗಿ ಹಾಕುತ್ತಾರೆ. ನೀರಿನಲ್ಲಿ ಚೆನ್ನಾಗಿ ಬಾಳುತ್ತದೆ; ದೋಣಿ ಕಟ್ಟಲು ಒಪ್ಪು; ಈಚೆಗೆ ಇದನ್ನು ಪ್ಯಾಕಿಂಗ್ ಪೆಟ್ಟಿಗೆಗೂ, ಪ್ಲೈವುಡ್ ತಯಾರಿಕೆಗೂ ಬಳಸುತ್ತಿದ್ದಾರೆ. ಇದು ಒಳ್ಳೆಯ ಸೌದೆಯನ್ನೂ, ಇದ್ದಿಲನ್ನೂ ಕೊಡುತ್ತದೆ.

ಎಲೆಯನ್ನು ಮುತ್ತುಗದೆಲೆಯಂತೆ ಊಟದೆಲೆಗಾಗಿ ಬಳಸುತ್ತಾರೆ. ಇದು ಸ್ವಲ್ಪ ಒರಟಾಗಿರುವುದರಿಂದ, ಕೊಂಬು ಮತ್ತು ದಂತದ ಸಾಮಾನುಗಳನ್ನು ಉಜ್ಜಿ ನಯಮಾಡಲು ಉಪಯೋಗಿಸುವುದುಂಟು. ಹಣ್ಣಿನಿಂದ ಪಾನಕ ಮಾಡಬಹುದು. ಹಣ್ಣು ಔಷಧಿಗಾಗಿಯೂ ಒದಗಿ ಬರುತ್ತದೆ. ಇದನ್ನು ಇಂಗ್ಲಿಷಿನಲ್ಲಿ ಆನೆಸೇಬು ಎಂದು ಕೆಲವರು ಕರೆಯುವುದುಂಟು. ಕಾರಣ, ಇದರ ಹಣ್ಣು ಆನೆಗಳಿಗೆ ಬಹಳ ಪ್ರಿಯ.

ಈ ಮರವನ್ನು ಬೀಜ ಊರಿಯೋ, ಇಡೀ ಹಣ್ಣನ್ನು ಊರಿಯೋ ಸಸಿ ಎಬ್ಬಿಸಿ, ಒಂದು ವರ್ಷದ ಸಸಿಗಳನ್ನು 9 ಮೀಟರು (ಸುಮಾರು 30 ಅಡಿ) ಅಂತರಕ್ಕೆ ನೆಡಬೇಕು.



ಚಿತ್ರ 1 : ಬೆಟ್ಟದ ಕಣಗಲು

(2) **ಕಲ್ತೇಗ :** (ಕಾಡು ಗಣಗಲು, ಕೊಲ್ತೇಗ, ಮದತೇಗ, ಮಳೆಗೇರು) *Dillenia pentagyna* Roxb.

ಇದು ಬೆಟ್ಟದ ಕಣಗಲಿನ ಹತ್ತಿರ ನಂಟನಾದರೂ ಮಲೆನಾಡಿನ ಮರವಲ್ಲ ; ಬಯಲು ಸೀಮೆಯ ಬೆಟ್ಟಗುಡ್ಡಗಳ ಮರ. ಅನುಕೂಲ ಸ್ಥಳಗಳಲ್ಲಿ 21 ಮೀಟರು (70 ಅಡಿ) ಎತ್ತರಕ್ಕೂ ಬೆಳೆದಿದೆಯಂತೆ. ಇದೂ ಕೂಡ ಅಲಂಕಾರದ ಮರವೇ – ಎತ್ತರಕ್ಕೆ, ಅಗಲಕ್ಕೆ ಹರಡಿಕೊಂಡು ಬೆಳೆಯುತ್ತದೆ. ಇದರ ಎಲೆ ಬಹಳ ಉದ್ದ – ಸುಮಾರು 60 ಸೆಂ.ಮೀ. (2 ಅಡಿ) : ಕೆಲವೆಡೆ 90 ಸೆಂ.ಮೀ (3 ಅಡಿ) ಉದ್ದಕ್ಕೂ ಬೆಳೆದಿರುವುದುಂಟು. ಎಲೆ 15 ಸೆಂ.ಮೀ (½ ಅಡಿ) ಅಗಲಕ್ಕೆ ಇರುತ್ತದೆ. ಆದುದರಿಂದ, ಎಳೆಯ ಎಲೆಗಳನ್ನು ಊಟದೆಲೆಯಾಗಿ ಬಳಸುತ್ತಾರೆ. ಇದರ ತೊಗಟೆ 1.2 ಸೆಂ.ಮೀ. (½ ಅಂಗುಲ) ದಪ್ಪ ; ನರೆಬಣ್ಣ ; ಹೂವು ಜನವರಿ ಮಾರ್ಚಿನಲ್ಲಿ ;

ಚಿಕ್ಕ ಹೂವು, 2.5 – 3.75 ಸೆಂ. ಮೀ. (1 – 1½ ಅಂಗುಲ) ಮಾತ್ರ; ಹಳದಿ; ಸುವಾಸನೆ. ಹೂವು ಬಿಡುವ ಕಾಲಕ್ಕೆ ಎಲೆ ಉದುರಿರುತ್ತದೆ. ಹಣ್ಣು ಮೇ, ಜೂನಿನಲ್ಲಿ.

ಇದರ ಒಳ ಮರದ ಎಳೆಗಳು ಒರಟು. ಇದು ಭಾರದ ಮರ. 0.028 ಘನ ಮೀಟರ್ ಸುಮಾರು 25 ಕೆ.ಜಿ. (1 ಘನ ಅಡಿ 55 ಪೌಂಡು) ತೂಗುತ್ತದೆ. ಮರಕ್ಕೆ ಎಲೆ ಹೆಚ್ಚು. ಹಸುರು ಗೊಬ್ಬರಕ್ಕೆ, ಕಂಪೋಸ್ಟಿಗೆ ಅನುಕೂಲ. ಕೆಲವು ಕಡೆ ಇದನ್ನು ಗುಡಿಸಿಲು ಹೊದಿಸಲು ಬಳಸುತ್ತಾರೆ.

ಇದನ್ನೂ ಬೆಟ್ಟದ ಕಣಗಲಿನಂತೆಯೇ ಬೆಳಸಬಹುದು.

3. **ಸಂಪಿಗೆ :** (ಚಂಪಕ) *Michelia champaca* Linn.



ಚಿತ್ರ 2 : ಸಂಪಿಗೆ

ಇದು ಬರಿಯ ಹೂವಿನ ಮರವೇ ಅಲ್ಲ : ಇದರ ಒಳ ಮರ ಅನೇಕ ಕೆಲಸಗಳಿಗೆ ಒದಗಿ ಬರುತ್ತದೆ. ಇದರ ಎಳೆ ಒತ್ತು ; ಆದುದರಿಂದ ಮರ ಗಟ್ಟಿ ; ಪೀಠಾಸನಗಳನ್ನು ಮಾಡಲು ಒಪ್ಪು. ಅಲ್ಲದೆ, ಮರ ಚೆನ್ನಾಗಿ ಪಾಲಿಷ್ ತೆಗೆದುಕೊಳ್ಳುತ್ತದೆ. ಭಾರ : 0.028 ಘನಮೀಟರ್ ಕಟ್ಟಿಗೆ 18 ಕೆ.ಜಿ. (ಒಂದು ಘನ ಅಡಿ 40 ಪೌಂಡು) ತೂಗುತ್ತದೆ. ಕೆಲವೆಡೆ ಕಟ್ಟಡಗಳಿಗಾಗಿಯೂ, ಬಾಗಿಲು ಹಲಗೆಗಳಿಗಾಗಿಯೂ ಉಪಯೋಗಿಸುತ್ತಾರೆ. ಬಾಳಿಕೆ ಹೆಚ್ಚು. ಹಲಗೆಗಳಿಗೆ, ದೋಣಿಗಳಿಗೆ, ತಮಟೆಗಳಿಗೆ ಉಪಯೋಗ. ಇದರ ಮರದಿಂದ ಮಣಿಗಳನ್ನೂ ಮಾಡಿ ಸರಗಳನ್ನು ಜೋಡಿಸುತ್ತಾರೆ. ಹೂವಿನಿಂದ ಸುಗಂಧ ದ್ರವ್ಯವನ್ನು ತೆಗೆದು ಗಂಧದ ಕಡ್ಡಿ ತಯಾರಿಕೆಯಲ್ಲಿ ಉಪಯೋಗಿಸುತ್ತಾರೆ ; ಹಳದಿ ಬಣ್ಣವನ್ನು ತಯಾರು ಮಾಡುತ್ತಾರೆ. ತೊಗಟೆ, ಹೂವು, ಹಣ್ಣು ಹಾಗೂ ಬೀಜಗಳು ಔಷಧಿಗೂ ಬರುತ್ತವೆ.

ಈ ನಿತ್ಯ ಹಸುರಿನ ಮರ ಮಲೆನಾಡಿನ ಕಡೆ ಎತ್ತರಕ್ಕೆ, ದಪ್ಪಕ್ಕೆ ಬೆಳೆಯುತ್ತದೆ. ಸಾಮಾನ್ಯವಾಗಿ 21 ಮೀಟರ್ (70 ಅಡಿ) ಎತ್ತರ, 90 ಸೆಂ.ಮೀ (3 ಅಡಿ) ಸುತ್ತಳತೆಯುಳ್ಳ ಮರಗಳು ಬೇಕಾದಷ್ಟಿವೆ. ಅನುಕೂಲ ಸನ್ನಿವೇಶಗಳಲ್ಲಿ 30–33 ಮೀಟರ್ (100–110 ಅಡಿ) ಎತ್ತರಕ್ಕೂ, 6–7.5 ಮೀಟರ್ (20–25 ಅಡಿ) ಸುತ್ತಳತೆ ದಪ್ಪಕ್ಕೂ ಬೆಳೆಯುವುದುಂಟು (ಬುಡದಲ್ಲಿ). ಬಯಲು ಸೀಮೆಯಲ್ಲಿ ಇದು ಅಷ್ಟು ದೊಡ್ಡದಾಗಿ ಬೆಳೆಯುವುದಿಲ್ಲ.

ಇದರ ದಿಂಡು ಉದ್ದವಾಗಿ ಕಂಬದಂತೆ ಇರುತ್ತದೆ ; ತೊಗಟೆ ನಯ ; ಬೂದು ಬಣ್ಣ : 1.25 ಸೆಂ.ಮೀ ($\frac{1}{2}$ ಅಂಗುಲ) ದಪ್ಪ.

ಇದರ ಹೂವು ಬೇಸಿಗೆ ಮತ್ತು ಮಳೆಗಾಲದಲ್ಲಿ. ಕಾಯಿಗಳು ಆಗಸ್ಟ್‌ನಲ್ಲಿ.

ಇದರ ಬೀಜದಲ್ಲಿ ಎಣ್ಣೆ ಇರುವುದರಿಂದ ಬೀಜ ಬೇಗ ಕೆಡುತ್ತದೆ. ಆದುದರಿಂದ ಹೊಸ ಬೀಜಗಳನ್ನು ಹಾಕಿ ಸಸಿ ಎಬ್ಬಿಸಿ, ನೆಟ್ಟು ಬೆಳೆಸಬೇಕು. ಒಂದು ಅಡಿ ಎತ್ತರದ ಅಥವಾ 2 ವರ್ಷದ ಸಸಿಗಳನ್ನೇ 12 ಮೀಟರ್ (40 ಅಡಿ) ಅಂತರದಲ್ಲಿ ನೆಡಬೇಕು. ಬೀಜಗಳನ್ನು ನೆರಳಿನ ಕೆಳಗೆ ಒಟ್ಟು ಹುಯ್ಯುವುದು ಸೂಕ್ತ ಕ್ರಮ. ಸಸಿಗಳನ್ನು ಕೀಳುವಾಗ ಬೇರುಗಳಿಗೆ ಗಾಯ ಮಾಡಬಾರದು. ಮಣ್ಣಿನ ಉಂಡೆ ಸಹಿತ ತೆಗೆದು ಹೂಣಬೇಕು

ಸಂಪಿಗೆಯಲ್ಲಿ ಕೆಲವು ಜಾತಿಗಳಿವೆ. ಹಳದಿ ಹೂವು ಸಾಮಾನ್ಯ. ಕೆಲವು ಬಿಳಿಯ ಹೂವುಗಳನ್ನು ಬಿಡುತ್ತವೆ : ಕೆಲವು ಕೆಂಪು ಹೂವು ಬಿಡುತ್ತವೆ. ಕೆಲವಕ್ಕೆ ಗಂಧ ಜಾಸ್ತಿ ; ಕೆಲವಕ್ಕೆ ಕಡಿಮೆ. ಸಿಂಹಾಚಲವೆಂಬ ಜಾತಿ ಮೂರು ವರ್ಷಗಳಲ್ಲಿ ಹೂವು (ಹಳದಿ) ಬಿಡುತ್ತದೆ.

4. **ಪುತ್ರಜೀವಿ :** (ಪುಚ್ಚಿನ ಕಂಬದ ಮರ. ಮದರಾಸ್ ಅಶೋಕ) *Polyalthia longifolia* (Sonner.) Thw.



ಚಿತ್ರ 3 : ಮದ್ರಾಸ್ ಅಶೋಕ

ಈ ಮರವನ್ನು ಕೆಲವು ಕಡೆ ಅಶೋಕವೆಂದು, ದೇವದಾರುವೆಂದು ಕರೆದರೂ ನಿಜವಾದ ಅಶೋಕ – ರಾಮಾಯಣದ ಅಶೋಕವನದ ಮರವೇ, ಬೇರೆ. ಅದನ್ನು ಇಂಗ್ಲೀಷಿನಲ್ಲಿ 'ಸರಕಾ ಇಂಡಿಕ' ಎನ್ನುತ್ತಾರೆ. ನಿಜವಾದ ದೇವದಾರು ಹಿಮಾಲಯದ ಮರ. ನಮ್ಮ ರಾಜ್ಯದಲ್ಲಿ ಬೆಳೆಯುವುದಿಲ್ಲ. ಹಾಗೆಯೇ ಇದನ್ನು 'ಹೆಸ್ಸರೆ' ಎಂದು ಕರೆಯುವುದೂ ತಪ್ಪು. ನಿಜವಾದ ಹೆಸ್ಸರೆ ಬೇರೆ.

ಪುತ್ರಜೀವಿ ಅಥವಾ ಮದ್ರಾಸ್ ಅಶೋಕ ನಿತ್ಯ ಹಸುರಿನ ದುಂಡು ನೆತ್ತಿಯ ದೊಡ್ಡ ಮರ : ಅಲಂಕಾರದ ಮರ. ಇದರ ತೊಗಟೆ ನಯ ; ನರೆ ಕಂದು. ಇದು ಸುಮಾರು 12 – 15 ಮೀಟರ್(40 – 50 ಅಡಿ)ನ ಎತ್ತರಕ್ಕೆ ಬೆಳೆಯುತ್ತದೆ. ತಾಳು ನೇರ ; ಕಂಬದಂತೆ.

ಇದರ ಎಲೆ ಸ್ವಲ್ಪ ಉದ್ದ, 12.5 – 20 ಸೆಂ. ಮೀ. (5 – 8 ಅಂಗುಲ). ಇದು ಫೆಬ್ರುವರಿ – ಏಪ್ರಿಲ್‌ನಲ್ಲಿ ಸಣ್ಣ ಹಳದಿ ಹಸುರಿನ ಹೂವುಗಳನ್ನು ಬಿಡುತ್ತದೆ. ಹಣ್ಣು ಹಳದಿ ಅಥವಾ ಕೆಂಪು. ಬೀಜ, ಸೆಪ್ಟೆಂಬರ್ – ಅಕ್ಟೋಬರ್‌ನಲ್ಲಿ ಬಲಿಯುತ್ತದೆ.

ಇದು ಮುಖ್ಯವಾಗಿ ಅಲಂಕಾರದ ವೃಕ್ಷ. ಪಾರ್ಕುಗಳಲ್ಲಿ, ದೊಡ್ಡ ತೋಟಗಳಲ್ಲಿ ಹಾಕಲು ಬಹಳ ಒಪ್ಪಾದ ಮರ. ಇದು ಬರಸ್ಥಿತಿಯನ್ನು, ಬಡಕಲು ಮಣ್ಣನ್ನು ಎದುರಿಸಬಲ್ಲದು. ಸಾಲುವೃಕ್ಷವಾಗಿಯೂ ಬೆಳೆಸಬಹುದು.

ಇದರ ಹಣ್ಣನ್ನು ಬರಗಾಲದಲ್ಲಿ ತಿನ್ನುತ್ತಾರಂತೆ. ಇದರ ತೊಗಟೆಯಿಂದ ನಾರನ್ನು ತೆಗೆಯಬಹುದು. ಇದರ ಒಳ ಮರ ಬಿಳುಪು ಅಥವಾ ಬಿಳಿಹಳದಿ. ಇದು ಹಗುರ : 0.028 ಘನ ಮೀಟರ್ (1 ಘನ ಅಡಿ) ಕಟ್ಟಿಗೆ $16\frac{3}{4}$ ಕೆ.ಜಿ. (37 ಪೌಂಡು) ತೂಗುತ್ತದೆ. ಎಳೆಗಳು ಒತ್ತು. ಇದನ್ನು ಸೀಸದ ಕಡ್ಡಿ ತಯಾರಿಕೆಗೆ, ಸಣ್ಣ ಪೆಟ್ಟಿಗೆಗಳಿಗೆ, ಚರ್ಮದ ವಾದ್ಯಗಳಿಗೆ ಬಳಸುತ್ತಾರೆ.

ಇದರಲ್ಲಿ ಒಂದು ಬಗೆಯದರ ನೆತ್ತಿ ಶಂಕುವಿನಂತೆ. 'ಪೆಂಡುಲ' ಬಗೆಯಲ್ಲಿ ಕವಲುಗಳು ಇಳಿಬಿದ್ದಿರುತ್ತವೆ. ಎಲೆಗಳೂ ಜೋತು ಬಿದ್ದಿರುತ್ತವೆ.


ಸಸಿಗಳು ನಾಟಿ ತಡೆಯಲಾರವು. ಆದುದರಿಂದ ಹೊಸ ಬೀಜವನ್ನು ಕುಂಡಗಳಲ್ಲಿ ಊರಿ, ಸಸಿಗಳು ಸುಮಾರಾಗಿ ಬೆಳೆದ ಮೇಲೆ, ಕುಂಡವನ್ನು ಗುಣಿಗಳಲ್ಲಿ ಇರಿಸಿ, ಒಡೆದು ಮಣ್ಣು ತುಂಬಬೇಕು.

5. **ಹೆಸ್ಸರೆ (ಹೆಸ್ಸಾರಿ, ಕರಿ ಹೆಸ್ಸರೆ ಮರ)** *Miliusa tomentosa* (Roxb.) Sinclair.

ಇದು ಮಲೆನಾಡಿನ ಅಂಚು ಪ್ರದೇಶಗಳಲ್ಲಿ ಬೆಳೆಯುವ ಸೌದೆ ಮರ. ಅಲಂಕಾರಕ್ಕಾಗಿಯೂ, ಸಾಲು ಮರವಾಗಿಯೂ ಬೆಳೆಯಬಹುದು. ಒಳ ಮರ ಸುಮಾರು ಗಟ್ಟಿ. ತೂಕ ಶೇಗದಷ್ಟು : 0.028 ಘನಮೀಟರ್ – $20\frac{1}{2}$ ಕೆ.ಜಿ. (1 ಘನ ಅಡಿ – 45 ಪೌಂಡು) ತೂಗುತ್ತದೆ.

6. ಸುರಗಿ: (ಸುರ್ಗಿ, ಗರ್ದುಂಡಿ, ಪುಂಡಿ, ಗರ್ಗುಂಡಿ, ಪುನ್ನಾಗ, ಪುನೆ)
Mammea suriga (Buch.-Ham. ex Roxb.) Kosterm.

ಘಟ್ಟಗಳಲ್ಲಿ ದೊಡ್ಡ, ದಟ್ಟಕ್ಕೆ ಬೆಳೆಯುವ ನಿತ್ಯ ಹಸುರಿನ ಅಲಂಕಾರದ ಎಲೆಯ ಮರ. ಎಲೆ ಸುಮಾರು 20 ಸೆಂ. ಮೀ. (8 ಅಂಗುಲ) ಉದ್ದ, 7.5 ಸೆಂ. ಮೀ. (3 ಅಂಗುಲ) ಅಗಲ. ಅನುಕೂಲ ಸ್ಥಳಗಳಲ್ಲಿ ಈ ಮರ 18 ಮೀಟರ್ (60 ಅಡಿ) ಎತ್ತರಕ್ಕೆ ಬೆಳೆಯುತ್ತದೆ. ಸುರಗಿ ಹೂವಿನ ಪರಿಮಳ ಪ್ರಸಿದ್ಧಿ ಪಡೆದಿದೆ; ಬಹಳ ಸುವಾಸನೆ. ಗೊಂಚಲು ಗೊಂಚಲಾಗಿ, ಸಣ್ಣ ರೆಂಬೆಗ



ಚಿತ್ರ 4 : ಸುರಗಿ

ಳಿಂದ ಗುಲಾಬಿ ಬಣ್ಣದ ಅಥವಾ ಕೆಂಪು ಪಟ್ಟೆಯಿಂದ ಕೂಡಿದ ಬಿಳಿ ಹೂವುಗಳು ಬೇಸಿಗೆಯಲ್ಲಿ ಹೊಮ್ಮುತ್ತವೆ. ಸುರಗಿ ಹೂವು ನಮ್ಮ ಹೆಂಗಸರಿಗೆ ಹೇಗೆ ಆಕರ್ಷಕವೋ, ಜೇನುಗಳಿಗೆ ಅಷ್ಟೇ ಅಥವಾ ಅದಕ್ಕಿಂತ ಹೆಚ್ಚು ಆಕರ್ಷಕ. ಹೂವಿನ ಕಾಲದಲ್ಲಿ ಸಹಸ್ರಾರು ಜೇನುಗಳು ಸುರಗಿ ಹೂವುಗಳನ್ನು ಮುತ್ತುತ್ತವೆ. ಈ ಹೂವುಗಳನ್ನು ಮುಡಿಯುವುದಕ್ಕೆ ಅಲ್ಲದೆ, ಪೂಜೆಗೂ, ಸುಗಂಧ ತೈಲ ತೆಗೆಯುವು

ದಕ್ಕೂ ಬಳಸುತ್ತಾರೆ. ಒಣಗಿದ ಹೂವುಗಳಿಗೂ–ಗಿರಾಕಿ ಔಷಧಿಗಾಗಿ. ಇವರಿಂದ ಕೆಂಪು ನಾಗಕೇಸರಿ ಬಣ್ಣವನ್ನು ತಯಾರು ಮಾಡುತ್ತಾರೆ.

ಇವರ ಹಣ್ಣು ಕೂಡ ಅತ್ತರಿನ ವಾಸನೆ. ಕೆಲವರು ತಿನ್ನುತ್ತಾರಂತೆ. ಕಾಯಿನಲ್ಲಿ 1 ರಿಂದ 4 ಬೀಜಗಳಿರುತ್ತವೆ: ಜೂನ್–ಜುಲೈನಲ್ಲಿ ಬಲಿಯುತ್ತವೆ.

ಒಳ ಮರ ಕೆಂಪು, ಗಟ್ಟಿ. ಎಳೆ ಏಕಪ್ರಕಾರವಾಗಿರುತ್ತವೆ. ಸ್ವಲ್ಪ ಭಾರ; 0.028 ಘನ ಮೀಟರ್ (1 ಘನ ಅಡಿ) ಕಟ್ಟಿಗೆ 25–27 ಕೆ. ಜಿ. (55–60 ಪೌಂಡು) ತೂಗುತ್ತದೆ. ನಮ್ಮಲ್ಲಿ ಈ ಒಳಮರವನ್ನು, ಅಲ್ಪ ಸ್ವಲ್ಪ ಕಟ್ಟಡಗಳಿಗಾಗಿ, ಬಳಸುತ್ತಾರೆ. ಆದರೆ ಬರ್ಮಾ ಮುಂತಾದ ಕಡೆ, ಹಲಗೆಗಳಿಗೆ, ದೋಣಿಗಳಿಗೆ ಇದನ್ನು ಉಪಯೋಗಿಸುತ್ತಾರೆ.

ಬೀಜಗಳನ್ನು ಮಾವು ಮುಂತಾದ ಮರಗಳ ನೆರಳಿನಲ್ಲಿ, ಎಲೆಗೊಬ್ಬರ ಹಾಕಿರುವ ಮಡಿಗಳಲ್ಲಿ ಹಾಕಿ, 7.5—10 ಸೆಂ. ಮೀ. (3–4 ಅಂಗುಲ) ಎತ್ತರಕ್ಕೆ ಇರುವಾಗ ಕುಂಡಗಳಲ್ಲಿ ನೆಟ್ಟು ಮಾರನೆಯ ವರ್ಷ 9 ಮೀಟರ್ (30 ಅಡಿ) ಅಂತರದಲ್ಲಿ ಸಸಿಗಳನ್ನು ನೆಡಬೇಕು. ಗಟ್ಟಿಮುಟ್ಟಾದ ಮರವಾದುದರಿಂದ, ಯಾವ ಮಣ್ಣಿನಲ್ಲಾದರೂ ಸುಮಾರಾಗಿ ಬೆಳೆಯುತ್ತದೆ.

7. **ಸುರ ಹೊನ್ನೆ :** (ಪಿನ್ನೆಕಾಯಿ, ಪುನ್ನಾಗ, ಸುರಾಬು, ಹೂಹೊನ್ನೆ, ಉಮ.) *Calophyllum ionophyllum* Linn.

ಇದು ಮಲೆನಾಡಿನಲ್ಲಿ ಹೆಚ್ಚಾಗಿ ಬೆಳೆದರೂ, ನಮ್ಮ ರಾಜ್ಯದ ಇತರ ಕಡೆಗಳಲ್ಲೂ ಬೆಳೆಯುತ್ತದೆ: ಸಾಲು ಮರವಾಗಿ ಬೆಳೆಸುತ್ತಿದ್ದಾರೆ.

ಇದು ಅಷ್ಟು ಎತ್ತರದ ಮರವಲ್ಲ. ಆದರೆ ಮಲೆನಾಡಿನಲ್ಲಿ ಹೆಮ್ಮರವಾಗಿ ಬೆಳೆಯುತ್ತದೆ. ಸಮುದ್ರಕರೆಯ ಕೆಲವೆಡೆ 36½ ಮೀಟರ್ (120 ಅಡಿ) ಎತ್ತರಕ್ಕೆ 1.2 ಮೀಟರ್ (4 ಅಡಿ) ದಪ್ಪಕ್ಕೆ ಬೆಳೆದಿದೆಯಂತೆ. ಇದು ನಿತ್ಯ ಹಸುರಿನ ಮರ. ಕಾಂಡ ನೇರ. ತೊಗಟೆ ಹಳದಿ – ಸೀಳಿರುತ್ತದೆ. ಎಲೆ ನಯ; 10–20 ಸೆಂ. ಮೀ. (4–8 ಅಂಗುಲ) ಉದ್ದ; ದಪ್ಪ; ಅಚ್ಚ ಹಸುರು; ಎದುರುಬದುರು. ಎಲೆ ಕಂಕಳಿನಿಂದ ಒಳ್ಳೆಯ ಪರಿಮಳದಿಂದ ಕೂಡಿದ ಬಿಳಿಯ ಹೂವುಗಳು, ಸಣ್ಣ ಗುಂಪು ಗುಂಪಾಗಿ, ಮಳೆಗಾಲದಲ್ಲಿ ಹೊಮ್ಮುತ್ತವೆ. ಚಳಿಗಾಲದ ಆದಿಯಲ್ಲೂ ಹೂವು ಬರುವುದುಂಟು.

ಇದರ ಕಾಯಿ ಮೊದಲು ಹಸುರು; ಆಮೇಲೆ ಹಳದಿ; ದುಂಡು; ಹಕ್ಕಿಗಳಿಗೆ ಪ್ರಿಯ.

ಇದರ ಕಾಳಿನಿಂದ ರಾಳದ ಅಂಟು ಬರುತ್ತದೆ. ಇದಕ್ಕೂ ಗಿರಾಕಿ ಇದೆ.

ಬೀಜದಿಂದ ಪರಿಮಳಯುಕ್ತ ಹಸುರು ಎಣ್ಣೆ ಹಿಂಡುತ್ತಾರೆ. ಇದನ್ನು ಪಿನ್ನೆ ಎಣ್ಣೆ ಎನ್ನುತ್ತಾರೆ. ಇದನ್ನು ದೀಪಗಳಲ್ಲಿ ಉರಿಸಬಹುದು. ಚೆನ್ನಾಗಿ ಉರಿಯುತ್ತದೆ. ಔಷಧಿಯಾಗಿಯೂ ಬಳಸುತ್ತಾರೆ – ಕಜ್ಜಿಗೆ, ಕುಷ್ಠರೋಗಿಗಳ ಹುಣ್ಣಿಗೆ;



ಚಿತ್ರ 5 : ಸುರಹೊನ್ನೆ

ಕೀಲು ರೋಗಗಳಿಗೂ ಹಚ್ಚುತ್ತಾರೆ ; ದನಗಳ ಗೊರಸಿನ ಹುಣ್ಣಿಗೂ ಬಳಿಯುತ್ತಾರೆ. ತೊಗಟೆ, ಎಲೆಗಳೂ ಔಷಧಿಗಾಗಿ ಒದಗುತ್ತವೆ. ಎಣ್ಣೆಯಿಂದ ಸಾಬೂನು ತಯಾರು ಮಾಡಬಹುದು.

ಇದರ ಒಳ ಮರ ಕೆಂಪು ಕಂದು. ಎಳೆಗಳು ಒತ್ತು. ಸುಮಾರು ಬಾಳಿಕೆ. ತೇಗಕ್ಕಿಂತ ಹಗುರ–0.028 ಘನ ಮೀಟರ್ (ಒಂದು ಘನ ಅಡಿ) ಸುಮಾರು 19 ಕೆ. ಜಿ. (42 ಪೌಂಡು) ತೂಗುತ್ತದೆ ಒಳಮರವನ್ನು ರೈಲ್ವೆ ಸ್ಲೀಪರುಗಳಿಗೆ, ಹಡಗು ದೋಣಿಗಳಿಗೆ ಬಳಸುತ್ತಾರೆ ; ಪೀಠೋಪಾಸನಗಳಿಗೂ ಅನುಕೂಲ ; ಪ್ಲೈವುಡ್ ಮಾಡಲೂ ಸೂಕ್ತ.

ಇದರ ಬೀಜ ಬೇಗ ಪೊಳೆಯುತ್ತದೆ. 6 ಮೀಟರ್ (20 ಅಡಿ) ಅಂತರಕ್ಕೆ ಬೀಜವನ್ನು ಊರಿ ಬೆಳೆಸಬಹುದು.

8. **ನಾಗಸಂಪಿಗೆ :** (ನಾಗ ಕೇಸರಿ, ನಾಗಚಂಪ) *Mesua ferrea* Linn.

ಇದರ ಒಳಮರ ಭಾರ; ತೇಗದ ಒಂದೂವರೆಯಷ್ಟು. 0.028 ಘನ ಮೀಟರ್ (ಒಂದು ಘನ ಅಡಿ) ಮರದ ತೂಕ 32 ಕೆ.ಜಿ. (70 ಪೌಂಡು). ಇದು ಬಹಳ ಗಟ್ಟಿ. ಈ ಕಾರಣದಿಂದ ಇದನ್ನು ಕಬ್ಬಿಣದ ಮರವೆನ್ನುತ್ತಾರೆ.

ಕಬ್ಬಿಣದ ಮರವೆಂದು ಕರೆಸಿಕೊಂಡರೂ, ಇದು ಬಹಳ ಅಂದವಾದ ಮರ. ಜೋತುಬಿದ್ದಿರುವ ಸುಮಾರು 15 ಸೆಂ. ಮೀ. (ಅರ್ಧ ಅಡಿ) ಉದ್ದದ ಎಲೆಗಳು, ಅಚ್ಚ ಬಿಳಿಯ ಹೂವುಗಳು, ಒಳ್ಳೆಯ ಪರಿಮಳ. ಹೂವಿನ ಕೇಸರವೂ ಗಂಧ ಯುಕ್ತ. ತಲೆದಿಂಬು ಅರಳೆಯಲ್ಲಿ ಬೆರೆಸುತ್ತಾರೆ. ಜನವರಿ – ಏಪ್ರಿಲ್‌ನಲ್ಲಿ ಹೂವು. ಅಕ್ಟೋಬರ್‌ನಿಂದ ಮಾರ್ಚಿಯ ತನಕ ಹಣ್ಣು. ಈ ಹಣ್ಣನ್ನು ಕೆಲವರು ತಿನ್ನುತ್ತಾರೆ. ಇದರ ಬೀಜದಿಂದ ಎಣ್ಣೆ ತೆಗೆಯಬಹುದು. ಇದನ್ನು ಈಚೆಗೆ ವ್ಯಾಸಾಬೂನುಗಳಲ್ಲಿ ಸೇರಿಸುತ್ತಿದ್ದಾರೆ. ಈ ಎಣ್ಣೆ ಔಷಧಿಗೂ ಒದಗುತ್ತದೆ. ಹೂವಿನಿಂದ ಅತ್ತರು ಮಾಡಬಹುದು.

ಇದು ಮುಖ್ಯವಾಗಿ ಮಲೆನಾಡಿನ ಮರ. ಅಲ್ಲಿ 12 ಮೀಟರ್ – 30 ಮೀಟರ್ (40–100 ಅಡಿ) ಎತ್ತರಕ್ಕೆ ಬೆಳೆಯುತ್ತದೆ. ತೊಗಟೆ ತಿಳಿ ಕಂದು ಬಣ್ಣ.

ಇದರ ಒಳ ಮರ ಬಹಳ ಗಟ್ಟಿಯಾಗಿರುವುದರಿಂದ, ಬಡಗಿಗಳಿಗೆ ಹೆಚ್ಚು ಪ್ರಯಾಸದ ಮರವಾದುದರಿಂದ, ನಮ್ಮ ರಾಜ್ಯದಲ್ಲಿ ಇದನ್ನು ಕಟ್ಟಡಗಳಲ್ಲಿ ಉಪಯೋಗಿಸುವುದಿಲ್ಲ. ಅಲ್ಲದೆ. ಮರ ನಾಗರಹಾವನ್ನು ಆಕರ್ಷಿಸುತ್ತದೆಂಬ ನಂಬಿಕೆ ಬೇರೆ. ಆದರೆ, ಬೇರೆಡೆ ಇದನ್ನು ಕಟ್ಟಡಗಳಿಗೂ ಬಳಸುತ್ತಾರೆ. ಈ ಮರದಿಂದ ಒಳ್ಳೆ ತೊಲೆಗಳಾಗುತ್ತವೆ. ಒಳ ಮರ ಸ್ವಲ್ಪ ಕೆಂಪಿನ ಮೇಲೆ ಇರುತ್ತದೆ. ಭಾರದಿಂದ ನೀರಿನಲ್ಲಿ ಮುಳುಗುತ್ತದೆ.

ಈ ಮರವನ್ನು ರೈಲ್ವೆ ಸ್ಲೀಪರುಗಳಿಗೆ, ಮರದ ಸೇತುವೆಗಳಿಗೆ ಮತ್ತು ಇತರ ಮರಾಮತ್ತು ಉದ್ದೇಶಗಳಿಗೆ ಬಳಸುತ್ತಾರೆ. ಎಳೆಯ ಮರದಿಂದ ಬಹಳ ಉತ್ತಮವಾದ ಚಿತ್ರಗಳನ್ನು ತಯಾರು ಮಾಡುತ್ತಾರೆ. ಕೊಟ್ಟಿಗಾಕೂ ಅನುಕೂಲ.

ಈ ಮರದ ಬಗ್ಗೆ ಮತ್ತೊಂದು ಬುಡವಿಲ್ಲದ ನಂಬಿಕೆ ಇದೆ. ಇದರ ಹೂವನ್ನು ಮೂಸಿ ನೋಡಿದರೆ ಮೂಗು ಹುಣ್ಣಾಗುತ್ತದೆ ಎಂದು. ಈ ಮರ ಬಲ್ಲಗಿ, ಸುರಹೊನ್ನೆ, ಕುಪೆ, ಸುರಗಿ ಮುಂತಾದ ಮರಗಳ ನಂಟು.

ಈ ಮರವನ್ನು, ಬೀಜಗಳನ್ನು ಊರಿ, ಸುಲಭವಾಗಿ ಬೆಳೆಸಬಹುದು.



ಚಿತ್ರ 6 : ನಾಗಸಂಪಿಗೆ

9. **ಕಿರಲ್ ಬೋಗಿ :** (ಬೋವು ಮರ, ಪಿರಿ ಬೋಗಿ, ಕರ್ಮರ, ಕಲ್‌ಬಾನೆ, ಸಣ್ಣೆಲೆ ಬೋಗಿ, ತಿರ್ಪು ಬೋವಿಗೆ) *Hopea parviflora* Bedd.

ಇದು ಪಶ್ಚಿಮ ಘಟ್ಟದ ನಿತ್ಯ ಹಸುರಿನ ಮರ. ಅಲ್ಲಿ ಇದು ಹೆಮ್ಮರ. ಅವರಲ್ಲಿಯೂ ದಕ್ಷಿಣ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಘನವಾಗಿ ಬೆಳೆಯುತ್ತದೆ. ಅನುಕೂಲವಾದ ಪರಿಸ್ಥಿತಿಗಳಲ್ಲಿ, ಘಟ್ಟಗಳಲ್ಲಿ, ಸುಮಾರು 36 ಮೀಟರ್ (120 ಅಡಿ) ಎತ್ತರಕ್ಕೂ ಬೆಳೆದಿರುತ್ತವೆ.

ಇದನ್ನು, ದಕ್ಷಿಣ ಕನ್ನಡ ಜಿಲ್ಲೆಯ ದೇವಸ್ಥಾನಗಳಲ್ಲಿ ಬೆಳೆಸಿದ್ದಾರೆ.

ಇದು ಬಯಲು ಸೀಮೆಗಳಲ್ಲಿ ಬೆಳೆಯುವುದಿಲ್ಲ. ಇದಕ್ಕೆ ಮಲೆನಾಡಿನ ಜಂಬಿಟ್ಟಿಗೆ ಮಣ್ಣು ಒಪ್ಪು.

ಮನೆ ಕಟ್ಟಡಗಳಿಗೆ, ದೋಣಿಗಳಿಗೆ, ರೈಲ್ವೆ ಸ್ಲೀಪರುಗಳಿಗೆ ಬಹಳ ಒಪ್ಪಾದ ಮರ. ಇದನ್ನು ಈಚೆಗೆ ವಿದ್ಯುಚ್ಛಕ್ತಿ ಕಂಬಗಳಿಗಾಗಿಯೂ ಬಳಸುತ್ತಿದ್ದಾರೆ; ಮಲೆನಾಡಿನ ಗಾಡಿಗಳಿಗೆ ಬಹಳ ಸೂಕ್ತ.

ಈ ಮರದ ತೊಗಟೆ ಒರಟು. ಹೂವು ಹಳದಿ, ಬಿಳುಪು ; ಸುವಾಸನೆ. ಕಾಯಿಗಳಿಗೆ ರೆಕ್ಕೆ ಇದೆ.

ಇದರ ಒಳ ಮರ ಕೆಂಪು ಕಂದು. ಸುಮಾರು ಭಾರ ; 0.028 ಘನ ಮೀಟರ್(ಒಂದು ಘನ ಅಡಿ)ಗೆ ಸುಮಾರು 28 ಕೆ. ಜಿ. (62 ಪೌಂಡು) ತೂಗುತ್ತದೆ) ಗಟ್ಟಿ ಮರ ; ಬಾಳಿಕೆ ಹೆಚ್ಚು. ಗಣಿ ಕೆಲಸಕ್ಕೆ ಒಪ್ಪು. ಕೋಲಾರದ ಚಿನ್ನದ ಗಣಿಯಲ್ಲಿ ಇದನ್ನು ಊರುಕಂಬಗಳಿಗಾಗಿ ಬಳಸುತ್ತಿದ್ದಾರೆ.

ಇದು, ಶಾಲ ವೃಕ್ಷ, ಜಾಲಾರಿ ಮುಂತಾದ ಮರಗಳ ನಂಟು.

10. **ಬೂರುಗ :** (ಕೆಂಪು ಬೂರುಗ; ಶಾಲ್ಮಲಿ) *Bombax ceiba* Linn.

ಈ ಮರ ಅನೇಕ ಪ್ರದೇಶಗಳಲ್ಲಿ, ಅನೇಕ ಬಗೆಯ ಮಣ್ಣುಗಳಲ್ಲಿ ಬೆಳೆಯುತ್ತದೆ. ಸುಮಾರು ಮಳೆ ಬೀಳುವ ಕಡೆಗಳಲ್ಲಿಯೂ ಹೆಚ್ಚು ಮಳೆ ಇರುವ ಕಡೆಗಳಲ್ಲಿಯೂ ಇದನ್ನು ಕಾಣಬಹುದು. ಗುಡ್ಡದ ಇಳುಕಲುಗಳಲ್ಲೂ, ಶುಷ್ಕ ಪ್ರದೇಶಗಳಲ್ಲೂ, ನದಿದಂಡೆಗಳಲ್ಲೂ, ಮಟ್ಟಪಾದ ಮೆಕ್ಕಲು ಮಣ್ಣುಗಳಲ್ಲೂ, ನೀರು ಚೆನ್ನಾಗಿ ಬಸಿಯುವ ಕಡೆಯೂ ಬೆಳೆಯುವುದುಂಟು. ಆದರೆ, ತೇವ ಮತ್ತು ಉಷ್ಣ ಹೆಚ್ಚಾಗಿರುವ ಕಡೆ ಚೆನ್ನಾಗಿ ಬೆಳೆಯುತ್ತದೆ. ಮಲೆನಾಡಿನ ಕೆಲವೆಡೆ ಇದು ಬಹಳ ಘನವಾಗಿ, ಎತ್ತರಕ್ಕೆ, ದಪ್ಪಗೆ ಬೆಳೆದಿರುತ್ತದೆ.

ಇದು ನೇರವಾಗಿ ಬೆಳೆಯುವ ಮರ. ರೆಂಬೆಗಳು ಅಡ್ಡಕ್ಕೆ, ಹರಡುತ್ತವೆ. ಎಲೆ ಕೆಲಕಾಲ ಉದುರಿ ಮರ ಬೆತ್ತಲೆಯಾಗುತ್ತದೆ. ಅನಂತರ ಡಿಸೆಂಬರಿನಲ್ಲಿ ದುಂಡಿನ ಅಚ್ಚ ಕಂದು ಹೂ ಮೊಗ್ಗುಗಳು ಕಾಣಿಸಿಕೊಂಡು ಜನವರಿ, ಫೆಬ್ರುವರಿಯಲ್ಲಿ ಬಿರಿದು ಮರದ ತುಂಬ ಎದ್ದು ಕಾಣುವ ಅಚ್ಚಕೆಂಪು ಹೂಗಳಿಂದ ಬೆರಗುಗೊಳಿಸುತ್ತದೆ. ಹೂವಿನಿಂದ ತುಂಬಿದ ಮರ ನೋಡಲು ಬಹಳ ಚೆಂದ; ಕೆಂಪುಜ್ವಾಲೆಯಂತಿರುತ್ತದೆ.

ಇದರ ಕಾಯಿ ಮಾರ್ಚ್ – ಮೇ ತಿಂಗಳುಗಳಲ್ಲಿ ಬಲಿಯುತ್ತದೆ. ಇದರ ರೇಶ್ಮೆ ಆವೃತ ಬೀಜಗಳನ್ನು ಕೂಡಿಡಲು, ಬಲಿತ ಕಾಯಿಗಳನ್ನು, ಅವು ಬಿರಿಯಲು ಶುರುವಾದಾಗ ಉದುರಿಸಿಕೊಳ್ಳಬೇಕು. ಇಲ್ಲದಿದ್ದರೆ, ಮರದ ಮೇಲೇ ಕಾಯಿ ಸಿಡಿದು ಬೀಜ – ರೇಶ್ಮೆ ಗಾಳಿಯಲ್ಲಿ ತೂರಿ ಚೆಲ್ಲಾಪಿಲ್ಲಿಯಾಗುತ್ತವೆ.

ಈ ಮರ ಎಳೆಯದಾಗಿದ್ದಾಗ, ಕಾಂಡ ಮತ್ತು ರೆಂಬೆಗಳ ಮೇಲೆ ಮೊನಚಾದ ಮುಳ್ಳುಗಳಿರುತ್ತವೆ. ಹಳೆಯ ಮರಗಳಲ್ಲಿ ಈ ಮುಳ್ಳುಗಳು ವಿರಳ; ದೂರ ದೂರಕ್ಕಿರುತ್ತವೆ. ದಿಂಡಿನ ಬುಡದಲ್ಲಿ ಮರಕ್ಕೆ ಊರೆ ಕೊಡಲು ಆನಿಕೆಗಳಿರುತ್ತವೆ. ಕೆಲವು ಹೆಮ್ಮರಗಳಲ್ಲಿ ಆನಿಕೆ ಬಹಳ ಭಾರಿ.



ಚಿತ್ರ 7: ಬೂರುಗ

ಇದು ಬಹಳ ಉಪಯುಕ್ತವಾದ ಮರ.

ಇದರ ಮೊಗ್ಗುಗಳನ್ನು ತರಕಾರಿಯಾಗಿ ಬಳಸಬಹುದು. ಇದರ ರೇಶ್ಮೆ, ದಿಂಬು ಮೆತ್ತೆಗಳನ್ನು ತುಂಬುವುದಕ್ಕೆ ಒಪ್ಪು. ಇದರ ಬೇರು, ಕಾಂಡದ ಗೋಂದು, ಔಷಧಿಗೆ ಒದಗುತ್ತದೆ.

ಇವರ ಒಳಮರ ಹಗುರ, ಮೃದು, ಬಿಳಪು; ಹೆಚ್ಚು ಬಾಳಿಕೆಯಿಲ್ಲ. ಬೇಗ ಗೆದ್ದಲು ಹಿಡಿಯುತ್ತದೆ. ಆದರೆ, ಈ ಮರ ನೀರಿನಲ್ಲಿ ಬಾಳಬಲ್ಲದು. ಆದುದರಿಂದ ಬಾವಿಗಳಿಗೆ ಅನುಕೂಲ. ಇದನ್ನು ಹಲಗೆಗೆ ಕೊಯ್ಯಬಹುದು. ಟೀ ಮುಂತಾದುವನ್ನು ಸಾಗಾಟಕ್ಕೆ ತುಂಬಲು ಇದರ ಪೆಟ್ಟಿಗೆಗಳು ಅನುಕೂಲ. ಆದರೆ ಈ ಮರದ ಮುಖ್ಯ ಉಪಯೋಗ ಬೆಂಕಿಕಡ್ಡಿ, ಕಡ್ಡಿಪೊಟ್ಟಣಗಳನ್ನು ಮಾಡುವುದಕ್ಕೆ. ಆಟದ ಸಾಮಾನು ಗಳನ್ನೂ ಮಾಡುತ್ತಾರೆ.

ಇದನ್ನು ಬೆಳೆಸಲು, ಬೀಜಗಳನ್ನು, ಬೆಳೆಸಬೇಕಾದೆಡೆಯೇ, ಊರಬೇಕು. ಸಸಿಗ ಗಳನ್ನು ಕಿತ್ತು ನೆಡಬಾರದು. ಒಂದೊಂದು ಗುಣಿಯಲ್ಲಿ 4 ರಿಂದ 6 ಬೀಜಗಳನ್ನು ಬಿತ್ತಬೇಕು. ಒಂದೆರಡು ತಿಂಗಳ ನಂತರ ಕಸುವಿನಿಂದ ಬೆಳೆಯುತ್ತಿರುವ ಸಸಿಯನ್ನು ಉಳಿಸಿಕೊಂಡು ಉಳಿದವನ್ನು ಕಿತ್ತುಹಾಕಬೇಕು. ಗುಣಿಯಲ್ಲಿ ಎರಡು ತಡವೆ ಯಾವರೂ ಕಳೆಗಳನ್ನು ಕೀಳಬೇಕು.



ಚಿತ್ರ 8: ಹಳದಿ ಬೂರುಗ


ಈ ಮರವನ್ನು ಸಾಲು ಮರವಾಗಿ ಬೆಳೆಸಬಾರದು. ಬಿರುಗಾಳಿಯಲ್ಲಿ ಬೀಳುವ ಸಂಭವ ಹೆಚ್ಚು.

ಈ ಮರದ ಹೂವು ಕೆಂಪಗೆ ಇರುವುದರಿಂದ ಇದನ್ನು **ಕೆಂಪು ಬೂರುಗವೆನ್ನು**ತ್ತಾರೆ. ಕಪೋಕ್ ಇದರ ನಂಟ. ಇದು ಬಿಳಿಯ ಹೂವು ಬಿಡುವುದರಿಂದ ಅದನ್ನು ಬಿಳಿ ಬೂರುಗವೆನ್ನುತ್ತಾರೆ. ಮರದ ರೂಪಕ್ಕೆ 60 ನೆಯ ಚಿತ್ರ ನೋಡಿ.

10. **ಹಳದಿಬೂರಗ** *(Cochlosperemum gossypium)*.
ಇದು ಹಳದಿ ಹೂವು ಬಿಡುತ್ತದೆ. ನೋಡಿ, ಚಿತ್ರ 8.

11. **ಬಿಳಿ ಬೂರುಗ. ಬಿಳೀ ಬರ್‍ಲು** *Ceiba pentandra* (Linn) Gaertn.

ಇದು ಜಾವಾ ದ್ವೀಪದ ಬೂರುಗ. ಈ ದೇಶವಲ್ಲಿ ಇವರ ರೇಷ್ಮೆಯನ್ನು, ಕಪೋಕ್ ಎಂಬ ಹೆಸರಿನಿಂದ ಹೊರದೇಶಗಳಿಗೆ ರಫ್ತು ಮಾಡುತ್ತಾರೆ. ಇದನ್ನು ನಮ್ಮ ದೇಶದಲ್ಲಿ ಅಲ್ಲಲ್ಲಿ, ಗುಡಿಗಳ ಹತ್ತಿರ, ಮನೆ ಕಾಂಪೌಂಡುಗಳಲ್ಲಿ ಬೆಳೆಸುತ್ತಿದ್ದಾರೆ.



ಚಿತ್ರ : 9. ಬಿಳಿಬೂರಗ

ಇದರ ಎಲೆ ಕೆಂಪು ಬೂರುಗಕ್ಕಿಂತ ಸಣ್ಣದು. ಆನಿಕೆ ಕಡಿಮೆ. ರೆಂಬೆ ಅಷ್ಟಕ್ಕೆ ಬೆಳೆದರೂ ಅಷ್ಟು ಹರವು ಇರುವುದಿಲ್ಲ. ಎಳೆಯ ಗಿಡಗಳ ಮೇಲೆ ಮುಳ್ಳು ಜಾಸ್ತಿ. ಬಿಳಿಯ ಹೂವು. ಕೆಂಪು ಬೂರುಗಕ್ಕಿಂತ ಚಿಕ್ಕದು. ಡಿಸೆಂಬರ್, ಜನವರಿ ಯಲ್ಲಿ ಹೂವು.

ಇದರ ಒಳಮರ ಹೆಚ್ಚು ಉಪಯೋಗಕ್ಕೆ ಬರುವುದಿಲ್ಲ. ಮೃದು. ಬೇಗ ಹುಳು ಹೊಡೆಯುತ್ತದೆ. ಹಗುರ; 0.028 ಘನ ಮೀಟರ್ (1 ಘನ ಅಡಿ) ಸುಮಾರು 13 ಕೆ. ಜಿ. (28 ಪೌಂಡು) ತೂಗುತ್ತದೆ. ಬೊಂಬೆಗಳಿಗೆ ಅನುಕೂಲ.

ಇದರ ರೇಶ್ಮೆ ನವುರು. ಸ್ಥಿತಿಸ್ಥಾಪಕತ್ವ ಹೆಚ್ಚು. ಆದುದರಿಂದ ದಿಂಬಿಗೆ ಮುಂತಾದವುಗಳಿಗೆ ಒಪ್ಪು.

ಇದನ್ನು ಕೆಂಪು ಬೂರುಗದಂತೇ ಬೆಳೆಸಬೇಕು. ಆದರೆ ಅಷ್ಟು ದೂರಕ್ಕೆ ಗುಣಿ ಹಾಕಬೇಕಿಲ್ಲ.

12. **ಹೂವರಸಿ :** (ಜೋಗಿಯರಳಿ, ಬುಗುರಿ, ಆಶ, ಹೂವರ್ಸಿ, ಹೂವ ರಾಸಿ. ಕಂಡಸೋಲ) *Thespesia populnea* (Linn.) Soland. ex Corr.

ಇದು ಕರೆನಾಡಿ(ಕರಾವಳಿ ಪ್ರದೇಶ)ನಲ್ಲಿ ಕಾಡುಕಾಡಾಗಿ ಬೆಳೆಯುತ್ತದೆ. ಸಾಮಾನ್ಯವಾಗಿ ಈ ಮರ ಸಮುದ್ರದ ಕರೆಗಳಲ್ಲಿ ಚೆನ್ನಾಗಿ ಬೆಳೆದರೂ ನಮ್ಮ ರಾಜ್ಯದ ಇತರ ಕಡೆಗಳಲ್ಲೂ ಇದನ್ನು ಬೆಳೆಸಬಹುದು; ಬೆಳೆಸುತ್ತಿದ್ದಾರೆ. ಇದಕ್ಕೆ ಜಿಗುಟಿಲ್ಲದ, ಚೆನ್ನಾಗಿ ನೀರು ಬಸಿಯುವ, ಮಣ್ಣು ಒಪ್ಪು.

ಇದು ಸುಮಾರು ಗಾತ್ರದ, ಎತ್ತರದ ಮರ; 12–14 ಮೀಟರ್ (30–35 ಅಡಿ) ಎತ್ತರಕ್ಕೆ ಬೆಳೆಯುತ್ತದೆ. ನಿತ್ಯ ಹಸುರು. ಒತ್ತಾಗಿ, ಅಗಲವಾಗಿ, ಬೆಳೆ ಯುವ ಹೊಳಪಿನ ಎಲೆಗಳು. ವಸಂತ ಕಾಲಕ್ಕೆ ಮುಂಚೆ ಈ ಎಲೆಗಳು ಹಳದಿಗೆ ತಿರುಗುತ್ತವೆ. ಇದರ ತಾಳು ನುಣುಪು; ಬೂದು ಬಣ್ಣ. ನೆತ್ತಿ ಕೊಡೆಯಂತೆ ಹರಡಿಕೊಂಡು ಒತ್ತಾಗಿರುತ್ತದೆ. ಸಾಮಾನ್ಯವಾಗಿ ವರ್ಷದ ಸದಾಕಾಲದಲ್ಲೂ, ತೆಳು ಹಳದಿಯ ಹೂವುಗಳು ಅಲಂಕಾರವಾಗಿರುತ್ತವೆ. ಈ ಹೂವುಗಳು ಟ್ಯೂಲಿಪನ್ನು ಹೋಲುವುದರಿಂದ ಇದನ್ನು ಇಂಗ್ಲೀಷಿನಲ್ಲಿ ಭಾರತದ ಟ್ಯೂಲಿಪ್ ಮರವೆನ್ನುತ್ತಾರೆ. ನಿತ್ಯ ಹಸುರು, ಕೊಡೆ ನೆತ್ತಿ, ಹೊಳಪು ಎಲೆ, ಮನೋಹರವಾದ ಹೂವು ಬಿಡುವ ಈ ಮರ ಸಾಲುಮರಗಳಾಗಿ ಬೆಳೆಸಲು, ಮನೆಯ ಮುಂದೆ ಅಲಂಕಾರದ ಮರವಾಗಿ ಬೆಳೆಸಲು ಒಪ್ಪು.

ಇದರ ಒಳ ಮರ ಗಟ್ಟಿ. ಒಳ್ಳೆಯ ಎಳೆಗಳು. ಬಂದೂಕದ ಹಿಡಿಗಳಿಗೆ ಒಪ್ಪು. ತೇಗಕ್ಕಿಂತ ಸ್ವಲ್ಪ ಭಾರ; 0.028 ಘನ ಮೀಟರ್ (1 ಘನ ಅಡಿ) ಸುಮಾರು 22 ಕೆ. ಜಿ. (50 ಪೌಂಡು) ತೂಗುತ್ತದೆ. ಬಾಳಿಕೆಯ ಮರ. ಆದು ದರಿಂದ ದೋಣಿಗಳಿಗೆ, ಚಕ್ರದ ಆರೆಕಾಲುಗಳಿಗೆ, ಬಂಡಿ ಭಾಗಗಳಿಗೆ ಅನುಕೂಲ.

ಇದರ ತೊಗಟೆಯಿಂದ ನಾರನ್ನು ತೆಗೆಯಬಹುದು. ಕೆಲವು ದೇಶಗಳಲ್ಲಿ ಈ ನಾರನ್ನು ನಮ್ಮ ಗೋಣಿಯಂತೆ ಬಳಸುತ್ತಾರೆ. ಹೂವು, ಮರ, ಚಕ್ಕೆ ಔಷಧಿ. ಬೀಜಗಳಿಂದ ದೀಪದ ಎಣ್ಣೆಯನ್ನು ಹಿಂಡಬಹುದು. ಹೂವಿನಿಂದ ಹಳದಿ ಬಣ್ಣ ತೆಗೆಯ ಬಹುದು.




ಚಿತ್ರ : 10. ಹೂವರಸಿ

ಇದನ್ನು ಬೀಜಗಳಿಂದಾಗಲೀ, ಬೇರು ಬಿಡಿಸಿದ ತುಂಡುಗಳಿಂದಾಗಲೀ ಬೆಳೆಸ ಬಹುದು. ಬೀಜದಿಂದ ಬೆಳೆದ ಮರದ ತಾಳಿನಲ್ಲಿ ಗಂಟುಗಳಿರುವುದಿಲ್ಲ. ದೊಡ್ಡ ತುಂಡು ನೆಟ್ಟು ಬೆಳೆಸಿದ ಮರದಲ್ಲಿ ಗಂಟು ಜಾಸ್ತಿ. ಇದು ಬಹಳ ಕಾಲ ಬಾಳುವು ದಿಲ್ಲ ; ಕೊಳೆಯಬಹುದು. 30 ಸೆಂ. ಮೀ. (ಒಂದು ಅಡಿ) ಎತ್ತರದ ಸಸಿಗಳನ್ನು 10.5–12 ಮೀಟರ್ (35–41 ಅಡಿ) ಅಂತರದಲ್ಲಿ ನೆಟ್ಟು ಬೆಳೆಸುವುದು ಒಳ್ಳೆ ಯದು. ಇದು ಬೇಗ ಬೆಳೆಯುವ ಮರ.

ಇದರ ಅಲಂಕಾರ ಮತ್ತು ಉಪಯೋಗಗಳಿಂದಾಗಿ, ನಮ್ಮ ದೇಶದ ಈ ಮರವನ್ನು ಬೇರೆ ದೇಶಗಳಲ್ಲೂ ಬೆಳೆಸುತ್ತಿದ್ದಾರೆ.

13. ರುದ್ರಾಕ್ಷಿ : (ಭದ್ರಾಕ್ಷಿ, ಜೇನುಮರ) *Guazuma ulmifolia* Lamk.

ಇದು ನಮ್ಮ ದೇಶದ ಮರವಲ್ಲ. ಮಧ್ಯ ಅಮೆರಿಕದ್ದು. ಆದರೂ ನಮ್ಮ ರಾಜ್ಯದಲ್ಲಿ ತವರು ಮಾಡಿಕೊಂಡಿದೆ. ಇದು ರೈತರಿಗೆ ಉಪಯುಕ್ತವಾದ ಮರ. ಇದರ ಎಲೆ ಮತ್ತು ಹಣ್ಣುಗಳು ದನಗಳಿಗೆ ಬಹಳ ಇಷ್ಟ. ಮೇವಿಗಾಗಿ ಈ ಮರವನ್ನೂ, ಮುಳಿ ಮರವನ್ನೂ ಹಾಗೂ ಅತ್ತಿ ಮರವನ್ನೂ ತೋಪುಗಳಲ್ಲಿ ಬೆಳೆಸಿದಲ್ಲಿ ನಮ್ಮ ದನಗಳ ಮೇವಿನ ಕೊರತೆ ಬಹುಮಟ್ಟಿಗೆ ನಿವಾರಣೆಯಾಗುತ್ತದೆ.



ಚಿತ್ರ : 11. ರುದ್ರಾಕ್ಷಿ

ಈ ಮರ ನಮ್ಮ ರಾಜ್ಯದ ಅನೇಕ ಕಡೆ ಬೆಳೆಯುತ್ತಿದೆ. ಮೈಸೂರು ಬೆಂಗಳೂರಿನ ಕಡೆ ಹೆಚ್ಚು. ಇದು ಸುಮಾರು ಗಾತ್ರದ, ಎತ್ತರದ ಮರ. 9 – 10.5 ಮೀಟರ್ (30 – 35 ಅಡಿ) ಎತ್ತರಕ್ಕೆ ಬೆಳೆಯುತ್ತದೆ. ಎಲೆಯ ಮೇಲೆ ತುಪ್ಪಳವಿರುತ್ತದೆ. ತುದಿ ಚೂಪು. ಎಲೆ 5.0 – 12.5 ಸೆಂ.ಮೀ. (2 – 5 ಅಂಗುಲ) ಉದ್ದ. ಏಪ್ರಿಲ್, ಮೇ ತಿಂಗಳುಗಳಲ್ಲಿ ಹೂವು ; ಹೂವು ಹಳದಿ ;

ಗೊಂಚಲಾಗಿ ಬಿಡುತ್ತದೆ. ಕಾಯಿ ಕಪ್ಪುಕಂದು ; ಸುಕ್ಕು ಮೈ. ಹಣ್ಣು ಮುಂದಿನ ಹೂವಿನ ಕಾಲದ ತನಕ ಮರದ ಮೇಲೆ ಇರುತ್ತದೆ. ಕೆಲವೆಡೆ ವರ್ಷಕ್ಕೆ ಎರಡು ಬಾರಿ ಹೂವು – ಎರಡನೆಯ ಹೊಮ್ಮಿಕೆ ಅಕ್ಟೋಬರಿನಲ್ಲಿ. ಎಲೆ ಉದುರುತ್ತದೆ. ಫೆಬ್ರುವರಿ, ಮಾರ್ಚಿಯಲ್ಲಿ ಹೊಸ ಎಲೆ. ಹಣ್ಣಿನ ತಿರಳು ಸಿಹಿ, ಅಂಟು.

ತೊಗಟೆಯಿಂದ ಕಷಾಯ ಮಾಡುತ್ತಾರೆ. ಎಲೆಯ ರೆಂಬೆಗಳಿಂದ ನಾರು ಸಿಗುತ್ತದೆ. ಒಳತೊಗಟೆಯ ಕಷಾಯವನ್ನು, ಇದರ ತವರಿನಲ್ಲಿ, ಬಿಳಿ ಸಕ್ಕರೆ ತಯಾರು ಮಾಡಲು ಬಳಸುತ್ತಾರಂತೆ.

ಇದರ ಒಳಮರ ಮೃದು. 0.028 ಮೀಟರ್ (1 ಘನ ಅಡಿ) 17 ಕೆ.ಜಿ (38 ಪೌಂಡು) ತೂಗುತ್ತದೆ. ಒರಟು. ಪೀಠೋಪಾಸನಗಳಿಗೆ, ಪ್ಯಾಕಿಂಗ್ ಪೆಟ್ಟಿಗೆಗಳಿಗೆ ಸೂಕ್ತ. ಒಳ ಮರ ಬಾಳಿಕೆ. ಆದರೆ ಸೀಳುತ್ತದೆ.

ತಾಳು ಮೋಟು. ಆದುದರಿಂದ ಸಾಲು ಮರಗಳಿಗೆ ಅನುಕೂಲವಿಲ್ಲ.

ಮರದ ಮೇಲಿರುವ ಹಣ್ಣಿನಿಂದ ಬೀಜ ಬಿಡಿಸಿಕೊಂಡು ಬಿತ್ತಬೇಕು. ಹಣ್ಣು ಊರಬಾರದು. 9 ಮೀಟರ್ (30 ಅಡಿ) ದೂರಕ್ಕೆ ದೊಡ್ಡ ಗುಣಿಗಳಲ್ಲಿ ಬಿತ್ತಬೇಕು. ಮೊಳಕೆ ಶೀಘ್ರ.

14. ತಡಸಾಲು (ತಡ್ಸಾಲ್, ತಡಸಲ, ತದಸಲ) *Grewia tiliaefolia* Vahl.

ಮಲೆನಾಡಿನ ಕಡಿಮೆ ಮಳೆಯ ಪ್ರದೇಶಗಳಲ್ಲಿ, ಉತ್ತರ ಕೊಡಗಿನಲ್ಲಿ, ಹೆಚ್ಚಾಗಿ ಕಾಣಿಸಿಕೊಳ್ಳುವ ಮರ. ಕಡಲು ಪ್ರದೇಶದ ಕಾಡುಗಳಲ್ಲೂ ಬೆಳೆಯುತ್ತದೆ.

ಇದು ಸುಮಾರು ಸಣ್ಣ ಮರ. ಕೆಲವು ಕಡೆ 10.5 ಮೀಟರ್ (35 ಅಡಿ) ಎತ್ತರಕ್ಕೆ ಬೆಳೆಯುವುದುಂಟು. ತಾಳು 6 ಮೀಟರ್ (20 ಅಡಿ) ಇರುವುದುಂಟು.

ಹೂವು ಹಳದಿ – ಏಪ್ರಿಲ್, ಆಗಸ್ಟ್‌ನಲ್ಲಿ. ಇದರ ಹಣ್ಣು ಕಪ್ಪು: ಮೇಲೆ ತುಪ್ಪಳ. ಹಣ್ಣನ್ನು ತಿನ್ನುತ್ತಾರೆ.

ಇದರ ತೊಗಟೆಯಿಂದ ಲೋಳೆ ತೆಗೆದು ನಾರನ್ನು ತಯಾರು ಮಾಡಬಹುದು. ಇದರ ಎಲೆ, ಮೇಕೆ ಮತ್ತು ಕುರಿಗಳಿಗೆ ಮೇವಿನ ಸೊಪ್ಪು.

ಇದರ ಒಳಮರ ಕಿಲಿಗೆಂಪು ಕಂದು ; ಎಳೆ ಒತ್ತು ; ಗಟ್ಟಿ ; ಬಾಳಿಕೆ. ಬಹಳ ಪುಟವಿಡುವ ಮರ. ಮರಗೆಲಸಕ್ಕೆ ಸುಲಭ. ಒಳ್ಳೆಯ ಪಾಲಿಷ್ ತೆಗೆದುಕೊಳ್ಳುತ್ತದೆ. ತೇಗಕ್ಕಿಂತ ಹಗುರ–0.028 ಘನ ಮೀಟರ್ (ಒಂದು ಘನ ಅಡಿ) 16 ಕೆ.ಜಿ. (35 ಪೌಂಡು). ಕ್ರಿಕೆಟ್ಟು ಮತ್ತು ಬಿಲಿಯರ್ಡ್ಸ್ ಆಟದ ಸಾಮಾನುಗಳನ್ನು ಮಾಡುತ್ತಾರೆ. ಗಾಡಿಗಳಿಗೆ, ಕಟ್ಟಡಗಳಿಗೆ, ದೋಣಿ ಕೆಲಸಕ್ಕೆ, ಹರಿಗೋಲುಗಳಿಗೆ, ತೊಲೆ ಕಂಬಗಳಿಗೆ, ನೇಗಿಲಿಗೆ, ಪೀಠಾಸನಗಳಿಗೆ, ಹಿಡಿಗಳಿಗೆ, ಮಂಚದ ಚೌಕಟ್ಟಿಗೆ ಸೂಕ್ತ.

ಈ ಮರ, ಘಟ್ಟದ ತಪ್ಪಲಿನಲ್ಲಿ ಚೆನ್ನಾಗಿ ಬೆಳೆದರೂ, ಇದನ್ನು ನಮ್ಮ ರಾಜ್ಯದ ಅನೇಕ ಕಡೆ ಚೆನ್ನಾಗಿಯೇ ಬೆಳಸಬಹುದು.

ಇದನ್ನು, ಬೀಜಗಳನ್ನು ಒಟ್ಲು ಹಾಕಿಯೋ, ತುಂಡುಗಳನ್ನು ಮರಳು ಮಣ್ಣಿನಲ್ಲಿ ಬೇರು ಬಿಡಿಸಿಯೋ ಸಸಿಗಳನ್ನು ತಯಾರು ಮಾಡಿಕೊಳ್ಳಬೇಕು. ಒಟ್ಲುಸಸಿ ಸುಮಾರು 45 ಸೆಂಟಿಮೀಟರ್ (1½ ಅಡಿ) ಎತ್ತರವಿದ್ದಾಗ ಎಬ್ಬಿ ನೆಡಬೇಕು. ಸಸಿ ಮತ್ತು ಬೇರು ಬಿಡಿಸಿದ ತುಂಡುಗಳನ್ನು 7.5 ಮೀಟರ್ (25 ಅಡಿ) ಅಂತರದಲ್ಲಿ ನೆಡಬೇಕು.

15. ಕರಿಬೇವು *Murraya koenigii* (Linn.) Spreng.

ಈ ಚಿಕ್ಕ ಮರದ ಬಗ್ಗೆ ಹೆಚ್ಚು ಹೇಳುವುದು ಅನುಚಿತ. ಎಲ್ಲರಿಗೂ ಚಿರಪರಿಚಿತವಾದ ಮರ.



ಚಿತ್ರ : 12. ಕರಿಬೇವು

ಗಿಡ್ಡ ತಾಳು; ಒತ್ತಾದ ನೆತ್ತಿ. ಉದ್ದವಾದ ಗರಿಎಲೆ. ಚಳಿಗಾಲದಲ್ಲಿ ಸ್ವಲ್ಪಕಾಲ ಬೆತ್ತಲೆ. ಫೆಬ್ರುವರಿ, ಮಾರ್ಚಿಯಲ್ಲಿ ಹೊಸ ಎಲೆ; ಜತೆಗೇ ಹೂವು. ಹೂವು ಬಿಳುಪು; ಸಣ್ಣ ; ರೆಂಬೆಯ ತುದಿಯಲ್ಲಿ ಗೊಂಚಲಾಗಿ ಬೆಳೆಯುತ್ತವೆ. ಹಣ್ಣು ಸುಕ್ಕಲು; ದುಂಡು; ಹಸುರು-ಬಿಳಿಪು. ಮಾಗಿದ ಮೇಲೆ ಕಪ್ಪು ತಿರುಗುತ್ತದೆ.

ಮರದ ಎಲ್ಲಾ ಭಾಗಗಳು ವಾಸನೆ. ಎಲೆ, ಅಡಿಗೆಗಲ್ಲದೆ ಔಷಧಿಗೂ ಒದಗಿ ಬರುತ್ತದೆ. ತೊಗಟೆ ಮತ್ತು ಬೇರೂ ಕೂಡ ಔಷಧಿ.

ಒಳಮರ ಗಟ್ಟಿ; ಬಾಳಿಕೆ. ತೇಗದಷ್ಟೆ ಭಾರ; 0.028 ಘನಮೀಟರ್ (1 ಘನ ಅಡಿ) 19½ ಕೆ. ಜಿ. (43 ಪೌಂಡ್) ತೂಗುತ್ತದೆ. ವ್ಯವಸಾಯದ ಮುಟ್ಟುಗಳಿಗೂ ಉಪಯೋಗಿಸಬಹುದು.

ಬೀಜಗಳನ್ನು ನೆರಳಿನಲ್ಲಿ ಬಿತ್ತಬೇಕು. ಸಸಿಗಳನ್ನು 4.5 – 6 ಮೀಟರ್ (15 ರಿಂದ 20 ಅಡಿ) ದೂರಕ್ಕೆ ನೆಡಬೇಕು. ಆಳವಿದ್ದ ಯಾವ ಮಣ್ಣಾದರೂ ಇದಕ್ಕೆ ಒಪ್ಪು. ಮೊದಲೆರಡು ವರ್ಷ ನೀರನ್ನು ಆಗಾಗ್ಗೆ ಎರೆಯುತ್ತಿರಬೇಕು.

16. **ದೊಡ್ಡ ಮರ:** (ಹೆಮ್ಮರ, ಹಿರೇಮರ, ಮಹಾವೃಕ್ಷ) *Ailanthus excelsa* Roxb.



ಚಿತ್ರ : 13. ದೊಡ್ಡಮರ

ಇದು ಪೂರ್ವ ಏಷ್ಯದ ಮರ. ಅಲ್ಲಿ ಇದನ್ನು ಸ್ವರ್ಗದ ಮರ ಎನ್ನುವುದುಂಟು. ಇದು 18–24 ಮೀಟರ್ (60 ಅಡಿಗಳಷ್ಟು) ಬೆಳೆಯಬಲ್ಲ ಮರವಾದುದರಿಂದ ಮಹಾವೃಕ್ಷ, ಹೆಮ್ಮರ ಎಂದು ಕರೆಯುತ್ತಾರೆ. ಇದರ ತಾಳು ಸುಮಾರು 1.8–2.4 ಮೀಟರ್ (6 ರಿಂದ 8 ಅಡಿ) ಗಳಷ್ಟು ಸುತ್ತಳತೆಯಿಂದ ಬೆಳೆಯುವುದುಂಟು. ತೊಗಟೆ ಒರಟು ; ಬೂದು ಬಣ್ಣ. ದೊಡ್ಡ ರೆಂಬೆಗಳು ಮೊದಲು ಅಡ್ಡಕ್ಕೆ ಹೊರಟು ಆಮೇಲೆ ಮೇಲಕ್ಕೆ ಬಾಗುತ್ತವೆ. ಎಲೆಗರಿ ಉದ್ದ. ಎಲೆ ಚಳಿಗಾಲದಲ್ಲಿ ಉದುರುತ್ತದೆ. ಮಾರ್ಚಿಯಲ್ಲಿ ಪುನಃ ಹೊಮ್ಮುತ್ತದೆ. ಎಲೆಗೆ ಮುಂಚೆ ಹೂವು; ಸಣ್ಣ ; ಬಿಳಿಹಳದಿ. ಕಾಯಿ ಮೇ, ಜೂನಿನಲ್ಲಿ ಬಲಿಯುತ್ತದೆ. ಬೀಜ ಕಾಗದದಂತೆ ಹಗುರ ; ಬಹಳ ದೂರ ಗಾಳಿಯಲ್ಲಿ ತೂರಿಕೊಂಡು ಹೋಗುತ್ತದೆ.

ಒಳಮರ ಬಿಳುಪು; ಮೃದು: ಬಹಳ ಹಗುರ. 0.028 ಘನಮೀಟರ್ (1 ಘನ ಅಡಿ) $10\frac{3}{4}$ ಕಿ. ಜಿ. (24 ಪೌಂಡು) ತೂಗುತ್ತದೆ. ಆದುದರಿಂದ ಕಟ್ಟೆಮರಗಳಿಗೆ, (ಒಂದು ಬಗೆಯ ದೋಣಿಗಳಿಗೆ.) ಉಪಯೋಗಿಸುತ್ತಾರೆ. ಬೊಂಬೆ ಸಾಮಾನು, ತಮಟೆಗೆ ಬಳಸುತ್ತಾರೆ. ಇದರ ಎಲೆ, ತೊಗಟೆ, ಔಷಧಿ. ಗೋಂದೂ ಔಷಧಿ.

ಬೀಜಗಳನ್ನು ಊರಿಯೋ, ತುಂಡುಗಳನ್ನು ನೆಟ್ಟು, ಬೇರು ಬಿಡಿಸಿಯೋ ಮರಗಳನ್ನು ಬೆಳೆಸಬಹುದು.

ಮರದ ರೂಪಕ್ಕೆ 61 ನೆಯ ಚಿತ್ರವನ್ನು ನೋಡಿ.

17. **ಧೂಪದ ಮರ :** (ಮಡ್ಡಿಮರ, ಚಿಲಕ ಧೂಪ, ಚಿಲಕಡಿ, ಗುಗ್ಗಳ ದೂಪ, ಮಾದಿ ಚಿತ್ರ) *Boswellia serrata* Roxb. ex Colebr.

ಇದು ಸುಮಾರು ಎತ್ತರದ ಮರ; 9–9.5 ಮೀಟರ್ (30–35 ಅಡಿ) ಎತ್ತರಕ್ಕೆ ಬೆಳೆಯುತ್ತದೆ. ಕೆಲವು ಕಡೆ ಗುಂಪು ಗುಂಪಾಗಿ ಬೆಳೆಯುವುದುಂಟು.

ಇದರ ತೊಗಟೆ ಹಸುರು ಕಂದು, ಹಳದಿ ಅಥವಾ ತಿಳಿಗೆಂಪು; 1.25 ಸೆಂ. ಮೀ. ($\frac{1}{2}$ ಅಂಗುಲ) ದಪ್ಪ ; ಸುಲಿಯುತ್ತದೆ. ಗೊಂಚಲು ಹೂವು ; ಹೂವು ಬಿಳುಪು ಅಥವಾ ನಸುಗೆಂಪು, ಸಣ್ಣದು ; ಸುವಾಸನೆ ; ಜನವರಿ–ಮಾರ್ಚಿಯಲ್ಲಿ. ಹೂವಿನ ಕಾಲದಲ್ಲಿ ಎಲೆ ಉದುರಿರುತ್ತದೆ. ಕಾಯಿ ಮೇ–ಜೂನಿನಲ್ಲಿ ಬಲಿಯುತ್ತದೆ.

ಶುಷ್ಕ ಗುಡ್ಡಕಾಡುಗಳಲ್ಲಿ ಬೆಳೆಯುವ ಮರ. ಬರಡು ಜಮೀನುಗಳಲ್ಲಿ ತಿಟ್ಟೆ ಜಮೀನುಗಳಲ್ಲಿ ಬೆಳೆಯಬಲ್ಲದು. ಆದುದರಿಂದ ಗುಡ್ಡ, ಬೆಟ್ಟಗಳನ್ನು ಹಸುರಾಗಿರಿಸಲು ಸೂಕ್ತವಾದ ಮರ.

ಇದರ ಒಳಮರ ಸುಮಾರು ಗಟ್ಟಿ; ಬಿಳುಪು, ಅದರಲ್ಲಿ ರಾಳವಿರುತ್ತದೆ. ಇದು ಹಲಗೆಗಳಿಗೆ, ಪೆಟ್ಟಿಗೆಗಳಿಗೆ, ಛಾವಿ ಕಟ್ಟಡಗಳಿಗೆ ಸೂಕ್ತ. ಇದರಿಂದ ಕಾಗದ ಮಾಡುವ ಪಲ್ಪನ್ನು ತಯಾರು ಮಾಡುತ್ತಿದ್ದಾರೆ. ಮಧ್ಯಪ್ರದೇಶದ ನೇಪಾ ನಗರದಲ್ಲಿ ನ್ಯೂಸ್ ಪ್ರಿಂಟು (ವೃತ್ತ ಪತ್ರಿಕೆಗಳನ್ನು ಮುದ್ರಿಸುವ ಕಾಗದ) ತಯಾರು ಮಾಡಲು ಇದನ್ನು

ಬಳಸುತ್ತಿದ್ದಾಗೆ. ಈ ಮರವನ್ನು ಗಾಯ ಮಾಡಿದರೆ ಅದರಿಂದ ಪರಿಮಳಯುಕ್ತ ವಾದ ರಾಳ ಸೂಸುತ್ತದೆ. ಇದನ್ನು ಸಾಂಬ್ರಾಣಿಯಂತೆ ಧೂಪಕ್ಕೆ ಬಳಸುತ್ತಾರೆ. ಸಾಂಬ್ರಾಣಿಮರ ಇದರ ಹತ್ತಿರದ ನಂಟ. ಈ ರಾಳವನ್ನು ಔಷಧಿಗೂ ಬಳಸುತ್ತಾರೆ.

ಇದನ್ನು ಬೆಳೆಸಲು ದಪ್ಪ ತುಂಡುಗಳನ್ನು ಮಳೆಗಾಲದಲ್ಲಿ ಒದ್ದೆಮಣ್ಣಿನಲ್ಲಿ ಹೂಳಿ ಬೆಳೆಸಬಹುದು. ಮಳೆ ಕಡಿಮೆ ಇದ್ದರೂ, ಈ ತುಂಡುಗಳು ಬೇರು ಬಿಡುತ್ತವೆ. ಬೇರಿನ ಬುಡದಿಂದ ಬರುವ ಸಸಿಗಳನ್ನು ಹಾಕಿಯೂ ಬೆಳೆಯಬಹುದು.

ನಿಜವಾದ ಸಾಂಬ್ರಾಣಿ ಈ ಮರದಂತೆಯೇ. ಆದರೆ, ಪ್ರಭೇದ ಬೇರೆ. ಸಾಂಬ್ರಾಣಿಗೆ ಚಿಟ್ಟುಂಬೆ, ಚಿಲ್ಕು, ಚಿಲ್ಕಡ ಎಂದು ಕರೆಯುತ್ತಾರೆ. ರಾಮನಗರ, ನಂದಿ ಬೆಟ್ಟದ ಕಲ್ಲುಭೂಮಿಯಲ್ಲಿ ಸಾಮಾನ್ಯ. ಕೆಲವೆಡೆ ಗುಡಿ ಹತ್ತಿರ ಹಾಕುತ್ತಾರೆ. ಚಿಕ್ಕ ಮರ. ಧೂಪದ ಮರದ ಎಲೆಯ ಮೇಲೆ ಒತ್ತಾದ ತುಪ್ಪಳವಿರುತ್ತದೆ. ಆದರೆ ಇದರ ಎಲೆಯ ಮೇಲೆ ಇರುವುದಿಲ್ಲ; ನಯವಾಗಿರುತ್ತವೆ, ಇದರ ತೊಗಟೆ ಬಿಳುಪು.

ಇದರ ಒಳಮರ ಧೂಪದ ಮರಕ್ಕಿಂತ ಕೀಳು; ಸೌದೆ, ಇದ್ದಲಿಗೆ ಯೋಗ್ಯ. ಇದರ ರಾಳವೇ ನಿಜವಾದ ಸಾಂಬ್ರಾಣಿ. ಇದನ್ನು ಧೂಪದ ಮರದಂತೆಯೇ ಬೆಳೆಸ ಬೇಕು. ಗುಡ್ಡ, ಕಲ್ಲು ಜಮೀನಿಗೆ ಅನುಕೂಲವಾದ ಮರ.

ಮರದ ರೂಪಕ್ಕೆ 62 ನೆಯ ಚಿತ್ರವನ್ನು ನೋಡಿ.

18. ಬೇವು : *Azadirachta indica* Juss.

ಬೇವು, ಭಾರತದ ಎಲ್ಲಾ ಕಡೆಯೂ ಬೆಳೆಯುವ ಮರ. ದಕ್ಷಿಣ ಭಾರತದಲ್ಲಿ ಕೆಲವೆಡೆ ಕಾಡು ಕಾಡಾಗಿಯೇ ಬೆಳೆಯುತ್ತದೆ. ಇದಕ್ಕೆ ಎಲ್ಲ ಬಗೆಯ ಮಣ್ಣುಗಳೂ ಒಪ್ಪು – ಕರಿ ಎರೆಮಣ್ಣು ಬಲು ಒಪ್ಪು. ತೆಟ್ಟೆ (ಆಳವಿಲ್ಲದ) ಮಣ್ಣುಗಳಲ್ಲೂ, ಕಲ್ಲುನೆಲಗಳಲ್ಲಿಯೂ ಬೆಳೆಯಬಲ್ಲದು. ಉಪ್ಪು ಏರಿದ ಮಣ್ಣುಗಳಲ್ಲೂ ಬೆಳೆಯು ವುದುಂಟು.

ಸಾಲುಮರಗಳಾಗಿ, ತೋಪುಗಳಲ್ಲಿ, ಬಂಜರುಗಳಲ್ಲಿ, ಇದನ್ನು ಬೆಳೆಸ ಬಹುದು. ಅಲ್ಲದೆ ಬಡಕಲು ಜಮೀನುಗಳ ಪುನರುತ್ಥಾನಕ್ಕಾಗಿಯೂ ಹಾಕ ಬಹುದು.

ಈ ಮರ ನಿತ್ಯ ಹಸುರು. ಆದರೆ ಬಹಳ ಒಣ ಪ್ರದೇಶಗಳಲ್ಲಿ ಮಾತ್ರ ಎಲೆ ಉದುರಿ ಬೆತ್ತಲೆಯಾಗಿರುತ್ತದೆ. ಇದು ಮಲೆನಾಡಿನಲ್ಲಿ ಬೆಳೆಯುವುದಿಲ್ಲ ; ಮೈದಾನದ ಮರವೇ ಎನ್ನಬಹುದು. ನೀರು ತಂಗುವ ಕಡೆ ಬೆಳವಣಿಗೆ ಕುಂಠಿತ. ಇದು ದೊಡ್ಡಮರ; ಸುಮಾರು 9–12 ಮೀಟರ್ (30–40 ಅಡಿ) ಎತ್ತರಕ್ಕೆ ಬೆಳೆಯುತ್ತದೆ. ಸುಲಕ್ಷಣವಾದ ಮರ. ನೆತ್ತಿ ದುಂಡಾಗಿ ಹರಡುತ್ತದೆ. ತೊಗಟೆ ಕಪ್ಪುಕಂದು.

ಇದು ಹಿಂದುಗಳಿಗೆ ಪೂಜ್ಯವಾದ ಮರ. ಅಲ್ಲದೆ, ಈ ಮರದ ಪ್ರತಿಯೊಂದು ಭಾಗವೂ ಯಾವುದಾದರೊಂದು ಉಪಯೋಗಕ್ಕೆ ಬರುತ್ತದೆ. ಇದರ ಬಿಳಿ ಹೂವು ಜೇನುಗಳಿಗೆ ಪ್ರಿಯ. ಈ ಮರ, ಜೇನುತುಪ್ಪದ ಆಗರ. ಮಾರ್ಚಿ–ಮೇ ತಿಂಗಳು ಗಳಲ್ಲಿ ಹೂವು. ಮೇ, ಜೂನ್ ತಿಂಗಳಲ್ಲಿ ಕಾಯಿ ಬಲಿಯುತ್ತದೆ.



ಚಿತ್ರ : 14. ಬೇವು

ಮರದ ಪ್ರತಿಯೊಂದು ಭಾಗದಲ್ಲಿಯೂ ಕಹಿ ಇದೆ. ಈ ಕಹಿ ಇರುವುದರಿಂದ ಇದನ್ನು ಔಷಧಿ ಮರ ಎನ್ನಬಹುದು. ತೊಗಟೆ, ಗೋಂದು, ಎಲೆ, ಹೂವು, ಚಿಗುರು, ಹಣ್ಣು, ಬೀಜ, ಬೀಜದ ಎಣ್ಣೆ ಹಾಗೂ ಹಿಂಡಿ, ಬೇರಿನ ರಸ –ಎಲ್ಲವೂ ಔಷಧಿ.

ಎಲೆಯನ್ನು ಬಿಸಿನೀರಿನಲ್ಲಿ ನೆನೆಸಿ ಸ್ನಾನಮಾಡುತ್ತಾರೆ. ಪುಸ್ತಕಗಳಿಗೆ, ಬಟ್ಟೆ ಗಳಿಗೆ ಹುಳು ಹೊಡೆಯದಂತೆ ಒಣ ಎಲೆಯನ್ನು ಉಪಯೋಗಿಸುವುದುಂಟು.

ಸೊಳ್ಳೆಯ ಕಾಟವನ್ನು ಉಪಶಮನ ಮಾಡಲು ಎಲೆ ಹೊಗೆ ಹಾಕುವುದುಂಟು. ಚಿಗುರುರೆಂಬೆಯನ್ನು ಹಲ್ಲು ಉಜ್ಜಲು ಬ್ರಷಿನಂತೆ ಬಳಸುತ್ತಾರೆ.

ಇದರ ಬೀಜದಿಂದ ಶೇಕಡ 30–45 ರಷ್ಟು ಎಣ್ಣೆಯನ್ನು ಹಿಂಡಬಹುದು. ಔಷಧಿಗೇ ಅಲ್ಲದೆ, ಈ ಬೇವಿನ ಎಣ್ಣೆ ಬಣ್ಣ ಕಟ್ಟುವುದಕ್ಕೂ, ಸಾಬೂನು ತಯಾರಿಕೆಗೂ ಒದಗುತ್ತದೆ. ಹಿಂದೆ ಇದನ್ನು ದೀಪದ ಎಣ್ಣೆಯಾಗಿಯೂ ಬಳಸುತ್ತಿದ್ದರು.

ಇದರ ಹಿಂಡಿ ಒಳ್ಳೆಯ ಗೊಬ್ಬರ. ಇದರಲ್ಲಿ ಶೇಕಡ 4½ ರಷ್ಟು ಸಾರಜನಕ ವಿರುತ್ತದೆ ; ಎರಡರಷ್ಟು ರಂಜಕಾಮ್ಲವಿರುತ್ತದೆ. ಇದನ್ನು ಕಬ್ಬಿನ ಗದ್ದೆಗೆ ಹಾಕುತ್ತಾರೆ. ಹಾಗೆ ಹಾಕಿದಾಗ, ಕಬ್ಬಿನ ತುಂಡುಗಳಿಗೆ ಗೆದ್ದಲು ಹತ್ತುವುದಿಲ್ಲ.

ಇದರ ಎಲೆಯನ್ನು ದನಗಳಿಗೆ ತಿನ್ನಿಸಬಹುದು.

ಇದರ ಒಳಮರ ಗಟ್ಟಿ; ಎಳೆಗಳು ಒತ್ತು. ಸುಮಾರು ತೇಗದಷ್ಟೇ ಭಾರ. ಚೆನ್ನಾಗಿ ಹದ ಮಾಡಬಹುದು. ಗಾಳಿ ಬಿಸಿಲನ್ನು ತಡೆಯುತ್ತದೆ. ಬಾಳಿಕೆ ಹೆಚ್ಚು. ಕಟ್ಟಡಗಳಿಗೆ, ಪೀಠೋಪಾಸನಗಳಿಗೆ, ವ್ಯವಸಾಯದ ಮುಟ್ಟುಗಳಿಗೆ, ಗಾಡಿಗಳಿಗೆ ಸೂಕ್ತವಾದ ಮರ. ಇದು ಪಾಲಿಷ್ ಹೆಚ್ಚಾಗಿ ತೆಗೆದುಕೊಳ್ಳುವುದಿಲ್ಲ. ಕೆಲವೆಡೆ ಇದನ್ನು ಕೆತ್ತನೆ ಕೆಲಸಕ್ಕಾಗಿ ಉಪಯೋಗಿಸುತ್ತಾರೆ. ಇದಕ್ಕೂ ಕೂಡ ತೇಗದಂತೆ ಗೆದ್ದಲು ಹತ್ತುವುದಿಲ್ಲ.

ಇದನ್ನು ನೇರವಾಗಿ ಬೀಜ ಹಾಕಿಯೋ, ಸಸಿಗಳನ್ನು ಒಟ್ಟಲಿನಲ್ಲಿ ಬೆಳೆಸಿ ಹೂಣಿಯೋ, ಬೆಳೆಸಬಹುದು. ಬೀಜಗಳನ್ನು ಎಚ್ಚರಿಕೆಯಿಂದ ಕೂಡಿಟ್ಟುಕೊಳ್ಳಬೇಕು. ಚೆನ್ನಾಗಿ ಬಲಿತ ಬೀಜಗಳನ್ನು, ಮರದಿಂದ, ಜುಲೈ, ಆಗಸ್ಟ್ ತಿಂಗಳಲ್ಲಿ ಉದುರಿಸಿ ಬೇಗ ಚೆಲ್ಲಬೇಕು. ಆಗ ಮೊಳಕೆ ಚೆನ್ನಾಗಿರುತ್ತದೆ. ಕೂಡಿಟ್ಟು ಕೆಲಕಾಲದ ನಂತರ ನೆಟ್ಟ ಬೀಜದ ಮೊಳಕೆ ಅರ್ಧಕ್ಕೆ ಅರ್ಧ. ಬೀಜ ಮೊಳೆಯಲು ಸುಮಾರು 10 ರಿಂದ 50 ದಿನಗಳು ಬೇಕಾಗುತ್ತವೆ. ಒಟ್ಟಲಿಗೆ ಹೆಚ್ಚು ನೀರು ಹಾಕಿದರೆ ಮೊಳಕೆ ಕೆಡುತ್ತದೆ ; ಹದವಾಗಿ ಹಾಕಬೇಕು.

ಇದನ್ನು, ಬೇರಿನ ಮತ್ತು ಕಾಂಡದ ತುಂಡುಗಳನ್ನು ಊರಿಯೂ ಬೆಳೆಸಬಹುದು.

ಈ ಮರ, ಕಡಿದರೂ, ಪುನಃ ಚಿಗುರುತ್ತದೆ.

ರೈತರಿಗೆ ಬಹಳ ಉಪಯುಕ್ತವಾದ ಮರ. ತೋಪುಗಳಲ್ಲಿ, ದಾರಿಯ ಸಾಲು ಮರವಾಗಿ, ಹಾಗೂ ಅಲಂಕಾರದ ಮರವಾಗಿ ಬೆಳೆಸುವುದು ಒಳ್ಳೆಯದು.

ಮರದ ರೂಪಕ್ಕೆ 63 ನೆಯ ಚಿತ್ರ ನೋಡಿ.

19. ಹುಚ್ಚುಬೇವು : (ಚಿಕ್ಕಬೇವು, ಕಾಡ್ಬೇವು, ಅರೆಬೇವು) *Melia azedarach* Linn.

ಇದು ಬೇವಿನ ನಂಟ. ಇದಕ್ಕೂ ಬೇವಿಗೂ ಮುಖ್ಯ ವ್ಯತ್ಯಾಸ – ಎಲೆಯ ರಚನೆಯಲ್ಲಿ, ಹೂವಿನ ಬಣ್ಣದಲ್ಲಿ. ಬೇವಿನ ಹೂವಿನ ಬಣ್ಣ ಬಿಳುಪು ; ಹುಚ್ಚು ಬೇವಿನದು ತೆಳುನೀಲಿ ಗುಲಾಬಿ. ಇದರ ಹೂವು ಮಾರ್ಚ್–ಮೇ ತಿಂಗಳಲ್ಲಿ.



ಚಿತ್ರ : 15. ಹುಚ್ಚುಬೇವು

ಚಳಿಗಾಲದಲ್ಲಿ ಕಾಯಿ ಬಲಿಯುತ್ತದೆ. ಹೂವಿನ ಕಾಲದಲ್ಲಿಯೂ ಹಿಂದಿನ ವರ್ಷದ ಕಾಯಿಗಳು ಮರದಲ್ಲೇ ನಿಂತಿರುತ್ತವೆ.

ಇದು ಕಾಶ್ಮೀರದ ಮರವಾದರೂ ಇದನ್ನು ಅನೇಕ ಕಡೆ ಬೆಳೆಯುತ್ತಾರೆ. ಅರಣ್ಯಗಳಲ್ಲಿ ಕಡಿಮೆ. ಪಟ್ಟಣಗಳಲ್ಲಿ, ಪಾರ್ಕುಗಳಲ್ಲಿ ಸಾಲುಮರವಾಗಿಯೋ; ನೆರಳಿಗಾಗಿಯೋ, ಅಲಂಕಾರಕ್ಕಾಗಿಯೋ ಬೆಳೆಸುತ್ತಾರೆ. ಸುಮಾರು ಗಾತ್ರ, ನೇರಟು ತಾಳು ; ಅಗಲವಾದ ನೆತ್ತಿ ; ಅಚ್ಚಬೂದಿ ತೊಗಟೆ ; ನೋಡಲು ಅಲಂಕಾರ. ಹೂವುಗಳು ಸುವಾಸನೆ.

ಇದರ ಎಲೆ, ಮೇಕೆ ಕುರಿಗಳಿಗೆ ಮೇವು. ಆದುದರಿಂದ ಈ ಮರವನ್ನು ಮೇವಿಗಾಗಿ ತರಿದು, ಬೋಳು ಮಾಡಿ, ಮರಗಳನ್ನು ವಿಕಾರಗೊಳಿಸುವುದು ಸಾಮಾನ್ಯ. ಇದರ ಹಣ್ಣನ್ನು ಮೇಕೆ, ಕುರಿಗಳು ತಿನ್ನುತ್ತವೆ.

ಈ ಮರ 4.5-7.5 ಮೀಟರ್ (15-25 ಅಡಿ) ಎತ್ತರಕ್ಕೆ ಬೆಳೆಯುತ್ತದೆ. ಬೆಳವಣಿಗೆ ಶೀಘ್ರ. ಚಳಿಗಾಲದಲ್ಲಿ ಎಲೆಗಳು ಉದುರುತ್ತವೆ. ವಸಂತದಲ್ಲಿ ಹೊಸ ಚಿಗುರು.

ಇದರ ಕಾಯಿಗಳನ್ನು ಒಣಗಿಸಿ, ರುದ್ರಾಕ್ಷಿಮಾಲೆಯಂತೆ ಪೋಣಿಸುತ್ತಾರೆ. ಇದರ ಕಾಯಿ, ಚಕ್ಕೆ, ಬೇರು ಔಷಧಿಗೂ ಒದಗುತ್ತವೆ.

ಇದರ ಒಳಮರ ಬೇವಿನ ಮರಕ್ಕಿಂತ ಹಗುರ : 0.028 ಘನಮೀಟರ್ (1 ಘನ ಅಡಿ), 16¼ ಕೆ. ಜಿ. (36 ಪೌಂಡು) ತೂಗುತ್ತದೆ ; ಹುಳು ಹೊಡೆಯುವು ದಿಲ್ಲ ; ವ್ಯವಸಾಯದ ಮುಟ್ಟುಗಳಿಗೆ ಸೂಕ್ತ ; ಬಾಳಿಕೆ ಸ್ವಲ್ಪ ಕಡಿಮೆ.

ಇದನ್ನು ಬೀಜ ಬಿತ್ತಿ ಅಥವಾ ಸಸಿ ಎಬ್ಬಿಸಿ ಬೆಳೆಸಬಹುದು. ಮೊದಮೊದಲು ಇದರ ಬೆಳವಣಿಗೆ ತಗ್ಗು. ಆದರೆ, ಅನಂತರ ಚುರುಕುಗೊಂಡು ಬೇಗ ಬೆಳೆಯುತ್ತದೆ. ಫೆಬ್ರುವರಿ, ಮಾರ್ಚಿ ತಿಂಗಳಲ್ಲಿ ಬೀಜ ಬಿಟ್ಟು, ಸಸಿಗಳನ್ನು ಅದೇ ವರ್ಷದ ಮಳೆಗಾಲದಲ್ಲಿ ಹಾಕಬೇಕು. ಸಸಿಯನ್ನು ಉಂಡೆಸಹಿತ ಹೂಳುವುದು ಒಳ್ಳೆಯದು.

ಇದು ಬೇವಿನಂತೆ ಹೆಚ್ಚುಕಾಲ ಬಾಳುವುದಿಲ್ಲ. ಇದರ ಜೀವಾವಧಿ ಸುಮಾರು 20 ವರ್ಷ ಮಾತ್ರ. ಬೇರು ಮೇಲುಗಡೆಯಲ್ಲಿಯೇ ಇರುವುದರಿಂದ, ಬಿರುಗಾಳಿ ಯಲ್ಲಿ ಮರ ಬೇಗ ಮುರಿಯುತ್ತದೆ.

ಮರದರೂಪಕ್ಕೆ 64ನೆಯ ಚಿತ್ರ ನೋಡಿ.

20. **ಹೆಬ್ಬೇವು :** *Melia composita* Wiild.

ಇದು ಮಲೆನಾಡಿನ ಬೇವು ; ಅಲ್ಲಿ, ಹೆಮ್ಮರ. ಎಲೆ ದಟ್ಟಹಸುರು. ಒಳಮರ ಹಗುರ. ಆದರೆ, ಮನೆ ಕಟ್ಟಡಕ್ಕೆ, ವ್ಯವಸಾಯದ ಮುಟ್ಟುಗಳಿಗೆ ಬಳಸುವುದುಂಟು. ಇದಕ್ಕೆ ಗೆದ್ದಲು ಹತ್ತುವುದಿಲ್ಲ. ಇದರ ಒಣಕಾಯಿಯನ್ನು

ಔಷಧಿಗಾಗಿ ಬಳಸುತ್ತಾರೆ. ಇದು ಸುಲಕ್ಷಣವಾದ ಮರ. ಬಿಳಿ ಸುಗಂಧಹೂವು. ಸಸಿ ಎಬ್ಬಿಸಿ ನೆಟ್ಟು ಬೆಳೆಯಬಹುದು.

21. **ಸ್ವಾಮಿಮರ :** (ಕಲ್ಲರಿಗೆ, ಕೆಮ್ಮರ, ಸೋಮೆಮರ) *Soymida febrifuga* A. Juss.

ಮರಗಳ ಪೈಕಿ ಅತ್ಯಂತ ಹೆಚ್ಚುಕಾಲ ಬಾಳುವ ಮರ, ಸ್ವಾಮಿಮರವೆಂದು ನಮ್ಮ ಜನರಲ್ಲಿ ನಂಬಿಕೆ. ಆದುದರಿಂದ, ದೇವಸ್ಥಾನದ ಕಟ್ಟಡಗಳಿಗೆ ಇದೇ ಬಹಳ ಯೋಗ್ಯವಾದ ಮರವೆಂದು ಪರಿಗಣಿಸಲಾಗಿದೆ. ಈ ಕಾರಣದಿಂದಲೇ ಇದಕ್ಕೆ ಸ್ವಾಮಿಮರವೆಂದು ಹೆಸರಿಟ್ಟಿರಬಹುದು. ಸ್ವಾಮಿಗೃಹಕ್ಕೆ ಸೂಕ್ತವಾದದ್ದು. ಇದು, ಹಿಂದೆ, ಬಿಳಿಯರಿಗೆ ಬಹಳ ಮೆಚ್ಚುಗೆ ಮರ – ಅದರ ಕೆಂಪು ಬಣ್ಣಕ್ಕಾಗಿ. ಅದರ ಭಾರಕ್ಕಾಗಿ. 0.028 ಘನಮೀಟರ್ (1 ಘನ ಅಡಿ) ಕಟ್ಟಿಗೆ 32–35½ ಕೆ. ಜಿ, (70–75 ಪೌಂಡು) ತೂಗುತ್ತದೆ. ಅದರ ಗಟ್ಟಿತನಕ್ಕಾಗಿ, ಬಾಳಿಕೆಗಾಗಿ, ಗೆದ್ದಲು ಹಿಡಿಯದಿರುವುದಕ್ಕಾಗಿ, ಇದನ್ನು ಅವರು ಭಾರತದ ಕೆಂಪು ಸೆಡಾರ್ ಎಂದು ಕರೆದರು. ಸೆಡಾರ್ ಎಂಬ ಮರ ಅವರಿಗೆ ಬಹು ಪ್ರಿಯವಾದ ಮರ.

ಇದು ಮಲೆನಾಡಿನಲ್ಲಿ, ಬೆಟ್ಟಗುಡ್ಡಗಳಲ್ಲಿ ಬಹಳ ಘನವಾಗಿ ಬೆಳೆಯುತ್ತದೆ, ರಾಮನಗರದ ಕಡೆಯೂ ಚೆನ್ನಾಗಿ ಬೆಳೆಯುತ್ತದೆ.

ಇದರ ಒಳಚಕ್ಕೆ ಬಹಳ ಕಹಿ. ಇದರ ಕಷಾಯವನ್ನು ಜ್ವರಗಳ ಚಿಕಿತ್ಸೆಗಳಿಗೆ ಕೊಡುತ್ತಿದ್ದರಂತೆ. ಅದಲ್ಲದೆ, ಭೇದಿಗಳಿಗೂ ಒಳ್ಳೆಯದಂತೆ. ಇದರ ತೊಗಟೆಯಲ್ಲಿ ಚರ್ಮ ಹದಮಾಡಲು ಬಳಸುವ ಒಗರು ಹೆಚ್ಚು.

ಇದರ ಎಲೆ ಸುಮಾರು 30 – 52.25 ಸೆಂ. ಮೀ. (1–1¾ ಅಡಿ) ಉದ್ದಕ್ಕೆ ಇರುತ್ತದೆ.

ಕಲು. ಕಟ್ಟಡಗಳಿಗೆ ಬಹಳ ಸೂಕ್ತವಾದ ಈ ಮರವನ್ನು ರೈತರು ಇನ್ನೂ ಹೆಚ್ಚಾಗಿ ಬೆಳೆಸಬೇಕು.

ಇದರ ಬೀಜ ಬೇಗ ಮೊಳೆಯುತ್ತದೆ. ಬೀಜದಿಂದ ಸುಲಭವಾಗಿ ಬೆಳೆಸಬಹುದು.

22. **ಕೆಂಪು ಗಂಧಗಿರಿ** (ನಂದಿವೃಕ್ಷ, ತುಂಡು, ಟೂನಮರ, ನೊಗೆ, ನಂದುರಿ, ನೊಗ್ಗ, ಬೆಳಂದಿ ಗಂಧಗರಿಗೆ, ನಂದುರಿಕೆ, ಬೇಲಂದಿ) *Toona ciliata* Roem.

ಇದು ದೊಡ್ಡ ಮರ. ಮಲೆನಾಡಿನಲ್ಲಿ, ಕೊಡಗಿನಲ್ಲಿ, ಕಾಫಿ ತೋಟಗಳಲ್ಲಿ ಬೆಳೆಯುತ್ತದೆ; ಬೆಳೆಸಿದ್ದಾರೆ. ಈ ಮರ, ಸಾಮಾನ್ಯವಾಗಿ ನೆರಳುಕಟ್ಟಿದ ಕಂದರುಗಳಲ್ಲಿ, ಹೊಳೆದಡಗಳಲ್ಲಿ ಘನವಾಗಿ ಬೆಳೆಯುತ್ತದೆ. ಇದಕ್ಕೆ ತೇವದ ವಾತಾವರಣ ಮತ್ತು ತೇವ ಉಳಿಸಿಕೊಳ್ಳುವ ಮಣ್ಣು ಬಹಳ ಒಪ್ಪು. ಕೆಲವು ವರ್ಷಗಳ ಕಾಲ

ನೀರನ್ನು ಒದಗಿಸುವ ಸೌಕರ್ಯವಿದ್ದರೆ ಈ ಮರವನ್ನು ಒಣ ಪ್ರದೇಶಗಳಲ್ಲೂ ಬೆಳೆಯಬಹುದು. ಇದನ್ನು ನಿತ್ಯ ಹಸುರುಮರಗಳು ಬೆಳೆಯುವ ಪ್ರದೇಶದಲ್ಲಿ



ಚಿತ್ರ : 16. ಕೆಂಪು ಗಂಧಗಿರಿ

ಬೆಳೆಸುವುದೇ ವಾಸಿ. ಇದನ್ನು ಅನುಕೂಲವಿದ್ದೆಡೆ ದೊಡ್ಡ ಸಾಲುಮರವಾಗಿ ಬೆಳೆಸಬಹುದು. ಇದರ ನೆತ್ತಿ ಹರಡಿಕೊಂಡು ಬೆಳೆಯುತ್ತವೆಯಾದುದರಿಂದ ಚೆನ್ನಾಗಿ ನೆರಳು ಕೊಡುತ್ತದೆ. ಇದರ ತೊಗಟೆ, ಎಳೆಯ ಮರಗಳಲ್ಲಿ ನಯ; ಹಳೆಯ ಗಿಡಗಳಲ್ಲಿ ಪೊರೆಪೊರೆಯಾಗಿ ಸೀಳುತ್ತದೆ. ಇದರ ಎಲೆ ಸ್ವಾಮಿ ಮರಕ್ಕಿಂತ ಉದ್ದ. ಕೆಲವು ವೇಳೆ 90 ಸೆಂ. ಮೀ. (3 ಅಡಿ) ಉದ್ದದಷ್ಟು ಬೆಳೆಯುತ್ತದೆ.

ಇದು ಸುಮಾರಾಗಿ ನಿತ್ಯ ಹಸುರಾಗಿಯೇ ಇರುತ್ತದೆ. ಮಾರ್ಚಿ, ಏಪ್ರಿಲಿನಲ್ಲಿ ಸಣ್ಣ ಬಿಳಿ ಹೂವುಗಳು ಮೊಮ್ಮುತ್ತವೆ, ಸುಗಂಧಯುಕ್ತವಾಗಿರುತ್ತವೆ. ಕಾಯಿ ಮೇ–ಜೂನಿನಲ್ಲಿ ಬಲಿಯುತ್ತವೆ. ಚಳಿಗಾಲದಲ್ಲಿ ಎಲೆ ಉದುರುತ್ತದೆ. ಬೀಜಗಳು ಬಹಳ ಸೂಕ್ಷ್ಮ–28 ಗ್ರಾಂನಲ್ಲಿ (1 ಔನ್ಸಿನಲ್ಲಿ) ಸುಮಾರು 15,00 ಬೀಜಗಳು. ಮೊಳಕೆಯೂ ಸುಮಾರು ಸಮರ್ಪಕ. ಶೇಕಡ 70 ರಷ್ಟು.

ಇದರ ಒಳಮರ ಬಹಳ ಶ್ರೇಷ್ಠ; ಭಾರತದ ಉತ್ತಮ ಚೌಬೀನೆಗಳಲ್ಲಿ ಒಂದು. ಇದು ಇಟ್ಟಿಗೆಕೆಂಪು, ಮೃದು; ಹೊಳಪು; ಸಮಪ್ರಕಾರದ ಎಳೆ; ಚೆನ್ನಾಗಿ ಹದಮಾಡಬಹುದು; ಸೀಳುವುದಿಲ್ಲ; ಡೊಂಕಾಗುವುದಿಲ್ಲ; ಗೆದ್ದಲು ಹಿಡಿಯುವುದಿಲ್ಲ; ಸಾಲದುದಕ್ಕೆ ಸುವಾಸನೆ ಕೂಡ. ಹಗುರ–0.028 ಘನ ಮೀಟರ್ (1 ಘನ ಅಡಿ) 13½–16 ಕೆ. ಜಿ. (30–36 ಪೌಂಡು) ತೂಗುತ್ತದೆ. ಹಗುರ ಮತ್ತು ಮೃದುವಾಗಿರುವುದರಿಂದ ನೀರಂಜಿಯಂತೆಯೇ, ಈ ಮರ ಸೊಗ ಮಾಡಲು ಬಹಳ ಒಪ್ಪು. ಅದಕ್ಕಾಗಿಯೇ ಇದನ್ನು ಸೊಗೆ, ಸೊಗ್ಗ ಎನ್ನುತ್ತಾರೆ. ತೆಳುವಾದ ಹಲಗೆಗಳನ್ನು ಕುಯ್ಯಬಹುದು. ಈ ಕಾರಣದಿಂದ ಇದನ್ನು ಚಹಾ ಪೆಟ್ಟಿಗೆಗಳನ್ನು ಮಾಡಲು ಬಳಸುತ್ತಾರೆ. ಈ ಮರಕ್ಕೆ ಇಂಗ್ಲೆಂಡಿನಲ್ಲಿ ಬಹಳ ಗಿರಾಕಿ. ಇದನ್ನು ಅವರು ಬಹಳ ಮೋಹಿಸುತ್ತಾರೆ. ಪ್ಲೈವುಡ್ಡು, ಹಿಡಿ, ಟೆನ್ನಿಸ್ ಬ್ಯಾಟು, ಬಾಡ್ಮಿಂಟನ್ ಬ್ಯಾಟು, ಲಾಳಿಕೆಗಳಿಗೆ ಬಹಳ ಒಪ್ಪು. ಮರಗೆಲಸ ಸುಲಭ. ಕೊರೆಯುವುದಕ್ಕೆ, ತೋಪಡಕ್ಕೆ (ಪತ್ತರಿ ಹೊಡೆದು ಸಾಫ್ ಮಾಡಲು) ಅನುಕೂಲವಾದುದರಿಂದ ಪೀಠಾಸನಗಳಿಗೆ ಬಾಯಿಪ್ ಮಾಡುವ ಮರ. ಕಟ್ಟಡದ ಕೆಲಸಗಳಿಗೂ ಬಳಸಬಹುದು. ಈ ಮರದ ಒಂದೇ ಒಂದು ಸಣ್ಣ ಅವಗುಣ. ಬಿಸಿಲಿನಲ್ಲಿ ಹೆಚ್ಚು ಬಾಳಿಕೆಯಿಲ್ಲ. ಆದುದರಿಂದ, ಕಟ್ಟಡದ ಹೊರಗಡೆಯ ಯಾವ ಉದ್ದೇಶಕ್ಕೂ ಬಳಸಬಾರದು. ಇದರ ಎಲೆಗಳನ್ನು ದನ ತಿನ್ನುತ್ತವೆ. ಹೂವಿನಿಂದ ಕೆಂಪು ಮತ್ತು ಹಳದಿ ಬಣ್ಣ ತೆಗೆಯಬಹುದು. ಬೀಜಗಳನ್ನು ದನಗಳಿಗೆ ತಿನ್ನಿಸಬಹುದು; ಚಕ್ಕೆ ಔಷಧಿಗೆ ಒದಗುತ್ತದೆ.

ಬೀಜಗಳು ಸೂಕ್ಷ್ಮ ಮತ್ತು ಹಗುರವಾಗಿರುವುದರಿಂದ ನೇರವಾಗಿ ಬೀಜ ಬಿತ್ತಿ ಬೆಳೆಸುವುದು ಕಷ್ಟ; ಬೇಗ ಕೊಚ್ಚಿಹೋಗುತ್ತದೆ. ಬೀಜಗಳನ್ನು ಒಟ್ಲು ಹುಯ್ದು ಸಸಿ ಎಬ್ಬಿಸಿ 2 ವರ್ಷದ ಸಸಿಗಳನ್ನು ಪೋಟುಮಾಡಿ ಹೂಣುವುದು ಸೂಕ್ತ. ಹೊಸ

ಬೀಜಗಳನ್ನೇ ಒಟ್ಲು ಹಾಕಬೇಕು. ಒಟ್ಲನ್ನು ಸಸಿಗಳು ದೂರದೂರಕ್ಕೆ ಇರುವಂತೆ ತೆಳು ಮಾಡಬೇಕು.

ಸಾಲುಮರವಾಗಿ ಬೆಳೆಸುವುದಾದರೆ, ಸಸಿಗಳನ್ನು 9 ಮೀಟರ್ (30 ಅಡಿ) ಅಂತರಕ್ಕೆ ಹಾಕಬೇಕು.

ಮರದ ರೂಪಕ್ಕೆ 65 ನೆಯ ಚಿತ್ರ ನೋಡಿ

23. **ಹುರಗಲು ಮರ.** (ಮಾಷೂಡ್ಲ, ಮಾಸಿ ಮುಸಿ, ಮುಷುದ್ದು, ಹುರಿ ಮುರಿ, ಮಾಸುಲ, ಮಲಸಿ, ಬಿಟ್ಸುಲ) *Chloroxylon swietenia* DC.

ಇದು ಸುಮಾರು ಎತ್ತರದ, ಸುಮಾರು ಗಾತ್ರದ ಮರ. ತಾಳು, ಮೋಟು. ಗರಿಗಳಂತೆ ಹರಡಿರುವ ಅಗಲ ನೆತ್ತಿ. ತೊಗಟೆ ಹಳದಿ, ದಪ್ಪ, ಬಿರಟೆ ಕಾರ್ಕಿನಂತೆ. ಎಲೆ ಕಿರಿದು, ತಿಳಿಹಸುರು. ಮಾರ್ಚಿ, ಏಪ್ರಿಲ್‌ನಲ್ಲಿ ಕೆನೆ ಬಣ್ಣದ ಹೂಗೊಂಚಲು ; ಸಣ್ಣ ಹೂವುಗಳು. ಮೇ – ಆಗಸ್ಟು ತಿಂಗಳುಗಳಲ್ಲಿ ಕಾಯಿ ಬಲಿಯುತ್ತದೆ.

ಈ ಮರವು ಘಟ್ಟದ ತಪ್ಪಲುಗಳಲ್ಲಿ ಎತ್ತರಕ್ಕೆ ದೊಡ್ಡದಾಗಿ ಬೆಳೆಯುತ್ತದೆ. ಕಲ್ಲು ಭೂಮಿಯಲ್ಲೂ, ಬರಡು ನೆಲಗಳಲ್ಲೂ, ಬಂಡೆಕಂಡಿಗಳಲ್ಲೂ ಬೆಳೆಯುತ್ತದೆ. ಇದಕ್ಕೆ ಜಿಗಟು ಮಣ್ಣು, ಹೆಚ್ಚು ತೇವ ಆಗದು. ಮಳೆ ಹೆಚ್ಚಾಗಿರುವ ಕಡೆ ಬೆಳೆಯುವುದಿಲ್ಲ. ಮಳೆ ಕಡಿಮೆ ಇರುವ ಕನಕಪುರ ತಾಲ್ಲೂಕಿನಲ್ಲಿ ಇದು ಚೆನ್ನಾಗಿ ಬೆಳೆಯುತ್ತದೆ.

ಒಳಮರ ಕೆನೆ ಅಥವಾ ಹೊಂಬಣ್ಣ. ಅದಕ್ಕಾಗಿಯೇ ಇದನ್ನು ಇಂಗ್ಲೀಷಿನಲ್ಲಿ ಬಣ್ಣದ ಮರವೆನ್ನುತಾರೆ. ಇದು ಸುವಾಸನೆ, ಬಹಳ ನಯ, ನುಣುಪು, ಸಾಟಿನ್ ಬಟ್ಟೆಯಂತೆ. ಬಹಳ ಸುಂದರವಾದದ್ದು. ಇದು ಸುಮಾರು ಭಾರ ; 0.028 ಘನಮೀಟರು, 24 – 30 ಕೆ. ಜಿ. (54-66 ಪೌಂಡು)ಗಳು. ಬಲಯುತವಾದದ್ದು ; ಗಟ್ಟಿ ; ಹೆಚ್ಚು ಬಾಳಿಕೆ ; ಬೂಷ್ಟು ಹಿಡಿಯುವುದಿಲ್ಲ ; ಮುಳ ಹೊಡೆಯುವುದಿಲ್ಲ. ಈ ಗುಣಲಕ್ಷಣಗಳಿಂದ ಈ ಮರ ಪೀಠೋಪಾಸನಗಳಿಗೆ, ಕೆತ್ತನೆ ಕೆಲಸಗಳಿಗೆ ಬಹಳ ಒಪ್ಪು, ಅದರಲ್ಲೂ ಬ್ರಷಿನ ಹಿಡಿಗಳಿಗೆ, ಪಟದ ಕಟ್ಟುಗಳಿಗೆ, ಇದರ ಬೆಳ್ಳಿ ಎಳೆಗಳು ಬಹಳ ಮೋಹಕ.

ಈ ಮರ ಬೇಗ ಸುಡುವುದಿಲ್ಲ. ದಿಮ್ಮಿಗೆ ಬೆಂಕಿ ಹತ್ತಿದರೂ ಹೊರಭಾಗ ಮಾತ್ರ ಸುಡುತ್ತದೆ ; ಆದುದರಿಂದ ತೊಲೆಗಳಿಗೆ, ಕಂಬಗಳಿಗೆ ಹೆಚ್ಚು ಸೂಕ್ತ. ಇದನ್ನು ಕಬ್ಬಿನ ಗಾಣಗಳಿಗೆ, ದೋಣಿಗಳಿಗೆ, ಹಲಗೆಗಳಿಗೆ ಉಪಯೋಗಿಸುತ್ತಾರೆ. ಇದು ನೀರಿನಲ್ಲಿ ನೆನೆದರೂ ಕೆಡದಿರುವುದರಿಂದ ಅನೇಕ ನೀರಾವರಿ ಇಂಜಿನಿಯರಿಂಗ್ ಕೆಲಸಗಳಿಗೆ ಒದಗಿಬರುತ್ತದೆ. ಬೆಂಕಿ, ನೀರು ಎರಡನ್ನೂ ಎದುರಿಸುವ ಗುಣಗಳಿರುವ ಮರಗಳು ಅತಿ ವಿರಳ. ಇವೇ ಈ ಮರದ ವಿಶೇಷ ಗುಣ.

ಇದನ್ನು ಗಾಡಿಯ ಮೂಕಿ (ಬಡ್ಡಿಗೆ)ಗೆ, ಗುಂಬಕ್ಕೆ, ಅರೆಕಾಲಿಗೆ, ವ್ಯವಸಾಯದ ಮುಟ್ಟುಗಳಿಗೆ ಬಳಸಬಹುದು. ಪೆಟ್ಟಿಗೆ ಮುಂತಾದ ಅಲಂಕಾರ ವಸ್ತುಗಳಿಗೆ ಬಹಳ ಅನುಕೂಲ. ಬಡಗಿಗಳು ಮರಕೆಲಸಕ್ಕಾಗಿ ಇದನ್ನು ಬಹಳ ತಾರೀಫು ಮಾಡುತ್ತಾರೆ. ರೈತರು ನೇಗಿಲುಗಳಿಗೆ, ರೈತರ ಗಾಡಿಯ ಗೋಡೆಗಳಿಗೆ ಬಳಸುತ್ತಾರೆ.

ಇದರ ತೊಗಟೆಯಲ್ಲಿ ಚರ್ಮದ ಹದಮಾಡುವ ಒಗರು ಹೆಚ್ಚು.

ಮರದಿಂದ ಬಣ್ಣ ತೆಗೆಯುತ್ತಿದ್ದರು. ಎಲೆಗಳು, ಹಣ್ಣುಗಳು ಔಷಧಿಗೆ ಬರುತ್ತವೆ.

ಇದನ್ನು ಬೀಜಗಳಿಂದಲೂ, ಸಸಿಯಿಂದಲೂ ಬೆಳೆಸಬಹುದು. ಸಸಿಗಳನ್ನು ಸ್ವಲ್ಪ ತಿಂಗಳು ಕಾಲ ಬಿಸಿಲು ಬೀಳದಂತೆ ಕಾಪಾಡಬೇಕು. ಕಳೆಗಳು ಈ ಸಸಿಗೆ ಆಗದು. ಕಡ್ಡಾಯವಾಗಿ ಕಳೆಗಳನ್ನು ಬೆಳೆಸಿದ ಕಿತ್ತುಹಾಕಬೇಕು. ಇದರ ಎಲೆಯಲ್ಲಿ ಕಹಿ ಅಂಶ ಇರುವುದರಿಂದ ಇದನ್ನು ದನ, ಮೇಕೆ ಮೇದು ಹಾಳುಮಾಡುವುದಿಲ್ಲ.

ಇದನ್ನು ಬೇರಿನಿಂದ ಹೊರಟ ಮರಿಗಳಿಂದಲೂ ನೆಟ್ಟು ಬೆಳೆಸಬಹುದು.

ಈ ಮರ ಕಡಿದರೂ ಮತ್ತೆ ಚಿಗುರುತ್ತದೆ.

24. ಕಂದಾಳೆ. (ಸಾಗಡೆ ಕೆಂಡಾಳ, ಚೆಂಡಾಲ, ಚಕ್ಕೋತಿ, ಸಾಗದೆ) *Schleichera oleosa* (Lour.) Oken.

ಇದು ಭಾರತದ ಬಹಳ ಹೆಸರುವಾಸಿಯಾದ ಅರಗಿನ ಮರ – ಅರಗು ಹುಳು ಗಳನ್ನು ಬೆಳೆಸುವ ಮರ. ಬಿಹಾರದಲ್ಲಿ, ಮಧ್ಯಪ್ರದೇಶದಲ್ಲಿ, ಪಂಜಾಬಿನಲ್ಲಿ ಬಹಳ ವಾಗಿ ಈ ಕುಸುಮ್ ಮರದ ಮೇಲೆ ಅರಗುಹುಳುಗಳನ್ನು ಸಾಕುತ್ತಾರೆ. ಮೈಸೂರಿ ನಲ್ಲಿ ಈ ಮರ ಕಾಡುಗಳಲ್ಲಿ ಬೆಳೆದರೂ ನಮ್ಮ ಅರಗಿನ ಮರವೇ ಬೇರೆ. ನಮ್ಮ ರಾಜ್ಯದಲ್ಲಿ ಈ ಮರದ ಉಪಯೋಗ ಅದರ ಬೀಜಗಳಿಗಾಗಿ (ಎಳಮರಕ್ಕಾಗಿ). ಬಹಳ ಉತ್ಕೃಷ್ಟವಾದ ಹೌಬೆ.

ಇದು ಸುಂದರವಾದ ಮರ – ಸುಮಾರು 9 – 13.5 ಮೀಟರ್ (30 – 40 ಅಡಿ) ಎತ್ತರಕ್ಕೆ ಬೆಳೆಯುವ ದೊಡ್ಡ ಮರ. ದಟ್ಟವಾದ ನೆತ್ತಿ. ನಯವಾದ ಬೂದುತೊಗಟೆ. ಕಾಳಿನಮೇಲೆ ಉದ್ದನೆಯ ಗಾಡಿ ಅಥವಾ ಗುಂಡಿ ಬಿದ್ದಿರುತ್ತದೆ. (ಅರಗೊಳವೆಯಂತೆ) ಎಲೆ 20-25 ಸೆಂ.ಮೀ. (8-16 ಅಂಗುಲ) ಉದ್ದ. ಉಪ ಎಲೆಗಳಿಗೆ ತೊಟ್ಟಿಲ್ಲ. ಚಳಿಗಾಲದಲ್ಲಿ ಎಲೆಗಳು ಉದುರುತ್ತವೆ. ಆದರೆ ಫೆಬ್ರವರಿ, ಮಾರ್ಚಿಯಲ್ಲಿ ಹೊಸಎಲೆ ಹೊಮ್ಮುತ್ತವೆ. ಮೊದಲು ವಿವಿಧ ಕೆಂಪು ಬಣ್ಣಕ್ಕಿದ್ದು, ಆಮೇಲೆ ಅವು ಅಚ್ಚ ಹಸುರು ತಿರುಗುತ್ತವೆ. ಹಸುರೆಲೆ ಮಧ್ಯೆ ಕೆಂಪು ಚಿಗುರೆಲೆ ಬಹಳ ಮೋಹಕವಾಗಿ ಕಾಣುತ್ತದೆ. ಹಾಗೆಯೇ ಎಲೆ ಉದುರುವಾಗಲೂ



ಚಿತ್ರ : 17. ಕೆಂದಾಳೆ

ಎಲೆಗಳು ಹಳದಿಗೆ ತಿರುಗುತ್ತವೆ. ಆಗಲೂ ನೋಟಕ್ಕೆ ಚೆಂದ. ಎಲೆ ಜತೆಗೆ ಫೆಬ್ರುವರಿ ಮಾರ್ಚಿಯಲ್ಲಿ ಹಳದಿ ಹಸುರಿನ ಸಣ್ಣ ಹೂವುಗಳು ಗುಂಪುಗುಂಪಾಗಿ ಮೂಡುತ್ತವೆ.

ಇದರ ಹಣ್ಣು ದುಂಡು. ಕೆಲವು ವೇಳೆ ಮುಳ್ಳು ಇರುವುದುಂಟು. ಅಂಟುವಾಳದ ನಂಟನಾಗಿರುವುದರಿಂದ ಹಣ್ಣು ಅದರ ಹಾಗೆಯೇ ಇರುತ್ತದೆ. ಆದರೆ ತಿರುಳಿನಲ್ಲಿ ನೊರೆ ಬರುವುದಿಲ್ಲ. ಇದನ್ನು ಕೆಲವರು ತಿನ್ನುತ್ತಾರಂತೆ. ಎಳೆ ಹಣ್ಣನ್ನು ಉಪ್ಪಿನಕಾಯಿ ಹಾಕಬಹುದು.

ಇದು ಸಾಮಾನ್ಯವಾಗಿ ಬಯಲುಸೀಮೆಯ ಕಾಡುಗಳಲ್ಲಿ ಬೆಳೆಯುತಕ್ಕ ಮರ.

ಬೇಸಿಗೆಯ ಪ್ರಾರಂಭದಲ್ಲಿ ಹೊಸ ಚಿಗುರು ತಳ್ಳುವುದರಿಂದ, ಬೇಸಿಗೆಯಲ್ಲಿ, ಇದರ ತಂಪು ನೆರಳಿಗೋಸ್ಕರ, ಇದನ್ನು ಸಾಲುಮರವಾಗಿಯೂ ಬೆಳೆಸಬಹುದು. ಅಲಂಕಾರವಾಗಿಯೂ ಇರುತ್ತದೆ.

ಇದರ ಒಳಮರ ತೇಗದ ಒಂದೂವರೆಯಷ್ಟು ಭಾರ. 29 ರಿಂದ 31 ಕೆ.ಜಿ. 0.027 ಘನ ಮೀಟರ್‌ಗೆ (1 ಘನ ಅಡಿ – 65 – 70 ಪೌಂಡು). ಎಳೆಗಳು ಒತ್ತಾಗಿರುವುದರಿಂದ ಚೇಗು ಗಟ್ಟಿ; ಹೆಚ್ಚು ಬಾಳಿಕೆ. ಕೊಟ್ಟಣಗಳಿಗೆ, ಒನಕೆಗಳಿಗೆ, ಎಣ್ಣೆ ಗಾಣಗಳಿಗೆ, ಉರುಳೆಗಳಿಗೆ ಒಪ್ಪು. ವ್ಯವಸಾಯದ ಮುಟ್ಟುಗಳಿಗೆ, ಅವರಲ್ಲೂ ಮಲುಬಿ ತಾಳುಗಳಿಗೆ, ಗಾಡಿಗಳಿಗೆ, ಕಟ್ಟಡಗಳಿಗೆ ಬಹಳ ಸೂಕ್ತವಾದ ಮರ.

ಬೀಜಗಳಿಂದ ಹಿಂಡಿದ ಎಣ್ಣೆ, ಸಾಬೂನುಗಳ ಮತ್ತು ಸುಗಂಧತೈಲಗಳ ತಯಾರಿಕೆಯಲ್ಲಿ ಬಳಸುತ್ತಾರೆ; ದೀಪಗಳಿಗೂ ಅನುಕೂಲ.

ಇದರ ಎಲೆಯನ್ನು ಮೇವಿನ ಸೊಪ್ಪಿಗಾಗಿ ಹಾಕಬಹುದು ಬೀಜದ ಎಣ್ಣೆಯನ್ನು ತಲೆಗೆ ಹಚ್ಚಿಕೊಳ್ಳುತ್ತಿದ್ದರೆ, ಕೂದಲು ಸೊಂಪು ಎಂಬ ನಂಬಿಕೆ.

ಇದರ ತೊಗಟೆ ಮತ್ತು ಎಣ್ಣೆಯನ್ನು ಔಷಧಿಗಾಗಿಯೂ ಉಪಯೋಗಿಸುತ್ತಾರೆ.

ಇದನ್ನು ನೇರವಾಗಿ ಬೀಜಬಿತ್ತಿ ಬೆಳೆಸಿಕೊಳ್ಳಬಹುದು. ಇದಕ್ಕಾಗಿ ಹೊಸ ಬೀಜಗಳನ್ನೇ ಹಾಕಬೇಕು. ಸಸಿಗಳನ್ನು ನಾಟಿ ಮಾಡಿದರೆ ಹಿಡಿಯುವುದಿಲ್ಲ. ಎಳೆಯ ಸಸಿಗಳನ್ನು ಕಳೆಗಳಿಂದ ಕಾಪಾಡಬೇಕು. ಬುಟ್ಟಿಕುಂಡಗಳಲ್ಲಿ ಬೆಳೆಸಿ ನೆಡಬಹುದು.

ಸಾಲು ಮರವಾಗಿ ಹಾಕುವುದಾದರೆ 12 ಮೀಟರ್ (40 ಅಡಿ) ಅಂತರದಲ್ಲಿ ಬೀಜಗಳನ್ನು ಊರಬೇಕು.

ಮರದ ರೂಪಕ್ಕೆ 66 ನೆಯ ಚಿತ್ರ ನೋಡಿ.

25. ಅಂಟುವಾಳ. (ಕೊಗಟೆ ಮರ, ನೊರೆಕಾಯಿ, ಅಂಟ್ವಾಲ, ಅರ್ತಳ, ಕುಗತಿ) *Sapindus emarginatus* Vahl.

ಇದು ದೊಡ್ಡ, ಅಲಂಕಾರವಾಗಿ ಬೆಳೆಯುವ ಅನಿತ್ಯ ಹಸುರಿನ (ಡೇಸಿಡುಯಸ್—ಎಲೆ ಉದುರಿಸುವ) ಮರ. 10.5 ಮೀಟರ್ (30–35 ಅಡಿ) ಎತ್ತರಕ್ಕೆ

ಬೆಳೆಯುತ್ತೆ. ಇದು ಕಾಡು ಮರವಾದರೂ, ಬೆಂಗಳೂರು, ಮೈಸೂರು ಜಿಲ್ಲೆಯ ಕಾಡುಗಳಲ್ಲಿ ಸಾಮಾನ್ಯವಾಗಿ ಬೆಳೆಯುತ್ತಿದ್ದರೂ, ಅನೇಕ ರೈತರು ಹೊಲದ ಅಂಚುಗಳಲ್ಲೂ ಹಾಕುವುದುಂಟು. ಇದು ಬಯಲು ಸೀಮೆಯ ಮರ ; ಮಲೆನಾಡಿನಲ್ಲಿ ಅಪರೂಪ.



ಚಿತ್ರ : 18. ಅಂಟುವಾಳ

ಇದರ ತೊಗಟೆ ಬೂದು, ಒರಟು, ಪೊರೆಪೊರೆ. ಎಲೆ ಮೋಟು ; ಎರಡು ಮೂರು ಜೋಡಿ ಉಪ ಎಲೆಗಳು ; ಚಿಕ್ಕವು ; ತುದಿಯಲ್ಲಿ ಹಿರಿ ಎಲೆ. ಹೂವು ಬಿಳಪು. ಗುಂಪು ಗುಂಪಾಗಿ ಬಿಡುತ್ತದೆ—ಅಕ್ಟೋಬರ್ ತಿಂಗಳಲ್ಲಿ. ಫೆಬ್ರುವರಿಯಲ್ಲಿ ಹಣ್ಣು ಬಲಿಯುತ್ತದೆ. ಮಾರ್ಚ್, ಏಪ್ರಿಲ್ ತಿಂಗಳುಗಳಲ್ಲಿ ಎಲೆಗಳು ಉದುರುತ್ತವೆ.

ಅಂಟುವಾಳದಲ್ಲಿ ಎರಡು ಪ್ರಭೇದಗಳಿರುತ್ತವೆ. ಒಂದರಲ್ಲಿ ಎಲೆಗಳು ಅಗಲ, ಎಲೆ ತುದಿ ಮೊನಚು. ಇನ್ನೊಂದರಲ್ಲಿ ಎಲೆ ಕಿರಿದು, ದಪ್ಪ. ಎಲೆ ತಳದಲ್ಲಿ ತುಪ್ಪಳ.

ಬಲಿತ ಹಣ್ಣುಗಳಿಗೆ ಹಿತವಾದ ಕಂಪು ಇರುತ್ತದೆ. ಕಾಯಿಯಲ್ಲಿ ಮೂರು ಹೋಳು, ಮೂರು ಬೀಜ. ಹಣ್ಣಿನಲ್ಲಿ ಸಾಬೂನಿನಂತೆ ನೊರೆ ಕೊಡುವ ವಸ್ತುವಿದೆ. ಈ ನೊರೆ ರೇಷ್ಮೆ ಮತ್ತು ಉಣ್ಣೆ ಬಟ್ಟೆಗಳನ್ನು ಒಗೆಯಲು ಸಾಬೂನಿಗಿಂತ ಉತ್ಕೃಷ್ಟವೆಂದು ಅನೇಕರು, ಅದರಲ್ಲೂ ಉತ್ತರ ಭಾರತದಲ್ಲಿ, ಹೇಳುತ್ತಾರೆ. ಇದನ್ನು ಹತ್ತಿ ಬಟ್ಟೆಗಳನ್ನು ಒಗೆಯಲೂ ಉಪಯೋಗಿಸುತ್ತಾರೆ.

ಇದರ ಹಣ್ಣನ್ನು ಔಷಧಿಗಾಗಿಯೂ ಉಪಯೋಗಿಸುತ್ತಾರೆ. ಚೇಳು ಕಚ್ಚಿದರೆ ಹಚ್ಚುತ್ತಾರೆ. ಇದರ ಬೇರು, ಚಕ್ಕೆ ಹಾಗೂ ಬೀಜದ ಎಣ್ಣೆ ಔಷಧಿಗಾಗಿ ಒದಗುತ್ತದೆ.

ಇದರ ಒಳಮರ ಹಳದಿ : ಗಟ್ಟಿ : ತೇಗಕ್ಕಿಂತ ಭಾರ. ಎಳೆ ಅಡ್ಡವಿಲ್ಲ. ಬಾಳಿಕೆ ಸ್ವಲ್ಪ ಕಡಿಮೆ. ಆದರೂ ಕೆಲವೆಡೆ ಕಟ್ಟಡಗಳಿಗೆ ಉಪಯೋಗಿಸುತ್ತಾರೆ : ಗಾಡಿಗಳಿಗೂ ಬಳಸುತ್ತಾರೆ. ಹಿಡಿಗಳಿಗೆ ಅನುಕೂಲ. ಬಾಚಣಿಗೆಯನ್ನು ಕೊರೆಯುತ್ತಾರೆ.

ಇದು ರೈತರಿಗೆ ಉಪಯುಕ್ತವಾದ ಮರ. ಇದನ್ನು ಗೋಡು, ಜಿಗಟು ಮತ್ತು ಕಲ್ಲು ಪರಿಮಣ್ಣುಗಳಲ್ಲಿ ಬೆಳೆಸಬೇಕು. ಬೀಜವನ್ನು ನೆಟ್ಟು, ಅಥವಾ ಬುಡದಿಂದ ಒಡೆಯುವ ಮರಿಗಳನ್ನು ಕಿತ್ತು ನಟ್ಟೂ ಬೆಳೆಸಬಹುದು. ಒಟ್ಟು ಹುಡುಪು ಸಸಿಗಳನ್ನು ನೆಡಬಹುದು. ಸಸಿಗಳನ್ನು 10.5–12 ಮೀಟರ್ (35–40 ಅಡಿ) ಅಂತರಕ್ಕೆ ಹಾಕಬೇಕು.

ಉತ್ತರ ಭಾರತದಲ್ಲಿ ಇದೇ ಬಗೆಯ ಮರವಿದೆ. ಆದರೆ ಅದು ಬೇರೆ ಕುಲಕ್ಕೆ ಸೇರಿದ್ದು; ಅದರ ತವರು ಜಪಾನು. ನಮ್ಮ ಅಂಟುವಾಳದ ತವರು ಇದೇ ದೇಶ.

ಮರದ ರೂಪಕ್ಕೆ 67 ನೆಯ ಚಿತ್ರ ನೋಡಿ.

26. ಬಂದರಿಕೆ. (ಬಂಡಾರೆ, ಬಂಡರೆ, ಹಂಗರಿಕೆ) *Dodonaea viscosa* (Linn.) Jacq.

ಇದು ಮರವಲ್ಲ: ಪೊದೆ : ಅಂಟುವಾಳದ ಗುಂಪಿಗೆ ಸೇರಿದ್ದು. ಬಯಲು ಸೀಮೆಯಲ್ಲಿ ಬಡಬಗ್ಗರಿಗೆ ಹೆಚ್ಚು ಪಾಲು ಸೌದೆ ಆಗುವುದು ಇದರಿಂದಲೇ. ಒಳ್ಳೆಯ ಸೌದೆ. ಚೆನ್ನಾಗಿ ಉರಿಯುತ್ತದೆ. ಇದರಲ್ಲಿ ರಾಳವಿರುವುದರಿಂದ ಬೇಗ ಹತ್ತಿಕೊಳ್ಳುತ್ತದೆ. ತಡೆದು ಒಂದೇ ರೀತಿಯಾಗಿ ಉರಿಯುತ್ತದೆ. ದಪ್ಪ ರೆಂಬೆಗಳನ್ನು ಕೈಗುದ್ದಲಿ ಮುಂತಾದುವಕ್ಕೆ ಹಿಡಿಗಳಾಗಿ ಬಳಸಬಹುದು. ರೆಂಬೆಗಳಿಂದ ಬೆತ್ತವನ್ನು ಮಾಡುತ್ತಾರೆ.

ಪೊದೆಯಾದರೂ ಇದರ ಒಳಮರ ಭಾರ – ತೇಗದ ಒಂದೂವರೆಯಷ್ಟು. ಇದನ್ನು ಕೊರೆಯುವ, ಕಡೆಯುವ ಕೆಲಸಕ್ಕಾಗಿ ಉಪಯೋಗಿಸುತ್ತಾರೆ.

ಇದನ್ನು ಬೀಜದಿಂದ ಬೆಳೆಸಿಕೊಳ್ಳಬಹುದು. ಎಲ್ಲಿ ಮರಗಳನ್ನು ಎಬ್ಬಿಸಲು, ಹಾಕಲು ಅನಾನುಕೂಲವೋ ಆ ಕಡೆ ಇದನ್ನು ಬೆಳೆಸುವುದು ಒಳ್ಳೆಯದು. ಮನೆಗೆ ಸೌದೆ – ಪುರಲೆ ಸಿಗುತ್ತದೆ. ಪುರಲೆಯಾದರೇನಂತೆ – ಒಳ್ಳೆಯ ಸೌದೆ.

27. ಉಡಿಮರ (ಗೊಡ್ಡ. ಊದಿಮರ, ತಿಂತಿ, ಪ್ರನಾಲ್, ಕುರಟಿಗೆ, ಸಿಂಟಿ ಮರ, ಗೋಗಲ್, ಹೆಣ್ಣುಗೊಡ್ಡ) *Lannea coromandelica* (Houtt.) Merr.

ಇದು ಬಯಲು ಸೀಮೆಯ ಮರ; ಸ್ವಲ್ಪ ವಿಲಕ್ಷಣವೇ ಎನ್ನಬಹುದು; ನೆತ್ತಿ ಅಗಲ: ಆದುದರಿಂದ ಸಾಲು ಮರವಾಗಿ ಬೆಳೆಸುತ್ತಾರೆ. ಇದರ ತೊಗಟೆ ಬೂದು, ನಯ, ಸುಲಿಯುತ್ತದೆ. ಮಾರ್ಚಿ, ಏಪ್ರಿಲಿನಲ್ಲಿ ಬಿಳಿಯ ಹೂವುಗಳು; ಆಗ ಮರ ಅಂದವಾಗಿಯೇ ಕಾಣುತ್ತದೆ. ಮೇ – ಜುಲೈನಲ್ಲಿ ಕಾಯಿ ಬಲಿಯುತ್ತದೆ. ಹಣ್ಣು ಕೆಂಪಗೆ ಇರುತ್ತದೆ.



ಚಿತ್ರ : 19. ಉಡಿಮರ

ಎಲೆಗಳು 30 – 60 ಸೆಂ. ಮೀ (1 – 2 ಅಡಿ) ಉದ್ದ ; ರೆಂಬೆ ತುದಿಯಲ್ಲಿ ಜೊಂತೆಯಾಗಿ ಬೆಳೆಯುತ್ತವೆ. ಈ ಮರ ಎಲೆ ಉದುರಿಸುತ್ತದೆ – ಚಳಿಗಾಲದಲ್ಲಿ. ಮಾರ್ಚ್, ಏಪ್ರಿಲ್‌ನ ತನಕ ಬೆತ್ತಲೆ. ಅದಕ್ಕೇ ವಿಲಕ್ಷಣವೆಂದು ಕರೆದದ್ದು. ಹೊಸ ಎಲೆ, ಹೂವು ಬಂದ ಮೇಲೆ ಹೊಮ್ಮುತ್ತವೆ.

ಇದರ ಎಲೆಗಳನ್ನು ದನಗಳು ಬಲು ಮೆಚ್ಚುಗೆಯಿಂದ ತಿನ್ನುತ್ತವೆ. ಆದುದರಿಂದ ಇದು ಮೇವಿನ ಮರ. ಇವನ್ನು ಆನೆಗಳಿಗೂ ಹಾಕುತ್ತಾರೆ.

ಇದರ ಒಳಮರ ಕೆಂಪು. ತೂಕ ತೇಗಕ್ಕಿಂತ ಕಡಿಮೆ. 0.028 ಘನಮೀಟರ್ (1 ಘನ ಅಡಿ) ಸುಮಾರು $16\frac{1}{4}$ – 18 ಕಿ. ಜಿ. (36 – 40) ತೂಗುತ್ತದೆ. ತೇಗಿನ ಎಳೆಗಳು ಒತ್ತಾಗಿರುವುದರಿಂದ ಮರ ಗಟ್ಟಿ : ಆದರೆ, ಬೇಗ ಹುಳುಗಳಿಗೆ ತುತ್ತಾಗುತ್ತವೆ : ಬಾಳಿಕೆ ಕಡಿಮೆ. ಈಟಿಗಳಿಗೆ, ಗಾಡಿ ಅರೆಕಾಲುಗಳಿಗೆ, ಹಲಗೆಗಳಿಗೆ, ಮುಟ್ಟುಗಳಿಗೆ, ಗಾಣ, ಹಾಗೂ ಕೊಟ್ಟಣಗಳಿಗೆ ಬಳಸುತ್ತಾರೆ. ಈಚೆಗೆ ಈ ಮರದ ತಿರುಳನ್ನು ಕಾಗದದ ತಯಾರಿಕೆಗೆ ಬಳಸಲು ಪ್ರಯತ್ನ ಮಾಡಿದ್ದಾರೆ. ಬಾಚಣಿಗೆ ಹಾಗೂ ಮರದ ಪಾತ್ರೆಗಳನ್ನು ಮಾಡುತ್ತಾರೆ.

ಇದರ ತೊಗಟೆಯಿಂದ ಚರ್ಮ ಹದಮಾಡಲು ಒಗಚು ಸಿಗುತ್ತದೆ. ಇದರ ಕಂದು ಬಣ್ಣದ ಗೋಂದು ಔಷಧಿ. ಈ ಗೋಂದನ್ನು ಸುಣ್ಣ ಬಳಿಯುವಾಗ ಸುಣ್ಣ ದೋಣಿಗೆ ಸೇರಿಸುತ್ತಾರೆ. ಈ ಗೋಂದನ್ನು ತಿಂಡಿಗಳಲ್ಲೂ ಬಳಸಬಹುದು.

ಇದನ್ನು ಹೊಸ ಬೀಜ ಊರಿ ಬೆಳೆಸಬಹುದು. ತುಂಡುಗಳು ಬೇಗ ಬೇರು ಬಿಡುತ್ತವೆಯಾದುದರಿಂದ ರೆಂಬೆ ತುಂಡುಗಳನ್ನು ನೆಡುವುದು ಒಳ್ಳೆಯದು. ಆದರೆ ಮರ ಡೊಂಕಾಗುತ್ತದೆ. ಬೀಜದಿಂದ ಬೆಳೆದ ಮರ ನೇರವಾಗಿ ಬೆಳೆಯುತ್ತದೆ.

ಮರದ ರೂಪಕ್ಕೆ 68 ನೆಯ ಚಿತ್ರ ನೋಡಿ


28. ನುಗ್ಗೆ. *Moringa oleifera* Lamk.

ಇದೂ ಕೂಡ ಅಗಸೆ (ಚೊಗಚೆ) ಯಂತೆ ಬೇಗ ಬೆಳೆಯುವ, ಬಹಳ ಕಾಲ ನಿಲ್ಲದ, ಮೃದು ಚೇಗು ಇರುವ ಮರ. ತೊಗಟೆಯೂ ಮೃದು ; ಬೂದು.

ಇದರ ಎಲೆಗಳು ತೆಳುವಾಗಿ ಜೋಡನೆಯಾಗಿರುವುದರಿಂದ ಈ ಮರ ನೆರಳು ಕಟ್ಟುವುದಿಲ್ಲ. ಮರ ಅಂದವಾಗಿಯೇ ಇರುತ್ತದೆ. ಇದರ ಬಿಳಿಯ ಹೂವು ಸುವಾಸನೆ. ಜನವರಿ–ಏಪ್ರಿಲ್‌ನಲ್ಲಿ, ಚಿಗುರೆಲೆ ತಳಿದಾಗಲೇ ಈ ಹೂವುಗಳೂ ಹೊಮ್ಮುತ್ತವೆ.

ಇದರ ಎಲೆ, ಚಿಗುರು, ಹೂವು, ಕಾಯಿಗಳೆಲ್ಲ ತರಕಾರಿ. ಆದುದರಿಂದ ಇದನ್ನು ತರಕಾರಿ ಮರವೆನ್ನಬಹುದು. ತರಕಾರಿಗಲ್ಲದೆ ಇದರ ಕಾಯಿಗಳನ್ನು ಉಪ್ಪಿನಕಾಯಿ ಹಾಕಬಹುದು, ಇದರ ಖಾರವಾದ ಬೇರನ್ನು ಯುರೋಪಿನವರು ಸಾಸಿವೆ ಬದಲಾಗಿ ಉಪಯೋಗಿಸುತ್ತಾರೆ. ಇದರ ಘಾಟು ಮುಲ್ಲಂಗಿಯ ತರಹ.

ಇದರ ಚಿಗುರು ಮತ್ತು ಎಲೆಗಳು ವನದ ಮೇವೂ ಕೂಡ. ಇವರ ತೊಗಟೆ ಯಿಂದ ನಾರು ತೆಗೆದು ಹಗ್ಗ ಹೊಸೆಯುತ್ತಾರೆ. ಇದರ ಗೋಂದೂ ಉಪ ಯೋಗಕ್ಕೆ ಬರುತ್ತದೆ.



ಚಿತ್ರ : 20. ನುಗ್ಗೆ


ಇದರ ಒಳಮರ ಮೃದು, ಬೆಂಡು ; ಬಾಳಿಕೆಯಿಲ್ಲ.

ಇವರ ಬೀಜದ ಎಣ್ಣೆ ಸ್ವಚ್ಛ. ಇದು ಕೈಗಡಿಯಾರಗಳಿಗೆ ಬಹಳ ಒಪ್ಪಾದ ಎಣ್ಣೆ. ಈ ಎಣ್ಣೆ, 'ಬೆನ್ ಆಯಿಲ್' ಎಂಬ ಹೆಸರಿನಲ್ಲಿ ಪ್ರಸಿದ್ಧಿಯಾಗಿದೆ. ಈ ಎಣ್ಣೆಯನ್ನು ಸುಗಂಧ ತೈಲಗಳ ತಯಾರಿಕೆಯಲ್ಲಿ ಮೂಲ ತೈಲವಾಗಿ ಬಳಸುತ್ತಾರೆ. ಇದನ್ನು ಕೀಲು ರೋಗಗಳಿಗೆ ಔಷಧಿಯಾಗಿ ಲೇಪಿಸುತ್ತಾರೆ. ಇದರ ಬೇರೂ ಔಷಧಿ ; ಎಲೆಗಳೂ ಕೂಡ.

ಇದನ್ನು ಬೇಲಿಗಳಲ್ಲಿ, ಜಮೀನಿನ ಅಂಚುಗಳಲ್ಲಿ ಹಾಕಬಹುದು. ಬೀಜದಿಂದಲೇ ಸುಲಭವಾಗಿ ಬೆಳೆಸಬಹುದು ಅಥವಾ ದೊಡ್ಡ ರೆಂಬೆಯ ತುಂಡುಗಳನ್ನು ಹೂಣಿ ಆಗಾಗ್ಗೆ ನೀರು ಎರೆಯುತ್ತಿದ್ದರೆ, ಬೇರು ಬಿಡುವಂತೆ ಮಾಡಬಹುದು.

29. **ಅಗಸೆ.** (ಜೊಗಚೆ) *Sesbania grendiflora* (Linn) Poir.

ಈ ಮರ ಹೆಚ್ಚು ಕಾಲ ಬಾಳದಿದ್ದರೂ, ರೈತರಿಗೆ ಉಪಯೋಗಕ್ಕೆ ಬರತಕ್ಕ ಮರ. ಇದರ ಚಿಗುರೆಲೆ, ಹೂವು, ಹಾಗೂ ಕಾಯಿಗಳನ್ನು ತರಕಾರಿಯಾಗಿ ಬಳಸಬಹುದು. ಎಲೆಗಳನ್ನು ದನಗಳಿಗೆ ತಿನ್ನಿಸಬಹುದು. ಇದರ ತೊಗಟೆ, ಎಲೆ ಮತ್ತು ಹೂವಿನ ರಸ ಔಷಧಿಗೆ ಒದಗುತ್ತದೆ. ಕೆಂಪು ಹೂವು ಬಿಡುವ ಅಗಸೆ ಜಾತಿಯ ಬೇರೂ ಕೂಡ ಔಷಧಿಗೆ ಬರುತ್ತದೆ. ಇದರ ಹೂವು ಶಿವನಿಗೆ ಮೆಚ್ಚು; ಆದುದರಿಂದ ಪೂಜೆಗೆ ಬೇಕಾಗುತ್ತದೆ.



ಚಿತ್ರ : 21. ಅಗಸೆ

ಇದರ ಒಳಮರ ಬಿಳುಪು, ಮೃದು, ಹಗುರ. ಆದರೆ ಬಾಳಿಕೆಯಿಲ್ಲ. ಆದರೂ ತಾತ್ಕಾಲಿಕವಾಗಿ ಗುಡಿಸಲು ಕಂಬಕ್ಕೆ ಬಳಸಬಹುದು. ಸೌದೆಯಾಗಿಯೂ ಉರಿಸಬಹುದು.

ಈ ಮರ ನೋಟಕ್ಕೆ ಅಂದ. ನೇರದಿಂಡು. ತಿಳಿ ಕಂದಿನ ನಯವಾದ ತೊಗಟೆ; ಹರಡಿಕೊಂಡು ಬೆಳೆಯುವ ರೆಂಬೆ; ಅಚ್ಚ ಹಸುರೆಲೆ; ದೊಡ್ಡ ಹೂವು: ಬಿಳಿ ಅಥವಾ ಕೆಂಪು ಅಥವಾ ಗುಲಾಬಿ ಬಣ್ಣದ ದಳಗಳು. ಈ ಮರ ಬೇಗ ಬೆಳೆಯುತ್ತದೆ. ಎರಡು ವರ್ಷಗಳಲ್ಲಿ 6 ಮೀಟರ್ (20 ಅಡಿ) ಎತ್ತರಕ್ಕೆ ಬೆಳೆಯುವುದುಂಟು.

ಇದನ್ನು ಹಸಿ ಇರುವ ಕಡೆ ಬೀಜ ಹಾಕಿ ಬೆಳೆಸಬಹುದು. ಎಲೆತೋಟಗಳಲ್ಲಿ ಹಂಬು ಹತ್ತಿಸಲು ಬೆಳೆಯುವುದುಂಟು.

ಅಗಸೆ ನಂಟರಾದ ಡೈಂಚ (ಮುಳ್ಳು ಜೀನಂಗಿ) ಅರಿಸಿನ ಜೀನಂಗಿ, ಸ್ಟೇಬೆ ಗಳು ಇವುಗಳನ್ನೂ ಬಯಲುಗಳಲ್ಲಿ ಹಸುರು ಸೊಪ್ಪಿಗಾಗಿ ಬೆಳೆಯಬಹುದು.

30. ಹಾಲಿವಾಣ : (ಹಾಲುವಾಣ, ಪಾಂಗಾರ, ಬಿಳಿ ಪಾಂಗಾರ) *Erythrina indica* (Lamk)

ನಮ್ಮ ದೇಶದ ಅಲಂಕಾರದ ಹೂವಿನ ಮರಗಳಲ್ಲಿ ಇದಕ್ಕೆ ಮೇಲು ಸ್ಥಾನವಿದೆ. ಇದೇ ನಿಜವಾದ ಪಾರಿಜಾತ. ಕೃಷ್ಣ ಇಂದ್ರಲೋಕದಿಂದ ತನ್ನ ಹೆಂಡತಿಗಾಗಿ ಅಪಹರಿಸಿ ತಂದ ಮರ. ಇದರ ಮೂರು ಬಿಡಿ ಎಲೆಗಳು ತ್ರಿಮೂರ್ತಿಗಳೆಂದು – ಬ್ರಹ್ಮ, ವಿಷ್ಣು, ಮಹೇಶ್ವರರೆಂದು ನಂಬಿಕೆ.

ಇದು ಸಣ್ಣಮರ. ಆದರೂ, ಅನುಕೂಲ ಪರಿಸ್ಥಿತಿಗಳಿದ್ದಲ್ಲಿ 13.5 ಮೀಟರ್ (45 ಅಡಿ) ಎತ್ತರಕ್ಕೂ ಬೆಳೆಯುವುದುಂಟು. ಇದು ಎಲೆಯ ತೋಟಗಳಲ್ಲಿ ಮೆಣಸುಬಳ್ಳಿ ಹಬ್ಬಿಸುವ ಮರವಷ್ಟೇ ಅಲ್ಲ; ಇತರ ಕೆಲಸಗಳಿಗೂ ಒದಗುತ್ತದೆ. ಬೇಲಿಕಂಬಗಳಿಗೆ ಒಪ್ಪಾದ ಮರ. ಈ ಕಂಬಗಳು ಬೇರುತಳೆದು, ಚಿಗುರಿ, ರೆಂಬೆಗಳನ್ನು ಹೊತ್ತು, ಮುಳ್ಳುಗಳನ್ನು ಚಾಚಿ ಒಪ್ಪ ಬೆಳೆಯುವ ಬೇಲಿ ಮರ. ದ್ರಾಕ್ಷಿ, ಕುಂಬಳ, ಮಲ್ಲಿಗೆ, ಗುಲಾಬಿ ಗಿಡಗಳನ್ನು ಹಬ್ಬಿಸಲೂ, ಈ ಮರವನ್ನು ಬೆಳೆಸಬಹುದು. ಕೆಲವೆಡೆ ಗಾಳಿ ತಡೆಗಾಗಿಯೂ ಬೆಳೆಸುತ್ತಾರೆ. ಕಾಫಿತೋಟಗಳಲ್ಲಿ ನೆರಳಿಗಾಗಿ ಬೆಳೆಸಬಹುದು.

ಇದರ ಒಳಮರ ಬೆಂಡೆಂದು ತಿಳಿಯಬಾರದು. ಹಗುರ, ಮೃದು, ನಿಜ ; ಆದರೆ ಬೆಂಡಲ್ಲ. ಇದು ಬಾಳಿಕೆಯ ಮರ. ಇದನ್ನು ಕೊರೆದು ಅಲಂಕಾರದ ಭರಣಿ, ಡಬ್ಬಿಗಳು, ತಟ್ಟೆ ಮುಂತಾದವುಗಳನ್ನು ಮಾಡುತ್ತಾರೆ. ಜರಡಿ ಚೌಕಟ್ಟಿಗೆ, ಸಣ್ಣ ಹಲಗೆಗಳಿಗೆ ಒದಗುತ್ತದೆ. ಚೆನ್ನಪಟ್ಟಣದಲ್ಲಿ ಬೆಪ್ಪಾಲೆಯ ಬದಲಾಗಿ ಇದರ ಒಳ ಮರವನ್ನು ಬೊಂಬೆಗಳನ್ನು ಮಾಡಲು ಉಪಯೋಗಿಸವುದುಂಟು. ಇದರ ತೂಕ 0.028 ಘನ ಮೀಟರಿಗೆ (1 ಘನ ಅಡಿ) 9 ಕೆ.ಜಿ. (20 ಪೌಂಡು) ಮಾತ್ರ.



ಚಿತ್ರ : 22. ಹಾಲಿವಾಣ

ಇದರ ಚಿಗುರೆಲೆ ದನಗಳಿಗೆ ಮೇವು. ತೊಗಟೆ, ಎಲೆಗಳು ಔಷಧಿಗಾಗುಂತ್ತವೆ. ತೊಗಟೆಯಿಂದ ನಾರು ತೆಗೆದು ಹಗ್ಗ ಹೊಸೆಯಬಹುದು.

ಇದು ಫೆಬ್ರುವರಿ–ಮಾರ್ಚಿ ತಿಂಗಳುಗಳಲ್ಲಿ ಹೂವು ತಳ್ಳುತ್ತದೆ. 2-3 ತಿಂಗಳುಗಳ ಕಾಲ ಹೂವು ಬಿಡುತ್ತಿರುತ್ತದೆ. ಹೂವಿನ ಕಾಲದಲ್ಲಿ ಎಲೆಗಳು ಉದುರುತ್ತವೆ. ಇದರ ಕೆಂಪು ಹೂವು ಬಹಳ ಮೋಹಕ. ಕೆಲವು ಜಾತಿಗಳಲ್ಲಿ ಹೂವು ಬಿಳಿಗಿರುತ್ತದೆ. ಮೇ, ಜೂನ್ ತಿಂಗಳುಗಳಲ್ಲಿ ಕಾಯಿ ಬಲಿಯುತ್ತವೆ.

ಇದನ್ನು ಬೀಜ ನೆಟ್ಟು ಬೆಳೆಯಬಹುದು. ಅಥವಾ 1.8 ಮೀಟರ್ (6 ಅಡಿ) ತುಂಡುಗಳನ್ನು ಊರಿ ಬೆಳೆಸಬಹುದು. ಬೀಜದಿಂದ ಬೆಳೆಸಿದಲ್ಲಿ ಬೆಳವಣಿಗೆ ನಿಧಾನವಾದುದರಿಂದ, ತುಂಡು ನೆಟ್ಟು ಬೆಳೆಸುವುದೇ ವಾಡಿಕೆ.

31. ಮುತ್ತುಗ *Butea monosperma* (Lamk) Tuab.

ಹೆಚ್ಚು ಮಳೆ ಅಥವಾ ಬಹಳ ಕಡಿಮೆ ಮಳೆ ಬೀಳುವ ಪ್ರದೇಶಗಳನ್ನುಳಿದು ಇತರ ಎಲ್ಲಾ ಕಡೆಗಳಲ್ಲೂ ಬೆಳೆಯುವ ಅಥವಾ ಬೆಳೆಸಬಹುದಾದ ಮರ. ಸತ್ವವಿಲ್ಲದ ಮಣ್ಣುಗಳಲ್ಲಿ, ಬಂಜರುಗಳಲ್ಲಿ, ಮರಳು ಮಣ್ಣುಗಳಲ್ಲಿ, ಸುರುಜು ತಳವಿರುವ ನೆಲಗಳಲ್ಲಿ ಈ ಮರ ಬೆಳೆಯಬಲ್ಲದು. ಉಪ್ಪು ಭೂಮಿಗಳಲ್ಲೂ, ಜೌಗು ಇರುವ ಕಡೆಯೂ ಬೆಳೆಯುವುದುಂಟು. ಕೆಲವು ಕಡೆ ತನಗೇ ತಾನೇ ಗುಂಪುಗೂಡಿ ಬೆಳೆಯುವ ಮರ.

ಇದರ ಒಳಮರ ಮೃದು, ಸ್ವಲ್ಪ ಹಗುರ.—0.028 ಘನ ಮೀಟರ್ (1 ಘನ ಅಡಿ) 15½ ಕೆ.ಜಿ. (34 ಪೌಂಡು) ತೂಗುತ್ತದೆ. ಬಾಳಿಕೆ ಕಡಿಮೆ. ಆದರೂ ನೀರಿನಲ್ಲಿ ಬಳಸಲು ಯೋಗ್ಯ. ಬಾನಿಗಳನ್ನು ಮಾಡಲು ಉಪಯೋಗಿಸುತ್ತಾರೆ. ಇದರಿಂದ ಉತ್ತಮ ಇದ್ದಿಲನ್ನೂ ತಯಾರು ಮಾಡಬಹುದು. ಸೌದೆಯೂ ಚೆನ್ನಾಗಿ ಉರಿಯುತ್ತದೆ. ಇದರ ಎಲೆ ಉಪಯೋಗ ಎಲ್ಲರಿಗೂ ತಿಳಿದ ವಿಷಯ— ಊಟದೆಲೆ ಹಚ್ಚುವುದಕ್ಕೆ ಬಹಳ ಸೂಕ್ತವಾದದ್ದು. ಹೋಮ ಹವನಗಳಿಗೆ ಇದರ ಕಡ್ಡಿಗೇ ಪ್ರಶಸ್ತಿ. ಮೇಕೆ ಇದರ ಎಲೆಗಳನ್ನು ಮುಟ್ಟದಿದ್ದರೂ ಎಮ್ಮೆಗಳಿಗೆ ಮೇವಿನ ಸೊಪ್ಪಾಗಿ ಹಾಕಬಹುದು. ಕೆಲವೆಡೆ ಇದರ ಎಲೆಗಳನ್ನು ಬೀಡಿ ಸುತ್ತಲು ಉಪಯೋಗಿಸುತ್ತಾರೆ. ಈ ಮರದ ಮೇಲೆ ಅರಗು ಹುಳುಗಳನ್ನೂ ಸಾಕಬಹುದು.


ಇದರ ತೊಗಟೆಯನ್ನು ಗಾಯಗೊಳಿಸಿ ಕೆಂಪು ಗೋಂದನ್ನು ಇಳಿಸುತ್ತಾರೆ. ಈ ಗೋಂದನ್ನು ಔಷಧಿಗಾಗಿ ಬಳಸುತ್ತಾರೆ. ತೊಗಟೆಯಿಂದ ಒರಟು ನಾರನ್ನು ಹೊಸೆಯಬಹುದು. ಬೇರುಗಳಿಂದ ಗಟ್ಟಿನಾರು ಸಿಗುತ್ತದೆ. ಇದರ ಬೀಜವನ್ನು ಕುಟ್ಟಿ ಹೊಟ್ಟೆ ಹುಳುಗಳಿಗೆ ಮದ್ದಾಗಿ ಬಳಸುವುದುಂಟು.

ಇದು ಹೂವಿಲ್ಲದಾಗ ಅಲಂಕಾರದ ಮರವಲ್ಲ. ಎಲೆ, ರೆಂಬೆಗಳನ್ನು ಊಟದೆಲೆಗೆ, ಸಮಿತ್ತಿಗೆ ಆಗಾಗ್ಗೆ ತರಿಯುವುದರಿಂದ ಈ ಮರ ಡೊಂಕುಡೊಂಕಾಗಿ



ಚಿತ್ರ : 23 a. ಮುತ್ತುಗ

ವಿಕಾರವಾಗಿರುತ್ತದೆ. ಆದರೆ ಎಲೆ ಉದುರಿ ಮರದ ತುಂಬ ಕೆಂಪು ಹೂಗಳು ಹೊರ ಬಿದ್ದಾಗ ಈ ಮರದ ಸೊಬಗನ್ನು ಮೀರಿಸುವ ಮರಗಳು ಅತಿ ವಿರಳ. ಆದಕ್ಕೆಯೋ



ಚಿತ್ರ : 23. ಮುತ್ತುಗ

ಇದನ್ನು 'ವನಜ್ವಾಲೆ' ಎಂದು ಇಂಗ್ಲೀಷಿನಲ್ಲಿ ಕರೆಯುತ್ತಾರೆ. ಈ ಮರ ಜನವರಿಯಲ್ಲಿ ಎಲೆಗಳನ್ನು ಕಳಚುತ್ತದೆ. ಫೆಬ್ರುವರಿ – ಮಾರ್ಚಿಯಲ್ಲಿ ಇವು ಬಿರಿದು ಹೂವುಗಳಿಂದ ಮರವನ್ನೇ ಮುಚ್ಚುತ್ತವೆ. ಹೂವಾದ ನಂತರ ಬೇಗನೆಯೇ ಕಾಯಿ. 10 ಸೆಂಟಿಮೀಟರ್‌ನಿಂದ 20 ಸೆಂಟಿಮೀಟರ್ (4–8 ಅಂಗುಲ) ಉದ್ದದ ಕಾಯಿಗಳು ಕಚ್ಚುತ್ತವೆ.

ಈ ಮರವನ್ನು ಬೀಜಗಳಿಂದ ಬೆಳೆಸಬಹುದು. ಹೊಸ ಬೀಜಗಳನ್ನೇ ಬಿತ್ತಬೇಕು. ಕಾರಣ, ಬೀಜ ಬೇಗ ಕೆಡುತ್ತವೆ. ಮೊಳಕೆ ಶೀಘ್ರ – ಒಂದೆರಡು ದಿನಗಳಲ್ಲಿ. ಕಾಡಿನಲ್ಲಿ ಈ ಮರ, ಬೇರುಮರಿಗಳಿಂದ ವೃದ್ಧಿಯಾಗುತ್ತದೆ.

ಬಂಜರುಗಳಲ್ಲಿ, ಕಲ್ಲು, ಸುರುಜು ನೆಲಗಳಲ್ಲಿ ಬೆಳೆಸಲು ಯೋಗ್ಯವಾದ ಮರ.

32. ಬಿಂದಿ (ಬಿಂಡಿಮರ, ಶಿಸ್ಸು, ಶಿಶ್ಶುಬಾಗೆ, ಇರುಗುಂಡಿ ಮಾವು, ಅಗರ) *Dalbergia sissoo* Roxb.


ಇದು ನಮ್ಮ ರಾಷ್ಟ್ರದ ಮುಖ್ಯ ಚಾಬೀನೆ ಮರಗಳಲ್ಲಿ ಒಂದು. ಕಟ್ಟಡಗಳಿಗೆ, ಪೀಠಾಸನಗಳಿಗೆ, ಗಾಡಿಗಳಿಗೆ, ಕೆತ್ತನೆಗೆ, ಆಟದ ದಾಂಡು (ಬ್ಯಾಟ್) ಮುಂತಾದವುಗಳ ತಯಾರಿಕೆಗೆ ಬಹಳ ಒಪ್ಪಾದ ಮರ. ಇದು ಹೆಚ್ಚಾಗಿ ಹಿಮಾಲಯ ತಪ್ಪಲು ಪ್ರದೇಶಗಳಲ್ಲಿ – ತರಾಯಿ ಪ್ರದೇಶಗಳಲ್ಲಿ ಬೆಳೆದರೂ, ಮುಖ್ಯವಾಗಿ ಉತ್ತರ ಭಾರತದ ಮರವಾದರೂ, ಇದನ್ನು ಇದರ ಉಪಯೋಗ ವೈವಿಧ್ಯಕ್ಕೋಸ್ಕರ, ಇತರ ಕಡೆಗಳಲ್ಲೂ ಬೆಳೆಸುತ್ತಿದ್ದಾರೆ. ಮೈಸೂರು ಬೆಂಗಳೂರಿನ ಕಡೆ ಬೆಳೆಸಿದ್ದಾರೆ.

ಇದು ನಮ್ಮ ರಾಜ್ಯದ ಶ್ರೇಷ್ಠ ಚಾಬೀನೆ ಮರವಾದ ಬೀಟೆ (ಕಪ್ಪುಮರ)ಯ ಹತ್ತಿರದ ನಂಟು.

ಇಂತಹ ಉತ್ತಮ ಮರವನ್ನು ಸೌದೆಗಾಗಿ ಬೆಳೆಸುವುದು ಮತ್ತು ಉರಿಸುವುದು ಸರಿಯಲ್ಲವೆಂದು ತೋರಿದರೂ ಇದನ್ನು ಸೌದೆ ಮರವಾಗಿ ಬೆಳೆಸಲು ಯೋಗ್ಯ. ಕೆಲವು ಕಾರಣಗಳಿಂದ:

ಇದು ಆಳಕ್ಕೆ ಬೇರು ಬಿಡುವ ಮರ. ಅಂದರೆ, ಹೊಲದ ಅಂಚಿನಲ್ಲಿ ಹಾಕಿದರೂ ಬೆಳೆಗಳಿಗೆ ಧಕ್ಕೆ ಇಲ್ಲ. ಅಲ್ಲದೆ, ಇದು ಸುಮಾರು ಎತ್ತರಕ್ಕೆ ಬೆಳೆಯುತ್ತದೆ. ಕೆಲವೆಡೆ 12-15 ಮೀಟರ್ (40-50 ಅಡಿ) ಎತ್ತರಕ್ಕೆ ಬೆಳೆಯುತ್ತದೆ. ಆದುದರಿಂದ ನೆರಳು ಕಟ್ಟುವುದಿಲ್ಲ. ಅಲ್ಲದೆ, ಇದರ ನೆತ್ತಿ ದಟ್ಟವಾಗಿರದೆ ಹಗುರವಾಗಿರುವುದರಿಂದ ನೆರಳಿನ ಭಯ ಕಡಮೆ. ಮತ್ತೆ, ವರ್ಷದಲ್ಲಿ ಸುಮಾರು ಮೂರು ತಿಂಗಳುಗಳು ಕಾಲ ಎಲೆಗಳೇ ಇರುವುದಿಲ್ಲ. ಈ ಕಾರಣಗಳಿಂದ ಇದನ್ನು ಜಮೀನಿನ ಅಂಚುಗಳಲ್ಲಿ ಬೆಳೆಸಲು ಯೋಗ್ಯ.

ಪಾಳು ಜಮೀನು, ಬಡಮಣ್ಣು, ಮರಳು, ಸುರುಜು, ಕಲ್ಲುಭೂಮಿಗಳೇ ಇದಕ್ಕೆ ಹಿಡಿಸುತ್ತದೆ. ಜಿಗಟು ಮಣ್ಣುಗಳಲ್ಲಿ, ಸಾರವತ್ತಿನ ಮಣ್ಣುಗಳಲ್ಲಿ ಚೆನ್ನಾಗಿ ಬೆಳೆಯುವುದಿಲ್ಲ. ಆದುದರಿಂದ ಇದನ್ನು ಗ್ರಾಮಾಂತರ ಪ್ರದೇಶಗಳ ಬಂಜರು ಮುಂತಾದೆಡೆ ಬೆಳೆಸಬಹುದು.




ಚಿತ್ರ : 24. ಬಿಂದಿ ರೆಂಬೆ, ಎಲೆ

ಇದು ಬೇಗ ಬೆಳೆಯುವ ಮರ. ಇದನ್ನು ಆಗಾಗ್ಗೆ ಕಡಿದರೂ ಹೊಸ ಚಿಗುರು ತಳ್ಳಿ ಬೆಳೆಯಬಲ್ಲದು.

ಈ ವಿಶಿಷ್ಟ ಗುಣಗಳಿರುವುದರಿಂದ ಈ ಮರವನ್ನು ಗ್ರಾಮದ ಕಾಡುಗಳಲ್ಲಿ, ಸಾಲುಮರವಾಗಿ, ತೋಪುಗಳಲ್ಲಿ, ನಾಲಾ ಪಕ್ಕಗಳಲ್ಲಿ, ಹೊಲದ ಅಂಚಿನಲ್ಲಿ, ಬಂಜರಿನಲ್ಲಿ ಬೆಳೆಸಬಹುದು.

ಇದರ ತಿಳಿಹಳದಿ ಹೂವು, ಸುವಾಸನೆ. ಮರ ನೋಟಕ್ಕೂ ಒಪ್ಪು. ಆದುದರಿಂದ ಇದನ್ನು ಅಲಂಕಾರದ ಮರವಾಗಿಯೂ ಬೆಳೆಸಲು ಯೋಗ್ಯ.

ಇದರ ಒಳಮರ ಬಹಳ ಗಟ್ಟಿ ; ಬಲಯುತ ; ಹೆಚ್ಚು ಬಾಳಿಕೆ. ಇದರ ತೂಕ ಸುಮಾರು ತೇಗದ ಮರದಷ್ಟೆ ; 0.028 ಘನ ಮೀಟರ್ (1 ಘನ ಅಡಿ) ತೂಕ 20–22½ ಕಿ.ಜಿ. (44-50 ಪೌಂಡು). ಬಣ್ಣ ಕಂದು; ಎಳೆಗಳು ಕಪ್ಪು. ಆದುದರಿಂದ



ಚಿತ್ರ : 25. ಬಿಂದಿ ಕಾಯಿ

ಪೀಠಾಸನಗಳಿಗೆ ಸೂಕ್ತವಾದದ್ದು. ಇದನ್ನು ಗಾಡಿಗಳಿಗೂ, ಕಟ್ಟಡಗಳಿಗೂ ಬಳಸಬಹುದು. ಇದರ ತೊಗಟೆ ದಪ್ಪ, ಬೂದಿ.

ಈ ಮರದೆಲೆಗಳು ಚಳಿಗಾಲದಲ್ಲಿ, ನವೆಂಬರ್–ಡಿಸೆಂಬರ್ ತಿಂಗಳಿನಲ್ಲಿ ಉದುರುತ್ತವೆ. ಮಾರ್ಚ್, ಏಪ್ರಿಲ್ಲಿನಲ್ಲಿ ಹೂವು. ಕಾಯಿಗಳು ಬಲಿಯಲು ನಿಧಾನ; ಡಿಸೆಂಬರ್-ಫೆಬ್ರುವರಿಯಲ್ಲಿ ಬಲಿಯುತ್ತವೆ. ಬೀಜ ಸಣ್ಣ; 28 ಗ್ರಾಂ (1 ಔನ್ಸು) ನಲ್ಲಿ ಸುಮಾರು 4 ಸಾವಿರ ಬೀಜಗಳಿರುತ್ತವೆ.

ಕಾಯಿಗಳನ್ನು ಬಲಿತ ಮೇಲೆ ಕಿತ್ತು ಒಣಗಿಸಿಟ್ಟುಕೊಂಡು ಬಿತ್ತನೆಗೆ ಮುಂಚೆ ಬೀಜ ಬಿಡಿಸಿಕೊಳ್ಳಬೇಕು.

ಬೀಜಗಳನ್ನು, ಬೆಳೆಯುವ ಸ್ಥಳದಲ್ಲೇ ನೇರವಾಗಿ ಹೂಣಿ ಬೆಳೆಸಬಹುದು. ಮೊಳಕೆ 2 ರಿಂದ 3 ವಾರಗಳಲ್ಲಿ ಮುಗಿಯುತ್ತದೆ. ಇಲ್ಲವೆ, ಒಟ್ಲು ಹುಯ್ದು ಸಸಿಗಳನ್ನು ನಾಟಿ ಮಾಡಬಹುದು. ಹೀಗೆ ಮಾಡುವುದಾದರೆ, ಸಸಿಗಳನ್ನು ಮಣ್ಣಿನ ಉಂಡೆ ಸಹಿತ ತೆಗೆದು ಹೂಣಬೇಕು. ಬೇಕಾದರೆ ಎರಡು ವರ್ಷದ ಸಸಿಗಳನ್ನು ತಲೆ ಕತ್ತರಿಸಿ ಹೂಣಬಹುದು. ಆಗ ಇವರ ಬೆಳವಣಿಗೆ ಬೇಗ.

ಸುಮಾರು ಒಂದೂಮುಕ್ಕಾಲು ಮೀಟರ್ (6 ಅಡಿ) ಎತ್ತರದ ಸಸಿಗೂಟಗಳನ್ನು ನಡಬಹುದು. ಗಿಡ ಸ್ಥಾಪಿತವಾಗುವ ತನಕ ನೀರು ಎರೆಯುತ್ತಿರಬೇಕು.

ಅನೇಕ ವೇಳೆ ತಾಯಿ ಮರದಿಂದ ಅನೇಕ ಬೇರು ಮರಿಗಳು ಹೊರಟು ಒಂದು ತೋಪಾಗಿಯೇ ಬೆಳೆಯುವುದುಂಟು.

ರೈತರು ಬೆಳೆಯಲು ಬಹಳ ಯೋಗ್ಯವಾದ ಮರ.

ಮರದ ರೂಪಕ್ಕೆ 69 ನೆಯ ಚಿತ್ರನೋಡಿ.

33. ಬೀಟೆ (ತೊಡೆಗಟ್ಟ, ಕರೇವ್ಯಾಡಿ, ಬೀಟೆ, ಬೀಡೆ, ಕರೀಮರ)
Dalbergia latifolia Roxb.

ಇದು ಘಟ್ಟದ ತಪ್ಪಲುಗಳಲ್ಲಿ ಹೆಚ್ಚು. ಆದರೂ ಇತರ ಕಡೆಗಳಲ್ಲೂ ಬೆಳೆಸಬಹುದು. ನೀರು ಚೆನ್ನಾಗಿ ಬಸಿಯುವ ಆಳವಾದ ಮತ್ತು ತೇವವಿಟ್ಟುಕೊಳ್ಳುವ ಮಣ್ಣುಗಳಲ್ಲಿ ಚೆನ್ನಾಗಿ ಬೆಳೆಯುತ್ತದೆ. ಬಡಕಲು ಮಣ್ಣಿನಲ್ಲೂ ಸುಮಾರಾಗಿ ಬೆಳೆಯುವುದುಂಟು; ಆದರೆ ಬೆಳವಣಿಗೆ ಮೊಟಕು. ಸಾಮಾನ್ಯವಾಗಿ ಸ್ವಲ್ಪ ಹೆಚ್ಚು ಮಳೆ ಬೀಳುವ ಕಡೆಯೇ ಇದನ್ನು ಬೆಳೆಸುವುದು ಸೂಕ್ತ.

ಇದರ ನೆತ್ತಿ ದುಂಡು. ತೊಗಟೆ ತೆಳುವು; ಬೂದು ಬಣ್ಣ. ಇದು ಎತ್ತರಕ್ಕೆ ಬೆಳೆಯುತ್ತದೆ. 30 ಮೀಟರ್ (100 ಅಡಿ) ಎತ್ತರಕ್ಕೂ ಬೆಳೆಯುವುದುಂಟು.

ಇದೂ ಕೂಡ ಚಳಿಗಾಲದಲ್ಲಿ ಎಲೆಗಳನ್ನು ಉದುರಿಸಿ ಬೋಳಾಗುತ್ತದೆ. ಹೂವಿನ ಕಾಲ ನಿರ್ದಿಷ್ಟವಲ್ಲ. ಬಿಳಿ ಹೂವುಗಳು. ಕಾಯಿ, ಡಿಸೆಂಬರ್ – ಏಪ್ರೆಲ್

ತಿಂಗಳಿನಲ್ಲಿ ಬಲಿಯುತ್ತವೆ. ಬೀಜ ಬಿಂದಿ ಬೀಜಕ್ಕಿಂತ ದೊಡ್ಡವು – 28 ಗ್ರಾಮ್ (1 ಔನ್ಸ್)ನಲ್ಲಿ ಸುಮಾರು 600 ಬೀಜ. ಇವು ಮೊಳಕೆ ಶಕ್ತಿಯನ್ನು ಬೇಗ ಕಳೆದುಕೊಳ್ಳುತ್ತವೆ.

ಎಳೆಯ ಸಸಿಗಳು ಸ್ವಲ್ಪ ಕೋಮಲ; ಬರ ಪರಿಸ್ಥಿತಿಯನ್ನು ಚೆನ್ನಾಗಿ ಎದುರಿಸಲಾರವು: ಆದರೆ ದೊಡ್ಡ ಗಿಡಗಳು ಒಣ ಪರಿಸ್ಥಿತಿಯನ್ನು ತಡೆಯಬಲ್ಲವು.



ಚಿತ್ರ : 26. ಬೀಟೆ

ಈ ಮರವೂ ಕೂಡ, ಕತ್ತರಿಸಿದರೂ ಚಿಗುರುತ್ತದೆ. ಬಿಂದಿಯಂತೆಯೇ, ಬೇರುಗಳಿಂದ ಬೇರು ಮರಿಗಳು ಬೆಳೆಯುತ್ತವೆ.

ಇದರ ಒಳ ಮರ ಬಹಳ ಶ್ರೇಷ್ಠವಾದ ಚಾಬೀನೆ ಮರ. ಹೊರದೇಶಗಳಲ್ಲಿ ಇದಕ್ಕೆ ಗಿರಾಕಿ ಹೆಚ್ಚು. ಈ ಮರಕ್ಕೆ ಬಹಳ ಬೆಲೆ. ಒಳ ಮರ ಗಟ್ಟಿ. ಭಾರ – 0.028 ಘನಮೀಟರ್ ಮರ 27 ಕೆ. ಜಿ. (1 ಘನ ಅಡಿ, 60 ಪೌಂಡು) ತೂಗುತ್ತದೆ. ಚೆನ್ನಾಗಿ ಪಾಲಿಷ್ ತೆಗೆದುಕೊಳ್ಳುತ್ತದೆ. ಪೀಠಾಸನಗಳಿಗೆ ಬಹಳ ಒಪ್ಪು ; ಗತ್ತಿನ ಮರ. ಅಲಂಕಾರದ ಕೆಲಸಗಳಿಗೆ ಮೆಚ್ಚಿನ ಮರ. ಗಾಡಿ ಗಳಿಗೂ, ಮುಟ್ಟುಗಳಿಗೂ ಒದಗುತ್ತದೆ.

ಇದನ್ನು ನೇರವಾಗಿ ಬೀಜ ಹೂಣಿ ಬೆಳೆಸಬಹುದು. ಮಾರ್ಚ್ – ಏಪ್ರೆಲ್ ತಿಂಗಳಿನಲ್ಲಿ ಬಲಿತ ಕಾಯಿಗಳನ್ನು ಮರದಿಂದ ಬಿಡಿಸಿಕೊಂಡು, ಒಣಗಿಸಿಟ್ಟುಕೊಂಡು ಕಾಯಿ – ತುಂಡುಗಳನ್ನು ನೆಡಬೇಕು. ಬೀಜ ಬಿಡಿಸಬಾರದು. 5–12 ದಿನದಲ್ಲಿ ಮೊಳಕೆ ಬರುತ್ತದೆ. ಈ ಮರಗಳನ್ನು ಒಟ್ಲು ಹಾಕಿ ಬೆಳೆಸಲು, ಬೀಜಗಳನ್ನು ಮಾರ್ಚ್-ಏಪ್ರೆಲ್‌ನಲ್ಲಿ ಒಟ್ಲು ಹುಯ್ದು, ಕ್ರಮವರಿತು ನೀರು ಹಾಕುತ್ತ ಬಿಸಿಲಿನಿಂದ ರಕ್ಷಿಸಬೇಕು. ಆಗಾಗ್ಗೆ ಕಳೆ ಕೀಳುತ್ತಿರಬೇಕು. ಮಳೆಗಾಲದಲ್ಲಿ ಸಸಿಗಳನ್ನು ನೆಡಬಹುದು. ಮೊದಲನೆಯ ವರ್ಷ ಸಸಿ ಶೀಘ್ರವಾಗಿ ಬೆಳೆಯುವುದಿಲ್ಲ. ಅನಂತರ ಬೆಳವಣಿಗೆ ಬಿರುಸುಗೊಳ್ಳುತ್ತದೆ. 2–3 ವರ್ಷದ ಸಸಿ ಗೂಟಗಳನ್ನು ನೆಟ್ಟೂ ಬೆಳೆಸಬಹುದು.

ತೋಪಿನಲ್ಲಿ ಬೆಳೆಸುವುದಾದರೆ, ಸಸಿಗಳನ್ನು 4.5 ಮೀಟರ್ (15 ಅಡಿ) ಅಂತರದಲ್ಲಿ ನೆಟ್ಟು, ಕೆಲವು ವರ್ಷಗಳಾದ ನಂತರ ಚೆನ್ನಾಗಿ ಬೆಳೆಯದ ಸಸಿಗಳನ್ನು ಕಿತ್ತುಹಾಕಬೇಕು. ಮರ ಮರಕ್ಕೂ 9 ಮೀಟರ್ (30 ಅಡಿ) ಅಂತರವಿದ್ದರೆ ಒಳ್ಳೆಯದು.

34. ಹೊನ್ನೆ (ಒಳ್ಳೆ ಹೊನ್ನೆ, ಬಿಬ್ಲ) *Pterocarpus marsupium* Roxb.

ಶ್ರೀಗಂಧದಂತೆ, ತೇಗದಂತೆ ಈ ಮರ ಸರ್ಕಾರದ ಮೀಸಲು ಮರ. ಇದು ಗುಪ್ತಕಾಡುಗಳಲ್ಲಿ ದೊಡ್ಡ ಮರ. ಮಲೆನಾಡಿನ ಹೊರವಲಯದಲ್ಲಿ ಚೆನ್ನಾಗಿ ಬೆಳೆಯುತ್ತದೆ. ಇದರ ಒಳ ಮರ ತೇಗದಂತೆ ಗುಣಯುಕ್ತವಾದದ್ದು ; ಆದರೆ ಅದಕ್ಕಿಂತ ಸ್ವಲ್ಪ ಗಡಸು, ಅಷ್ಟೆ ; ಇದರ ಎಲೆಗಳು ಒತ್ತು ; ಬಣ್ಣ ಕೆಂಪುಕಂದು ; ಬಲಯುತ ; ಚೆನ್ನಾಗಿ ಹದ ಮಾಡಬಹುದು ; ಒಳ್ಳೆಯ ಪಾಲಿಷ್ ತೆಗೆದುಕೊಳ್ಳುತ್ತದೆ; ಶ್ರೇಷ್ಠದರ್ಜೆಯ ಪೀಠಾಸನಗಳಿಗೆ ಒಪ್ಪು. ಗಾಡಿಗಳಿಗೆ, ಚಕ್ರಗಳಿಗೆ, ಕಂಬಗಳಿಗೆ, ಕಿಟಕಿ, ಬಾಗಿಲುಗಳಿಗೆ, ಚೌಕಟ್ಟಿಗೆ, ವ್ಯವಸಾಯದ ಮುಟ್ಟುಗಳಿಗೆ ಯೋಗ್ಯವಾದ ಮರ. ತೇಗಕ್ಕಿಂತ ಸ್ವಲ್ಪ ಭಾರ. 0.028 ಘನ ಮೀಟರ್ (1 ಘನ ಅಡಿ) $24\frac{1}{2}$ ಕೆ.ಜಿ. (54 ಪೌಂಡು) ತೂಗುತ್ತದೆ.

ಇದರ ತೊಗಟೆಯನ್ನು ಗಾಯಗೊಳಿಸಿದರೆ ಅಚ್ಚ ಕೆಂಪು ಬಣ್ಣದ ಗೋಂದು ಬರುತ್ತದೆ. ಈ ಗೋಂದಿಗೆ ಬಹಳ ಗಿರಾಕಿ. ಕಿನೋ ಎಂಬ ಹೆಸರಿನಲ್ಲಿ ಇದು ರಫ್ತಾಗುತ್ತದೆ.

ಇದು ಜೂನ್ – ಜುಲೈ ತಿಂಗಳಿನಲ್ಲಿ ಎಲೆಗಳನ್ನು ಉದುರಿಸುತ್ತದೆ. ಅಕ್ಟೋಬರ್‌ನಲ್ಲಿ ಹಳದಿ ಹೂವು. ಫೆಬ್ರುವರಿಯಲ್ಲಿ ಕಾಯಿ. ಇದರ ಹೂವು ಮತ್ತು ಬೀಜಗಳನ್ನು ಬರಗಾಲದಲ್ಲಿ ತಿನ್ನುವುದುಂಟು.

ಇದನ್ನು ಬೆಳೆಸಲು ಬೀಜಗಳನ್ನು ಜೂನ್ ತಿಂಗಳಿನಲ್ಲಿ ಬಿತ್ತಬೇಕು. ಇದರ ಕಾಯಿಗೆ ರೆಕ್ಕೆ ಇರುತ್ತದೆ. ಈ ಕಾಯನ್ನು ಒಂದು ದಿವಸ ನೆನೆಸಿ, ಕಾಯಿನ ರೆಕ್ಕೆಯನ್ನು ತಳಮುಖ ಮಾಡಿ, ಮಣ್ಣಿನಲ್ಲಿ ಒತ್ತಬೇಕು. ಬೀಜ 20–25 ದಿನಗಳಲ್ಲಿ ಮೊಳೆಯುತ್ತದೆ. ಸಸಿಗಳು ಬಹಳ ಕೋಮಲ. ನವುರು. ಇವುಗಳಿಗೆ ಹೆಚ್ಚು ನೀರನ್ನು ಆಟ್ಟಬಾರದು. 6 ತಿಂಗಳ ನಂತರ ಸಸಿಗಳನ್ನು ಉದ್ದದ ಕುಂಡಗಳಲ್ಲೋ, ಬುಟ್ಟಿಗಳಲ್ಲೋ, ನೆಟ್ಟು ಕಾಪಾಡಬೇಕು.

ಸಸಿಗಳನ್ನು 9 ಮೀಟರ್ (30 ಅಡಿ) ಅಂತರಕ್ಕೆ ನೆಡಬೇಕು.

35. ಗ್ಲಿರಿಸೀಡಿಯಾ *Gliricidia sepium* (Jacq.) Walp.

ಗ್ಲಿರಿಸೀಡಿಯಾ, ರೈತರಿಗೆ, ಅದರಲ್ಲೂ ಬತ್ತದ ಬೆಳೆಗಾರರಿಗೆ, ಬಹಳ ಅಚ್ಚು ಮೆಚ್ಚಾದ ಗಿಡವಾಗುತ್ತಿದೆ. ಇದರ ಸೊಪ್ಪು ಉತ್ತಮ ತರವಾದ ಹಸುರು ಗೊಬ್ಬರವಾದುದರಿಂದ, ಅನೇಕ ರೈತರು ಇದನ್ನು ಬದುವಿನ ಮೇಲೆ, ಗದ್ದೆ ಅಂಚಿನಲ್ಲಿ ಮತ್ತು ಇತರ ಕಡೆ ಬೆಳೆಯುವ ಸಂಪ್ರದಾಯವನ್ನು ಇಟ್ಟುಕೊಳ್ಳುತ್ತಿದ್ದಾರೆ.

ಇದನ್ನು ಸೊಪ್ಪಿಗಾಗಿ ಆಗಾಗ್ಗೆ ತರಿಯುವುದರಿಂದ ಇದು ಪೊದೆಯಾಗಿ ನಿಲ್ಲುತ್ತದೆ. ಆದರೆ, ಹಾಗೆ ತರಿಯದೆ ಬಿಟ್ಟರೆ ಇದೂ ಕೂಡ ಸುಮಾರು ಎತ್ತರದ ಮರವಾಗಿ ಬೆಳೆಯುತ್ತದೆ. 15 ಮೀಟರ್‌ನಿಂದ 18 ಮೀಟರ್ (50-60 ಅಡಿ) ಎತ್ತರಕ್ಕೂ ಬೆಳೆಯಬಹುದು.


ಇದು ಬೇಗ ಬೆಳೆಯುವ ಮರ. 10 ವರ್ಷದಲ್ಲಿ ಸುಮಾರು 15 ಮೀಟರ್ (50 ಅಡಿ) ಎತ್ತರಕ್ಕೆ ಬೆಳೆದ ಮರಗಳಿವೆಯಂತೆ.

ಇದು ನಮ್ಮ ದೇಶದ ಮರವಲ್ಲ; ದಕ್ಷಿಣ ಅಮೆರಿಕದ್ದು; ನಮ್ಮ ದೇಶಕ್ಕೆ ಬಂದುದು 50-55 ವರ್ಷಗಳ ಹಿಂದೆ.

ಕೆಲವು ವರ್ಷಗಳ ಹಿಂದೆ ಇದನ್ನು ಬೆಳೆಸುತ್ತಿದ್ದದ್ದು, ಅಲಂಕಾರದ ಮರವಾಗಿ ಹೂವಿಗಾಗಿ, ನೆರಳಿಗಾಗಿ. ಅಥವಾ ಬಾಳೆ ತೋಟಗಳಲ್ಲಿ ಗಾಳಿ ತಡೆಗಾಗಿ; ಆದರೆ ಇತ್ತೀಚೆಗೆ ಇದನ್ನು ಬೆಳೆಸುತ್ತಿರುವುದು ಹಸುರು ಗೊಬ್ಬರಕ್ಕಾಗಿ.

ಈ ಗಿಡ ಅನೇಕ ಬಗೆಯ ಮಣ್ಣುಗಳಲ್ಲಿ ಬೆಳೆಯಬಲ್ಲದು. ಆದರೆ, ಕಲ್ಲು ನೆಲಗಳಲ್ಲಿ ಬೆಳವಣಿಗೆ ಕುಂಠಿತ.

ಹಿಂದೆ ಮತ್ತು ಈಗಲೂ ಬತ್ತದ ಗದ್ದೆಗಳಿಗೆ, ಬಹುತೇಕವಾಗಿ, ಹೊಂಗೆ ಸೊಪ್ಪನ್ನೇ ತುಳಿಯುತ್ತಿದ್ದರು. ಈಗಲೂ ಈ ಪದ್ಧತಿ ಬಳಕೆಯಲ್ಲಿದೆ. ಅದಕ್ಕಾಗಿ, ಅನೇಕ ಕಡೆ – ಅದರಲ್ಲೂ ಕೋಲಾರ ಜಿಲ್ಲೆಯಲ್ಲಿ – ಹೊಂಗೆ ತೋಪುಗಳನ್ನು ಬೆಳೆಸುತ್ತಿದ್ದರು. ಆದರೆ ಹೊಂಗೆ ಮರದ ಬೆಳವಣಿಗೆ ನಿಧಾನ. ಸೊಪ್ಪು ಕಡಿಯಲು ಹಲವು ವರ್ಷಗಳು ಕಾಯಬೇಕು. ವರ್ಷಕ್ಕೆ ಎರಡು ಸಾರಿಗಿಂತ ಹೆಚ್ಚು ಸಲ



ಚಿತ್ರ : 27. ಗ್ಲಿರಿಸೀಡಿಯ

ಸೊಪ್ಪನ್ನು ತರಿಯಲಾಗುವುದಿಲ್ಲ. ಅಲ್ಲದೆ ಸೊಪ್ಪಿನೊಂದಿಗೆ, ಬೇಗ ಕೊಳೆಯುಲಾರದ ರೆಂಬೆಗಳನ್ನು ತರಿಯಬೇಕಾಗುತ್ತದೆ.

ಹೊಂಗೆಯನ್ನು ಗದ್ದೆ ಬದುವಿನ ಮೇಲೆ ಅಥವಾ ಹೊಲದ ಅಂಚಿನಲ್ಲಿ ಬೆಳೆಯಲಾಗುವುದಿಲ್ಲ. ಇದರ ದಟ್ಟ ನೆರಳು ಬೆಳೆಗಳಿಗೆ ಅನಾನುಕೂಲ. ಅಲ್ಲದೆ, ಕಾರ್ತಿಕದ ಬೆಳೆಗೆ ಸಾಕಾದಷ್ಟು ಸೊಪ್ಪು ಸಿಕ್ಕರೂ ವೈಶಾಖದ ಬೆಳೆಗೆ (ಬೇಸಿಗೆ ಬೆಳೆಗೆ) ಸಾಕಷ್ಟು ಹೊಂಗೆ ಸೊಪ್ಪು ಸಿಗುವುದಿಲ್ಲ. ಅಲ್ಲದೆ, ಹೊಂಗೆ ಎಣ್ಣೆ, ಹಾಗೂ ಹೊಂಗೆ ಹಿಂಡಿಗಳು ಉತ್ತಮವಾದ ಲಾಭದಾಯಕವಾದ ಉತ್ಪನ್ನಗಳು. ಹೊಂಗೆ ಮರವನ್ನು ಪದೇ ಪದೇ ತರಿಯುತ್ತಿದ್ದರೆ ಈ ಉತ್ಪನ್ನಗಳು ಹೆಚ್ಚಾಗಿ ಸಿಗುವುದಿಲ್ಲ.

ಆದರೆ, ಗ್ಲಿರಿಸೀಡಿಯಾದಲ್ಲಿ, ಈ ತೆರದ ಯಾವ ಅನಾನುಕೂಲವೂ ಇಲ್ಲ. ಇದು 2 – 3 ವರ್ಷಗಳಲ್ಲೇ ಚೆನ್ನಾಗಿ ಸ್ಥಾಪಿತವಾಗಿ 5 ಅಥವಾ 6 ನೆಯ ವರ್ಷವೇ ಪ್ರಾಯದ ಗಿಡವಾಗುತ್ತದೆ. ಈ ಮೂರು ವರ್ಷಗಳಲ್ಲಿ 1.8 – 2.4 ಮೀಟರ್ (6 ರಿಂದ 8 ಅಡಿ) ಎತ್ತರಕ್ಕೆ ಬೆಳೆಯುತ್ತದೆ. ಅಲ್ಲಿಂದಾಚೆ ಎಲೆಗಳನ್ನು ಹಸುರು ಗೊಬ್ಬರಕ್ಕಾಗಿ ತರಿಯಬಹುದು. ಬಲಿತ ಗಿಡ ಸುಮಾರು 90 ಕೆ.ಜಿ. (200 ಪೌಂಡು) ಸೊಪ್ಪು ಕೊಡುತ್ತದೆ. ಎಳೆಯ ಗಿಡದಿಂದ $22\frac{1}{2}$ ಕೆ. ಜಿ.(50 ಪೌಂಡು) ಯಷ್ಟು ಮಾತ್ರ ಕತ್ತರಿಸಿಕೊಳ್ಳಬೇಕು.

ಎಳೆಯ ಗಿಡಗಳನ್ನು ದನ, ಮೇಕೆ ಮೇಯದಂತೆ ಒಂದು ವರ್ಷ ರಕ್ಷಿಸಬೇಕು, ಎತ್ತರಕ್ಕೆ ಬೆಳೆಯುವ ತನಕ. ಸ್ಥಾಪಿತವಾದ ಮೇಲೆ, ಇವಕ್ಕೆ ಏನೂ ಆರೈಕೆ ಬೇಕಿಲ್ಲ. ಈ ಮರ ಸುಮಾರು 20 ವರ್ಷ ಬದುಕುತ್ತದೆ.

ಹಾಕಿದ ಮೊದಲನೆಯ ವರ್ಷ ಸ್ವಲ್ಪ ಸೊಪ್ಪನ್ನು ಕತ್ತರಿಸಿಕೊಳ್ಳಬಹುದು. ಇದರಿಂದ ಗಿಡಕ್ಕೆ ತೊಂದರೆಯೇನೂ ಇಲ್ಲ. ಆಗಾಗ್ಗೆ ತರಿಯುವುದರಿಂದ ಎಳೆಯ, ಸುಲಭವಾಗಿ ಬೇಗ ಕಳಿಯುವ, ಸೊಪ್ಪು ಸಿಗುತ್ತದೆ. ತರಿಯದೆ ಬಿಟ್ಟರೆ ರೆಂಬೆ ಮುಂತಾದವು ನಾರು ಕಟ್ಟುತ್ತವೆ. 3 ತಿಂಗಳುಗಳಿಗೆ ಒಮ್ಮೆ ಸೊಪ್ಪು ಕಡಿಯುವುದು ಸೂಕ್ತ.

ಗ್ಲಿರಿಸೀಡಿಯಾವನ್ನು ಬದುಗಳ ಮೇಲೆ, ಹೊಲದ ಸುತ್ತಲೂ, ಬೇಲಿಯಾಗಿಯೂ ಬೆಳೆಯಬಹುದು. ಇದರ ನೆರಳು ತೆಳು; ಆಗಾಗ್ಗೆ ಕಡಿಯುತ್ತಿದ್ದರೆ ಬೆಳೆಗೆ ನೆರಳಿನ ಬಾಧೆಯೇ ತೋರದು. ಒಂದು ಎಕರೆ ಗದ್ದೆಯಲ್ಲಿ ಸುಮಾರು 500 ಮೀಟರ್(ಸುಮಾರು 500 ಗಜ) ಉದ್ದ ಬದುಗಳಿರುತ್ತವೆ – ಕನಿಷ್ಠ 250 ಮೀಟರ್(ಸುಮಾರು 250 ಗಜ)ಗಳಷ್ಟಾದರೂ ಇದ್ದೇ ಇರುತ್ತದೆ. ಗ್ಲಿರಿಸೀಡಿಯಾವನ್ನು $2\frac{1}{4}$ ಮೀಟರ್ ($7\frac{1}{2}$ ಅಡಿ) ಅಂತರದಲ್ಲಿ ನೆಟ್ಟರೆ ಒಂದು ಎಕರೆಯಲ್ಲಿ ಏನಿಲ್ಲವೆಂದರೂ 100 – 125 ಗಿಡಗಳನ್ನು, ಬೆಳೆಗಳಿಗೆ ಬಾಧೆಯಾಗದಂತೆ, ಬೆಳೆಸಬಹುದು. ಈ ಗಿಡಗಳಿಂದ ನೆಟ್ಟ ಎರಡು ವರ್ಷಗಳ ನಂತರ, ಗಿಡ ಒಂದಕ್ಕೆ $22\frac{1}{2}$ ಕೆ. ಜಿ. (50 ಪೌಂಡು) ಪ್ರಕಾರ, $2\frac{1}{4}$ - 3 ಸಾವಿರ ಕೆ. ಜಿ. (5 – 7 ಸಾವಿರ ಪೌಂಡು)

ಹಸುರು ಗೊಬ್ಬರವನ್ನು ಪಡೆದುಕೊಳ್ಳಬಹುದು. ಇಷ್ಟು ಸೊಪ್ಪು ಒಂದು ಎಕರೆಗೆ ಬೇಕಾದಷ್ಟಾಯಿತು. ಬದುಗಳ ಮೇಲೆಯೇ ಬೆಳೆಯುವುದರಿಂದ, ಹೊಂಗೆ ಸೊಪ್ಪಿನಂತೆ ದೂರದಿಂದ ಗಾಡಿಗೆ ಹೇರಿ, ಇಳಿಸಿ, ಹೂಡಬೇಕಾಗಿಲ್ಲ.

ಗ್ಲಿರಿಸೀಡಿಯಾ ಎಲೆ, ಹೊಂಗೆಯ ಸೊಪ್ಪಿನಂತೆಯೇ ಬೇಗನೇ ಕಳಿತು ಸಾರಜನಕವನ್ನು ಬೆಳೆಗೆ ಒದಗಿಸುತ್ತದೆ.

ಇದರ ಹೂವೂ ಕೂಡಾ ಹೊಂಗೆ ಹೂವಿನಂತೆಯೇ, ತರಕಾರಿ ತೋಟಗಳಿಗೆ ಉತ್ತಮವಾದ ಗೊಬ್ಬರ.

ಗ್ಲಿರಿಸೀಡಿಯಾವನ್ನು ಅನೇಕ ವಿಧವಾಗಿ, ಅನೇಕ ಉದ್ದೇಶಗಳಿಗಾಗಿ ಬೆಳೆಸಬಹುದು.

ಅಲಂಕಾರಕ್ಕಾಗಿ ಬೆಳೆಸುವುದಾದರೆ, ದೂರ ದೂರಕ್ಕೆ ಹಾಕಬೇಕು. ಆಗ ಎತ್ತರವಾಗಿ ಬೆಳೆಯುತ್ತದೆ. ಗುಲಾಬಿ ಬಣ್ಣದ ಹೂವನ್ನು ಬಿಡುತ್ತದೆ.

ಹಸುರು ಸೊಪ್ಪಿಗಾಗಿ, ಪೊದೆಯಾಗಿ ಬದುಗಳಲ್ಲಿ ಬೆಳೆಸಬಹುದು. ಬೇಲಿಯಾಗಿಯೂ ಬೆಳೆಯಬಹುದು. ಹೀಗೆ ಬೆಳೆಯಲು, ರೆಂಬೆ ತುಂಡುಗಳನ್ನು ಮೂರು ಸಾಲುಗಳಲ್ಲಿ ಹತ್ತಿರ ಹತ್ತಿರಕ್ಕೆ ನೆಡಬೇಕು.

ಗಾಳಿ ತಡೆಗಾಗಿ ಬೆಳೆಯುವುದಾದರೆ ಇದನ್ನು ದೊಡ್ಡ ಗಿಡವಾಗಿಯೋ, ಸಣ್ಣ ಮರವಾಗಿಯೋ ಬೆಳೆಯುವಂತೆ ಸೂಕ್ತ ಅಂತರವಿಟ್ಟು ಬೆಳೆಸಬೇಕು. ಹೊಂಗೆಗಿಂತ ಗ್ಲಿರಿಸೀಡಿಯಾವನ್ನು ಬೆಳೆಯುವುದು ಸುಲಭ. 454 ಗ್ರಾಂನಲ್ಲಿ (ಒಂದು ಪೌಂಡು) ಸುಮಾರು 6000 ಬೀಜಗಳಿರುತ್ತವೆ. ಶೇಕಡ 70 ರಷ್ಟು ಬೀಜ ಮೊಳೆಯುತ್ತದೆ. ಬೀಜಗಳನ್ನು ಒಟ್ಲು ಹುಯ್ದು ಸಸಿ ಎಬ್ಬಿಸಬೇಕು. ಎಳೆ ಸಸಿಗಳನ್ನೂ ಹೂಣಿ ಬೆಳೆಸಬಹುದು. ಆದರೂ, 2–3 ತಿಂಗಳು ವಯಸ್ಸಿನ ಸಸಿಗಳನ್ನು ನೆಡುವುದೇ ಸೂಕ್ತ. ಒಂದೊಂದು ಸಸಿಯನ್ನು ಮಣ್ಣು ಉಂಡೆಯೊಡನೆ ಕಿತ್ತು ನೆಡಲು ಅನುಕೂಲವಾಗುವಂತೆ ಒಟ್ಟಿನಲ್ಲಿ ಬೀಜವನ್ನು ದೂರ ದೂರಕ್ಕೆ ಬಿತ್ತಬೇಕು.

ಸಸಿಗಳನ್ನು ಹೂಣಲು 25 ಸೆಂ. ಮೀ. (10 ಅಂಗುಲ) ಆಳದ ಗುಣಿ ಸಾಕು. ಸನಿಕೆಯಿಂದ ಗುಣಿ ತೆಗೆದು ಹೊಸಮಣ್ಣು ಗೊಬ್ಬರದೊಂದಿಗೆ ಬೆರೆಸಿ ಸಸಿ ನೆಟ್ಟು ನೀರು ಎಟ್ಟಬೇಕು. ಏಪ್ರಿಲ್ – ಮೇ ತಿಂಗಳಿನಲ್ಲಿ ಬೀಜ ಬಿಟ್ಟರೆ, ಮಳೆಗಾಲದಲ್ಲಿ ಹೂಣಲು ಸಸಿಗಳು ಸಿದ್ಧವಾಗುತ್ತವೆ.

ಬೀಜವಲ್ಲದೆ, 15 ಸೆಂ. ಮೀ.(6 ಅಂಗುಲ)ನ ರೆಂಬೆ ತುಂಡುಗಳನ್ನು ಹೂಣಿಯೂ ಬೆಳೆಸಬಹುದು.

ತೋಪಾಗಿ ಬೆಳೆಯಬೇಕಾದರೆ ಗುಣಿ ಗುಣಿಗೂ 3.6 ಮೀಟರ್ (12 ಅಡಿ) ಅಂತರವಿಟ್ಟು ಗಿಡಗಳನ್ನು ಬೆಳೆಸಬೇಕು.

ಹೊಂಗೆಯಂತೆ ಇದರ ಹೂವೂ ಜೇನು ನೊಣಗಳಿಗೆ ಒಪ್ಪು.

ಇದರ ತವರು ದೇಶದಲ್ಲಿ, ಈ ಗಿಡದ ಚಕ್ಕೆಯನ್ನು ಕುಟ್ಟಿ, ಅಕ್ಕಿ ಅಥವಾ ಮುಸುಕಿನ ಜೋಳದೊಂದಿಗೆ ಬೆರೆಸಿಟ್ಟು ಇಲಿಗಳನ್ನು ನಾಶಗೊಳಿಸುತ್ತಾರಂತೆ.

ಗ್ಲಿರಿಸೀಡಿಯಾ ರೈತರಿಗೆ ಬಹಳ ಉಪಯೋಗಕ್ಕೆ ಒದಗುವ ಮರ.

36. ಹೊಂಗೆ : (ಕರಂಜ, ಹುಲಿಗಿಲಿ, ಹುಲುಗಲ, ಉಗ್ಗೆಮರ, ಬಟ್ಟಿ) *Pongamia pinnata* (Linn.) Pierre.

ಹೊಂಗೆ, ರೈತರಿಗೆ – ಅದರಲ್ಲೂ ಮೈಲುಸೀಮೆ ರೈತರಿಗೆ – ಚಿರಪರಿಚಿತವಾದ ಮರ. ಒಂದು ರೀತಿಯಲ್ಲಿ, ಕರ್ನಾಟಕದ ರೈತರಿಗೆ, ಇದು ಕಲ್ಪವೃಕ್ಷ. ಹೊಂಗೆ, ಭಾರತದಲ್ಲಿ ಅನೇಕ ಕಡೆ ಬೆಳೆದರೂ, ಫಿಲಿಪ್ಪೈನ್, ಶ್ರೀಲಂಕ, ಆಸ್ಟ್ರೇಲಿಯ, ಮಲಯ, ಪಾಲಿನೀಸಿಯಾ ಮುಂತಾದ ದ್ವೀಪಗಳಲ್ಲಿ ಬೆಳೆದರೂ, ಈ ಮರದ ಪೂರ್ಣ ಉಪಯೋಗ ಕಂಡುಬರುವುದು ಮೈಸೂರಿನಲ್ಲಿ – ಅದರಲ್ಲೂ ತುಮಕೂರು, ಕೋಲಾರ ಮತ್ತು ಬೆಂಗಳೂರು ಜಿಲ್ಲೆಗಳಲ್ಲಿ. ಈ ಜಿಲ್ಲೆಗಳಲ್ಲಿ ಹೊಂಗೆ ರೈತಜೀವನದ ಹಾಸು



ಚಿತ್ರ : 28. ಹೊಂಗೆ

ಹೊಕ್ಕಾಗಿದೆ. ಮರದ ಪ್ರತಿಯೊಂದು ಭಾಗವೂ ಯಾವುದಾದರೊಂದು ರೀತಿಯಲ್ಲಿ ಉಪಯೋಗವಾಗುತ್ತಿದೆ.

ಹೊಂಗೆ ಶ್ರೇಷ್ಠವಾದ ನೆರಳಿನ ಮರ; ತಂಪಾದ ನೆರಳೀಯುವ ಮರ. ಆದ್ದರಿಂದಲೇ ಹೊಂಗೆ ನೆಳಲನ್ನು ತಾಯಿಯ ಮಡಿಲಿಗೆ ಹೋಲಿಸಿದ್ದಾರೆ – ಅಷ್ಟು ಸುಖ, ಸೌಮ್ಯ, ನೆಮ್ಮದಿ! ನಮ್ಮ ರಾಜ್ಯದಲ್ಲಿ ಇದು ಮಾರ್ಚಿ ತಿಂಗಳಿನ ಆದಿ ಭಾಗದಲ್ಲೇ, ಬೇಸಿಗೆ ಬರುವ ವೇಳೆಗೆ, ಹೊಸ, ಆಕರ್ಷಕ ಹಸುರೆಲೆ ಹೊದ್ದು ಬೇಸಿಗೆಯ ತಾಪವನ್ನು ಶಮನಗೊಳಿಸಲು ಸಿದ್ಧವಾಗುತ್ತದೆ. ಸಾಲು ಮರಗಳಾಗಿ, ಕಾಂಪೌಂಡಿನಲ್ಲಿ, ಚಾವಡಿ ಮುಂದೆ, ತೋಪುಗಳಲ್ಲಿ, ಮೈದಾನಗಳಲ್ಲಿ, ಶಾಲೆಯ ಆವರಣಗಳಲ್ಲಿ ನೆರಳಿಗೋಸ್ಕರ ಬೆಳೆಸಲು ಬಹಳ ಒಪ್ಪಾದ ಮರ.

ಹೊಂಗೆ, ಶ್ರೇಷ್ಠವಾದ ಹಸುರು ಗೊಬ್ಬರದ ಮರ. ಇದರ ಸೊಪ್ಪಿನಲ್ಲಿರುವಷ್ಟು ಸಾರಜನಕ, ಸಾಮಾನ್ಯವಾಗಿ ಬಳಸುವ ಹಸುರು ಸೊಪ್ಪುಗಳಲ್ಲಿ – ಗ್ಲಿರಿಸೀಡಿಯಾದಲ್ಲೂ ಕೂಡ – ಇರುವುದಿಲ್ಲ. ಸಾರಜನಕ, ಬೆಳೆಗಳಿಗೆ ಅತ್ಯಗತ್ಯವಾದ ಪೋಷಕ. ಬೆಳೆಯ ಮುಲುಸು ಸಾರಜನಕದಿಂದಲೆ. ಈ ಕಾರಣದಿಂದಲೇ, ಹೊಂಗೆ ಸೊಪ್ಪನ್ನು ತುಳಿದ ಗದ್ದೆ ತೋಟಗಳ ಬೆಳೆ ಅಷ್ಟು ಸೊಂಪಾಗಿರುವುದು. ಇದರ ಸಾರಜನಕಾಂಶ ಶೇಕಡ 1.16. ಗ್ಲಿರಿಸೀಡಿಯದಲ್ಲಿ ಕೇವಲ ಶೇಕಡ 0.68 ರಷ್ಟು. ಎಳೆಯ ಕಡ್ಡಿ ಕವಲುಗಳೂ ಕೂಡ ಸಾರಜನಕಭರಿತವಾಗಿರುತ್ತವೆ. ಈ ಹೊಂಗೆ ಸೊಪ್ಪಿನಲ್ಲಿ ರಂಜಕ ಮತ್ತು ಪೊಟಾಷ್ ಅಂಶಗಳೂ ಅಷ್ಟೇನೂ ಕಡಿಮೆ ಇಲ್ಲ. ಇದರಲ್ಲಿ ಶೇಕಡ 0.14 ರಂಜಕಾಮ್ಲವೂ, ಶೇಕಡ 0.49 ಪೊಟಾಷ್‌ಗಳೂ ಇವೆ. ಅಲ್ಲದೆ, ಗ್ಲಿರಿಸೀಡಿಯ ಮತ್ತು ಎಕ್ಕ ಬಿಟ್ಟರೆ, ಈ ಸೊಪ್ಪು ಶೀಘ್ರವಾಗಿ ಕಳಿಯುವಷ್ಟು ಇತರ ಹಸುರು ಗೊಬ್ಬರಗಳು ಕಳಿಯುವುದಿಲ್ಲ. ಆದುದರಿಂದ ಹೊಂಗೆಸೊಪ್ಪು, ಗದ್ದೆ ಮತ್ತು ತೋಟಗಳಿಗೆ ಬಹಳ ಒಪ್ಪಾದ ಹಸುರು ಗೊಬ್ಬರ. ಒಂದು ಮಧ್ಯಮ ಗಾತ್ರದ ಮರದಿಂದ 180 – 225 ಕೆ. ಜಿ. (400 – 1000 ಪೌಂಡು) ಎಲೆಚಿಗುರು ಹಾಗೂ ಕಡ್ಡಿಗಳನ್ನು ತರಿಯಬಹುದು.

ಹೊಂಗೆಸೊಪ್ಪನ್ನು ದನಗಳು ತಿನ್ನುತ್ತವೆ. ಮೇಕೆಗಳಿಗೆ ಇದು ಬಲು ಇಷ್ಟ.

ಹೊಂಗೆತರಗನ್ನು (ಒಣಗಿದ ಎಲೆ) ಕೂಡ ಗೊಬ್ಬರವಾಗಿ ಬಳಸುತ್ತಾರೆ. ಸಂಕ್ರಾಂತಿಯಿಂದ ಹಿಡಿದು ಶಿವರಾತ್ರಿಯವರೆಗೆ ಇದನ್ನು ಗುಡಿಸಿ, ನೆರಳಿನಲ್ಲಿ ಗುಪ್ಪೆ ಹಾಕಿಯೋ, ಗುಂಡಿಗಳಲ್ಲಿ ಕೂಡಿಟ್ಟೋ ಕಳಿಸಿ ಗೊಬ್ಬರವಾಗಿ ಬಳಸುತ್ತಾರೆ.

ಹೊಂಗೆ ಹೂವೂ ಕೂಡ ಬಹಳ ಉತ್ತಮವಾದ ಗೊಬ್ಬರ. ಇದು ಬೇಗ ಕಳಿಯುತ್ತದಲ್ಲದೆ, ಪೋಷಕಾಂಶಗಳನ್ನು ಒದಗಿಸಿ ಬೆಳೆಗಳನ್ನು – ಅದರಲ್ಲೂ ತೋಟದ ಬೆಳೆಗಳನ್ನು ಕುದುರಿಸುತ್ತದೆ. ಕೋಲಾರ ಜಿಲ್ಲೆಯಲ್ಲಿ, ಇದರ ಉದುರಿದ ಹೂವುಗಳನ್ನು ಒಪ್ಪವಾಗಿ ಗುಡಿಸಿ, ಕೂಡಿಸಿಟ್ಟುಕೊಂಡು ಕಬ್ಬು ಮತ್ತು ತರಕಾರಿ ಬೆಳೆಗಳಿಗೆ ಮೀಸಲಿಡುವ ಪದ್ಧತಿ ಬಹಳ ಹಿಂದಿನ ಕಾಲದಿಂದ ಬಂದಿದೆ. ಇದರ

ಹೂವಿನ ಭರ ಸಾಮಾನ್ಯವಾಗಿ ಏಪ್ರಿಲ್ ತಿಂಗಳಲ್ಲಿ ಹೆಚ್ಚು. ಒಂದು ತಿಂಗಳು ಕಾಲ ಉದುರುತ್ತಿರುತ್ತದೆ. ಇವನ್ನು ಪ್ರತಿನಿತ್ಯ ಗುಡಿಸಿ ಮರದ ಕೆಳಗೆ ಗುಡ್ಡೆ ಹಾಕುತ್ತಾರೆ. ಈ ಗುಡ್ಡೆಗಳು 3 – 3½ ಮೀಟರ್ (10 ರಿಂದ 12 ಅಡಿ) ಉದ್ದಕ್ಕೆ, ಸುಮಾರು 1½ ಮೀಟರ್ (5 ಅಡಿ) ಎತ್ತರಕ್ಕೆ ಇರುತ್ತವೆ. 10–12 ದಿನಗಳಲ್ಲಿ ಈ ಗುಡ್ಡೆಗಳೊಳಗೆ ವಿಪರೀತ ಶಾಖ ಉತ್ಪತ್ತಿಯಾಗಿ ಹೂವು ಕಳಿಯುತ್ತದೆ. ಈ ಕಳಿಯುತ್ತಿರುವ ಹೂವನ್ನು ಗೊಬ್ಬರವನ್ನಾಗಿ ಬಳಸುತ್ತಾರೆ. ಹೊಲದ ಬೆಳೆಗಳಿಗೆ, ಬೆಳೆ ಇಡುವುದಕ್ಕೆ 2 ವಾರ ಮುಂಚೆ ಮಣ್ಣಿನ ಮೇಲೆ ಚೆಲ್ಲಿ ಮಣ್ಣಿನೊಳಗೆ ಸೇರಿಸುತ್ತಾರೆ. ಬತ್ತದ ಗದ್ದೆಗಳಲ್ಲಿ ಬೀಜ ಚೆಲ್ಲುವುದಕ್ಕೆ 2–3 ದಿವಸ ಮುಂಚೆ ಚೆಲ್ಲುತ್ತಾರೆ. ಮೆಣಸಿನಕಾಯಿ ಗಿಡಗಳಿಗೆ, ಅವು ಮೊಗ್ಗು ಬಿಡುವುದಕ್ಕೆ ಶುರುವಾದಾಗ ಗುಣಿಗೆ 2 – 3 ಬೊಗಸೆ ಕಳಿತ ಹೂವುಗಳನ್ನು ಹಾಕುತ್ತಾರೆ. ಗೆಡ್ಡೆ ಕೊಳೆಯುವ ಭೀತಿ ಇರುವುದರಿಂದ ಈ ಹೂವುಗಳನ್ನು ಆಲೂಗೆಡ್ಡೆ, ಈರುಳ್ಳಿ ಮತ್ತು ಬೆಳ್ಳುಳ್ಳಿ ಗಿಡಗಳಿಗೆ ಹಾಕುವುದಿಲ್ಲ.

ಕೆಲವೆಡೆ ಗುಡಿಸಿದ ಹೂವುಗಳನ್ನು ಗುಂಡಿಗಳಲ್ಲಿ ಹಾಕಿ ಕುಲ್ಲಿಸು(ಕಳಿಯಿಸು)ವುದುಂಟು.

ಹೊಂಗೆ ಹೂವು, ಜೇನುಗಳಿಗೆ, ಬಹಳ ಇಷ್ಟ. ಹೊಂಗೆ ತೋಪುಗಳಲ್ಲಿ ಜೇನು ಸಾಕಣೆ ಬಹಳ ಫಲಪ್ರದ.

ಹೊಂಗೆ ಶ್ರೇಷ್ಠವಾದ ಎಣ್ಣೆಬೀಜದ ಮರ. ಸೀಮೆಎಣ್ಣೆ ಸಾಮಾನ್ಯವಾಗುವುದಕ್ಕೆ ಮುಂಚೆ ಇದರ ಎಣ್ಣೆಯನ್ನು ಹಳ್ಳಿಗಳಲ್ಲಿ ದೀಪಗಳಿಗಾಗಿ ಬಳಸುತ್ತಿದ್ದರು. ಇದರ ಬೆಳಕು ಕಣ್ಣಿಗೆ ತಂಪೆಂದು ಭಾವಿಸಿದ್ದರು. ಈಗ ಇದನ್ನು ಈ ಉದ್ದೇಶಕ್ಕಾಗಿ ಬಳಸುತ್ತಿಲ್ಲ. ಆದರೆ ಈಚೆಗೆ ಈ ಎಣ್ಣೆಗೆ ಹೊಸ ಉಪಯೋಗ ಲಭಿಸಿ, ದಿನೇದಿನೇ ಇದಕ್ಕೆ ಗಿರಾಕಿ ಹೆಚ್ಚುತ್ತಿದೆ. ಹದ ಮಾಡಿದ ಚರ್ಮಗಳಿಗೆ ಹೊಂಗೆ ಎಣ್ಣೆಯನ್ನು ಸವರಿದರೆ ಆ ಚರ್ಮ ಬಿರಿಯುವುದಿಲ್ಲ. ಎಣ್ಣೆ ಬೇಗ ಆರದಿರುವುದರಿಂದ ಚರ್ಮವನ್ನು ಬಹುಕಾಲ ಮೃದುವಾಗಿಡುತ್ತದೆ. ಹೀಗೆ ಮೃದುಗೊಳಿಸಲು ಇತರ ಎಣ್ಣೆಗಳಿಗಿಂತ ಇದು ಹೆಚ್ಚು ಅನುಕೂಲವಾಗಿ ಕಂಡುಬಂದಿರುವುದರಿಂದ ವಾನಿಯಂಬಾಡಿ, ರಾಣಿಪೇಟೆ, ಗುಡಿಯಾತಂ ಕಡೆಗಳ ಚರ್ಮ ಹದಮಾಡುವವರು ಈ ಎಣ್ಣೆಯನ್ನು ಬೆಂಗಳೂರಿನಿಂದ ಹೆಚ್ಚಾಗಿ ತರಿಸಿಕೊಳ್ಳುತ್ತಿದ್ದಾರೆ. ಇದಕ್ಕೆ ಬೇಡಿಕೆ ಹೆಚ್ಚುತ್ತಿದೆ.

ಈ ಎಣ್ಣೆಯ ಮತ್ತೊಂದು ಉಪಯೋಗ ಸಾಬೂನು ತಯಾರಿಕೆಯಲ್ಲಿ. ಇದನ್ನು ರಾಳದೊಂದಿಗೆ ಬೆರೆಸಿ ಕೀಟನಾಶಕ ಸಾಬೂನನ್ನು ತಯಾರು ಮಾಡುತ್ತಾರೆ. ಇದನ್ನು ಹೊಂಗೆ ಆಯಿಲ್ ರೇಸಿನ್ ಸೋಪ್ ಎಂಬ ಹೆಸರಿನಲ್ಲಿ ಮೈಸೂರಿನ ಸರ್ಕಾರಿ ಸಾಬೂನು ಕಾರ್ಖಾನೆ ತಯಾರುಮಾಡುತ್ತಿದ್ದರು. ಗಿಡದ ಹೇನುಗಳಿಗೆ ಮತ್ತು ಹಿಟ್ಟುತಿಗಣೆಗಳಿಗೆ, ಇದನ್ನು ನೀರಿನಲ್ಲಿ ಕಲೆಸಿ ಸಿಂಪಡಿಸುತ್ತಿದ್ದರು. ಆದರೆ

ಈಚೆಗೆ ಈ ಕೀಟಗಳನ್ನು ಹೆಚ್ಚು ಸಾಮರ್ಥ್ಯದಿಂದ ನಾಶಗೊಳಿಸುವ ಕೀಟನಾಶಕಗಳು ಮಾರುಕಟ್ಟೆಗೆ ಬಂದಿರುವುದರಿಂದ ಈ ಸಾಬೂನಿನ ಬಳಕೆ ಕಡಿಮೆಯಾಗುತ್ತಿದೆ.

ಈ ಹೊಂಗೆ ಎಣ್ಣೆಯನ್ನು ಮೇಣದಬತ್ತಿ ತಯಾರಿಕೆಯಲ್ಲೂ ಬಳಸುತ್ತಾರೆ.

ಈ ಎಣ್ಣೆಯನ್ನು ಸಂಧಿವಾತ ರೋಗಗಳಲ್ಲಿ ಔಷಧಿಗಾಗಿಯೂ ಬಳಸುತ್ತಾರೆ.

ಹೊಂಗೆ ಹಿಂಡಿ ಬೆಳೆಗಳಿಗೆ ಬಹಳ ಅಚ್ಚುಮೆಚ್ಚಾದ ಹಿಂಡಿ ಗೊಬ್ಬರ. ಇದರಲ್ಲಿಯ ಪೋಷಕಾಂಶಗಳು ಬೆಳೆಗಳಿಗೆ ಸುಲಭವಾಗಿ ಒದಗುತ್ತವೆ. ಇರುವೆಗಳನ್ನು ದೂರ ಇಡುತ್ತದೆ. ತೋಟದ ಬೆಳೆಗಳಿಗೆ, ಅದರಲ್ಲೂ ಕಬ್ಬು ಮುಂತಾದುವಕ್ಕೆ ಒಪ್ಪಾದ ಹಿಂಡಿ. ಇದರಲ್ಲಿ ಸರಾಸರಿ ಶೇಕಡ 4½ ಸಾರಜನಕಾಂಶವಿರುತ್ತದೆ. ಈ ಪೋಷಕದ ಅರ್ಧದಷ್ಟು, 8 ವಾರಗಳಲ್ಲಿ ಬೆಳೆಗಳಿಗೆ ದೊರಕುತ್ತದೆ. ಉಳಿದದ್ದು, ತಡವಾಗಿ ಒದಗುತ್ತದೆ. ಇದರಲ್ಲಿ ಶೇಕಡ 0.88 ರಿಂದ 1.50ರಷ್ಟು ರಂಜಕಾಮ್ಲವೂ ಶೇಕಡ 1.0 ರಷ್ಟು ಪೊಟ್ಯಾಷ್ ಇದೆ.

ಮರದ ತೊಗಟೆಯಿಂದ ಹುರಿ ಹಗ್ಗಗಳನ್ನು ಹೊಸೆಯಬಹುದು.

ಈ ಮರದ ಎಲ್ಲಾ ಭಾಗಗಳೂ ಔಷಧಿಗಾಗಿ ಒದಗುತ್ತವೆ. ಎಲೆಯ ರಸವನ್ನು ಕಜ್ಜಿಗೆ, ಸಂಧಿವಾತ ರೋಗಗಳಿಗೆ, ಎಳೆಯ ಎಲೆಯನ್ನು ಮೂಲವ್ಯಾಧಿಗೆ ಉಪಯೋಗಿಸುತ್ತಾರೆ.

ಇದರ ಒಳಮರ ಹಗುರ. 0.028 ಘನಮೀಟರ್ 19 ಕೆ. ಜಿ. (1 ಘನ ಅಡಿ ಸುಮಾರು 42 ಪೌಂಡು) ತೂಗುತ್ತದೆ. ಸುಮಾರು ಗಟ್ಟಿ. ಹಳೆಯ ಮರಗಳಿಂದ ಕುಯ್ದು ಮರವನ್ನು ಆರೆಕಾಲುಗಳಿಲ್ಲದ ಬಂಡಿಚಕ್ರಕ್ಕಾಗಿ ಬಳಸುತ್ತಿದ್ದರು. ಈಗ ಈ ಬಗೆಯ ಚಕ್ರಗಳು ಅಪರೂಪ. ಒಳಮರದ ಬಣ್ಣ ಹಳದಿಕಂದು ; ನಾರು ಜಾಸ್ತಿ ; ಗಾಣಗಳಿಗೆ, ಬಾಚಣಿಗೆಗಳಿಗೆ ಉಪಯೋಗಿಸಬಹುದು ; ನೀರಿನಲ್ಲಿ ಹದ ಮಾಡಿದರೆ ಬಾಳಿಕೆ ; ಸುಲಭವಾಗಿ ಕುಯ್ಯಬಹುದು ; ಸ್ವಲ್ಪ ಕಡಿಮೆ ಕುಟ್ಟು ಹಿಡಿಯುತ್ತದೆ. ಹಾಗೆ ಹದ ಮಾಡದಿರದ ಮರಕ್ಕೆ ಬೇಗ ಕುಟ್ಟು ಹಿಡಿಯುತ್ತದೆ.

ಇದು ಒಳ್ಳೆಯ ಸೌದೆ. ಹಸಿಯಾಗಿದ್ದರೂ ಉರಿಯುತ್ತದೆ. ಬೇಗ ಸೀಳಬಹುದು ; ಬೇಗ ಒಣಗುತ್ತದೆ. ಆದರೆ ಈ ಮರ ರೈತರಿಗೆ ಬಹಳ ರೀತಿಯಲ್ಲಿ ಉಪಯುಕ್ತವಾಗಿರುವುದರಿಂದ, ಇದು ಒಂದು ದೃಷ್ಟಿಯಲ್ಲಿ ರಾಷ್ಟ್ರದ ಸಂಪತ್ತಾಗಿರುವುದರಿಂದ, ನಮ್ಮ ಸರ್ಕಾರದವರು ಹೊಂಗೆಮರವನ್ನು ಸೌದೆಗಾಗಿ ಕಡಿಯುವುದನ್ನು ನಿಷೇಧಿಸಿದ್ದಾರೆ.

ಈ ಮರ ಅನುಕೂಲವಾದ ಸ್ಥಳಗಳಲ್ಲಿ ಎತ್ತರಕ್ಕೆ, ದಪ್ಪಕ್ಕೆ, ಘನವಾಗಿ ಬೆಳೆಯುತ್ತದೆ. ಕೋಲಾರ ಜಿಲ್ಲೆಯಲ್ಲಿ 15 ಮೀಟರು (50 ಅಡಿ) ಎತ್ತರಕ್ಕೆ, ನೆತ್ತಿ 18 ಮೀಟರು (60 ಅಡಿ) ಹರಡಿರುವ, 3 ಮೀಟರ್ (10 ಅಡಿ) ಸುತ್ತಳತೆ ತಾಳಿನ ಮರಗಳು ಬೇಕಾದಷ್ಟಿವೆ. ವಾಸ್ತವವಾಗಿ ಈ ಮರ, ತುಮಕೂರು, ಕೋಲಾರ, ಬೆಂಗಳೂರು ಜಿಲ್ಲೆಗಳಲ್ಲಿ ಅದೇ ಕ್ರಮದಲ್ಲಿ, ಚೆನ್ನಾಗಿ, ಹೆಚ್ಚು ಸಂಖ್ಯೆಯಲ್ಲಿ ಬೆಳೆಯು

ತ್ತದೆ. ಹಾಸನ, ಚಿಕ್ಕಮಗಳೂರು ಮುಂತಾದ ಮಲೆನಾಡು ಜಿಲ್ಲೆಗಳಲ್ಲಿ ಇದು ಬಹಳ ಕಡಿಮೆ. ಇದಕ್ಕೆ ಕಾರಣ, ಈ ಜಿಲ್ಲೆಗಳಲ್ಲಿ ಹೆಚ್ಚಾಗಿ ಬೀಳುವ ಮಳೆಯಲ್ಲ. ಅಲ್ಲಿಯ ಬೆಟ್ಟಗುಡ್ಡಗಳು. ಇದು ಸಾಮಾನ್ಯವಾಗಿ ಸಮುದ್ರಮಟ್ಟಕ್ಕಿಂತ 1200 ಮೀಟರ್ (4000 ಅಡಿ) ಹೆಚ್ಚು ಎತ್ತರ ಇರುವ ಪ್ರದೇಶಗಳಲ್ಲಿ ಬೆಳೆಯುವುದಿಲ್ಲ.

ಇದು ಮುಖ್ಯವಾಗಿ ಕಡಲುಕರೆಗಳಲ್ಲಿ, ನಾಲಾದಂಡೆಗಳಲ್ಲಿ ಬೆಳೆಯುವುದಾದರೂ, ಮಳೆ ಕಡಿಮೆಯಿರುವ ಕಡೆಗಳಲ್ಲೂ (ಉದಾ : ತುಮಕೂರು, ಕೋಲಾರ ಜಿಲ್ಲೆಗಳು) ಬೆಳೆಯುತ್ತದೆ. ಹೊಂಗೆ, ಗಟ್ಟಿಮುಟ್ಟಿನ ಮರ. ತೆಟ್ಟೆ ಮಣ್ಣುಗಳಲ್ಲೂ, ಮರಳು ದಿಣ್ಣೆಗಳ ಮೇಲೂ, ಆಳದ ಮರಳು ಗೋಡುಮಣ್ಣುಗಳಲ್ಲೂ, ಕೆರೆ ಏರಿಗಳ ಮೇಲೂ, ಕೆರೆಕರೆಗಳಲ್ಲೂ ಬೆಳೆಯಬಲ್ಲದು. ಉತ್ತರಭಾರತದಲ್ಲಿ 38_50 C (ಸುಮಾರು 100 ರಿಂದ 120 F) ಉಷ್ಣಮಟ್ಟ ಇರುವ ಕಡೆಯೂ, ದಕ್ಷಿಣ ಭಾರತದಲ್ಲಿ 50_250 ಸೆಂ. ಮೀ.(20_100 ಅಂಗುಲ)ನಷ್ಟು ಮಳೆ ಬೀಳುವ ಕಡೆಯೂ ಇದು ಬೆಳೆಯುತ್ತದೆ. ಇದು ತೊರೆ ನದಿದಂಡೆಗಳಲ್ಲಿ, ಇತರ ದೊಡ್ಡಮರಗಳ ನೆರಳಿನಲ್ಲೂ ಬೆಳೆಯುತ್ತದೆ ; ನೆರಳಿಲ್ಲದ ಕಡೆಯೂ, ಬೆಳೆಯುತ್ತದೆ.

ಇದನ್ನು ಸಾಲುಮರವಾಗಿ, ತೋಪುಗಳಾಗಿ, ಹೊಲಗದ್ದೆ ಅಂಚಿನಲ್ಲಿ, ಕೆರೆ ಏರಿಗಳ ಮೇಲೆ, ನಾಲಾದಂಡೆಗಳಲ್ಲಿ ಕೆಲವಡೆ ಬೇಲಿಯಾಗಿ ಬೆಳೆಸುವುದು. ಈ ಮರದ ಕೆಳಗೆ ಹುಲ್ಲು ಬೆಳೆಯಬಲ್ಲದಾದುದರಿಂದ ಇದನ್ನು ಗೋಮಾಳಗಳಲ್ಲಿಯೂ ಬೆಳೆಸಬಹುದು.

ಕೋಲಾರ ಜಿಲ್ಲೆಯಲ್ಲಿ ಇದನ್ನು ಸಾಲುಮರಗಳಾಗಿ ಬೆಳೆಸಿದ್ದಾರೆ. ಸಾಲು ಮರಗಳಿಗೆ, ರೈತರಿಗೆ ಸನದು ಕೊಡುವಂತೆ, ಈ ಮರಗಳನ್ನು ಸೊಪ್ಪಿಗಾಗಿ ತರಿಯಲು ರೈತರಿಗೆ ಹಕ್ಕುಗಳನ್ನು ಕೊಡುವುದುಂಟು.

ಅದರ ಸೊಪ್ಪು, ಬೀಜಗಳಿಗೋಸ್ಕರ ತುಮಕೂರು, ಕೋಲಾರ, ಬೆಂಗಳೂರು ಜಿಲ್ಲೆಗಳಲ್ಲಿ ಇದನ್ನು ತೋಪುಗಳಲ್ಲಿ ಬೆಳೆಯುವುದು ವಾಡಿಕೆ. ಹಿಂದಿನ ಮೈಸೂರಿನಲ್ಲಿ ಸುಮಾರು ಶೇಕಡ 38 ರಷ್ಟು ಹೊಂಗೆ ಮರಗಳು ಈ ಮೂರು ಜಿಲ್ಲೆಗಳಲ್ಲಿ ಇವೆ. ಅತ್ಯಧಿಕವಾಗಿ ಹೊಂಗೆ ಎಣ್ಣೆ, ಹೊಂಗೆ ಹಿಂಡಿ, ಹೊರ ರಾಜ್ಯಗಳಿಗೆ ರಫ್ತಾಗುವುದು ಈ ಜಿಲ್ಲೆಗಳಿಂದಲೇ.

ಈ ಜಿಲ್ಲೆಗಳಲ್ಲಿ 50_60 ವರ್ಷದ ಅನೇಕ ಹೊಂಗೆ ತೋಪುಗಳಿವೆ. ಹೊಂಗೆ ಮರ ಸುಮಾರು 80_100 ವರ್ಷಗಳ ಕಾಲ ಬಾಳಬಲ್ಲವು. ಈ ತೋಪುಗಳು ಸುಮಾರು 3 ರಿಂದ 10 ಎಕರೆ ವಿಸ್ತೀರ್ಣದವು. ಒಂದೊಂದು ಎಕರೆಯಲ್ಲಿ 80 ರಿಂದ 100 ಮರಗಳನ್ನು ಹಾಕುತ್ತಾರೆ. ಹಾಕಿದ 7 ನೆಯ ವರ್ಷದಿಂದ ಮರವನ್ನು ಸೊಪ್ಪಿಗಾಗಿ ತರಿಯಲು ಪ್ರಾರಂಭಿಸುತ್ತಾರೆ. ಕೆಲವಡೆ, ಕೆಲವು ಮರ ಗಳನ್ನು ಕಾರ್ತೀಕದ ಬತ್ತದ ಬೆಳೆಗೆ (ಜುಲೈ_ನವೆಂಬರ್ ಬೆಳೆಗೆ) ಸವರಿ, ಉಳಿದವನ್ನು ವೈಶಾಖದ ಬೆಳೆಗೆ (ಜನವರಿ_ಜೂನ್ ಬೆಳೆಗೆ) ಮೀಸಲಿಡುತ್ತಾರೆ. ಸಾಮಾನ್ಯವಾಗಿ,

ಒಂದು ಮರವನ್ನು ವರ್ಷಕ್ಕೆ ಒಂದೇ ಬಾರಿ ಸವರುತ್ತಾರೆ. 2 ಬಾರಿ ಸವರಿದರೆ ಮರದ ಬೆಳವಣಿಗೆಶಕ್ತಿ ಕುಂದುತ್ತದೆ. ದೊಡ್ಡ ತೋಪುಗಳನ್ನು ಬೆಳೆಸಿದವರು, ಸೊಪ್ಪನ್ನು ವರ್ಷ ಬಿಟ್ಟು ವರ್ಷ ತರಿಯುತ್ತಾರೆ.

ಪ್ರತಿ ಮರದಿಂದಲೂ, ಬೆಳವಣಿಗೆಗೆ ಅನುಗುಣವಾಗಿ 2 ರಿಂದ 8 ತಲೆ ಹೊರೆ ಸೊಪ್ಪು, 180–450 ಕೆ ಜಿ.(400 ರಿಂದ 1000 ಪೌಂಡ್)ಯಷ್ಟು ಸಿಗುತ್ತದೆ. ಒಂದು ಎಕರೆ ಬತ್ತದ ಗದ್ದೆಗೆ 100 ರಿಂದ 300 ಹೊರೆ ಸೊಪ್ಪನ್ನು ಹರಡಿ ತುಳಿಯುತ್ತಾರೆ.

ಪ್ರತಿ ಮರದಿಂದ 340–420 ಕೆ. ಜಿ. ಬೀಜ ಸಿಗುತ್ತದೆ. 1 ಕೆ. ಜಿ. ಯಲ್ಲಿ ಸುಮಾರು 1000 ಬೀಜಗಳಿರುತ್ತವೆ. ಮಾವಿನಂತೆ, ವರ್ಷ ಬಿಟ್ಟು ವರ್ಷ ಬೀಜದ ಉತ್ಪತ್ತಿ ಅಧಿಕ.

ಹೊಂಗೆಮರವನ್ನು, ಬೀಜಗಳನ್ನು ಊರಿ, ಮಡಿಗಳಲ್ಲಿ ಬೆಳೆಸಿ ನಾಟಿ ಹಾಕಿ, ಕಾಂಡದ ತುಂಡುಗಳನ್ನು ಹೂಣಿ ಅಥವಾ ಬೇರುಗಳಿಂದ ಅದರಲ್ಲೂ ಕಡಿದ ಮರಗಳ ಬೇರುಗಳಿಂದ ಬೆಳೆಯುವ ಮರಿಸಸಿಗಳನ್ನು ಕಿತ್ತು ನೆಟ್ಟು ಬೆಳೆಸಬಹುದು. ಚಾಮುಂಡಿಬೆಟ್ಟದಲ್ಲಿ 2–2½ ಮೀಟರ್ (7–8 ಅಡಿ) ಎತ್ತರ, 22–44 ಸೆಂ. ಮೀ. (9–18 ಅಂಗುಲ) ದಪ್ಪದ ಗಿಡಗಳನ್ನು ಹೂಣಿ ಬೆಳೆಸಿದ್ದಾರೆ.

ಬೀಜದಿಂದ ಬೆಳೆಸುವುದಾದರೆ, ಬಲಿತ ಕಾಯಿಗಳನ್ನು ಬಿಸಿಲಿನಲ್ಲಿ ಒಣಗಿಸಿ, ಒಡೆದು ಬೀಜ ಬಿಡಿಸಿಕೊಳ್ಳಬೇಕು. 23–40 ಬೀಜಗಳ ತೂಕ 28 ಗ್ರಾಂ (1 ಔನ್ಸು). ಬೀಜದಲ್ಲಿ ಜಿಡ್ಡಿನ ಅಂಶ ಹೆಚ್ಚಾಗಿರುವುದರಿಂದ ಬೀಜಗಳನ್ನು ಹೆಚ್ಚು ಕಾಲವಿಡಬಾರದು. ಹೊಸ ಬೀಜಗಳನ್ನೇ ಬಿತ್ತಬೇಕು. 100 ಬೀಜ ಹಾಕಿದರೆ ಸುಮಾರು 80 ಬೀಜ ಮೊಳೆಯುತ್ತದೆ. ಬೀಜ 10 ರಿಂದ 30 ದಿವಸಗಳಲ್ಲಿ ಮೊಳೆಯುತ್ತದೆ. ಬೀಜವನ್ನು ನೆಟ್ಟೇ ಬೆಳೆಯುವುದಾದರೆ ಒಂದೊಂದು ಕಡೆಯೂ 2–3 ಬೀಜಗಳನ್ನು ನೆಟ್ಟು, ಸ್ವಲ್ಪ ಬೆಳೆದಮೇಲೆ, ಹುರುಪಿನಿಂದ ಬೆಳೆಯುತ್ತಿರುವ ಸಸಿಯನ್ನು ಉಳಿಸಿಕೊಂಡು ಉಳಿದವನ್ನು ಕಿತ್ತುಹಾಕಬೇಕು. ಬೀಜಗಳನ್ನು ಒಟ್ಲು ಹಾಕುವುದಾದರೆ, ಚೆನ್ನಾಗಿ ಮಡಿಗಳನ್ನು ಸಿದ್ಧಗೊಳಿಸಿ, 7½ ರಿಂದ 15 ಸೆಂ. ಮೀ. (3–6 ಅಂಗುಲ) ದೂರಕ್ಕೆ ಸಾಲಿನಲ್ಲಿ ಬೀಜಗಳನ್ನು, ಬೇಸಗೆಯಲ್ಲಿ ನೆಡಬೇಕು. ಸಸಿಗಳನ್ನು ಮಳೆಗಾಲದಲ್ಲೂ, ಮೂರನೆಯ ವರ್ಷವೂ ನೆಡಬಹುದು. 2 ವರ್ಷದಲ್ಲಿ ಇವುಗಳ ಎತ್ತರ ಸುಮಾರು ⅔ ಮೀಟರ್ (2 ಅಡಿ) ಇರುತ್ತದೆ.

ಸಾಲುಮರಗಳಾಗಿ ಬೆಳೆಸುವುದಾದರೆ, ಸಸಿಗಳನ್ನು 7½–9 ಮೀಟರ್ (25–30 ಅಡಿ) ದೂರಕ್ಕೆ ನೆಡಬೇಕು. ತೋಪುಗಳಲ್ಲಿ ಬೆಳೆಸುವುದಾದರೆ, ಸಾಲು ಸಾಲಿಗೆ 2 ಮೀಟರ್ (6 ಅಡಿ) ಹಾಗೂ ಸಾಲಿನಲ್ಲಿ 2 ಮೀಟರ್ (6 ಅಡಿ) ಅಂತರವಿರುವಂತೆ ಹೂಣಬೇಕು.

ಸಾಲುಮರಗಳಾಗಿ ಬೆಳೆಸುವಾಗ, ತಾಳು ನೇರವಾಗಿ, ಎತ್ತರಕ್ಕೆ ಇರುವಂತೆ, ಪಕ್ಕದ ರೆಂಬೆಗಳನ್ನು ಸವರುತ್ತಿರಬೇಕು.

ಹುಲುಸಾಗಿ ಬೆಳೆಯುವ ಕಡೆ, ತೋಪುಗಳಲ್ಲಿ, ಗಿಡಗಳನ್ನು ಸುಮಾರು 3 ಮೀಟರು (10 ಅಡಿ) ಅಂತರದಲ್ಲಿ ಬೆಳೆಸಬೇಕು. ಮುಂದೆ, ಇವನ್ನು ಕೂಡ ಸ್ವಲ್ಪ ತೆಳು ಮಾಡಬೇಕಾಗಬಹುದು.

ಸರ್ವವಿಧದಲ್ಲೂ ರೈತರಿಗೆ ಬಹಳ ಒಪ್ಪುವ, ಅಚ್ಚುಮೆಚ್ಚಿನ ಮರ, ಹೊಂಗೆ ! ರೈತರ ಕಲ್ಪವೃಕ್ಷ !

ಮರದ ರೂಪಕ್ಕೆ 70 ನೆಯ ಚಿತ್ರ ನೋಡಿ.

37. **ಸಂಕೇಶ್ವರಿ** (ಸಂಕೇಶ್ವರಿ, ವಾತನಾರಾಯಣ, ಕೆಂಪು ಕೆಂಜಗ, ಸೀರಂಗಿ, ಸುಂಕತ್ತಿ) *Delonix elata* (Linn.) Gamble.

ಇದು ಬಯಲುಸೀಮೆ(ಮೈದಾನ)ಯಲ್ಲಿ ಬೆಳೆಯುವ ಸಣ್ಣ ಮರ. ಇದಕ್ಕೆ ಆಯುರ್ವೇದದಲ್ಲಿ ಹೆಚ್ಚು ಪ್ರಶಸ್ತಿ. ಎಲೆಯ ರಸವನ್ನು ಕೀಲು ರೋಗಗಳಿಗೆ, ವಾಯುವಿಗೆ, ನಿಶ್ಶಕ್ತಿಗೆ, ಉಪಯೋಗಿಸುತ್ತಾರೆ ; ಹೆರಿಗೆಯಾದ ಮೇಲೂ ಕೊಡುತ್ತಾರಂತೆ.

ಇದು ಬೆಡಗಿನ ಕತ್ತಿಕಾಯಿ ಮರ, ಗುಲ್‌ಮೊಹರಿನ, ಹತ್ತಿರದ ಸಂಬಂಧಿ. ಕೆಲವರು ಇದನ್ನು ಬಿಳಿ ಗುಲ್‌ಮೊಹರ್ ಎಂದೂ ಕರೆಯುತ್ತಾರೆ. ಅಲಂಕಾರದ ಮರ, ಎಲೆ ಹೂವು ತುಂಬಿದ್ದಾಗ ; ಆದರೆ ಡಿಸೆಂಬರಿನಲ್ಲಿ ಬೆತ್ತಲೆಯಾಗಿದ್ದಾಗ ಅಷ್ಟು ಸುಂದರವಾಗಿರುವುದಿಲ್ಲ. ಹೂವು ಫೆಬ್ರವರಿ, ಮಾರ್ಚಿಯಲ್ಲಿ. ಬಿಳಿ ಹಳದಿಯ ದೊಡ್ಡ ಹೂವುಗಳು, ಕೆಂಪು ಕೇಸರ.

ರೆಂಬೆಗಳು ಕೊಡೆಯಂತೆ ಅಗಲಕ್ಕೆ ಹರಡುತ್ತದೆ. ಆದುದರಿಂದ ಇವನ್ನು ಸಾಲುಮರಗಳಾಗಿಯೂ, ಪಾರ್ಕುಗಳಲ್ಲಿ ಅಲಂಕಾರದ ಮರಗಳಾಗಿಯೂ ಬೆಳೆಸಬಹುದು.

ಒಳಮರ ತೇಗದಷ್ಟೇ ಭಾರ. 0.028 ಘನಮೀಟರ್‌ಗೆ $20\frac{3}{4}$ ಕೆ. ಜಿ. (ಒಂದು ಘನಅಡಿ 46 ಪೌಂಡು). ಪೀಠಾಸನಗಳಿಗೆ ಬಳಸಬಹುದು. ಪೆಟ್ಟಿಗೆಗಳಿಗೂ, ಬಾಚಣಿಗೆಗಳಿಗೂ, ಬೆಂಕಿಕಡ್ಡಿಗಳಿಗೂ ಉಪಯೋಗಿಸುತ್ತಾರೆ.

38. ತಂಗಡಿ ಕುಟುಂಬದ ಮರಗಳು

ಈ ಕುಟುಂಬ, ಬೆಡಗಿನ ಹೂವುಗಳನ್ನು ಬಿಡುವ ಗುಂಪು. ಹಳದಿ ಹೂವಿನ ಕಕ್ಕೆ, ಗಂಡು ತಗಜೆ, ಕಾಸಮರ್ದ, ದೊಡ್ಡ ತಂಗಡಿ, ಸೀಮೆ ತಂಗಡಿ, ಅಡವೀ ತಂಗಡಿ, ತಿಳಿ ಗುಲಾಬಿಯಂಥ ಹೂವು ಬಿಡುವ ದೊಡ್ಡದಗರೆ, ಜಾವಾ ತಂಗಡಿ, ಮುಂತಾದವು. ಇವು ಪೊದರುಗಳು, ಚಿಕ್ಕ ಅಥವಾ ದೊಡ್ಡ ಮರಗಳು. ಸೋನಾಮುಖಿ (ನೆಲಾವರಿಕೆ) ಒಳ್ಳೆ ತಂಗಡಿ (ಆವರಿಕೆ), ಬೆಟ್ಟ ತಂಗಡಿ, ಕೋಲ್ ತಗಸಿ (ಆನೆ ಸೊಗಟೆ) ಇವೂ ಕೂಡ ತಂಗಡಿ ಕುಟುಂಬದವೇ.


(i) ಕಕ್ಕೆ. *Cassia fistula* Linn.

ಇದು ನಮ್ಮ ದೇಶದ ಬಹಳ ಸುಂದರವಾದ ಹೂವು ಬಿಡುವ ಮರಗಳಲ್ಲಿ ಒಂದು. ಮೈಸೂರಿನ ಬಯಲುಸೀಮೆಯಲ್ಲಿ ಇದು ಒಂದು ಪೊದೆ ಅಥವಾ ಸಣ್ಣ ಮರವಾದರೂ, ಕೊಡಗು ಮತ್ತು ಪಶ್ಚಿಮದ ಕಡೆ 9–12 ಮೀಟರ್ (30–40 ಅಡಿ) ಎತ್ತರ ಬೆಳೆಯುತ್ತದೆ. ಉತ್ತರ ಭಾರತದಲ್ಲಂತೂ ಇದು ಬೆಡಗಿನ ಮರ. ಇದು ಸಮುದ್ರತೀರ ಪ್ರದೇಶಗಳಲ್ಲೂ ಮರವಾಗಿಯೇ ಬೆಳೆಯುತ್ತದೆ. ಬೊಂಬಾಯಿನಲ್ಲಿ ಒಂದು ರಸ್ತೆಗೇ ಇದರ ಹೆಸರನ್ನೇ – ಲ್ಯಾಬರ್ನಮ್ ಸ್ಟ್ರೀಟ್ ಎಂದು – ಕೊಟ್ಟಿದ್ದಾರೆ. ಪೊದೆಯಾಗಲೀ ಮರವಾಗಲೀ, ಏಪ್ರಿಲ್ – ಮೇ ತಿಂಗಳಿನಲ್ಲಿ ಗಿಡದ ತುಂಬಾ ತಾಮ್ರವರ್ಣದ ಚಿಗುರೆಲೆ, ಉಜ್ವಲ ಹಳದಿ ಹೂಗೊಂಚಲುಗಳು ಹೊಮ್ಮಿದಾಗ ಕಕ್ಕೆಯು ಬೆಡಗಿಗೆ ಮಾರುಹೋಗದಿರುವುದು ಅಪರೂಪ.

ಇದು ಅಲಂಕಾರದ ಗಿಡ ಅಥವಾ ಮರವಲ್ಲದೆ, ಇನ್ನೂ ಕೆಲವು ಉಪಯುಕ್ತ ಉತ್ಪನ್ನಗಳನ್ನು ನೀಡುತ್ತದೆ. ಬಿಡಿಗಿದ ಎಲೆಯನ್ನು ಆಹಾರದೊಂದಿಗೆ ಮುಂದಕ್ಕಾಗಿ ತಿನ್ನುತ್ತಾರೆ. ಹಣ್ಣಿನ ತಿರುಳನ್ನು ಆಯುರ್ವೇದದಲ್ಲಿ ಭೇದಿ ಔಷಧಿಯಾಗಿ ಬಳಸುತ್ತಾರೆ. ಇದರ ತೊಗಟೆಯಿಂದ ನಾರು. ಚರ್ಮ ಹದಮಾಡುವ ಒಗಚು, ಮತ್ತು ಗೋಂದು ಸಿಗುತ್ತದೆ. ಇದರ ಒಳಮರ, ಹೆಚ್ಚಾಗಿ ಸಿಗದಿದ್ದರೂ ಬಾಳಿಕೆ ಬರುತ್ತದೆ ; ಸುಮಾರು ಭಾರ ; 0. 028 ಘನಮೀಟರ್ 22.5 ಕೆ. ಜಿ. (ಒಂದು ಘನ ಅಡಿ 50 ಪೌಂಡು) ತೂಗುತ್ತದೆ ; ಗಟ್ಟಿ ; ಆದರೆ ಬೇಗ ಸೀಳುತ್ತದೆ ; ಕೊಟ್ಟಣಕ್ಕೆ, ಬೇಲಿ ಗೂಟಗಳಿಗೆ, ಸಣ್ಣ ವ್ಯವಸಾಯದ ಮುಟ್ಟುಗಳಿಗೆ ಉಪಯೋಗಿಸಿಕೊಳ್ಳಬಹುದು.

ಇದನ್ನು ನೇರವಾಗಿ ಬೀಜ ಬಿತ್ತಿ ಬೆಳೆಯುವುದು ಸೂಕ್ತವಲ್ಲ. ಬೀಜದ ಮೊಳಕೆ ಅನಿಶ್ಚಿತ. 9 ರಿಂದ 90 ದಿವಸ ಹಿಡಿಯುವುದುಂಟು. ಬೀಜವನ್ನು 5 ನಿಮಿಷ ಕುದಿಯುವ ನೀರಿನಲ್ಲಿ ಹಾಕಿ ತೆಗೆದರೆ, ಮೊಳಕೆ ಉತ್ತಮ. ಹೊಸ ಬೀಜಕ್ಕಿಂತ ಹಳೆಯ ಒಂದು ವರ್ಷದ ಬೀಜವೇ ಬೇಗ ಮೊಳೆಯುತ್ತದೆ. ಬೀಜಗಳನ್ನು ಒಟ್ಟಿಹಾಕಿ,

ತಾಯಿ–ಬೇರು ಬೆಳೆಯುವುದಕ್ಕೆ ಮುಂಚೆಯೇ ಸಣ್ಣ ಬುಟ್ಟಿಗಳಲ್ಲಿ ನೆಟ್ಟು, ಕೆಲವು ವಾರಗಳ ನಂತರ ಮಳೆಗಾಲದಲ್ಲಿ ಬುಟ್ಟಿ ಸಹಿತ ನೆಡುವುದು ಒಳ್ಳೆಯ ಕ್ರಮ.



ಚಿತ್ರ : 29. ಕಕ್ಕೆ

ಇದರ ಎಲೆಗಳನ್ನು ಮೇಕೆಗಳು ತಿನ್ನುವುದಿಲ್ಲ. ಇದನ್ನು ಕಡಿದರೂ ಪುನಃ ಚಿಗುರುತ್ತದೆ. ಈ ಮರದ ಬೆಳವಣಿಗೆ ನಿಧಾನ. ಮುಖ್ಯವಾಗಿ, ಮೈಸೂರಿನಲ್ಲಿ ಅಲಂಕಾರಕ್ಕಾಗಿ ಹಾಕುವ ಗಿಡ.

(ii) ಒಳ್ಳೆ ತಂಗಡಿ : (ತಂಗಡಿ, ಆವರಿಕೆ) *Cassia auriculata* Linn.

ಇದೂ ಕೂಡ ಪೊದೆ ಗಿಡ. ಬಯಲು ಸೀಮೆಯಲ್ಲಿ ಹೆಚ್ಚು. ಇದೂ ಅಲಂಕಾರದ ಪೊದೆ; ಕಕ್ಕೆಯಂತೆಯೇ ಉಜ್ವಲ ಹಳದಿ ಹೂಗೊಂಚಲು; ಅವರಷ್ಟೆ ಬೆಡಗು.

ಇದರ ಉಪಯೋಗ ಮುಖ್ಯವಾಗಿ ಇದರ ತೊಗಟೆ, ಚರ್ಮ ಹದಮಾಡುವುದಕ್ಕಾಗಿ. ಹದಮಾಡುವ ಒಗಚು ಇದರಲ್ಲಿ ಬಹಳ ಹೆಚ್ಚು. ಇದರ ಮತ್ತೊಂದು ಉಪಯೋಗ ಕಬ್ಬಿಣ, ಉಕ್ಕಿಗೆ ಹದ ಕೊಡುವುದಕ್ಕಾಗಿ. ಈ ಕೆಲಸಕ್ಕೆ ಇದರ ಬೇರಿನ ತೊಗಟೆಯನ್ನು ಬಳಸುತ್ತಾರೆ.

ಇದರ ತೊಗಟೆ ಮತ್ತು ಬೀಜಗಳನ್ನು ಔಷಧಿಗಾಗಿಯೂ ಉಪಯೋಗಿಸುತ್ತಾರೆ.

ಈ ಗಿಡ ಕಾಡುಗಿಡವಾದುದರಿಂದ ಬೆಳೆಸುವುದು ಕಡಿಮೆ. ಆದರೆ ತೋಟಗಳಲ್ಲಿ ಅಲಂಕಾರಕ್ಕಾಗಿ ಬೆಳೆಸುವುದು ಒಳ್ಳೆಯದು.

(iii) ಅಲಂಕಾರದ ತಂಗಡಿಗಳು.

ಅಲಂಕಾರದ ಮರಗಳಾಗಿ ಅನೇಕ ಬಗೆಯ ಕ್ಯಾಷಿಯಗಳನ್ನು ಬೆಳೆಸುತ್ತಾರೆ. ಇವು ಯಾವುವೆಂದರೆ–

(ಅ) ಕ್ಯಾಷಿಯ ನೋಡೋಸ: *Cassia nodosa* Buch.- Ham. ex Roxb.

ಸುಮಾರು ನಿತ್ಯ ಹಸುರು. ಗಂಟು ತಾಳು. ಅಗಲಕ್ಕೆ ಹರಡಿ ಬೆಳೆಯುವ, ಕೊಡೆಯಂತೆ ಬೆಳೆಯುವ, ರೆಂಬೆಗಳು, ಹೊಳೆಯುವ ಎಲೆಗಳು, ತಿಳಿಗುಲಾಬಿ ಹೂಗೊಂಚಲು, ತೆಳು ಪರಿಮಳ; ಕ್ಯಾಷಿಯಗಳ ಪೈಕಿ ಅತ್ಯಂತ ಸುಂದರ. ಮಾರ್ಚಿನಿಂದ ಸುಮಾರು 5–6 ತಿಂಗಳು ಹೂವು.

(ಆ) ಕ್ಯಾಷಿಯ ಜವಾನಿಕ *Cassia javanica* Linn.

ಇದೂ ಚೆಲುವಿನ ಮರ. ಎಲೆಗಳು ನೋಡೋಸಕ್ಕಿಂತ ಚಿಕ್ಕವು. ನಯವಾದ ಕಂದು ಅಥವಾ ಗುಲಾಬಿಕಂದಿನ ತೊಗಟೆ, ಮೋಟುತಾಳು, ಅಗಲಕ್ಕೆ ಇಳಿಬೀಳುವ



ಚಿತ್ರ : 31. ಕ್ಯಾಷಿಯ ಜವಾನಿಕ

ರೆಂಬೆಗಳು; ಹೊಳಪಿನ ಎಲೆ, ಹೊಳೆಯುವ ಗುಲಾಬಿಕೆಂಪಿನ ಹೂವುಗಳು – ಏಪ್ರಿಲ್ ನಿಂದ; ಆದರೆ ನೋಡೋಸದಂತೆ ಹೆಚ್ಚು ಕಾಲ ಹೂವು ಬಿಡುವುದಿಲ್ಲ.

ಮರದ ರೂಪಕ್ಕೆ 71 ನೆಯ ಚಿತ್ರ ನೋಡಿ

(ಇ) ಕ್ಯಾಷಿಯ ರೆನೀಜಿರ *Cassia renigera.*

ಸಣ್ಣ ಮರ, ರೆಂಬೆ ಜೋತುಬಿದ್ದಿರುತ್ತದೆ ; ಕಂದುನರೆ ಬಣ್ಣದ ನಯ ತೊಗಟೆ. ಏಪ್ರಿಲ್ – ಮೇ ತಿಂಗಳಿನಲ್ಲಿ ನಸುಗೆಂಪಿನ ತೆಳು ಸುವಾಸನೆಯ ಹೂವುಗಳು.

(ಈ) ಕ್ಯಾಷಿಯಾ ಮಾರ್ಜಿನೇಟ ಇಲ್ಲವೆ ರಾಕ್ಸ್‌ಬರ್ಗಿ–*Cassia marginata* Roxb. (*Cassia roxburghii* Dc.)

ಇದೂ ಸಣ್ಣ ಚೆಂದುಳ್ಳ ಮರ. ಇದರ ಕಂದು ತೊಗಟೆ ಆಳವಾಗಿ ಸೀಳಿರುತ್ತದೆ. ಇದರ ರೆಂಬೆಗಳೂ ಹರಡಿ ಬೆಳೆದು ಇಳಿಬೀಳುತ್ತವೆ. ಎಲ್ಲಾ ಕ್ಯಾಷಿಯಾಗಳಿಗಿಂತಲೂ ನವುರು ಎಲೆಗಳು. ಹೂಗೊಂಚಲುಗಳು ಜೂನ್, ಜುಲೈನಲ್ಲಿ; ಹೂವು ಸಣ್ಣ; ಕೆಂಪು ಕಲ್ಲಿನ ಬಣ್ಣ; ಒಳ್ಳೆಯ ಗಂಧ.

(ಉ) ಕ್ಯಾಷಿಯಾ ಗ್ರ್ಯಾಂಡಿಸ್ (ದೊಡ್ಡದಗರೆ) *Cassia Grandis* Linn.f.
ಹರಡಿ ಬೆಳೆಯುವ ಮರ. ನಯವಾದ ನರೆಬಣ್ಣದ ತೊಗಟೆ. ಮೋಟುತಾಳು. ಎಳೆಎಲೆ ಕೆಂಪು. ಎಳೆಯ ಚಿಗುರುಗಳ ಮೇಲೆ ತುಕ್ಕು ಬಣ್ಣದ ನಯ ರೋಮ. ತಿಳಿಗುಲಾಬಿ ಹೂವು–ಸ್ವಲ್ಪ ಹಳದಿ ಛಾಯೆ. ಮಾರ್ಚ್ – ಏಪ್ರಿಲ್‌ನಲ್ಲಿ ಹೂ. ಅದೇ ಕಾಲದಲ್ಲಿ, ಅದೂ ಸ್ವಲ್ಪ ಮುಂಚೆ, ಎಲೆ ಉದುರುತ್ತದೆ. ಅಲಂಕಾರದ ಕ್ಯಾಷಿಯಾಗಳ ಪೈಕಿ ಎಲ್ಲಕ್ಕಿಂತಲೂ ದೊಡ್ಡ ಮರ.

(iv) ಸೀಮೆತಂಗಡಿ (ಪಿರೇ ತಂಗಡಿ) *Cassia siamea* Lamk.


ತಂಗಡಿ ಕುಟುಂಬದ ಪೈಕಿ ಸೌದೆ ಮತ್ತು ಇತರ ಉದ್ದೇಶಗಳಿಗಾಗಿ ರೈತರು ಬೆಳೆಸಬಹುದಾದ ಮರ, ಸೀಮೆತಂಗಡಿ.

ಇದು ಒಳ್ಳೆಯ ಸೌದೆ ಮರ. ಕೆಲವು ದೇಶಗಳಲ್ಲಿ – ಆಫ್ರಿಕದ ಘಾನಾದಲ್ಲಿ ಇದನ್ನು ನಮ್ಮಲ್ಲಿ ಸರ್ವೆಮರ (ಕ್ಯಾಷುರಿನ – ಕ್ಯಾಸರಿಕೆ) ಬೆಳೆಯುವಂತೆ ಸೌದೆಗಾಗಿ ತೋಪುಗಳಲ್ಲಿ ಬೆಳೆಸುತ್ತಾರೆ. ಕಾರಣ, ಇದು ಬೇಗ ಬೆಳೆಯುವುದರಿಂದ. ಕೆಲವೆಡೆ 2 ವರ್ಷಗಳಲ್ಲಿ ಸುಮಾರು 3 ಮೀಟರ್ (10 ಅಡಿ) ಎತ್ತರಕ್ಕೆ ಬೆಳೆಯುತ್ತದಂತೆ.

ಇದು ಸುಮಾರು ಎತ್ತರದ ಮರ. ಇದು ದಕ್ಷಿಣ ತಮಿಳುನಾಡಿನಲ್ಲಿ ಹೆಚ್ಚು. ಆದರೂ ಇತರ ಕಡೆಗಳಲ್ಲೂ ಬೆಳೆಯುತ್ತಿದ್ದಾರೆ; ಬೆಳೆಯಬಹುದು. ತೇವವಿರುವ, ಆದರೂ ಚೆನ್ನಾಗಿ ಬಸಿಯುವ ಸ್ಥಳಗಳಲ್ಲಿ ಈ ಮರ ಚೆನ್ನಾಗಿ ಬೆಳೆಯುತ್ತದೆ. ಒಣ ಪ್ರದೇಶದಲ್ಲಿ ಮೊದಲು ಮೊದಲು ಚೆನ್ನಾಗಿ ಬೆಳೆದರೂ ಅನಂತರ ಇದರ ಬೆಳವಣಿಗೆ ನಿಲ್ಲುತ್ತದೆ. ಅನೇಕ ವೇಳೆ ಇದ್ದಕ್ಕಿದ್ದಂತೆ ಸಾಯುತ್ತದೆ.

ಇದರ ನೆತ್ತಿ ಒತ್ತು. ನಿತ್ಯ ಹಸುರು. ಎಲೆ ಉದುರುವುದಿಲ್ಲ. ಅಚ್ಚ ಹಸುರೆಲೆ. ನುಣುಪಾದ ಬೂದಿತೊಗಟೆ. ತೊಗಟೆಯ ಮೇಲೆ, ನೀಳಕ್ಕೆ ಸಣ್ಣ ಬಿರುಕು. ರೆಂಬೆ ತುದಿಗಳಲ್ಲಿ, ಬೇಸಿಗೆಯಲ್ಲಿ ಹಳದಿ ಹೂವಿನ ಗೊಂಚಲು. ಹೂವು ಬಹಳ ಕಾಲ ಬಿಡುತ್ತಿರುತ್ತದೆ. ಬೇಸಿಗೆಯ ಕೊನೆಯಲ್ಲಿ ಕಾಯಿಗಳು ಬಲಿಯುತ್ತವೆ. ಕಾಯಿಗಳು ಸುಮಾರು 10 ಸೆಂ. ಮೀ. ನಿಂದ 25 ಸೆಂ. ಮೀ. (4–10 ಅಂಗುಲ) ಉದ್ದಕ್ಕೆ ಇರುತ್ತವೆ.

ನೆತ್ತಿ ಒತ್ತಾಗಿರುವುದರಿಂದ, ನಿತ್ಯ ಹಸುರಾಗಿರುವುದರಿಂದ ಇದನ್ನು ಕೆಲವೆಡೆ ಸಾಲುಮರಗಳಾಗಿ ಹಾಕುತ್ತಾರೆ. ಮೈಸೂರಿನ ಕಡೆ ಹೇಳುವುದಾದರೆ, ಇದು ಬಹು ಕಾಲ ನಿಲ್ಲದಿರುವುದರಿಂದ, ಮರ ಗಟ್ಟಿಯಾಗಿರದೆ ಮಳೆ, ಗಾಳಿಯಲ್ಲಿ ಬೀಳುವುದರಿಂದ, ರೆಂಬೆಗಳು ಒಡೆಯುವುದರಿಂದ, ಇದನ್ನು ಸಾಲುಮರಗಳಾಗಿ ಬೆಳೆಸುವುದು ಅನುಚಿತ. ಮಳೆಗಾಲದಲ್ಲಿ ಇದರಡಿ ನಿಲ್ಲುವುದು ತಪ್ಪು.



ಚಿತ್ರ : 30. ಸೀಮೆತಂಗಡಿ

ಆದರೆ ಇದನ್ನು ಸೌದೆಗಾಗಿ ತೋಪುಗಳಲ್ಲಿ ಬೆಳೆಸಬಹುದು. ತೋಪುಗಳಲ್ಲಿ 3.6 ಮೀಟರ್ (12 ಅಡಿ) ಅಂತರದಲ್ಲಿ ನೆಟ್ಟು, ಗಿಡಗಳು ಸ್ವಲ್ಪ ಬೆಳೆದ ನಂತರ 7.2 ಮೀಟರ್ (24 ಅಡಿ) ಅಂತರಕ್ಕೆ ಕೆಲವು ಗಿಡಗಳನ್ನು ಕಿತ್ತುಹಾಕಬೇಕು. ಈ ಮರದ ಒಂದು ವಿಷಯವೇನೆಂದರೆ ಇದರ ಎಲೆಯನ್ನು ಕುರಿ, ಆಡು ಮುಟ್ಟುವುದಿಲ್ಲ. ಈ ಕಾರಣದಿಂದ ಇವನ್ನು ನಾಲಾ ಪಕ್ಕಗಳಲ್ಲಿಯೂ ಒಣಪ್ರದೇಶಗಳಲ್ಲೂ ಬೆಳೆಸಬಹುದು. ಮಣ್ಣು ಕೊಚ್ಚಿದ ಸ್ಥಳಗಳಿಗೆ ಇದು ಒಪ್ಪು. ಕಾರಣ, ಇದರ ತರಗು (ಒಣ ಎಲೆ) ದಟ್ಟವಾಗಿ ಕೆಳಗೆ ಬೀಳುವುದರಿಂದ, ಇದರ ತಳಗಿನ ಮಣ್ಣುಗಳು ಬೇಗ

ಸುಧಾರಿಸುತ್ತವೆ. ಇದರ ಎಲೆಯನ್ನು ಹಸುರೆಲೆ ಗೊಬ್ಬರವಾಗಿಯೂ ಹಾಕ ಬಹುದು. ಕಡಿದ ನಂತರವೂ ಪುನಃ ಪುನಃ ಚಿಗುರುತ್ತದೆ.

ಇದರ ಒಳಮರ ಸುಮಾರು ಭಾರ—0.028 ಘನಮೀಟರ್. ಸುಮಾರು 25 ಕೆ.ಜಿ. (1 ಘನಅಡಿ: 54 ಪೌಂಡು) ತೂಗುತ್ತದೆ. ಇದನ್ನು ಕೊಡಲಿ ಹಿಡಿಗಳಿಗೆ, ಬೆತ್ತಗಳಿಗೆ ಹಾಗೂ ಮರದ ಕೊಡತಿಗಳಿಗೆ (ಹೆಂಟೆ ಚಚ್ಚುವ ಕೊಡತಿ) ಉಪಯೋಗಿಸ ಬಹುದು.

ಈ ಒಳಮರದ ಒಗಚನ್ನು ಚರ್ಮ ಹದಮಾಡಲು ಉಪಯೋಗಿಸುತ್ತಾರೆ. ಕೆಲವೆಡೆ ಇದರ ಹೂವುಗಳನ್ನು ಪಲ್ಯಕ್ಕಾಗಿ ಉಪಯೋಗಿಸುವುದುಂಟು.

ಇದನ್ನು ಬೀಜ ಊರಿಯೋ, ಒಟ್ಲಿನಲ್ಲಿ ಸಸಿಗಳನ್ನು ಎಬ್ಬಿಸಿಯೋ ಬೆಳೆಸ ಬಹುದು. ಮಾರ್ಚಿ–ಏಪ್ರಿಲಿನಲ್ಲಿ ಇದರ ಕಾಯಿಗಳನ್ನು ಬಿಡಿಸಿ ಒಣಗಿಸಿ, ಬಡಿದು ಬೀಜ ಮಾಡಿಟ್ಟುಕೊಳ್ಳಬೇಕು. ಬೀಜಗಳು ಚೆನ್ನಾಗಿ ಮೊಳೆಯುತ್ತವೆ.

ಈ ಮರದ ಬಗ್ಗೆ ಒಂದು ಎಚ್ಚರಿಕೆ. ಇದು ಒಳ್ಳೆಯ ಸೌದೆಯಾದರೂ ಸೌದೆ ಯಲ್ಲಿ ಹೊಗೆ ಹೆಚ್ಚು.

39. ಕಾರಾಚಿ (ಕಮ್ರ, ಕಮ್ಮರ, ಅಸನಗುರ್ಗಿ, ಕಮ್ಮಾರ್) *Hardwickia binata* Roxb.


ಇದು ಸರ್ಕಾರದವರು ಮೀಸಲಿಟ್ಟುಕೊಂಡಿರುವ ಮರಗಳ ಪೈಕಿ ಒಂದು. ಇದು ನಮ್ಮ ರಾಷ್ಟ್ರದ ಅತ್ಯುತ್ತಮ ಚೌಬೀನೆ ಮರಗಳಲ್ಲಿ ಒಂದು.

ಇದು ಬಯಲುಸೀಮೆಯ ಕಾಡುಗಳಲ್ಲಿ ಬೆಳೆಯುವ ನಿತ್ಯಹಸುರಿನ ಮರ. ತುಮಕೂರು, ಚಿತ್ರದುರ್ಗದ ಕಾಡುಗಳಲ್ಲಿ ಸಾಮಾನ್ಯವಾಗಿತ್ತು. ಸೇಲಂ, ಕೊಯಮ ಬತ್ತೂರು ಜಿಲ್ಲೆಗಳಲ್ಲಿ ಈ ಮರ ಘನವಾಗಿ, ಸುಮಾರು 30 ಮೀಟರ್ (100 ಅಡಿ) ಎತ್ತರಕ್ಕೆ ಬೆಳೆಯುತ್ತದೆ. ಮೈಸೂರು ರಾಜ್ಯದಲ್ಲಿ ಅಷ್ಟು ಎತ್ತರದ ಮರಗಳು ಅಪರೂಪ. ಈ ಮರ ವರ್ಷಕ್ಕೆ 50 ರಿಂದ 100 ಸೆಂ. ಮೀ. (20–40 ಅಂಗುಲ) ಮಳೆ ಬೀಳುವ ಮತ್ತು ದೀರ್ಘಕಾಲ ಒಣ ಹವೆ ಇರುವ ಪ್ರದೇಶಗಳಲ್ಲಿ ಚೆನ್ನಾಗಿ ಬೆಳೆಯುತ್ತದೆ.

ಇದರ ಎಲೆ ಬೂದಿ ಹಸುರು. ಎಳೆಯಗಿಡಗಳ ತೊಗಟೆ ಬೆಳ್ಳಿಬಣ್ಣ; ಆಮೇಲೆ ಕಪ್ಪು ಬೂದಿಗೆ ತಿರುಗುತ್ತದೆ. ಒರಟು; ಉದ್ದಕ್ಕೆ ಸೀಳುತ್ತದೆ. ಜುಲೈ–ಸೆಪ್ಟೆಂಬರಿನಲ್ಲಿ ತಿಳಿ ಹಳದಿ ಹಸುರಿನ ಹೂವುಗೊಂಚಲುಗಳನ್ನು ತಳ್ಳುತ್ತದೆ. ಕಾಯಿಗಳು, ಏಪ್ರಿಲ್–ಮೇ ತಿಂಗಳಿನಲ್ಲಿ ಬಲಿತು ಉದುರುತ್ತವೆ.

ಈ ಮರಕ್ಕೆ ಮರಳು ಗೋಡುಮಣ್ಣು, ತೆಟ್ಟೆಮಣ್ಣು, ಕಲ್ಲುನೆಲ ಒಪ್ಪು. ಈ ಕಾರಣದಿಂದಲೇ ಒಣ ಪ್ರದೇಶದ ಕಾಡುಗಳನ್ನು ಬೆಳೆಸಲು ಈ ಮರ ಸೂಕ್ತ.

ಇದರ ಒಳಮರ ಬಹಳ ಬಾಳಿಕೆಯದು ; ಎಳೆ ಒತ್ತು ; ಬಹಳ ಗಟ್ಟಿ. ಬಹಳ ಭಾರ. 0.028 ಘನಮೀಟರ್ 28 – 29½ ಕಿ.ಜಿ. (1ಘನಅಡಿ, 62–65 ಪೌಂಡು) ತೂಗುತ್ತದೆ ; ತೇಗದ ಒಂದೂವರೆಯಕ್ಕಾಲರಷ್ಟು ಭಾರ. ಆಗ ತಾನೆ ಕಡಿದ ಮರ ಮೃದುವಾಗಿದ್ದು ಕುಯ್ಯಲು ಸುಲಭ. ಅನಂತರ ಬಹಳ ಗಟ್ಟಿ ಬೀಳುತ್ತದೆ. ಹದ ಮಾಡಿದ ಮರ ಅಷ್ಟು ಭಾರವಿರುವುದಿಲ್ಲ. ಇದು ಒಳ್ಳೆಯ ಪಾಲಿಷ್ ತೆಗೆದುಕೊಳ್ಳುತ್ತದೆ. ಪೀಠಾಸನಗಳಿಗೆ, ಅಂದದ ಮರದ ಸಾಮಾನುಗಳ ತಯಾರಿಕೆಗೆ ಬಹಳ ಯೋಗ್ಯವಾದ ಮರ. ಇದಕ್ಕೆ ತೇವ ಅಂಟುವುದಿಲ್ಲ. ಆದುದರಿಂದ ನೆಲದಲ್ಲಿ ಹೂಳಿದರೂ ಕೆಡುವುದಿಲ್ಲ. ಸೇತುವೆಗಳಲ್ಲಿ, ಗಣಿಗಳಲ್ಲಿ ಊರೆಕಂಬಗಳಾಗಿ ಈ ಮರವನ್ನು ಹೆಚ್ಚಾಗಿ ಉಪಯೋಗಿಸುತ್ತಾರೆ.



ಚಿತ್ರ : 32. ಕಾರಾಚಿ

ಕಟ್ಟಡದ ಕಂಬ, ತೊಲೆ ಮುಂತಾದುವುಗಳಿಗೆ, ವ್ಯವಸಾಯದ ಮುಟ್ಟುಗಳಿಗೆ, ಗಾಡಿಗಳಿಗೆ ಸೂಕ್ತವಾದ ಮರ. ಭಾರವಾಗಿರುವುದರಿಂದ ಹೆಂಟೆ ಒಡೆಯುವ ಕೊಡತಿಗಳಿಗೆ ಬಹಳ ಅನುಕೂಲ. ಮಗ್ಗಗಳಿಗೆ, ಬಾವಿಕಟ್ಟಡಕ್ಕೆ ಹಾಗೂ ದೋಣಿ ಮೀಟುಗೋಲಿಗೆ ಒದಗಿಬರುತ್ತದೆ.

ಇದರ ಎಲೆ, ದನಗಳಿಗೆ ಮೆಚ್ಚು. ಎಲೆ, ಒಳ್ಳೆ ಹಸುರು ಗೊಬ್ಬರವೂ ಕೂಡ. ಆದುದರಿಂದ ಈ ಮರವನ್ನು ಅನೇಕ ಕಡೆ ತರಿದು ನಾಶಗೊಳಿಸಿದ್ದಾರೆ. ತುಮಕೂರು, ಚಿತ್ರದುರ್ಗದ ಕಾಡುಗಳಲ್ಲಿ ಈ ಮರ ಮಾಯವಾಗುತ್ತಿರುವುದು ಈ ನಾಶನದಿಂದಲೇ.

ಈ ಮರದ ಗೋಂದು ಮತ್ತು ನಾರು, ಚರ್ಮ ಹದಮಾಡುವ ಒಗಚನ್ನೂ ಕೊಡುತ್ತದೆ. ತೊಗಟೆಯಿಂದ ನಾರು ದೊರೆಯುತ್ತದೆ. ಅದು ಒಗಚಾಗಿರುತ್ತದೆ.

ಇದರ ಬೀಜ ಬೇಗ ಮೊಳೆಯುತ್ತದೆ. ತಣ್ಣೀರಿನಲ್ಲಿ 24 ಗಂಟೆಕಾಲ ನೆನೆಸಿ ಬಿತ್ತಿದರೆ ಮೊಳಕೆ ಇನ್ನೂ ಉತ್ತಮಗೊಳ್ಳುತ್ತದೆ. ಇದರ ಸಸಿಗಳು ಬಹಳ ಶೀಘ್ರವಾಗಿ ಆಳಕ್ಕೆ ಬೇರುಬಿಡುತ್ತವೆ. ಬೇಗ ಸ್ಥಾಪಿತವಾಗುತ್ತವೆ. ಆದರೆ ತರುವಾಯದ ಬೆಳವಣಿಗೆ ನಿಧಾನ.

ಬೀಜ ಬಿತ್ತಿದ ಮೇಲೆ, ಹಕ್ಕಿಗಳಿಂದ ಕಾಪಾಡಲು ಬೀಜದ ಮೇಲೆಮಣ್ಣನ್ನು ತೆಳುವಾಗಿ ಉದುರಿಸಬೇಕು. ಎಳೆಯ ಸಸಿ ಮತ್ತು ಗಿಡಗಳನ್ನು ದನ, ಕುರಿ, ಮೇಕೆಗಳಿಂದ ಕಾಪಾಡಬೇಕು. ನೇರವಾಗಿ ಬೀಜ ಬಿತ್ತಿ ಬೆಳೆಯಬಹುದು. ಬೇಸಿಗೆಯಲ್ಲಿ ನೀರು ಎರೆಯುತ್ತಿರಬೇಕು.

40. ಹುಣಿಸೆ. *Tamarindus indica* Linn.


ಈ ಮರದ ಬಗ್ಗೆ ರೈತರಿಗೆ ಹೇಳುವುದು ಬೆಟ್ಟಕ್ಕೆ ಕಲ್ಲು ಹೊತ್ತಹಾಗೆ. ಈ ಮರದ ಉಪಯೋಗಗಳನ್ನು ಅರಿಯದ ರೈತರು ಯಾರೂ ಇಲ್ಲವೆನ್ನಬಹುದು.

ಮುಖ್ಯವಾಗಿ ಈ ಮರವನ್ನು ಹುಳಿಹಣ್ಣಿಗಾಗಿ ಬೆಳೆದರೂ, ಈ ಮರದಿಂದ ಅನೇಕ ಬಗೆಯ ಉಪಯೋಗಗಳನ್ನು ಪಡೆಯುತ್ತಿದ್ದಾರೆ. ಹೊಸ ಉಪಯೋಗಗಳನ್ನು ಕಂಡು ಹಿಡಿಯುತ್ತಿದ್ದಾರೆ.

'ಹುಣಸೆಬೀಜ' ಎಂದು ಜರಿಯುತ್ತಿದ್ದ ಕಾಲ ಹೋಯಿತು. ಈ ಬೀಜಕ್ಕೆ ಈಚೆಗೆ ಅನೇಕ ಹೊಸ ಉಪಯೋಗಗಳಿವೆ.

ಬರಗಾಲದಲ್ಲಿ ಇದನ್ನು ಕುಟ್ಟಿಯೋ, ನೆನೆಸಿ ಕುದಿಸಿಯೋ, ಹುರಿದೋ ತಿನ್ನುವುದುಂಟು. ಬೀಜವನ್ನು ಪುಡಿಮಾಡಿ, ಗೋಂದಿನೊಂದಿಗೆ ಬೆರೆಸಿ, ಕಂಬಳಿ ನೇಯುವಾಗ ಸರಿಯಂತೆ ಬಳಿಸುತ್ತಾರೆ. ಬೀಜದಿಂದ ಹವಳದ ಬಣ್ಣದ ಎಣ್ಣೆಯನ್ನು ಹಿಂಡಿ, ಪ್ರತಿಮೆಗಳಿಗೆ ಮೆರಗು ಬರಲು ಹಚ್ಚುತ್ತಾರೆ. ಬೀಜದ ಪುಡಿಯನ್ನು ಗೋಂದಿನೊಂದಿಗೆ ಕುದಿಸಿ ಬಹಳ ಬಲಯುತವಾದ ಮರವಜ್ರವನ್ನು ತಯಾರು ಮಾಡುತ್ತಾರೆ.

ಚಿಗುರು ಎಲೆಗಳನ್ನು ತರಕಾರಿಯಾಗಿ ಬಳಸುತ್ತಾರೆ. ಎಲೆಗಳಿಂದ ಬಣ್ಣ ತೆಗೆದು ಬಟ್ಟೆಗಳಿಗೆ ಬಣ್ಣ ಕಟ್ಟಲು ಉಪಯೋಗಿಸುತ್ತಾರೆ.



ಚಿತ್ರ : 33. ಹುಣಿಸೆ

ಇದರ ಒಳಮರ ಗಟ್ಟಿ. ಎಳೆಗಳು ಒತ್ತು. ಇದು ಭಾರದ ಮರ–0.028 ಘನಮೀಟರ್ ತೂಕ ಸುಮಾರು 27 ಕಿ. ಜಿ. (1 ಘನಅಡಿ 60 ಪೌಂಡು). ಇದರ ಬಾಳಿಕೆ ಹೆಚ್ಚು. ಪೀಠಾಸನಗಳನ್ನು ಮಾಡಲು ಈ ಮರ ಬಹಳ ಗಟ್ಟಿಯಾದರೂ, ಗಾಡಿ ಚಕ್ರ, ಕೊಡತಿ, ಹಿಡಿ, ಗಾಣ, ಕೊಟ್ಟಣ, ಒನಕೆ ಮುಂತಾದವುಗಳಿಗೆ ಬಲು ಒಪ್ಪು.

ಚಕ್ಕೆ, ಎಲೆ, ಹೂವು, ಹಣ್ಣಿನ ತಿರುಳು, ಬೀಜ ಎಲ್ಲವೂ ಔಷಧಿಗಾಗಿ ಒದಗುತ್ತದೆ.

ಈ ಮರ ಬಹಳ ವರ್ಷಗಳ ಕಾಲ ಬಾಳುವ ಮರ. ಸುಮಾರು 200 ವರ್ಷದ ಮರಗಳೂ ಇವೆ.

ಈ ಮರ ಘನವಾದ, ಗಂಭೀರವಾದ ಎತ್ತರವಾದ ದೊಡ್ಡ ಮರ. 24 ಮೀಟರ್ ಎತ್ತರಕ್ಕೂ ಬೆಳೆಯುವುದುಂಟು. ಸಿಂಹಳ ದ್ವೀಪದಲ್ಲಿ ಒಂದು ಹುಣಿಸೆ ಮರದ ಸುತ್ತಳತೆ 12.6 ಮೀಟರ್ (42 ಅಡಿ) ಇದೆಯಂತೆ.

ಸಾಲು ಮರಗಳಾಗಿಯೂ, ತೋಪುಗಳಲ್ಲೂ ಬೆಳೆಸಲು ಬಹಳ ಯೋಗ್ಯವಾದ ಸುಲಕ್ಷಣವಾದ ಮರ. ಆದರೆ, ಇದರ ಬೆಳವಣಿಗೆ – ಅದರಲ್ಲೂ ಗಟ್ಟಿ ಮಣ್ಣಿನಲ್ಲಿ, ನಿಧಾನ.

ಈ ಮರ ಏಪ್ರಿಲ್–ಮೇ ತಿಂಗಳಿನಲ್ಲಿ ಹೂವು ಬಿಡುತ್ತದೆ. ಕಾಯಿ ಫೆಬ್ರವರಿ–ಮಾರ್ಚಿಯಲ್ಲಿ ಬಲಿಯುತ್ತದೆ. ಬಿತ್ತನೆಗೆ ಬೀಜಗಳನ್ನು ಕಾಯಿನಿಂದ ಹುಷಾರಾಗಿ ಬಿಡಿಸಿಕೊಂಡು ಹೊಸ ಬೀಜಗಳನ್ನೇ, ಬೆಳೆಯುವ ಕಡೆ ನೇರವಾಗಿಯೋ ಅಥವಾ ಒಟ್ಲುಗಳಲ್ಲೋ ಏಪ್ರಿಲ್ ತಿಂಗಳಿನಲ್ಲಿ ಬಿತ್ತುವುದು ಒಳ್ಳೆಯದು. ಮೊಳಕೆ 15–20 ದಿನಗಳಲ್ಲಿ ಮುಗಿಯುತ್ತದೆ. ಚೆನ್ನಾಗಿಯೇ ಮೊಳೆಯುತ್ತದೆ.

ಒಟ್ಲು ಹುಯ್ಯುವುದಾದರೆ ಎತ್ತರಿಸಿದ ಮಡಿಗಳನ್ನು ಏರಿಸಿ, ಸಾಲಿನಲ್ಲಿ ಬೀಜಗಳನ್ನು ಊರಬೇಕು. ಜೂನ್–ಜುಲೈ ತಿಂಗಳಿನ ಹೊತ್ತಿಗೆ ಸಸಿಗಳನ್ನು ಕಿತ್ತು ನೆಡಬಹುದು. ತಾಯಿಬೇರು ಉದ್ದವಾಗುವುದಕ್ಕೆ ಮುಂಚೆಯೇ ನಾಟಿ ಮಾಡುವುದು ಒಳ್ಳೆಯದು. ಸಾಮಾನ್ಯವಾಗಿ ಸಸಿಯ ಬೆಳವಣಿಗೆ ಮೊದಲೆರಡು ವರ್ಷ ಬಿರುಸು. ಎರಡು ವರ್ಷದಲ್ಲಿ 1.2 ಮೀಟರ್ (4 ಅಡಿ) ಎತ್ತರಕ್ಕೆ ಬೆಳೆಯುತ್ತದೆ.

ಒಂದು ವಿಶೇಷ. ಈ ಮರ ನಮ್ಮ ದೇಶದಲ್ಲಿ ಸರ್ವ ಸಾಮಾನ್ಯವಾದರೂ, ಚಿರಪರಿಚಿತವಾಗಿದ್ದರೂ ಇದರ ತವರು ಭಾರತವಲ್ಲ. ಆಫ್ರಿಕದ ಅಬ್ಬಿಸೀನಿಯಾವೇ ಇದರ ಸ್ಥಳ. ಬಹಳ ಶತಮಾನಗಳ ಹಿಂದೆಯೇ ನಮ್ಮ ದೇಶಕ್ಕೆ ಬಂದು, ನಮ್ಮ ಮರವಾಗಿ, ನಮ್ಮ ಜೀವನದ ಹಾಸುಹೊಕ್ಕಾಗಿ ಬಾಳುತ್ತಿದೆ.

ಮರದ ರೂಪಕ್ಕೆ 72 ನೆಯ ಚಿತ್ರ ನೋಡಿ.

41. ಕಂಚುವಾಳದ ಕುಟುಂಬದ ಮರಗಳು

ಈ ಕುಟುಂಬದ ಗಿಡಗಳು ಅನೇಕವು, ಅಲಂಕಾರದ ಹೂವಿನ ಮರಗಳು. ಇದರ ಒಳಮರ ಅಷ್ಟೇನೂ ಉಪಯೋಗಕ್ಕೆ ಬರತಕ್ಕವಲ್ಲ.

(i) ಕಂಚುವಾಳ (ಕೆಂಪು ಮಂದಾರ, ಸರುಳ್) *Bauhinia purpurea* Linn.

ಇದು ಒಣ ಪ್ರದೇಶಗಳಲ್ಲಿ ಬೆಳೆಯುವ ಸಣ್ಣ ಮರ. ಇದನ್ನೂ ಕೂಡ ಅಲಂಕಾರಕ್ಕಾಗಿ ಮತ್ತು ಇತರ ಉದ್ದೇಶಗಳಿಗಾಗಿ ಬೆಳೆಸುವುದುಂಟು.

ಇದರ ನೆತ್ತಿ ಪೊದೆಯಂತಿರುತ್ತದೆ. ಇದರ ತೊಗಟೆ ಅಚ್ಚ ಬೂದಿ ಅಥವಾ ಕಂದು. ನಿತ್ಯ ಹಸುರಿನ ಮರ. ಇದರ ಹೂವು ದೊಡ್ಡದು ; ಊದಾ ಬಣ್ಣ ; ಬಹಳ ಸುವಾಸನೆ. ಸೆಪ್ಟೆಂಬರಿನಿಂದ ಡಿಸೆಂಬರಿನ ತನಕ. ಬೀಜ, ಜನವರಿ–ಮಾರ್ಚಿಯಲ್ಲಿ ಬಲಿಯುತ್ತದೆ.

ಇದರ ಒಳಮರ ಗುಲಾಬಿ ಬಿಳುಪು ; ಆದರೆ, ಒಣಗಿದ ಮೇಲೆ ಕಂದು ಬಣ್ಣಕ್ಕೆ ತಿರುಗುತ್ತದೆ. ಮರ ಗಟ್ಟಿ ; ವ್ಯವಸಾಯದ ಮುಟ್ಟುಗಳಿಗೂ ಕಟ್ಟಡಕ್ಕೂ ಬಳಸಬಹುದು.

ಇದರ ಎಲೆಯನ್ನು ಮೇವಿಗಾಗಿ ಬಳಸಬಹುದು. ಹೂವು ಮತ್ತು ಮೊಗ್ಗುಗಳನ್ನು ಉಪ್ಪಿನಕಾಯಿ ಹಾಕಬಹುದು. ತರಕಾರಿಗಾಗಿ – ಪಲ್ಯಕಾಗಿ ಉಪಯೋಗಿಸಬಹುದು. ಇದರ ಚಕ್ಕೆ, ಹೂವು ಮತ್ತು ಬೇರು ಔಷಧಿ. ತೊಗಟೆಯನ್ನು ಚರ್ಮ ಹದ ಮಾಡಲಿಕ್ಕೂ, ಬಣ್ಣ ಕಟ್ಟುವುದಕ್ಕೂ ಉಪಯೋಗಿಸುತ್ತಾರೆ. ಕೆಲವೆಡೆ ಇದರ ತಾಳಿನಿಂದ ನಾರನ್ನು ತೆಗೆಯುತ್ತಾರೆ.


ಇದರ ಬೆಳವಣಿಗೆ ನಿಧಾನ. ಇದನ್ನು ಬೀಜ ಹಾಕಿಯೋ ಅಥವಾ ಸಸಿಗಳನ್ನು ಬೆಳೆಸಿ ನೆಟ್ಟೋ ಬೆಳೆಸಬಹುದು. ಬೀಜಗಳನ್ನು ಏಪ್ರಿಲ್ – ಮೇ ತಿಂಗಳಿನಲ್ಲಿ ಒಟ್ಲು ಹುಯ್ದು, ಸುಮಾರು ಮುಕ್ಕಾಲು ಸೆಂ. ಮಿ. (ಕಾಲು ಅಂಗುಲ) ಮಣ್ಣು ಮುಚ್ಚಿ, ಕಳೆ ತೆಗೆಯುತ್ತಾ, ನೀರು ಎರೆಯುತ್ತ ಇರಬೇಕು. ಒಟ್ಲು ಹಾಕುವಾಗಲೂ, ಬೀಜಗಳನ್ನು ಸಾಲಿನಲ್ಲಿ ಹಾಕುವುದು ಒಳ್ಳೆಯದು. 28 ಗ್ರಾಂ(1ಔನ್ಸು) ನಲ್ಲಿ 120 ಬೀಜವಿರುತ್ತದೆ. ಮೊಳಕೆ ಚೆನ್ನಾಗಿರುತ್ತದೆ.

ಈ ಮರ ಬಂಜರು ಜಮೀನುಗಳಲ್ಲಿ ಹಾಕಲು ಯೋಗ್ಯ.

(ii) ಉಳಿಚೆ (ಬಿಳಿ ಕಂಚುವಾಳ) *Bauhinia variegata* Linn.

ಇದು ಒಣ ಪ್ರದೇಶದ ಕಾಡುಗಳಲ್ಲಿ ಬೆಳೆಯುವ ಮರವಾದರೂ ರೈತರಿಗೆ ಉಪಯುಕ್ತವಾಗಿರುವುದರಿಂದಲೂ, ಅಲಂಕಾರದ ಹೂವಿನ ಮರವಾಗಿರುವುದರಿಂದಲೂ ಇದನ್ನು ಅನೇಕ ಕಡೆ ಬೆಳೆಸುತ್ತಾರೆ; ಬೆಳೆಸಬೇಕು.

ಇದು ಸುಮಾರು ಗಾತ್ರದ, ಸುಮಾರು ಎತ್ತರದ ಮರ. ಇದರ ಎಲೆ ಅಗಲ; ಎರಡು ಹೋಳು. ಅದಕ್ಕಾಗಿಯೇ ಇದನ್ನು ಒಂಟೆಪಾದದ ಎಲೆ ಎನ್ನುವುದುಂಟು. ಅನೇಕ ಕಡೆ ಮುತ್ತುಗದಂತೆಯೇ ಊಟದ ಎಲೆಯಾಗಿ ಬಳಸುತ್ತಾರೆ. ಹೊಸ ಎಲೆ, ಏಪ್ರಿಲ್ – ಮೇ ತಿಂಗಳಿನಲ್ಲಿ ತಳ್ಳುತ್ತದೆ. ಇದಕ್ಕೆ ಒಂದೆರಡು ತಿಂಗಳು ಮುಂಚೆಯೇ, ಎಲೆ ಉದುರಿದಾಗ, ಗುಲಾಬಿ ಅಥವಾ ಬಿಳಿ ಬಣ್ಣದ ಪರಿಮಳದ ಹೂವು ಮೂಡುತ್ತದೆ. ಪುನಃ, ಸೆಪ್ಟೆಂಬರ್ – ಅಕ್ಟೋಬರ್ ತಿಂಗಳಿನಲ್ಲಿ ಹೂವು. ಹೂವು ಬಿಟ್ಟಾಗ ಈ ಮರ ಬಹಳ ಚೆಲುವಾಗಿರುತ್ತದೆ.



ಚಿತ್ರ : 34. ಉಳಿಪೆ

ಇದರ ತೊಗಟೆಯ ಬಣ್ಣ ಕಂದು ; ಉದ್ದವಾಗಿ ಸೀಳಿರುತ್ತದೆ. ಇದರ ಕಾಯಿ ಮೇ – ಜೂನಿನಲ್ಲಿ ಬಲಿಯುತ್ತದೆ.

ಇದರ ಒಳಮರ ಬೂದು ; ಸುಮಾರು ಗಟ್ಟಿ ; ವ್ಯವಸಾಯದ ಮುಟ್ಟುಗಳಿಗೆ ಯೋಗ್ಯ.

ತೊಗಟೆಯಿಂದ ಚರ್ಮ ಹದಮಾಡುವ ಒಗಚನ್ನು ತೆಗೆಯುತ್ತಾರೆ. ಬಣ್ಣವನ್ನೂ, ನಾರನ್ನೂ ತೆಗೆಯಬಹುದು ; ಮೊಗ್ಗು ಮತ್ತು ಬೇರು ಔಷಧಿಗೆ ಒದಗುತ್ತದೆ.

ಇದರ ಎಲೆ, ದನಗಳಿಗೂ, ಮೇಕೆಗಳಿಗೂ ಒಪ್ಪಾದ ಮೇವಿನ ಸೊಪ್ಪು. ಕೆಲವೆಡೆ ಎಲೆಯನ್ನೂ, ಮೊಗ್ಗನ್ನೂ ತರಕಾರಿಯಾಗಿ ಉಪಯೋಗಿಸುತ್ತಾರೆ. ಮೊಗ್ಗನ್ನು ಉಪ್ಪಿನಕಾಯಿ ಹಾಕಬಹುದು.

ಈ ಮರ, ಜೇನು ಸಾಕುವವರು ಬೆಳೆಸಲು ಯೋಗ್ಯವಾದದ್ದು. ಇದರ ಹೂವಿನ ಪರಿಮಳ ಜೇನುಗಳನ್ನು ಬಹುವಾಗಿ ಆಕರ್ಷಿಸುತ್ತದೆ.

ಈ ಮರವನ್ನು, ನೇರವಾಗಿ ಬೆಳೆಯುವ ಕಡೆಯೋ ಬೀಜ ಹೂಣಿ ಸುಲಭವಾಗಿ ಬೆಳಸಿಕೊಳ್ಳಬಹುದು. ಹೀಗೆ ಮಾಡಲು, ಸಿಡಿಯದಿರುವ ಒಣ ಕಾಯಿಗಳನ್ನು ಮೇ – ಜೂನ್ ತಿಂಗಳಿನಲ್ಲಿ ಕೂಡಿಹಾಕಿಕೊಂಡು ಬಿಸಿಲಿನಲ್ಲಿ ಒಣಗಿಸಬೇಕು. ಆಗ ಸಿಡಿದ ಬೀಜಗಳನ್ನು ಆರಿಸಿಕೊಂಡು ಇವುಗಳನ್ನೇ ಬಿತ್ತಬೇಕು. ಅಂತಹ ಬೀಜಗಳು ಚೆನ್ನಾಗಿ ಮೊಳೆಯುತ್ತವೆ.

ಬೇಕಾದರೆ, ಬೀಜಗಳನ್ನು ಒಟ್ಲು ಹುಯ್ದು, ಸಸಿ ಎಬ್ಬಿಸಿ, ಆ ವರ್ಷವೋ, ಮುಂದಿನ ವರ್ಷವೋ ನಾಟಿ ಹಾಕಬಹುದು. ಒಟ್ಲನ್ನು ಮೇ ತಿಂಗಳಿನಲ್ಲಿ ಹಾಕುವುದು ಸೂಕ್ತ. ಮೊಳಕೆ ಸುಮಾರು 4 ರಿಂದ 10 ದಿನಗಳಲ್ಲಿ ಕಾಣಿಸಿಕೊಳ್ಳುತ್ತದೆ.

ಈ ಮರ ಸುಮಾರಾಗಿ ಬೇಗ ಬೆಳೆಯುವ ಮರ. 10 ವರ್ಷಗಳಲ್ಲಿ 6 ಮೀಟರ್ (20 ಅಡಿ) ಎತ್ತರಕ್ಕೆ ಬೆಳೆಯುತ್ತದೆ.

ಈ ಮರವನ್ನು ಕಡಿದರೂ ಪುನಃ ಚಿಗುರುತ್ತದೆ.

ಮರದ ರೂಪಕ್ಕೆ 73ನೆಯ ಚಿತ್ರ ನೋಡಿ.

42. ಜಂಬೆ. (ಶಿಲ್ವೆ, ತಿರುವ, ಇರುಳ್‌ಮರ) *Xylia xylocarpa* (Roxb.) Taub.

ಇದು ಮಲೆನಾಡಿನ ಜಿಲ್ಲೆಗಳಲ್ಲೂ ಉತ್ತರಕನ್ನಡ ಜಿಲ್ಲೆಯಲ್ಲೂ ಸಾಮಾನ್ಯ. ಅಲ್ಲಿ ಅದು ದೊಡ್ಡ ಮರ. ಎತ್ತರಕ್ಕೆ ಬೆಳೆಯುತ್ತದೆ. ಕೆಲವೆಡೆ ಮರದ ದಿಂಡೇ ಸುಮಾರು 15 ಮೀಟರ್ (50ಅಡಿ) ಇರುವುದುಂಟು. ಇದು ಕಂಬ, ತೊಲೆ, ಸೇತುವೆ, ಬಾವಿ, ದೋಣಿಗಳಿಗೆ ಅಲ್ಲದೆ ನೇಗಿಲು, ಚಕ್ರದ ಗುಂಬ, ನೊಗ, ಹಲುಬೆ ಹಲ್ಲು, ಉಳಿ ಹಿಡಿ ಮುಂತಾದವಕ್ಕೂ, ಗಾಣಗಳಿಗೂ ಸೂಕ್ತ. ಇದರ ಇದ್ದಿಲು ಬಹಳ ಶ್ರೇಷ್ಠ. ಕಮ್ಮಾರರಿಗೆ ಬಹಳ ಒಪ್ಪು. ಆದುದರಿಂದ ಇದನ್ನು ಕಬ್ಬಿಣದ ಮರ ಎಂತಲೂ ಕರೆಯುವುದುಂಟು. ಇದು ಒಳ್ಳೆಯ ಸೌದೆಯ ಮರವೂ ಹೌದು.

ಇದರ ಒಳಮರ ಕೆಂಪು ಅಥವಾ ಕಂದು; ಬಹಳ ಬಲಯುತವಾದದ್ದು. ಗಟ್ಟಿ. ಮೊಳೆ ಸುಲಭವಾಗಿ ಇಳಿಯುವುದಿಲ್ಲ. ಭಾರದ ಮರ – 0 . 028 ಘನ

ಮೀಟರ್ ಸುಮಾರು 29 ಕೆ. ಜಿ. (1 ಘನಅಡಿ 64 ಪೌಂಡು) ತೂಗುತ್ತದೆ – ತೇಗದ ಒಂದೂವರೆಯಷ್ಟು. ಇದಕ್ಕೆ ಗೆದ್ದಲು ಹತ್ತುವುದಿಲ್ಲ. ಇದು ತೇವ ದಿಂದ ಕೆಡುವುದಿಲ್ಲ. ಕೆಲವೆಡೆ 40 ವರ್ಷದ ಕೆಳಗೆ ಹೂಣಿದ ಜಂಬೆ ಕಂಬಗಳು ಅಚ್ಚಳಿಯದೆ ನಿಂತಿವೆ. ಬಹಳ ಬಾಳಿಕೆ ಬರತಕ್ಕ ಮರ. ಇದು ಬಣ್ಣವನ್ನೂ ಚೆನ್ನಾಗಿ ಹೀರಿಕೊಳ್ಳುತ್ತದೆ. ಇದನ್ನು ಹಡಗುಗಳಿಗೂ, ರೈಲ್ವೆ ಸ್ಲೀಪರುಗಳಿಗೂ ಬಳಸುತ್ತಾರೆ – ಭಾರ, ಬಾಳಿಕೆ ಇರುವುದರಿಂದ.

ಬೇಸಿಗೆಯಲ್ಲಿ ಇದರ ಎಲೆ ಉದುರಿ ಹೂವು ಬಿಡುತ್ತವೆ. ಹಣ್ಣು ಜನವರಿ ಯಲ್ಲಿ ಬಲಿಯುತ್ತದೆ. ಇದನ್ನು ಕೆಲವರು ತಿನ್ನುವುದುಂಟು.

43. ವಣ್ಣಿ. (ಪೆರುಂಬೆ ಉಣ್ಣಿ) *Prosopis cineraria* (Linn.) Mackr.

ಇದು ಉತ್ತರ ಭಾರತದ ಮರು ಪ್ರದೇಶದ ರೈತರಿಗೆ ಅಚ್ಚುಮೆಚ್ಚಿನ ಮರ. ಇದನ್ನು ಅವರು ದೇವತೆಗಳ ಮರವೆಂದೇ ಭಾವಿಸಿದ್ದಾರೆ. ಈ ಮರದಿಂದ ವ್ಯವ ಸಾಯದ ಮುಟ್ಟುಗಳಿಗೆ ಮರ, ಒಲೆಗೆ ಸೌದೆ, ಜಾನುವಾರಗಳಿಗೆ ಮೇವು, ಜಮೀನಿಗೆ ತಾಕತ್ತು.

ಇದು ಸಣ್ಣ ಮರವಾದರೂ ಕೆಲವೆಡೆ 15 ಮೀಟರ್ (50 ಅಡಿ) ಎತ್ತರಕ್ಕೂ ಬೆಳೆದಿರುವುದುಂಟು. ದಿಂಡಿನ ಸುತ್ತಳತೆ 1.8 ಮೀಟರ್ (6 ಅಡಿ) ಇರುವುದೂ ಉಂಟು. ಇದರ ದಿಂಡು ಡೊಂಕು; ನೆಟ್ಟಗಿರುವುದು ಅಪರೂಪ.

ಇದು ಮುಳ್ಳಿನ ಮರ ; ಜಾಲಿಯ ಜತೆಗಾರ. ಆದರೂ, ಜಾಲಿ ಬೆಳೆಯಲಾರದ ಕಡೆ, ಮರುಳು ಪ್ರದೇಶಗಳಲ್ಲಿ, ರಾಜಾಸ್ಥಾನದ ಮರುಭೂಮಿಯಲ್ಲಿ ಬೆಳೆಯುತ್ತದೆ. ಆದರೆ ಇದು ಒಪ್ಪಾಗಿ ಬೆಳೆಯುವುದು, ಆಗಾಗ್ಗೆ ಮೆಕ್ಕಲು ನಿಲ್ಲುವ, ನದಿಪ್ರದೇಶ. ಇದರ ಬೇರು ಆಳವಾಗಿ ಇಳಿಯುತ್ತದೆ. ಆದುದರಿಂದ, ಮಳೆ ಹೆಚ್ಚಾಗಿ ಬೀಳದ ಕಡೆಯಲ್ಲೂ ಊರ್ಜಿತವಾಗುತ್ತದೆ.

ಈ ಮರವನ್ನು, ರಾಜಾಸ್ಥಾನದಲ್ಲಿ, ಉಪ್ಪು ಜಮೀನುಗಳ ಸುಧಾರಣೆಗೂ ಬೆಳೆಸುತ್ತಾರೆ. ಪಶ್ಚಿಮ ರಾಜಾಸ್ಥಾನದಲ್ಲಂತೂ ಇದನ್ನು ಕಲ್ಪವೃಕ್ಷವೆಂದೇ ಹೇಳುತ್ತಾರೆ. ಸಾಗುವಳಿಯಲ್ಲಿರುವ ಜಮೀನುಗಳಲ್ಲೆ, ಎಕರೆಯಲ್ಲಿ 20 – 25 ವಣ್ಣಿ ಮರಗಳನ್ನು ಬೆಳೆಸುವ ಸಂಪ್ರದಾಯವನ್ನಿಟ್ಟುಕೊಂಡಿದ್ದಾರೆ. ಬೆಳೆ ಕೆಡುತ್ತಿಲ್ಲ. ಬೇಲಿ, ಮೇವು, ಮರಮುಟ್ಟು, ಕಟ್ಟಡ ಮತ್ತು ಗಾಡಿಗೆ ಮರ ಸೌದೆ, ಬರಗಾಲದಲ್ಲಿ ಹಣ್ಣು ಎಲ್ಲವನ್ನೂ ಒದಗಿಸುವ ಈ ಮರವನ್ನು ಅಲ್ಲಿ ಪೂಜೆ ಮಾಡು ತ್ತಾರೆ. 10 ಎಕರೆಯಲ್ಲಿ 200 ವಣ್ಣಿ ಮರಗಳಿಂದ ಸೊಪ್ಪು ತರಿದು 800 ರೂಪಾಯಿಗಳನ್ನು ಸಂಪಾದಿಸುತ್ತಿರುವವರು ಬೇಕಾದಷ್ಟು ಜನ.

ಇದರ ಕಾಯಿ 15 ಸೆಂ.ಮೀ.($\frac{1}{2}$ ಅಡಿ) ಉದ್ದ. ಇದರ ಸಿಹಿ ತಿರುಳು ಜಾನುವಾರುಗಳಿಗೆ ಬಹಳ ಇಷ್ಟ. ಒಳಮರ ಗಟ್ಟಿ ; ಭಾರ. ಇದು ಒಳ್ಳೆಯ ಸೌದೆ. ಇದರ ಇದ್ದಿಲೂ ಶ್ರೇಷ್ಠ. ಇದರ ನೆತ್ತಿ ಹಗುರ. ಚಳಿಗಾಲದಲ್ಲಿ ಎಲೆ ಉದುರಿಸಿ ಮಣ್ಣನ್ನು ಉತ್ತಮಗೊಳಿಸುತ್ತದೆ. ಎಲೆ ದೂರ ದೂರಕ್ಕಿದ್ದು ನೆರಳು ಕಟ್ಟುವುದಿಲ್ಲ.

ಇದನ್ನು ಬೀಜದಿಂದ ಬೆಳೆಸಬೇಕು. ಬೆಳವಣಿಗೆ ನಿಧಾನ. ಕತ್ತರಿಸಿದರೂ ಚಿಗುರುತ್ತದೆ.

ನಮ್ಮ ಗೋಮಾಳಗಳಲ್ಲಿ ಹಾಕಲು ಬಹಳ ಯೋಗ್ಯವಾದ ಮರ.

44 ಪ್ರೋಸೋಪಿಸ್ (ಸೀಮೆ ಜಾಲಿ, ಬಳ್ಳಾರಿ ಜಾಲಿ) *Prosopis juliflora.* DC.

ನಮ್ಮ ದೇಶಕ್ಕೆ ದಕ್ಷಿಣ ಮತ್ತು ಮಧ್ಯ ಅಮೆರಿಕ ಇತ್ತಿರುವ ಒಂದು ವರವೃಕ್ಷ, ಈ ಪ್ರೋಸೋಪಿಸ್. ಇದಕ್ಕೆ ನಮ್ಮವರು ಇನ್ನೂ ಸರಿಯಾಗಿ ಹೆಸರನ್ನು ಇಟ್ಟಿಲ್ಲ. ಈ ಮರ ಮೈಸೂರು ರಾಜ್ಯದಲ್ಲಿ ಹೆಚ್ಚು ಜನಾದರಣೀಯವಾಗಿಲ್ಲ. ಆದರೆ ಬಳ್ಳಾರಿ ಕಡೆ ಸ್ವಲ್ಪಮಟ್ಟಿಗೆ ಮೆಚ್ಚುಗೆ ಪಡೆದಿದೆ. ಪಂಜಾಬಿನಲ್ಲಿ ಈ ಮರದ ಶ್ರೇಷ್ಠ ಗುಣಗಳನ್ನು ಅರಿತು ಲಕ್ಷಗಟ್ಟಲೆ ಮರಗಳನ್ನು ಬೆಳೆಸಿದ್ದಾರೆ. ಈಗ ಈ ಮರ ಪಂಜಾಬನ್ನು ಎರಡನೆಯ ತವರಾಗಿ ಮಾಡಿಕೊಂಡಿದೆ.

ಈ ಮರ ರೈತರಿಗೆ ಅನೇಕ ರೀತಿಯಲ್ಲಿ ಒದಗಿಬರುತ್ತದೆ. ಅಲಂಕಾರದ ಮರಕ್ಕಾಗಿ, ಗಾಳಿ ತಡೆಗಾಗಿ, ಬೇಲಿಗಾಗಿ, ತೋಪುಗಳಿಗಾಗಿ, ಮಣ್ಣಿನ ಕೊಚ್ಚಣೆಯನ್ನು ತಡೆಗಟ್ಟಲು, ಕೊರಕಲು ಬಿದ್ದ ಜಮೀನನ್ನು ಪುನರುತ್ಥಾನಗೊಳಿಸಲು, ಈ ಮರವನ್ನು ಬೆಳೆಸಬಹುದು. ಈ ಮರದ ಎಲೆ, ಕಾಯಿ ಹೂವು, ರೆಂಬೆ, ಒಳಮರ ಎಲ್ಲವೂ ರೈತರಿಗೆ ಉಪಯೋಗ.

ಆಡು ಮುಟ್ಟದ ಸೊಪ್ಪಿಲ್ಲ, ಜಾಲಿ ಬೆಳೆಯದ ಮಣ್ಣಿಲ್ಲವೆಂದು ಕೆಲವರು ತಿಳಿದುಕೊಂಡಿದ್ದಾರೆ. ಆಡು ಮುಟ್ಟದ ಸೊಪ್ಪುಗಳೂ ಒಂದೆರಡುಂಟು. ಹಾಗೆಯೇ ಜಾಲಿ ಬೆಳೆಯದ ಸ್ಥಳಗಳೂ ಉಂಟು. ಆದರೆ ಅಂತಹ ಕಡೆಯೂ ಈ ಪ್ರೊಸೋಪಿಸ್ಸು, ಉಣ್ಣೆಯಂತೆ, ಬೆಳೆಯಬಲ್ಲದು.

ಇದು ಉಣ್ಣೆಯ ಹತ್ತಿರದ ನೆಂಟ. ಇದು ದೊಡ್ಡ ಮರವಲ್ಲ. ಕೆಲವು ಕಡೆ 12 ಮೀಟರ್ (30–40 ಅಡಿ) ಎತ್ತರಕ್ಕೆ, 90 ಸೆಂ. ಮೀ. (3 ಅಡಿ) ಸುತ್ತಳತೆಯಷ್ಟು ದಪ್ಪಕ್ಕೆ ಬೆಳೆಯುವುದುಂಟು. ಇದರ ತವರಾದ ಅಮೆರಿಕದಲ್ಲಿ ಕೆಲವೆಡೆ 19.5 ಮೀಟರ್ (65 ಅಡಿ) ಎತ್ತರಕ್ಕೂ ಬೆಳೆದಿವೆಯಂತೆ.

ಇದು ಒಡ್ಡ ಮರ. ಅನೇಕ ಬಗೆಯ ಸನ್ನಿವೇಶಗಳಲ್ಲಿ, ಪರಿಸ್ಥಿತಿಗಳಲ್ಲಿ ಬೆಳೆಯಬಲ್ಲ ಗಟ್ಟಿಮುಟ್ಟಾದ ಮರ. ಈ ಮರ ಉಷ್ಣ, ಸಮಶೀತೋಷ್ಣ ಹಾಗೂ ಒಣ ಪ್ರದೇಶಗಳಲ್ಲಿ ಮತ್ತು ಮಣ್ಣುಗಳಲ್ಲಿ ಬೆಳೆಯಬಲ್ಲದು: ಇದು ಮುಖ್ಯವಾಗಿ ಒಣ

ಪ್ರದೇಶದ ಅಥವಾ ಮರಳು ನುರುಜು ನೆಲದ ಮರವೆನ್ನಬೇಕು. ಈ ಮರ, ಬರ ಪರಿಸ್ಥಿತಿಗಳನ್ನು ಎದುರಿಸುವಷ್ಟು, ಅನೇಕ ಮರಗಳು ಎದುರಿಸಲಾರವು. ಇದಕ್ಕೆ ಕಾರಣ ಇದರ ಬೇರುಗಳು. ಈ ಮರದ ಬೇರುಗಳು ಇಳಿಯುವಷ್ಟು ಆಳಕ್ಕೆ ಬೇರಾವ ಮರವೂ ಇಳಿಯಲಾರದೆಂದು ಕೆಲವರು ಹೇಳುತ್ತಾರೆ. ಕೆಲವೆಡೆ 9 – 18 ಮೀಟರ್ (30 – 60 ಅಡಿ) ಆಳಕ್ಕೆ ಇಳಿದಿರುವುದುಂಟು ; ಸುಮಾರು 22.5 ಮೀಟರ್ (75 ಅಡಿ) ಅಗಲಕ್ಕೆ ಪ್ರಸರಿಸಿರುವುದುಂಟು. ರಾಜಾಸ್ಥಾನದ ಮರು ಭೂಮಿಯಲ್ಲೂ ಇದು ತಲೆಯೆತ್ತಿ ಬೆಳೆಯುತ್ತಿರುವುದು ಈ ಕಾರಣಕ್ಕಾಗಿಯೇ

ಇದರ ಎಲೆ ಒಳ್ಳೆಯ ಮೇವು. ಆದರೆ, ಇದನ್ನು ಪಂಜಾಬಿನ ದನಗಳು ಹೆಚ್ಚು ತಿನ್ನುವುದಿಲ್ಲವಂತೆ. ಮೆಕ್ಸಿಕೋ ದೇಶದಲ್ಲಿ, ಮಳೆ ಇಲ್ಲದ ಕಾಲದಲ್ಲಿ, ಇದರ ಸೊಪ್ಪು ದನಗಳ ಮುಖ್ಯ ಮೇವು. ಕೊಂಚ ಕೊಂಚವಾಗಿ, ಉಪ್ಪು ಅಥವಾ ಬೆಲ್ಲ ಉದುರಿಸಿಕೊಟ್ಟರೆ, ನಮ್ಮ ದನಗಳೂ ಕೂಡ ಈ ತೆರದ ಹೊಸ ಮೇವುಗಳನ್ನು ತಿನ್ನಬಹುದು. ಸೀಮೆ ಜಾಲಿಯ ಎಲೆಯಲ್ಲಿ ಪೌಷ್ಟಿಕಾಂಶಗಳು, ಅದರಲ್ಲೂ ಪ್ರೋಟೀನಿನ ಅಂಶ ಹೆಚ್ಚು. ಆದುದರಿಂದ ಇದರ ಎಲೆಯನ್ನು, ಮೇವಿಗಾಗಿ ಉಪಯೋಗಿಸುವುದು ಒಳ್ಳೆಯದು.

ಸೀಮೆಜಾಲಿಯನ್ನು ಬಹಳವಾಗಿ ಮೆಚ್ಚಬೇಕಾಗಿರುವುದು ಅದರ ಹಣ್ಣು ಗಳಿಗಾಗಿ. ಜಾನುವಾರುಗಳಿಗೆ ಇದು ಬಹಳ ರುಚಿಕರವಾದ, ಬಹಳ ಪುಷ್ಟಿಕರವಾದ ಮೇವು. ಇದರ ಕಾಯಿ ಸುಮಾರು 10 – 20 ಸೆಂ. ಮೀ. (4 – 8 ಅಂಗುಲ) ಇರುತ್ತದೆ. ರೆಂಬೆ ತುದಿಗಳಲ್ಲಿ ಗೊಂಚಲು ಗೊಂಚಲಾಗಿ ಬಿಡುತ್ತವೆ. ಇದರ ತಿರುಳು ಸಿಹಿ. ಕಾಯಿಗಳು ಪುಷ್ಟಿಕರ. ಇದನ್ನು ಕೆಲವು ದೇಶಗಳಲ್ಲಿ ಸ್ವಲ್ಪ ಒಣಗಿಸಿ, ಬೀಜಗಳೊಂದಿಗೆ ಬೀಸಿ ದನದ ತಿನಿಸನ್ನು ತಯಾರು ಮಾಡುತ್ತಾರೆ. ಈ ತಿನಿಸು, ಹತ್ತಿಕಾಳು, ನೆಲಗಡಲೆ ಹಿಂಡಿಯಷ್ಟೇ ಪುಷ್ಟಿಕರ. ಕಾಯಿ ಮೇ – ಜೂನ್ ತಿಂಗಳು ಗಳಲ್ಲಿ ಬಲಿಯುತ್ತದೆ. ಪಂಜಾಬಿನಲ್ಲಿ ಈ ಮರ ವರ್ಷಕ್ಕೆ ಎರಡು ತಡವೆ ಕಾಯಿ ಕೊಡುತ್ತದೆ. ಒಂದು ಮರದಿಂದ ಸುಮಾರು 80–120 ಕಿ.ಜಿ. (200 – 300 ಪೌಂಡು)ಯಷ್ಟು ಕಾಯಿಗಳು ಸಿಗಬಹುದು.

ಕೆಲವು ದೇಶಗಳಲ್ಲಿ – ಮೆಕ್ಸಿಕೋ ಮುಂತಾದ ಕಡೆಗಳಲ್ಲಿ – ಇದನ್ನು ಜನರೂ ಕೂಡ ತಿನ್ನುತ್ತಾರೆ.

ಇದರ ಹೂವು ಜೇನುಗಳಿಗೆ ಬಹಳ ಮೆಚ್ಚು. ಹವಾಯಿ ದ್ವೀಪದಲ್ಲಿ, ಇದರ ಹೂವೇ ಜೇನುಗಳಿಗೆ ಆಗರ. ಒಂದು ಮರದಿಂದ ಸುಮಾರು 1 ಕಿ. ಜಿ. (2½ ಪೌಂಡು) ಜೇನುತುಪ್ಪ ಸಿಗುತ್ತದೆಯಂತೆ. ಅಲ್ಲಿ ಈ ಮರ ವರ್ಷದಲ್ಲಿ ಸುಮಾರು 10 ತಿಂಗಳು ಹೂವುಗಳನ್ನು ಬಿಡುತ್ತಲೇ ಇರುತ್ತವೆ. ಆದುದರಿಂದ ಜೇನು ಸಾಕುವವರಿಗೆ ಈ ಮರ ಒಪ್ಪಾಗಿರುವುದರಲ್ಲಿ ಆಶ್ಚರ್ಯವೇನೂ ಇಲ್ಲ.

ಈ ಮರ ಸುಲಕ್ಷಣವಾದ ಮರ. ಇದರ ಹೂಗೊಂಚಲು 15 ಸೆಂ. ಮೀ. (½ ಅಡಿ) ಇರುತ್ತದೆ ; ಸುವಾಸನೆಯಿಂದ ಕೂಡಿರುತ್ತದೆ. ಆದುದರಿಂದ ಇವನ್ನು ಅಲಂಕಾರಕ್ಕಾಗಿ ಹಾಕಬಹುದು.

ಇದನ್ನು, ಮಣ್ಣು ಕೊಚ್ಚುತ್ತಿರುವ, ಕೊರಕಲು ಬೀಳುತ್ತಿರುವ ನೆಲಗಳಲ್ಲಿ ಹಾಕಿದಲ್ಲಿ, ಮಣ್ಣಿನ ಸವೆತವನ್ನು ತಡೆಗಟ್ಟಬಹುದು.

ಇದರ ಒಳಮರ ಗಟ್ಟಿ ; ಬಾಳಿಕೆ. ಚೆನ್ನಾದ ಪಾಲಿಷ್ ತೆಗೆದುಕೊಳ್ಳುವುದರಿಂದ ಪೀಠಾಸನಗಳಿಗೆ ಒಪ್ಪು. ಇದರ ದಪ್ಪ ರೆಂಬೆಗಳನ್ನು ಕಂಬಗಳಿಗಾಗಿ ಹೂಣಬಹುದು. ಉತ್ತರ ಭಾರತದಲ್ಲಿ ಇದರಿಂದ ಚಾರ್‌ಪಾಯಿ (ಮಂಚ) ಕಾಲುಗಳನ್ನು ಮಾಡುತ್ತಾರೆ. ವ್ಯವಸಾಯದ ಮುಟ್ಟುಗಳಿಗೂ ಯೋಗ್ಯ. ನಾಡು ನೇಗಿಲಿಗೆ ಒಪ್ಪು. ಇದು ಒಳ್ಳೆಯ ಸೌದೆ. ಇದರಿಂದ ಶ್ರೇಷ್ಠ ತರಹದ ಇದ್ದಿಲನ್ನು ತಯಾರು ಮಾಡಬಹುದು.

ಸೀಮೆ ಜಾಲಿಯನ್ನು ಬೀಜದಿಂದ ಬೆಳೆಸಬೇಕು. ಕಾಯಿಗಳಿಂದ ಬೀಜಗಳನ್ನು ಬಿಡಿಸಲು, ಕಾಯಿಗಳನ್ನು ಒಂದೊಂದು ಬೀಜವಿರುವಂತೆ ತುಂಡುಗಳಾಗಿ ಕತ್ತರಿಸಿ, ಸುಮಾರು 48 ಗಂಟೆಗಳ ಕಾಲ ನೀರಿನಲ್ಲಿ ನೆನಸಬೇಕು. ಅನಂತರ ಬಿಸಿಲಿನಲ್ಲಿ ಸ್ವಲ್ಪ ಒಣಗಿಸಿ ಆಮೇಲೆ ಕಾಯಿಯನ್ನು ಕೊಂಚ ಕುಟ್ಟಿದರೆ ಬೀಜ ಹೊರಬರುತ್ತದೆ.

ಬೀಜದ ಹೊದಿಕೆ ಗಟ್ಟಿಯಾದುದರಿಂದ, ಬೀಜದ ಮೊಳಕೆ ಕಷ್ಟ. ಕುದಿಯುವ ನೀರಿನಲ್ಲಿ 2 – 3 ನಿಮಿಷ ಬೇಯಿಸಿದರೆ, ಬೀಜದ ಮೊಳಕೆ ಚೆನ್ನಾಗುತ್ತದೆ. ಅಥವಾ, ಬೀಜಗಳನ್ನು ಮತ್ತೆ 24 ಗಂಟೆಗಳ ಕಾಲ ತಣ್ಣೀರಿನಲ್ಲಿ ನೆನೆಸಿ ಬಿತ್ತಬಹುದು. ಅಥವಾ ಬೀಜದ ಹೂರರಷ್ಟು ಒರಟು–ಮರಳು ಬೆರೆಸಿ ಕುಟ್ಟಿ ಬಿತ್ತಬಹುದು. 28 ಗ್ರಾಂನಲ್ಲಿ (1 ಔನ್ಸು) ಸುಮಾರು 900 ಬೀಜಗಳಿರುತ್ತವೆ.

90 – 120 ಸೆಂ. ಮೀ. (3 – 4 ಅಡಿ) ಎತ್ತರದ ಬೇಲಿಯನ್ನು ಬೆಳೆಸಲು, ಬೀಜಗಳನ್ನು 5 ಸೆಂ. ಮೀ. (2 ಅಂಗುಲ) ದೂರದಲ್ಲಿ ಸಾಲಾಗಿ ಬಿತ್ತಬೇಕು. ಆಮೇಲೆ 22 ಸೆಂ. ಮೀ. (ಮುಕ್ಕಾಲು ಅಡಿ) ಅಂತರವಿರುವಂತೆ ತೆಳು ಮಾಡಬೇಕು. ಬೇಲಿ ಇನ್ನೂ ಎತ್ತರ ಬೇಕಾದರೆ 45 ಸೆಂ.ಮೀ. (1½ ಅಡಿ) ದೂರದ ಎರಡು ಸಾಲುಗಳಲ್ಲಿ ಬಿತ್ತಿ 30 ಸೆಂ.ಮೀ. (1 ಅಡಿ) ಅಂತರವಿರುವಂತೆ ತೆಳು ಮಾಡಬೇಕು. ಬೇಲಿ ಬೆಳೆದ ನಂತರ ಕತ್ತರಿಸಿ ಹದ್ದಿನಲ್ಲಿಟ್ಟುಕೊಳ್ಳಬೇಕು.

ಗಾಳಿ ತಡೆಗಾಗಿ ಬೆಳೆಸಲು ಹೀಗೆ ಬಿತ್ತಿ 60 – 120 ಸೆಂ.ಮೀ. (2 – 4 ಅಡಿ) ದೂರವಿರುವಂತೆ ತೆಳು ಮಾಡಬೇಕು.

ಒಟ್ಲುಹಾಕಿ, ಸಸಿಗಳನ್ನು ನೆಡುವುದಾದರೆ 7.5 – 10 ಸೆಂ. ಮೀ. (3 – 4 ಅಂಗುಲ) ಎತ್ತರದ ಸಸಿಗಳನ್ನು ಬುಟ್ಟಿಗಳಲ್ಲಿ ಬೆಳೆಸಿ ಮಳೆಗಾಲದ ಆದಿಯಲ್ಲಿ ನೆಡಬಹುದು. ಆದರೆ ಈ ಕ್ರಮ ಅಷ್ಟು ಸಮರ್ಪಕವಲ್ಲ.

ಇದರ ಬೇರು ಹರಡುವುದು ಜಾಸ್ತಿ ಎಂದು ಹೇಳಿದೆ. ಈ ಬೇರು ಬೆಳೆಗಳನ್ನು ಕೆಡಿಸದಂತೆ ಬೇಲಿ ಪಕ್ಕದಲ್ಲಿ ತೆರೆದ ಕಾಲುವೆ ತೋಡಿದರೆ ಬೇರು ಜಮೀನೊಳಗೆ ನುಗ್ಗುವುದಿಲ್ಲ.


ಎಚ್ಚರಿಕೆ. ಹೆಚ್ಚು ಮಳೆ ಇರುವ ಕಡೆ ಇದು ಊರ್ಜಿತವಾಗುವುದಿಲ್ಲ.

ಸೀಮೆಜಾಲಿ ರೈತರಿಗೆ ಬಹಳ ಉಪಯುಕ್ತವಾದ ಮರ.

45. ಜಾಲಿ ಕುಟುಂಬದ ಮರಗಳು

(i) ಜಾಲಿ (ಜಾಲಿ, ಗೊಬ್ಬಳಿ, ಕರಿಜಾಲಿ *Acacia nilotica* subsp. *indica* (Benth.) Brenan.

ನಮ್ಮ ದೇಶದಲ್ಲಿ ಸಾವಿರಾರು ಜಾತಿ ಮರಗಳಿವೆ. ಆದರೆ, ಜಾಲಿಯಷ್ಟು ರೈತರಿಗೆ ಉಪಯೋಗಕ್ಕೆ ಬರುವ ಮರಗಳು ವಿರಳ.



ಚಿತ್ರ : 35. ಜಾಲಿ

ಇದು ಗಟ್ಟಿಮುಟ್ಟಾದ ಮರ; ಆರೈಕೆ ಬೇಕಿಲ್ಲದ ಮರ; ನೀರನ್ನು ಹೆಚ್ಚು ಅಪೇಕ್ಷಿಸದ ಮರ; ಬರಡು ಜಮೀನುಗಳ ಮರ; ಬರಪರಿಸ್ಥಿತಿಯಲ್ಲಿ ತಲೆಯೆತ್ತಿ ಬೆಳೆಯುವ ಮರ. ವಾಸ್ತವವಾಗಿ ಇದರ ಒಳ್ಳೆಯ ಬೆಳವಣಿಗೆಗೆ ಮಳೆ ಕಡಿಮೆಯೇ ಇರಬೇಕು. 100 ಸೆಂ. ಮೀ.(40 ಅಂಗುಲ)ಗಿಂತ ಹೆಚ್ಚು ಮಳೆ ಬೀಳುವ ಪ್ರದೇಶ ಗಳಲ್ಲಿ ಇದು ಬೆಳೆಯುವುದೇ ಇಲ್ಲ. ಎಷ್ಟು ಬಿಸಿಲಾದರೂ ತಡೆಯುತ್ತದೆ. ಆದರೆ ಇದಕ್ಕೆ ಚಳಿ ಸಲ್ಲದು; ಕೊರೆತ ಆಗದು.

ಇದು, ಆಗಾಗ್ಗೆ ನೀರು ತಂಗುವ ನದೀ ದಡಗಳಲ್ಲೂ ಬೆಳೆಯುತ್ತದೆ, ಚೆನ್ನಾಗಿಯೇ ಬೆಳೆಯುತ್ತದೆ. ಉಪ್ಪು ನೆಲಗಳಲ್ಲೂ ಬೆಳೆಯಬಲ್ಲದು; ಉಪ್ಪು ನೀರು ಇರುವ ಕಡೆಯೂ ಬೆಳೆಯುತ್ತದೆ. ಇದರ ಬೇರುಗಳು ಆಳಕ್ಕೆ ಹೋಗುವುದರಿಂದ, ಮಣ್ಣಿನ ತಳ ಪದರದ ಜಲವನ್ನು ಬಳಸಿಕೊಳ್ಳುವುದರಿಂದ ಮೇಲ್ಮಣ್ಣಿನಲ್ಲಿ ಉಪ್ಪಿದ್ದರೂ ಇದಕ್ಕೆ ಬಾಧಕವಿಲ್ಲ. ಮೇಲ್ಪದರ ಒಣಗಿದ್ದರೂ – ಬರಗಾಲದಲ್ಲಿ ಇರುವಂತೆ, ಇದು ಸೊರಗುವುದಿಲ್ಲ.

ಚೌಳುಭೂಮಿಯಲ್ಲೂ ಬೆಳೆಯಬಲ್ಲದಾದುದರಿಂದ ಕೆಲವೆಡೆ ಈ ಮರಗಳನ್ನು ಉಪ್ಪುನೆಲಗಳ ಸುಧಾರಣೆಗಾಗಿಯೇ ಬೆಳೆಸುತ್ತಾರೆ.

ಇದು ಎಲ್ಲಾ ನೆಲಗಳಲ್ಲಿಯೂ ಬೆಳೆಯಬಲ್ಲದು. ಕರಿ ಎರೆನೆಲಗಳಲ್ಲೂ ಬೆಳೆಯುತ್ತದೆ. ಈ ನೆಲಗಳಲ್ಲಿ ಮರಗಳೇ ವಿರಳ; ಮರಜಾತಿಗಳಂತೂ ಇನ್ನೂ ಕಮ್ಮಿ. ಆದರೆ ಜಾಲೀ ಮರಗಳು ಸಾಮಾನ್ಯ. ಅದಕ್ಕೋಸ್ಕರವೇ ಈ ಮರ ದಕ್ಷಿಣ ಕರ್ನಾಟಕಕ್ಕಿಂತ ಉತ್ತರ ಕರ್ನಾಟಕದಲ್ಲಿ ಹೆಚ್ಚು ಸಾಮಾನ್ಯ. ಆದರೆ ಈ ಮರ ಬಹಳ ಒಪ್ಪಾಗಿ ಬೆಳೆಯುವುದು ನದೀ ಕಾಲುವೆಗಳ ದಡಗಳಲ್ಲಿ, ಮರಳು ಮಿಶ್ರಿತ, ಆಳ ಮೆಕ್ಕಲು ನೆಲಗಳಲ್ಲಿ. ಉತ್ತರ ಪ್ರದೇಶ ಮತ್ತು ಪಂಜಾಬಿನ ನಾಲೆಗಳ ಇಬ್ಬದಿಯಲ್ಲೂ ಈ ಮರಗಳನ್ನು ಜಯಪ್ರದವಾಗಿ ಬೆಳೆಸಿದ್ದಾರೆ.

ಮರಳು ಮಣ್ಣುನೆಲಕ್ಕೆ ಈ ಮರ ಸೂಕ್ತವಲ್ಲ.

ಇದರ ಮುಳ್ಳು ದನ, ಮೇಕೆಗಳನ್ನು, ಉತ್ತರ ಭಾರತದಲ್ಲಿ ಒಂಟೆಗಳನ್ನೂ ದೂರ ಇಡುತ್ತದೆ. ಆದುದರಿಂದ ಇವುಗಳ ಕಾಟ ಹೆಚ್ಚಾಗಿರುವ ಕಡೆ ಈ ಮರ ವನ್ನೇ ಬೆಳೆಸುವುದು ಸೂಕ್ತ. ಎಳೆಯ ಗಿಡಗಳಲ್ಲಂತೂ ಮುಳ್ಳು ಜಾಸ್ತಿಯಾಗಿರುವುದ ರಿಂದ ಬೇಲಿ ಕಟ್ಟಬೇಕಾಗಿಲ್ಲ; ಗೋಡೆ ಹಾಕಬೇಕಾಗಿಲ್ಲ.

ಇದರ ಬೇರು ಆಳಕ್ಕೆ ಹೋಗುವುದರಿಂದ ಇದು ಅಕ್ಕಪಕ್ಕದ ಬೆಳೆಗಳೊಡನೆ ಮಣ್ಣಿನ ಮೇಲ್ಪದರದ ನೀರಿಗಾಗಿ ಸ್ಪರ್ಧೆ ನಡೆಸುವುದಿಲ್ಲ; ಬೆಳೆಗಳನ್ನು ಕೆಡಿಸುವು ದಿಲ್ಲ. ಆದುದರಿಂದ, ಈ ಮರವನ್ನು ಧೈರ್ಯವಾಗಿ ಹೊಲ ಗದ್ದೆಗಳ ಅಂಚುಗಳಲ್ಲಿ ಬೆಳೆಸಬಹುದು. ಅಲ್ಲದೆ, ಇದರ ಎಲೆಗರಿ ತೆಳುವಾಗಿರುವುದರಿಂದ ಕೆಳಗಿನ ಬೆಳೆಗಳಿಗೆ ನೆರಳು ಕಟ್ಟುವುದಿಲ್ಲ. ಇದಕ್ಕಾಗಿಯೇ, ಉತ್ತರ ಭಾರತದ ಕೆಲವೆಡೆಗಳಲ್ಲಿ ಈ ಮರ ಗಳನ್ನು ಅಂಚಿನಲ್ಲಿ ಅಲ್ಲದೆ ಹೊಲದಲ್ಲಿಯೂ ಬೆಳೆಸಿದ್ದಾರೆ.

ಇದು ಲೆಗ್ಯೂಮ್ ಜಾತಿಗೆ – ಹೊಂಗೆ, ಗ್ಲಿರಿಸೀಡಿಯ ಮುಂತಾದ ಸಸ್ಯ ಕುಟುಂಬಕ್ಕೆ ಸೇರಿದ ಮರ. ಈ ಕುಟುಂಬದ ಗಿಡಗಳ ಬೇರುಗಳ ಮೇಲೆ ಗಂಟುಗಳು ಬೆಳೆಯುತ್ತವೆ. ಈ ಗಂಟುಗಳಲ್ಲಿ ನೆಲೆಸುವ ಸೂಕ್ಷ್ಮಜೀವಿಗಳು (ಬ್ಯಾಕ್ಟೀರಿಯಗಳು – ಸಸ್ಯಾಣುಗಳು) ಮಣ್ಣಿನವಾಯುವಿನಿಂದ ಸಾರಜನಕವನ್ನು ಪಡೆಯುತ್ತವೆ. ಈ ಜೀವಿಗಳು ಸತ್ತಾಗ ಅಕ್ಕಪಕ್ಕದ ಸಸ್ಯಗಳಿಗೆ ಈ ಸಾರಜನಕ ದೊರೆಯುತ್ತದೆ.

ಈ ಮರದ ವ್ಯಾಪ್ತಿ ದಕ್ಷಿಣ ಭಾರತಕ್ಕಿಂತ ಉತ್ತರ ಭಾರತದಲ್ಲಿ ಹೆಚ್ಚು.

ಇದು ಸುಮಾರು ಎತ್ತರದ ಮರ; ಕೆಲವೆಡೆ ಪೊದೆ. ಆದರೆ, ಅನುಕೂಲ ಪರಿಸ್ಥಿತಿಗಳಿದ್ದೆಡೆ 15–18 ಮೀಟರು (50–60 ಅಡಿ) ಎತ್ತರಕ್ಕೂ ಬೆಳೆಯುವುದುಂಟು. ಅನೇಕ ಮರಗಳ ದಿಂಡಿನ ಸುತ್ತಳತೆ ಸುಮಾರು 2½–3 ಮೀಟರು (8–10 ಅಡಿ). ಈಗ ಪಾಕಿಸ್ತಾನಕ್ಕೆ ಸೇರಿರುವ ಮುಲ್ತಾನಿನಲ್ಲಿ ಒಂದು ಜಾಲಿಮರದ ಸುತ್ತಳತೆ ಸುಮಾರು 5 ಮೀಟರ್ (16½ ಅಡಿ) ಇದೆಯಂತೆ.

ಜಾಲಿ ಮರಗಳಲ್ಲಿ ಮುಖ್ಯವಾಗಿ ಮೂರು ಪ್ರಭೇದಗಳಿವೆ :

(ಅ) ಗೋಡಿ, ತೇಲಿ ಅಥವಾ ತೇಲಿಯ.

ಈ ಪ್ರಭೇದ ಉತ್ತರ ಭಾರತದ ಗಂಗಾ ಯಮುನಾ ಬಯಲಿನಲ್ಲಿ ಬೆಳೆಯುತ್ತದೆ. ಇದರ ನೆತ್ತಿ ಹರಡಿಕೊಂಡು ಬೆಳೆಯುತ್ತದೆ. ತಾಳು ಮೋಟು. ಎಲೆ ಗರಿಗಳಂತೆ. ಇದೇ ಆ ಕಡೆ ಹೆಚ್ಚಾಗಿ ಬೆಳೆಯುವ, ಬೆಳೆಸುವ ಪ್ರಭೇದ. ಇದರ ಒಳಮರ ಬಹಳ ಪ್ರಶಸ್ತವಾದದ್ದು.

(ಆ) ಮೇದಿ, ಕಾವಡಿ, ಕೆಯೊರ ಅಥವಾ ಕಾರಿಯ.

ಇದು ದಕ್ಷಿಣ ಭಾರತದಲ್ಲಿ ಹೆಚ್ಚಾಗಿ ಬೆಳೆಯುವ ಪ್ರಭೇದ. ಇದು ಚಿಕ್ಕ ಮರ; ತಾಳು ಮೋಟು; ತೊಗಟೆ ಒರಟು; ಕಾಯಿ ಚಪ್ಪಟೆ ; ಹೆಚ್ಚು ಮುಳ್ಳು. ದಪ್ಪ, ಉದ್ದ, ಬಿಳುಪು. ನೆತ್ತಿಯ ಹರವು ಸ್ವಲ್ಪ ಹೆಚ್ಚು. ಒಳ್ಳೆಯ ಸೌದೆ. ಇದರ ಒಳಮರ ಮೊದಲನೆಯದರಷ್ಟು ಉಪಯೋಗಗಳಿಗೆ ಒದಗುವುದಿಲ್ಲ.

(ಇ) ರೆಂಕಂಟ, ಕಾಬೂಲಿ, ಕಿಕಾರ್, ರಾಮಕಂಟ, ರಾಮಕಾಟ.

ಈ ಪ್ರಭೇದ ದಕ್ಷಿಣ ಭಾರತದಲ್ಲೂ, ಪಂಜಾಬು, ರಾಜಾಸ್ಥಾನಗಳಲ್ಲೂ ಬೆಳೆಯುತ್ತದೆ. ಇದರ ತಾಳು ಉದ್ದ. ಕವಲುಗಳು ಕಡಿಮೆ; ಮೇಲಕ್ಕೆ ಬರಲಿನಂತೆ ಬೆಳೆಯುತ್ತವೆ. ಆದುದರಿಂದ ನೆರಳು ಕಡಿಮೆ. ಈ ಕಾರಣದಿಂದಲೇ, ಸಾಗುವಳಿ ಜಮೀನುಗಳಲ್ಲಿ ಹಾಕಲು ಹೆಚ್ಚು ಯೋಗ್ಯ.

ಜಾಲಿ ನಿತ್ಯಹಸುರಿನ ಮರ. ಬಡಮಣ್ಣುಗಳಲ್ಲಿ ಮಾತ್ರ, ಬೇಸಿಗೆಯಲ್ಲಿ ಎಲೆ ಉದುರಿ ಬೆತ್ತಲೆಯಾಗಿರುತ್ತದೆ. ಹಳೆಯ ಎಲೆಗಳು ಉದುರಿದಂತೆಲ್ಲಾ ಹೊಸ ಎಲೆಗಳು ಬರುತ್ತಿರುತ್ತವೆ. ಜಾಲಿಯ ತೊಗಟೆ ಕಪ್ಪು ಕಂದು, ಒರಟು. ಎಳೆಯ ಮರಗಳಲ್ಲಿ, ನೇರವಾದ ದಂತಬಣ್ಣದ ಗಟ್ಟಿ ಮುಳ್ಳುಗಳಿರುತ್ತವೆ. ಕೆಲವು ವೇಳೆ ಈ ಮುಳ್ಳುಗಳ ಉದ್ದ 5 ಸೆಂ. ಮೀ. (2 ಅಂಗುಲ) ಇರುವುದುಂಟು.

ಇದರ ಹೂವು ಹಳದಿ ; ಸುವಾಸನೆ. ಮಳೆಗಾಲದಲ್ಲಿ ಹೊಮ್ಮುತ್ತದೆ. ಕೆಲವು ವೇಳೆ ನವೆಂಬರಿನ ತನಕ ಹೂವು ಬಿಡುತ್ತಿರುತ್ತದೆ.

ಇದರ ಕಾಯಿ ಬಲಿಯುವುದು ಏಪ್ರಿಲ್ – ಜೂನಿನಲ್ಲಿ. ದಕ್ಷಿಣ ಭಾರತದಲ್ಲಿ ಇನ್ನೂ ಮುಂಚೆಯೇ ಬಲಿಯುತ್ತದೆ. ಕಾಯಿ ಸುಮಾರು 7½ – 15 ಸೆಂ. ಮೀ. (3 – 6 ಅಂಗುಲ) ಉದ್ದ ; ಸುಮಾರು 1 – 1¼ ಸೆಂ. ಮೀ. (ಅರ್ಧ ಅಂಗುಲ) ಅಗಲ. ಒಂದು ಕಾಯಿಯಲ್ಲಿ 8 ರಿಂದ 12 ಬೀಜಗಳಿರುತ್ತವೆ. ಬೀಜ ಕಪ್ಪು ಕಂದು; ಅಂಡಾಕಾರ, ಹೊಳೆಯುತ್ತಿರುತ್ತದೆ. ಕೀಟಗಳಿಂದ ಕಾಪಾಡಿದರೆ 2 – 3 ವರ್ಷಕಾಲ ಮೊಳಕೆಶಕ್ತಿ ಉಳಿಸಿಕೊಳ್ಳಬಹುದು. 28 ಗ್ರಾಂ(1 ಔನ್ಸ್)ನಲ್ಲಿ 200 – 300 ಬೀಜಗಳು. ಇದರ ಬೀಜದ ಹೊದಿಕೆ ಗಟ್ಟಿ. ನೀರು ಹೀರಿಕೊಳ್ಳದೆ ಬೇಗ ಮೊಳೆಯುವುದಿಲ್ಲ. ಈ ಬೀಜಗಳನ್ನು ಕುದಿಯುವ ನೀರಿಗೆ ಸುರಿದು, ಒಲೆಯಿಂದ ತೆಗೆದು, ನೀರು ಆರುವುದಕ್ಕೆ ಬಿಟ್ಟು ಅದರಲ್ಲಿ 24 ಗಂಟೆ ನೆನಸಿ ಬಿತ್ತಬೇಕು. ಒಂದು ವೇಳೆ, ಹೀಗೆ ನೆನಸಿದರೂ, ಬೀಜ ಊದಿಕೊಳ್ಳದಿದ್ದರೆ, ಬೀಜೋಪಚಾರವನ್ನು ಮತ್ತೊಮ್ಮೆ ಮಾಡಬೇಕು: ನೆನೆದ ನಂತರ ಬೀಜಗಳನ್ನು ಒಣಗುವುದಕ್ಕೆ ಬಿಡಬಾರದು.

ಕಾಯಿಗಳನ್ನು ತಿಂದ ಕುರಿ, ಮೇಕೆ ಹಕ್ಕಿಗಳಿಂದ ಬೀಜಗಳನ್ನು ಆರಿಸಿಕೊಳ್ಳುವುದು ಮತ್ತೊಂದು ಕ್ರಮ. ಇಂತಹ ಬೀಜಗಳ ಹೊದಿಕೆ, ಈ ಪ್ರಾಣಿಗಳ ಜೀರ್ಣಾಂಗಗಳ ಮೂಲಕ ಹಾದುಬರುವಾಗ ಮೃದುವಾಗುತ್ತದೆ. ಕೆಲವರು ಕಾಯಿಗಳನ್ನು ದನಗಳಿಗೆ ತಿನ್ನಿಸಿ, ಅವುಗಳ ಸಗಣಿಯಿಂದ ಬೀಜಗಳನ್ನು ಆಯ್ದು ಬಿತ್ತುತ್ತಾರೆ. ಇದೂ ಕೂಡ ಉತ್ತಮ ಕ್ರಮ.

ಜಾಲಿಬೀಜ ಮೊಳೆಯಲು 2–3 ವಾರ ಬೇಕಾಗುತ್ತದೆ.

ಜಾಲಿ ಗಿಡಗಳನ್ನು ಬೆಳೆಸಲು, ಅವು ಮುಂದೆ ಬೆಳೆಯಬೇಕಾದ ಕಡೆಯೇ ಬೀಜಗಳನ್ನು ಊರಬೇಕು ; ಸಸಿಗಳನ್ನು ನಾಟಿ ಮಾಡಲಾಗದು. ಕಾರಣ, ಸಸಿಗಳು ಕಿತ್ತು ನೆಡುವಾಗ, ಬೇರುಗಳು ಕಿತ್ತಾಗ ತಗಲುವ ಧಕ್ಕೆಯನ್ನು ಸಹಿಸಲಾರವು. ಎಳೆಯ ಸಸಿಗಳಿಗೆ ಬೇಕಾದಷ್ಟು ಬೆಳಕು ಬೇಕು. ಅಕ್ಕಪಕ್ಕಗಳ ಕಳೆಗಿಡಗಳ ಸ್ಪರ್ಧೆ ಇವಕ್ಕೆ ಸಹಿಸದು. ಆದುದರಿಂದ, ಬೀಜ ಊರುವ ಕಡೆ, ಹುಲ್ಲನ್ನು ಕಳೆ ಮುಂತಾದವುಗಳು ಬೆಳೆಯದಂತೆ ಚೊಕ್ಕಟಗೊಳಿಸಿದ ನಂತರವೇ ಬೀಜಗಳನ್ನು ಹೂಣಬೇಕು ; ಇವುಗಳಿಗೆ

ಪಾತಿ ತೆಗೆಯಬಾರದು. ಪಾತಿ ಮಾಡಿದರೆ ಅವುಗಳಲ್ಲಿ ನೀರು ನಿಲ್ಲುವುದರಿಂದ ಇದರ ಬೆಳವಣಿಗೆ ಕೆಡುತ್ತದೆ.

ಬಂಜರು ಮುಂತಾದೆಡೆಗಳಲ್ಲಿ ಜಾಲಿ ತೋಪುಗಳನ್ನು ಬೆಳೆಸಲು ಚಳಿಗಾಲದಲ್ಲಿ ನೆಲವನ್ನು ಉತ್ತು ಸಿದ್ಧಗೊಳಿಸಬೇಕು. ಸುಮಾರು 3½ ಮೀಟರು (12 ಅಡಿ) ಅಂತರಕ್ಕೆ 1¼ ಮೀಟರು (4 ಅಡಿ) ಉದ್ದ, 60 ಸೆಂ ಮೀ (2 ಅಡಿ) ಅಗಲ ಮತ್ತು 30 ಸೆಂ.ಮೀ. (1 ಅಡಿ) ಆಳಕ್ಕೆ ಗುಣಿಗಳನ್ನು ತೋಡಿ, ಬೇಸಿಗೆಯಲ್ಲಿ ಮಣ್ಣನ್ನು ಮಾಗುವುದಕ್ಕೆ ಬಿಡಬೇಕು. ಮೊದಲನೆಯ ಮಳೆಗಳಲ್ಲಿ ಗುಣಿಯನ್ನು ಅರ್ಧಕ್ಕೆ ಇಳಿಜಾರಾಗಿ ಮಣ್ಣಿನಿಂದ ತುಂಬಬೇಕು. ಬೀಜಗಳನ್ನು ಈ ಇಳಿಜಾರಿನ ಮಧ್ಯೆ ಊರಬೇಕು. ಹೀಗೆ ಮಾಡಿದರೆ ಇಳಕಲು ಕಡೆ ನೀರು ತಂಗಿದರೂ, ಸಸಿ ಬುಡದಲ್ಲಿ ನೀರು ತಂಗುವುದಿಲ್ಲ. ಆದರೂ, ಅದರ ಸುತ್ತಲೂ ಮಣ್ಣು ಹಸಿಯಾಗಿರುತ್ತದೆ.

ಎಳೆಯ ಗಿಡಗಳನ್ನು ಮೇಕೆಗಳಿಂದ ಕಾಪಾಡಬೇಕು. ಏಕೆಂದರೆ, ಇವುಗಳ ಮುಳ್ಳುಗಳು ಇನ್ನೂ ಬಲಿತಿರುವುದಿಲ್ಲ. ಇಲಿ ಹೆಗ್ಗಣಗಳಿಗೆ ಇವು ಬಹಳ ಇಷ್ಟವಾದುದರಿಂದ ಇವು ಬಾರದಂತೆ ಇಲಿ ಪಾಷಾಣಗಳನ್ನಿಟ್ಟು ಸಾಯಿಸಬೇಕು.

ಮೊದಲನೆಯ ವರ್ಷ, ಸಸಿಗಳು ಸುಮಾರು 1 ಮೀಟರ್(3 ಅಡಿ)ನಷ್ಟು ಎತ್ತರಕ್ಕೆ ಬೆಳೆಯುತ್ತವೆ.

ಕೆಲವು ಕಡೆ ಜಾಲಿ ಬೀಜಗಳನ್ನು 2–3 ಮೀಟರು (6–10 ಅಡಿ) ಅಂತರದ ಸಾಲುಗಳಲ್ಲಿ ಹಾಕುತ್ತಾರೆ. ಮೊದಲನೆಯ ವರ್ಷ ಗಿಡಗಳ ಅಂತರ ½ – ¾ ಮೀಟರ್ (1½–2 ಅಡಿ) ಇರುವಂತೆಯೂ, ಮೂರನೆಯ ವರ್ಷ 2 ಮೀಟರ್ (6 ಅಡಿ) ಅಂತರಕ್ಕೆ ಇರುವಂತೆಯೂ ತೆಳು ಮಾಡುತ್ತಾರೆ. ಹೀಗೆ ಮಾಡುವುದರಿಂದ ತೋಪು ತುಂಬಿ ಬೆಳೆಯುತ್ತದೆ.

ಜಾಲಿಮರದಿಂದ ರೈತರಿಗೆ ನಾನಾ ಬಗೆಯ ಉಪಯೋಗವಿದೆ.

ಇದರ ಗೋಂದಿಗೆ ಹೆಚ್ಚು ಗಿರಾಕಿ; ಹೆಚ್ಚು ಬೇಡಿಕೆ. ಇದನ್ನು ತಿಂಡಿಗಳಿಗೇ ಅಲ್ಲದೆ, ಅನೇಕ ಉದ್ಯಮಗಳಲ್ಲಿ – ರೇಷ್ಮೆ ಹಾಗೂ ಅರಳೆಬಟ್ಟೆ ನೇಯ್ಗೆ, ಕಲ್ಲಚ್ಚು ಕೆಲಸ, ಬೆಂಕಿಕಡ್ಡಿ ತಯಾರಿಕೆ, ಕಾಗದ ಕೈಗಾರಿಕೆ, ಶಾಯಿ ತಯಾರಿಕೆ ಮುಂತಾದ ಉದ್ಯಮಗಳಲ್ಲಿ ಬಳಸುತ್ತಾರೆ. ಗೋಂದಿಗೋಸ್ಕರ, ಮರ ಬಲಿತಮೇಲೆ, ತಾಳಿನ ಮೇಲೆ ಕಚ್ಚುಮಾಡಿ ಗಾಯಗೊಳಿಸುತ್ತಾರೆ. ಈ ಗಾಯಗಳಿಂದ ಸ್ರವಿಸುವ ವಸ್ತುವೇ ಗೋಂದು. ಗೋಂದಿಗಾಗಿಯೇ ಬೆಳೆಸಿದ ಮರಗಳ ಬೆಳವಣಿಗೆ ಕುಂಟುತ್ತದೆ. ಆದುದರಿಂದ, ರೈತರು ತಮ್ಮ ಜಮೀನುಗಳಲ್ಲಿ ಹಾಗೂ ಅಂಚುಗಳಲ್ಲಿ ಬೆಳೆಸುವ ಮರಗಳಿಂದ ಹೆಚ್ಚು ಗೋಂದನ್ನು ಪಡೆಯಲು ಪ್ರಯತ್ನಿಸಬಾರದು.

ಜಾಲಿಮರದ ಒಗಚು, ಚರ್ಮ ಹದಮಾಡಲು ಒಳ್ಳೆಯ ಸಾಮಗ್ರಿ. ತೊಗಟೆ, ಎಲೆ, ಕಾಯಿಗಳಿಂದ ಒಗಚು ಸಿಕ್ಕುತ್ತದೆ. ತೊಗಟೆಒಗಚು ಚರ್ಮ ಹದ ಮಾಡುವು

ದಕ್ಕೆ ಯೋಗ್ಯ. ಎಲೆಯ ಒಗಚಿನಿಂದ ಶಾಯಿಯನ್ನು ತಯಾರು ಮಾಡಬಹುದು. ಕಾಯಿಒಗಚು ಚರ್ಮಕ್ಕೆ ಒಳ್ಳೆಯ ಬಣ್ಣ ಕೊಡುತ್ತದೆ.

ಜಾಲಿಮರದ ಕಾಯಿಗಳನ್ನು ದನ, ಕುರಿ, ಮೇಕೆಗಳ ಮೇವಿನೊಂದಿಗೆ ಸೇರಿಸ ಬಹುದು. ಒಂದು ಮರದಿಂದ ವರ್ಷಕ್ಕೆ ಸುಮಾರು 18 ಕಿಲೊ (40 ಪೌಂಡ್) ಕಾಯಿಗಳು ಸಿಗುತ್ತವೆ.

ಇದರ ಎಳೆಯ ಕಡ್ಡಿಗಳನ್ನು ಹಲ್ಲು ಉಜ್ಜುವುದಕ್ಕೆ ಬಳಸುತ್ತಾರೆ. ಹೀಗೆ ಬಳಸಿದರೆ ಹಲ್ಲು, ವಸಡು ಗಟ್ಟಿಯಾಗುತ್ತದೆಯಂತೆ. ಹಿಂದೆ ಇದರ ರಸವನ್ನು ಸೇರಿಸಿ ಹಲ್ಲುಜ್ಜುವ ಕ್ರೀಮನ್ನು ತಯಾರು ಮಾಡುತ್ತಿದ್ದರು.

ಇದರ ಮುಳ್ಳುಗಳನ್ನು ಮೀನುಗಾರರು ಗಾಳಕ್ಕೆ ಸಿಕ್ಕಿಸುತ್ತಾರೆ. ಕಳೆದ ಮಹಾಯುದ್ಧದ ಕಾಲದಲ್ಲಿ, ಗುಂಡುಸೂಜಿಗಳ ಬದಲಾಗಿ, ಇವನ್ನು ಕಾಗದ ಚುಚ್ಚುವುದಕ್ಕೆ ಬಳಸುತ್ತಿದ್ದರು.

ಮುಳ್ಳುಬೇಲಿಗಳಿಗೆ ಜಾಲಿ ಎತ್ತಿದ ಕೈ.

ಕೆಲವೆಡೆ — ಪಾಕಿಸ್ತಾನದ ಸಿಂಧಿನಲ್ಲಿ, ಈ ಮರದ ಮೇಲೆ ಅರಗು ಹುಳುಗ ಳನ್ನು ಬೆಳೆಸುತ್ತಾರೆ.

ಆದರೆ, ರೈತರಿಗೆ ಜಾಲಿಯಿಂದ ಹೆಚ್ಚು ಪ್ರಯೋಜನ ಅದರ ಒಳಮರದಿಂದ.

ಈ ಜಾಲಿಯ ಚೇಗು ಬಹಳ ಗಟ್ಟಿ. ತೇಗದ ಎರಡರಷ್ಟು. 0. 028 ಘನಮೀಟರ್ (ಒಂದು ಘನ ಅಡಿ) ಜಾಲಿ ಒಳಮರ ಸುಮಾರು 23 ಕೆ. ಜಿ. (51 ಪೌಂಡ್) ತೂಗುತ್ತದೆ.

ಈ ಮರವನ್ನು ಹಸುರುಮೇಲಿದ್ದಾಗ ಸುಲಭವಾಗಿ ಕುಯ್ಯಬಹುದು. ಆದರೆ ಹದಗೊಂಡ ಮೇಲೆ ಗಟ್ಟಿಯಾಗಿ ಬಿಡುತ್ತದೆ. ಈ ಮರ ಒಳ್ಳೆಯ ಪಾಲಿಷ್‌ನ್ನು ತೆಗೆದುಕೊಳ್ಳುತ್ತದೆ. ಇದು ಹೆಚ್ಚು ಬಾಳಿಕೆಯ ಮರ. ಸ್ವಲ್ಪ ಬಿರಿಯುತ್ತದೆ. ಬಿರಿಯದಂತೆ ಹದ ಮಾಡಲು ಇದರ ತುಂಡುಗಳನ್ನು ಮಳೆಗಾಲದಲ್ಲಿ ಪೇರಿಸಿಡಬೇಕು. ಒಂದು ವರ್ಷದಲ್ಲಿ ಚೆನ್ನಾಗಿ ಹದಗೊಳ್ಳುತ್ತದೆ.

ಈ ಮರ ಎತ್ತಿನ ಗಾಡಿಗುಂಬಕ್ಕೆ ಬಹಳ ಸೂಕ್ತವಾದದ್ದು ; ಒಡೆಯುವುದಿಲ್ಲ ; ಬೇಗ ಸವೆಯುವುದಿಲ್ಲ ; ಚೆನ್ನಾಗಿ ತಡೆದುಕೊಳ್ಳುತ್ತದೆ ; ಗಾಡಿಯ ಇತರ ಭಾಗ ಗಳಿಗೂ ಬಳಸಬಹುದು. ವ್ಯವಸಾಯದ ಮುಟ್ಟುಗಳಿಗೆ — ನೇಗಿಲಿಗೆ, ಕುಂಟೆದಿಂಡು ಗಳಿಗೆ ಬಹಳ ಪ್ರಶಸ್ತವಾದ ಮರ ; ಎಣ್ಣೆಗಾಣಗಳಿಗೆ, ರಾಟೆಗಳಿಗೆ, ಡೇರಾಗೂಟ ಗಳಿಗೆ, ಹರಿಗೋಲುಗಳಿಗೆ, ಸುತ್ತಿಗೆ ಹಿಡಿಗಳಿಗೆ, ಚಮ್ಮಟಿಗಳಿಗೆ ಬಹಳ ಒಪ್ಪು.

ಇದು ಒಳ್ಳೆಯ ಸೌದೆ ಮರ.

ಇದನ್ನು ಹೊಲದ ಅಂಚುಗಳಲ್ಲಿ, ಹೊಲಗಳಲ್ಲಿ, ಬಂಜರುಗಳಲ್ಲಿ, ಗ್ರಾಮ ಕಾಡು ಗಳಲ್ಲಿ, ಗೋಮಾಳಗಳಲ್ಲಿ ಬೆಳೆಸಬಹುದು ; ಬೆಳೆಸಬೇಕು. ಬೇಲಿಗಾಗಿಯೂ ಬೆಳೆಯ ಬಹುದು.

ಸರ್ವರೀತಿಯಲ್ಲೂ ರೈತರ ನೆಚ್ಚುಮೆಚ್ಚಿನ ವೃಕ್ಷಬಂಧು, ಜಾಲಿಮರ.

ಜಾಲಿಯ ಬಳಗ ಬಹಳ ದೊಡ್ಡದು – ಸುಮಾರು 500 ವಂಶಗಳಿವೆ. ಹೆಚ್ಚು ಬಗೆ ಜಾಲಿಗಳಿರುವುದು ಆಸ್ಟ್ರೇಲಿಯ ಮತ್ತು ಆಫ್ರಿಕ ಖಂಡಗಳಲ್ಲಿ. ನಮ್ಮ ಗೊಬ್ಬಳಿ (ಜಾಲಿ)ಯ ತವರೂ ಕೂಡ ಆಫ್ರಿಕದ ಸುಡಾನ್. ಭಾರತದಲ್ಲಿ ಸುಮಾರು 22 ವಂಶಕ್ಕೆ ಸೇರಿದ ಜಾಲಿ ಬಂಧುಗಳಿವೆ. ಕಸ್ತೂರಿ ಜಾಲಿ, ಸೀಗೆ ಇವು ಜಾಲಿಯ ಬಳಗವೇ. ಈ ಬಳಗದಲ್ಲಿ ರೈತರಿಗೆ ಹೆಚ್ಚು ಉಪಯುಕ್ತವಾದ, ಅವರು ಸುಲಭವಾಗಿ ಬೆಳೆಸಬಹುದಾದ ಕೆಲವು ಮರಗಳನ್ನು ಮುಂದಿನ ಪುಟಗಳಲ್ಲಿ ವಿವರಿಸಲಾಗಿದೆ.

ಈ ಮರ ಮತ್ತು ಅದರ ಪ್ರಭೇದಗಳ ರೂಪಕ್ಕೆ 74, 75, 76 ನೆಯ ಚಿತ್ರಗಳನ್ನು ನೋಡಿ.

(ii) ಬಿಳಿಜಾಲಿ (ತೊಪ್ಪಾಲೆ, ಸಾರಾಯಿ, ಬೇಲ, ತುಂಬಿಮರ)

Acacia leucophloea Willd.

ಬಿಳಿಜಾಲಿ, ಕರಿಜಾಲಿಗಿಂತ (ಗೊಬ್ಬಳಿ ಮರ) ಬೇಗ ಬೆಳೆಯುವುದರಿಂದ ಹೆಚ್ಚು ಸೌದೆ ಸಿಗುತ್ತದೆ. ಇದು ದೊಡ್ಡ ಮರ. ವರ್ಷ ವರ್ಷವೂ ಎಲೆ ಉದುರುತ್ತದೆ; ತುಂಬುತ್ತದೆ; ನಿತ್ಯ ಹಸುರಿಲ್ಲ. ಇದರ ಮುಳ್ಳು ಸ್ವಲ್ಪ ಬಿಳುಪಾಗಿರುವುದರಿಂದ ಇದಕ್ಕೆ ಬಿಳಿಜಾಲಿ ಎನ್ನುತ್ತಾರೆ. ಮುಳ್ಳು ಸುಮಾರು 2½ ಸೆಂ.ಮೀ. ಉದ್ದಕ್ಕೆ ಇರುತ್ತದೆ. ಇದರ ತೊಗಟೆಯೂ ಕೂಡ ಬಿಳೀಛಾಯೆ ಇಲ್ಲವೇ ನರೆಬಣ್ಣ. ಹಳೆಯ ಮರದ ತೊಗಟೆ ಒರಟು ಮತ್ತು ಕಪ್ಪು. ಇದರ ದಿಂಡು ಸುಮಾರು 2.5–3 ಮೀಟರ್ (8–10 ಅಡಿ); ಡೊಂಕು; ಗಂಟು. ಇದರ ನೆತ್ತಿ ಸ್ವಲ್ಪ ಅಗಲವಾಗಿ ಹರಡುತ್ತದೆ.

ಈ ಮರವನ್ನು ಹೆಚ್ಚಾಗಿ ದಕ್ಷಿಣ ಮೈಸೂರು, ಕೋಲಾರ, ತುಮಕೂರು ಮುಂತಾದೆಡೆ ಜಮೀನುಗಳಲ್ಲೂ, ಪಾಳುಗಳಲ್ಲೂ ಕಾಣಬಹುದು. ಇದು, ಸಾಮಾನ್ಯವಾಗಿ ಮುಳ್ಳು ಕುರುಚಲು ಕಾಡುಗಳಿರುವ ಒಣ ಪ್ರದೇಶಗಳಲ್ಲಿ ಬೆಳೆಯುವ ಮರ. ಕರಿ ಎರೆಮಣ್ಣುಗಳಲ್ಲಿ ಸಾಮಾನ್ಯ.

ಇದರ ಹೂವು ದುಂಡು, ತಿಳಿಹಳದಿ. ಇತರ ಜಾಲಿ ಮರಗಳ ಹೂವಿಗೂ ಇದರ ಹೂವಿಗೂ ಇರುವ ವ್ಯತ್ಯಾಸ ಹೂ ಗೊಂಚಲಿನಲ್ಲಿ. ಗೊಂಚಲಿನ ಹೂವು ಒತ್ತಾಗಿರದೆ ದೊಗಳೆಯಾಗಿರುತ್ತದೆ. ನಿರ್ದಿಷ್ಟ ಆಕಾರವಿರುವುದಿಲ್ಲ. ಹೂವುಗಳು ಆಗಸ್ಟ್–ನವೆಂಬರಿನಲ್ಲಿ ಬಿಟ್ಟು, ಏಪ್ರೆಲ್–ಜೂನಿನಲ್ಲಿ ಬೀಜ ಕಚ್ಚುತ್ತವೆ.

ಇದರ ಒಳಮರ ಕೆಂಪುಕಂದು; ನಾರು ಗಟ್ಟಿ. ಒಳಮರವನ್ನು ಬೇಗ ಹದಗೊಳಿಸಬಹುದು; ಚೆನ್ನಾಗಿ ಮೆರಗು (ಪಾಲಿಷ್) ತೆಗೆದುಕೊಳ್ಳುತ್ತದೆ. ಸುಮಾರು ಭಾರ. ವ್ಯವಸಾಯದ ಮುಟ್ಟುಗಳಿಗೂ, ಕಂಬ (ತೊಲೆ), ಈಸು, ಗಾಡಿ, ಚಕ್ರ ಇವುಗಳಿಗೂ ಯುಕ್ತ.

ಇದು ಒಳ್ಳೆಯ ಸೌದೆ ಮರ. ಆದರೆ ಸರ್ವೆ ಸೌದೆಗಿಂತ ಸ್ವಲ್ಪ ಕಾವು ಕಡಿಮೆ. ಮತ್ತೊಂದು ಅನುಕೂಲವೆಂದರೆ, ಮರ ಕತ್ತರಿಸಿದ ಮೇಲೂ ಪುನಃ ಚೆನ್ನಾಗಿ ಬೆಳೆದು ಹೆಚ್ಚು ಸೌದೆ ಕೊಡಬಲ್ಲದು.

ಇದರ ಕಾಯಿ ದನಗಳಿಗೆ ಬಹಳ ಇಷ್ಟ ; ಒಳ್ಳೆಯ ಮೇವು. ಕುರಿಗಳಿಗೆ ಇವನ್ನು ತಿನ್ನಿಸಿದರೆ, ಕುರಿಮಾಂಸ ಉತ್ತಮಗೊಳ್ಳುತ್ತದೆಯಂತೆ. ಕಾಯಿ ಏಪ್ರೆಲ್ – ಮೇ ತಿಂಗಳುಗಳಲ್ಲಿ ಸಿಗುತ್ತದೆ – ನಡು ಬೇಸಿಗೆಯಲ್ಲಿ.

ಸೌದೆ, ಮೇವಲ್ಲದೆ, ಇದು ಗೋಂದು, ಬಣ್ಣ ಮತ್ತು ನಾರುಗಳನ್ನೂ ಕೊಡುತ್ತದೆ.

ಬೀಜ ಬೇಗನೆ ಮೊಳೆಯುತ್ತದೆ. ಬೀಜಗಳನ್ನು ಬಿತ್ತಿ ಸಸಿಗಳನ್ನು ಎಬ್ಬಿಸಿ ನಾಟಬೇಕು. ಬೀಜ ಚೆನ್ನಾಗಿ ಮೊಳೆಯಲು, ಬಿತ್ತುವುದಕ್ಕೆ ಮುಂಚೆ ನೀರಿನಲ್ಲಿಯೋ, ಸಗಣಿ ನೀರಿನಲ್ಲಿಯೋ ನೆನೆಸುವುದು ಒಳ್ಳೆಯದು.

ಬಟ್ಟಿನಲ್ಲಿ ಆಗಾಗ್ಗೆ ಕಳೆ ತೆಗೆಯುತ್ತಿರಬೇಕು. ಏಕೆಂದರೆ ಬಿಳಿ ಜಾಲಿ ಸಸಿ ಬೇಗ ಬೆಳೆಯುವ ಸ್ವಭಾವ. ಕಳೆಗಳಿಂದ ಬೆಳವಣಿಗೆ ಕುಂಠಿತವಾಗುತ್ತದೆ.

ನಾಟುವಾಗ, 3 ಮೀಟರ್ (10 ಅಡಿ) ಅಂತರಕ್ಕೆ ಒಂದೊಂದು ಸಸಿ ನೆಟ್ಟು, ಆಮೇಲೆ ಒಂದು ಬಿಟ್ಟು ಮತ್ತೊಂದನ್ನು ಉಳಿಸಿಕೊಳ್ಳಬೇಕು.


ಈ ಮರ ಬಯಲು ಸೀಮೆಯಲ್ಲಿ ಸೌದೆ ತೋಪುಗಳಿಗಾಗಿ ಹಾಕಲು ಯೋಗ್ಯವಾದ ಮರ.

(iii) ಕಗ್ಗಲಿ (ಕಾಚು, ತಾರ, ತೆರೆ) *Acacia catechu* (Linn. f.) Willd.

ಇದು ಭಾರತದ ಅನೇಕ ಭಾಗಗಳಲ್ಲಿ, ತೇವ ಕಡಿಮೆ ಇರುವ ಕಡೆ ಬೆಳೆಯುತ್ತದೆ. ಮೈಸೂರಿನಲ್ಲಿ ಬಯಲು ಸೀಮೆಯಲ್ಲಿಯೂ, ಮಲೆನಾಡಿನ ಹೊರವಲಯದಲ್ಲೂ ಬೆಳೆಯುತ್ತದೆ. ಬರ ಪ್ರದೇಶದಲ್ಲಿ ಗುಂಪು ಗುಂಪಾಗಿ ಬೆಳೆಯುವುದುಂಟು. ಹಾಗೆ ಬೆಳೆದ ಕಾರಣದಿಂದಲೇ ಕನಕಪುರದ ಬಳಿ ಒಂದು ಹಳ್ಳಿಯನ್ನೇ ಕಗ್ಗಲಿಪುರವೆಂದು ಕರೆದರು. ಇದನ್ನು ಮಳೆ ಹೆಚ್ಚಾಗಿ ಬೀಳದ ಸ್ಥಳಗಳಲ್ಲೂ, ಅನೇಕ ಬಗೆಯ ಮಣ್ಣುಗಳಲ್ಲೂ ಬೆಳೆಸಬಹುದು. ಆದರೆ ಇದಕ್ಕೆ ಕರಿ ಎರೆನೆಲ ಒಪ್ಪು. ಕಲ್ಲು ಭೂಮಿಯಲ್ಲೂ ಬೆಳೆಯಬಲ್ಲದು. ಬಹಳ ಕಲ್ಲಿದ್ದರೆ ಪೊದೆಯಾಗಿ ಬೆಳೆಯುತ್ತದೆ. ಇದರ ಒಂದು ಉಪಜಾತಿ – ಸುಂದ್ರಜಾತಿಯನ್ನು, ಮರಳನ್ನು ಬಿಗಿ ಹಿಡಿಯಲು ಬೆಳೆಸುತ್ತಾರೆ. ನಾಲಾ, ನೀರುವಸತಿ ಇರುವ ಕಡೆಯೂ ಬೆಳೆಸಬಹುದು. ನೀರಿನ ಆಸರೆ ಇದ್ದರೆ ಬೇಗನೆ ಬೆಳೆಯುತ್ತದೆ.

ಈ ಮರ 15 ಮೀಟರ್ (50 ಅಡಿ) ಎತ್ತರಕ್ಕೂ ಬೆಳೆಯುವುದುಂಟು. ಆದರೆ ಸಾಮಾನ್ಯವಾಗಿ ಇದು ಸುಮಾರು ಎತ್ತರದ ಮರ. ನೆತ್ತಿ ಅಡಕವಾಗಿರು

ತ್ತದೆ ; ಆದರೂ ಹಗುರ. ಇದು ಕೆಲವು ಕಾಲ ಎಲೆ ಉದುರಿ ಬೆತ್ತಲೆಯಾಗಿರುವುದರಿಂದಲೂ, ಎಲೆಗಳು ಪುಕ್ಕದಂತೆ ಇರುವುದರಿಂದಲೂ, ಹೆಚ್ಚು ನೆರಳು ಕಟ್ಟುವುದಿಲ್ಲ.



ಚಿತ್ರ : 36. ಕಗ್ಗಲಿ

ಇದರ ತೊಗಟೆ ದಪ್ಪ ; ಅದರ ಬಣ್ಣ ಕಪ್ಪುಬೂದಿ ಅಥವಾ ಬೂದಿಕಂದು. ಹೂವು ಬಿಳಿಚಿರುತ್ತದೆ, ಜೂನು – ಆಗಸ್ಟು ತಿಂಗಳಿನಲ್ಲಿ. ಕಾಯಿ ಬೇಗ ಬಲಿಯುತ್ತದೆ ; ನವೆಂಬರ್ - ಜನವರಿಯಲ್ಲಿ. ಕಳಿತ ಕಾಯಿ ಹೆಚ್ಚುಕಾಲ ಮರದಲ್ಲೇ ಉಳಿಯುತ್ತದೆ. ಇದರ ಬೀಜ ಸಣ್ಣ. 28 ಗ್ರಾಂ(1 ಔನ್ಸ್)ನಲ್ಲಿ ಸುಮಾರು 1000 ಬೀಜಗಳಿರುತ್ತವೆ. ಈ ಬೀಜಗಳಿಗೆ, ಎಷ್ಟೇ ಚೆನ್ನಾಗಿ ಕಾಪಾಡಿದರೂ,

ಹುಳು ಬೀಳುವುದು ಜಾಸ್ತಿ. ಆದರೆ ವರ್ಷವರ್ಷವೂ ಬೀಜ ಕಚ್ಚುವುದರಿಂದ ಬೀಜಗಳನ್ನು ಕೂಡಿಡಬೇಕಿಲ್ಲ.

ಇದರ ಒಳಮರ ಕಪ್ಪುಕೆಂಪು ; ಗಟ್ಟಿ ; ಬಾಳಿಕೆ ಬರುತ್ತದೆ ; ಚೆನ್ನಾಗಿ ಹದ ಮಾಡಬಹುದು ; ಒಳ್ಳೆ ಪಾಲಿಷ್ ತೆಗೆದುಕೊಳ್ಳುತ್ತದೆ ; ಗೆದ್ದಲು ಹತ್ತುವುದಿಲ್ಲ. ಬಿಳಿ ಮತ್ತು ಕರಿ ಜಾಲಿಗಿಂತಲೂ ಇದರ ಒಳಮರ ಭಾರ. 0.028 ಘನಮೀಟರ್ (1 ಘನ ಅಡಿ) ಕರಿಜಾಲಿ 24½ ಕೆ. ಜಿ. (54 ಪೌಂಡು), ಅದೇ ಬಿಳಿಜಾಲಿ, 22½ ಕೆ.ಜಿ. ತೂಗಿದರೆ, ಇದು 27 - 32 ಕೆ. ಜಿ. (60 - 70 ಪೌಂಡು) ತೂಗುತ್ತದೆ.

ಕಗ್ಗಲಿ ಮರವೂ ಕೂಡ ರೈತರಿಗೆ ಬಹಳ ಉಪಯೋಗಕ್ಕೆ ಬರುವ ಮರ. ಇದು ಒಳ್ಳೆಯ ಸೌದೆಯಾದರೂ ಇದರ ಮರ ಉತ್ಕೃಷ್ಟವಾದುದರಿಂದ ಇದನ್ನು ಸೌದೆಯಾಗಿ ಉರಿಸುವುದು ಜಾಣತನವಲ್ಲ. ಇದರ ಮರ, ಗೂಟ, ಮನೆಕಂಬ, ವ್ಯವಸಾಯದ ಮುಟ್ಟುಗಳು, ಗಾಡಿಚಕ್ರ, ಗಾಣ, ಹಿಡಿ ಮುಂತಾದುವುಗಳಿಗೆ ಒಪ್ಪು. ಇದರ ಇದ್ದಿಲೂ ಕೂಡ ಉತ್ತಮ ದರ್ಜೆಯದು. ಇದರ ಗೋಂದೂ ಗೊಬ್ಬಳಿ ಗೋಂದಿನಂತೆ ಒಳ್ಳೆಯ ಜಾತಿಯದು. ಇದರಿಂದ ಬಣ್ಣ, ತೊಗಲು ಹದ ಮಾಡುವ ಒಗಚು ಮತ್ತು ಎಲೆ ಅಡಿಕೆ ಜತೆಯಲ್ಲಿ ಸೇರಿಸುವ ಕಾಚು ಸಿಗುತ್ತದೆ. ಅನೇಕ ಕಡೆ ಕಾಚುಗಾಗಿಯೇ ಈ ಮರ ಮೀಸಲು. ಇದೇ ಈ ಮರದ ಉತ್ಪನ್ನ. ಇದರ ಹಣ್ಣಿನಿಂದಲೂ ತೊಗಲು ಒಗಚು ಸಿಗುತ್ತದೆ.

ಇದನ್ನು ಸಸಿ ಎಬ್ಬಿಸಿ ಬೆಳೆಯಬೇಕಿಲ್ಲ, ಬೀಜವನ್ನು ಹಾಕಿಯೇ ಬೆಳೆಸಬಹುದು. ನಾಟಿ ಮಾಡಿದ ಸಸಿಗಳ ಬೇರು ಬೇಗ ಗಾಯಗೊಳ್ಳುತ್ತದೆ. ಡಿಸೆಂಬರ್ ಜನವರಿಯಲ್ಲಿ ಕಾಯಿಗಳಿರುವ ರೆಂಬೆಯನ್ನು ಕತ್ತರಿಸಿ ಬಿಸಿಲಿನಲ್ಲಿ ಒಣಗಿಸಿ, ಕಾಯಿಗಳನ್ನು ಬಿಡಿಸಿ ಗೋಣೀ ಚೀಲದಲ್ಲಿ ಹಾಕಿ, ಬಡಿದು, ಬೀಜಗಳನ್ನು ತೂರಿ, ಕೇರಿ ಮಾಡಿಕೊಳ್ಳಬೇಕು. ಈ ಬೀಜಗಳನ್ನು ಮಳೆಗಾಲದಲ್ಲಿ ಬಿತ್ತಬೇಕು. 4 ನೆಯ ದಿವಸದಿಂದ 1 ತಿಂಗಳೊಳಗೆ ಬೀಜ ಮೊಳೆಯುತ್ತದೆ. ಮೊಳೆತ ಸಸಿಗಳನ್ನು ಕಳೆಗಳಿಂದ ಕಾಪಾಡಬೇಕು. ಅನುಕೂಲವಿದ್ದರೆ, ನೀರು ಹುಯ್ಯಬಹುದು. ಆಗ ಬೆಳವಣಿಗೆ ಬೇಗ ಕುದುರುತ್ತದೆ. ಆಗಾಗ್ಗೆ ಕೈ ಆಡಿಸಿ ಮಣ್ಣು ಕೆದಕುತ್ತಿರಬೇಕು.

ಈ ಮರವೂ ಕೂಡ ಕತ್ತರಿಸಿದರೂ ಮತ್ತೆ ಚಿಗುರಿ ಬೆಳೆಯುತ್ತದೆ. ಬಹಳ ಸುಲಭವಾಗಿ ಬೆಳೆಯುವ, ರೈತರಿಗೆ ಅನೇಕ ವಿಧದಲ್ಲಿ ಉಪಯೋಗಕ್ಕೆ ಬರುವ ಮರ.

ಉತ್ತರಕನ್ನಡ ಜಿಲ್ಲೆಯಲ್ಲಿ ಬೆಳೆಯುವ ಕಗ್ಗಲಿಯೇ ಕಾಚು ತಯಾರುಮಾಡಲು ಹೆಚ್ಚು ಯೋಗ್ಯ. ಹಳೆಯ ಮೈಸೂರಿನ ಕಗ್ಗಲಿಯಲ್ಲಿ ಬರುವ ಕಾಚು ಅಷ್ಟು ಚೆನ್ನಾಗಿರುವುದಿಲ್ಲ.

ಈ ಮರದ ರೂಪಕ್ಕೆ 77 ನೆಯ ಚಿತ್ರ ನೋಡಿ.

(iv) ಬುಡ್ಡೆ ಜಾಲಿ (ಕೊಡೆಮುಳ್ಳು ಜಾಲಿ ಹೊಡೆ ಜಾಲಿ) *Acacia planifrons* Wt. & Arn.

(ಚಿತ್ರ 76 ನೋಡಿ)

ಇದು ಮೈಸೂರು ರಾಜ್ಯದಲ್ಲಿ ಹೆಚ್ಚಾಗಿ ಬೆಳೆಯುವ ಜಾಲಿ. ದಕ್ಷಿಣ ಮದ್ರಾಸಿನಲ್ಲಿ ಹೆಚ್ಚು. ಅಲ್ಲಿಯ ತಿರುನಲ್‌ವೇಲಿ ಜಿಲ್ಲೆಯಲ್ಲಿ ಇದನ್ನು ಚೌಳು ಮತ್ತು ಉಪ್ಪುನೆಲಗಳ ಸುಧಾರಣೆಗಾಗಿ ಬೆಳೆಸುತ್ತಾರೆಯಾದುದರಿಂದ, ನಮ್ಮ ರಾಜ್ಯದಲ್ಲೂ ಈ ಮರವನ್ನು ಈ ಉದ್ದೇಶಕ್ಕಾಗಿ ಬೆಳೆಸಬಹುದು.

ಇದು ಸಣ್ಣ ಮರ; ತೊಗಟೆ ತೆಳುವು; ಕಂದುಬಣ್ಣ; ಅಡ್ಡ ಪಟ್ಟಿಗಳಿರುತ್ತವೆ; ದಿಂಡು ಮೋಟು. ರೆಂಬೆಗಳು ಅಗಲಕ್ಕೆ ಹರಡಿ, ತಳಮುಖಕ್ಕೆ ಬಾಗಿ ವಾಲಿರುತ್ತವೆ; ಕೊಡೆಯಂತೆ ಕಾಣುತ್ತದೆ.

ಇದು ಮುಖ್ಯವಾಗಿ ಮರಳು ಮಣ್ಣು ಮತ್ತು ಕೆಂಪು ಮಣ್ಣುಗಳಲ್ಲಿ ಚೆನ್ನಾಗಿ ಬೆಳೆಯುವ ಮರ. ಬರಪರಿಸ್ಥಿತಿಯನ್ನೂ ತಡೆಯಬಲ್ಲದು. ಇದನ್ನು ನಮ್ಮ ದೇಶದ ಕೆಲವೆಡೆಗಳಲ್ಲಿ ಕಲ್ಲು ನೆಲಗಳಲ್ಲಿಯೂ ಜಯಪ್ರದವಾಗಿ ಬೆಳೆಸಿದ್ದಾರೆ. ಸಮುದ್ರ ತೀರಗಳಲ್ಲಿ ಈ ಮರಗಳು ಗುಂಪು ಗುಂಪಾಗಿ ಬೆಳೆಯುತ್ತವೆ.

ಇದು ಸೌದೆಯ ಮರ; 5–8 ವರ್ಷಗಳಲ್ಲಿ ಸೌದೆ ಸಿಗುತ್ತದೆ. ಇದರ ಒಳಮರ ವ್ಯವಸಾಯದ ಮುಟ್ಟುಗಳಿಗೂ ಸೂಕ್ತ. ಗಟ್ಟಿ. ಆದರೆ ಇದನ್ನು ಹೆಚ್ಚಾಗಿ ಬೆಳೆಸುವುದು, ಹಿಂದೆ ತಿಳಿಸಿದಂತೆ ನೆಲಗಳ – ಚೌಳು ಮತ್ತು ಉಪ್ಪು ಸುಧಾರಣೆಗಾಗಿ. ಇವರ ಎಲೆ ದಟ್ಟವಾಗಿ ನೆಲಕ್ಕೆ ಉದುರಿ ಮಣ್ಣಿನೊಂದಿಗೆ ಬೆರೆತು ಮಣ್ಣನ್ನು ಸುಧಾರಿಸುತ್ತದೆ. ಹೀಗೆ ಸ್ವಲ್ಪ ಸುಧಾರಿತವಾದ ಮೇಲೆ ಆ ಮಣ್ಣುಗಳಲ್ಲಿ ಬದನೆ, ಸೌತೆ, ಮುಂತಾದವುಗಳನ್ನು ಬೆಳೆಯುತ್ತಾರೆ.

ಇದರ ಕಾಯಿ, ಬೀಜ ಜುಲೈ – ಅಕ್ಟೋಬರಿನಲ್ಲಿ. ಇದನ್ನು, ನೇರವಾಗಿ ಬೀಜವನ್ನು ಬಿತ್ತಿ ಬೆಳೆಯಬೇಕು. ಕೆಲವೆಡೆ ಬೇರುಗಳಿಂದ ಹೊರಟ ಬೇರುಮರಿಗಳನ್ನು ಪ್ರತ್ಯೇಕಿಸಿ ಬೆಳೆಯುವುದುಂಟು.

ಕಡಿದರೂ ಈ ಮರ ಪುನಃ ಚಿಗುರುತ್ತದೆ.

ಈ ಮರದ ರೂಪಕ್ಕೆ 75 ನೇ ಚಿತ್ರ ನೋಡಿ.

(v) ಮುಗಳಿ (ಮುಗ್ಗಿ) *Acacia polycantha* Willd.

ಇದು ಸುಮಾರು ಗಾತ್ರದ ಮರ. ಇದನ್ನು ಇತರ ಜಾಲಿ ಮರಗಳಿಂದ ಸ್ಪಷ್ಟವಾಗಿ ಗುರುತಿಸಬಹುದು. ಇದರ ತೊಗಟೆ ಬಿಳಿಚು. ಸಣ್ಣ ರೆಂಬೆಗಳು, ಎಲೆಹಿಡಿಗಳು ಸಣ್ಣ; ನರೆಬಣ್ಣದ ರೋಮಗಳಿಂದ ತುಂಬಿರುವುದರಿಂದ ಕೊಳ ಕಟ್ಟೆಗಳ ಸುತ್ತ, ಗದ್ದೆಗಳಲ್ಲಿ ಎದ್ದು, ಅಲಂಕಾರವಾಗಿ ಕಾಣುತ್ತದೆ. ಉಪ ಎಲೆಗಳು ಕಿರಿದು. ಒಂದು ಎಲೆಯಲ್ಲಿ ಏನಿಲ್ಲಾ ಎಂದರೂ ಸುಮಾರು 4000

ಉಪ ಎಲೆಗಳು ಇರುತ್ತವೆ. ಹೂವು ಸಣ್ಣದು ; ಬಿಳುಪು. ಮೇ – ಅಕ್ಟೋಬರ್ ತಿಂಗಳಿನಲ್ಲಿ ಹೂಪ್ಪುತ್ತವೆ. ಎಲೆ ಮತ್ತು ಹೂವುಗಳನ್ನು ಪೂಜೆಗಾಗಿ ಬಳಸುವುದುಂಟು. ಕಾಯಿ ಚಪ್ಪಟೆ.

ಇದು ಸಾಮಾನ್ಯವಾಗಿ ನಾಲೆಗಳ, ಹಳ್ಳಗಳ ಹಾಗೂ ಕೆರೆ ಹತ್ತಿರ ಬೆಳೆಯುವ ಮರ – ಅಂದರೆ ತೇವವಿರುವ ಕಡೆ ಬೆಳೆಯುವ ಮರ. ಮೈಸೂರಿನ ಪೂರ್ವ ಮತ್ತು ದಕ್ಷಿಣ ಭಾಗಗಳಲ್ಲಿ ಸಾಮಾನ್ಯ.



ಚಿತ್ರ : 37. ಬಾಗೆ

ಈ ಮರ ಇತರ ಜಾಲಿ ಮರಗಳಂತೆಯೇ ಉಪಯೋಗಕ್ಕೆ ಬರುವುದಾದರೂ, ಹಾಗೆ ಉಪಯೋಗ ಪಡಿಸಿಕೊಳ್ಳುತ್ತಿಲ್ಲ. ಇದು ಒಳ್ಳೆಯ ಸೌದೆ ಮರ. ಇದರ ಒಳಮರ ಬಹಳ ಗಟ್ಟಿ ; ಎಳೆಗಳು ಒತ್ತು ; ನಯ ; ಭಾರ 0.028 ಘನಮೀಟರ್ 34½ ಕೆ.ಜಿ. (1 ಘನಅಡಿ, 76 ಪೌಂಡು) ತೂಗುತ್ತದೆ. ಇದರಿಂದಲೂ ಕಾಜನ್ನು

ತಯಾರು ಮಾಡಬಹುದು. ಇದೂ ಕೂಡ ಬುಡಮಟ್ಟಕ್ಕೆ ಕಡಿದರೂ ಪುನಃ ಚಿಗರುವ ಮರ.

ಇವನ್ನು ಬೀಜ ಊರಿ ಬೆಳೆಸಬಹುದು. ನೀರಿನ ಒತ್ತಾಸೆ ಇರುವಕಡೆ ಚೆನ್ನಾಗಿ ಬೆಳೆಯುತ್ತದೆ.

(vi) ಬನ್ನಿ. *Acacia ferruginea.*

ಇದೂ ಕೂಡ ಒಳ್ಳೆಯ ಮರ. ಆದರೆ ಇದನ್ನು ಪೂಜೆ ಮಾಡುವುದರಿಂದ ಈ ಮರವನ್ನು ಹೆಚ್ಚಾಗಿ ಬಳಸುತ್ತಿಲ್ಲ. ಮಹಾಭಾರತದಲ್ಲಿ, ಪಾಂಡವರು ಅಜ್ಞಾತವಾಸಕ್ಕೆ ಹೋದಾಗ, ಅರ್ಜುನ ತನ್ನ ಗಾಂಡೀವಾಸ್ತ್ರವನ್ನು ಒಂದು ಹೆಣದ ರೂಪದಲ್ಲಿ ಇಟ್ಟು ಈ ಮರಕ್ಕೆ ನೇತು ಹಾಕಿದನಂತೆ. ಅಜ್ಞಾತವಾಸ ಮುಗಿದ ಮೇಲೆ ಇದನ್ನು ಮತ್ತೆ ಪಡೆದನಂತೆ. ಅಂದಿನಿಂದ ಈ ಮರವನ್ನು ರಾಜರುಗಳು ಪೂಜ್ಯವಾಗಿ ಭಾವಿಸುತ್ತಾರೆ. ವಿಜಯದಶಮಿ ದಿವಸ ಮೈಸೂರಿನ ಮಹಾರಾಜರು ಬನ್ನಿ ಮಂಟಪಕ್ಕೆ ತೆರಳಿ, ಈ ಮರವನ್ನು ಪೂಜಿಸುತ್ತಿದ್ದರು.

ಇದು ದೊಡ್ಡ ಮರ. ಕೋಲಾರದ ಕಡೆ ಜಾಸ್ತಿ. ಮಲೆನಾಡಿನಲ್ಲಿ ಘಟ್ಟದ ಪೂರ್ವಭಾಗಗಳಲ್ಲಿ, ಗಡಿನಾಡಿನಲ್ಲಿ ಹಾಗೂ ಬಯಲು ಸೀಮೆಯಲ್ಲಿ ಈ ಮರ ಬೆಳೆಯುತ್ತದೆ. ಇದರ ತೊಗಟೆ ಕಂದು. ಚಳಿಗಾಲದಲ್ಲಿ ಎಲೆ ಉದುರುತ್ತದೆ. ಏಪ್ರಿಲಿನಲ್ಲಿ ಹೂವು. ಜೂನ್ – ಜುಲೈನಲ್ಲಿ ಬೀಜ ಕಚ್ಚುತ್ತದೆ.

ಇದರ ಒಳಮರ ಭಾರ – 0. 028 ಘನಮೀಟರಿನ ತೂಕ 34 ಕೆ. ಜಿ. (1 ಘನಅಡಿ 75 ಪೌಂಡ್). ಬಾಳಿಕೆ ಹೆಚ್ಚು.

ಇದೂ ಕೂಡ, ಕಡಿದರೂ ಮತ್ತೆ ಚಿಗುರಿ ಬೆಳೆಯುವ ಮರ.

ಬೀಜಗಳನ್ನು ಒಟ್ಟುಹಾಕಿ, ಎಳೆಯ ಸಸಿಗಳನ್ನು ಕುಂಡ ಅಥವಾ ಬುಟ್ಟಿಗಳಲ್ಲಿ ಊರಿ 1 – 1½ ವರ್ಷದ ನಂತರ ನೆಟ್ಟು ಬೆಳೆಸಬೇಕು. ಇದರ ಬೆಳವಣಿಗೆ ಸ್ವಲ್ಪ ನಿಧಾನ.

ಕಸ್ತೂರಿಜಾಲಿ (ಸುವಾಸನೆ ಹೂ ಬಿಡುವ ಪೊದೆ), ಸೀಗೆ, ಕೂಡ ಜಾಲಿ ಜಾತಿಗೆ ಸೇರಿದ ಗಿಡಗಳು.

46. ಬಾಗೆ ಮರಗಳು

ಬಾಗೆ ಜಾತಿಗೆ ಸೇರಿದ ಕಲ್ಬಾಗೆ, ಬಿಲ್ವಾರ, ಹೊಟ್ಟೆಬಾಗೆ ಮರಗಳು ರೈತರಿಗೆ ಉಪಯುಕ್ತವಾದ ಮರಗಳು. ಬಾಗೆ ಜಾತಿ ಗಿಡಗಳನ್ನು ಹಾಕುವುದು ಮುಖ್ಯವಾಗಿ ನೆರಳು, ಸೊಪ್ಪು, ಹಸುರುಗೊಬ್ಬರಗಳಿಗೋಸ್ಕರ. ಇವು ಸುಲಭವಾಗಿ ಬೆಳೆಯುವ ಮರಗಳು. ಇವನ್ನು ಬೀಜಗಳಿಂದಲೇ ಬೆಳೆಸಿದರೂ, ಕೆಲವನ್ನು ತುಂಡು ಹಾಕಿ, ಬೇರು ಬಿಡಿಸಿ ಬೆಳಸಬಹುದು.

(i) ಬಾಗೆ (ಕಲ್ಬಾಗೆ, ಹೊಂಬಾಗೆ, ಶಿರೀಷ, ಸೀತೆ ಶಿರೀಷ) *Albizia lebbeck* (Linn.) Benth.

ಇದು ಸುಮಾರು ದೊಡ್ಡ ಮರ. ಇದನ್ನು ನಮ್ಮ ದೇಶದಲ್ಲಿ ಅನೇಕ ಕಡೆ ಬೆಳೆಸುತ್ತಾರೆ. ಕೆಲವೆಡೆಗಳಲ್ಲಿ ಇದು ಕಾಡು ಕಾಡಾಗಿಯೇ ಬೆಳೆಯುತ್ತದೆ. ಮಳೆ ಕಡಿಮೆ ಇರುವ ಕಡೆಯೂ ಹೆಚ್ಚಾಗಿರುವ ಕಡೆಯೂ ಬೆಳೆಯಬಲ್ಲದು. ತೇವ ಪ್ರದೇಶಗಳಲ್ಲಿ ಅದರಲ್ಲೂ ಮೈಸೂರಿನ ಪಶ್ಚಿಮ ಜಿಲ್ಲೆಗಳಲ್ಲಿ ಬಹಳ ಹುಲುಸಾಗಿ ಬೆಳೆಯುತ್ತದೆ. ಅಲ್ಲಿ ಇದು ದೊಡ್ಡ ಮರವೇ.

ಇದು ಅನೇಕ ಬಗೆಯ ಮಣ್ಣುಗಳಲ್ಲಿ ಬೆಳೆದರೂ ಕರಿ ಎರೆಮಣ್ಣು ಇದಕ್ಕೆ ಒಪ್ಪು. ಆದರೆ ಜಿಗಟು ಹೆಚ್ಚಾಗಿರುವ, ಆಳವಿಲ್ಲದ ಮಣ್ಣುಗಳಲ್ಲಿ ಇದರ ಬೆಳವಣಿಗೆ ಚೆನ್ನಾಗಿರುವುದಿಲ್ಲ.

ಇದರ ತೊಗಟೆ ಒರಟು ; ಕಪ್ಪುಬೂದಿ ಬಣ್ಣ. ದಿಂಡು ಚಿಕ್ಕದು. ನೆತ್ತಿ ಅಗಲ. ಕಾಡುಗಳಲ್ಲಿ ಮಾತ್ರ ದಿಂಡು, ನೇರವಾಗಿ ಎತ್ತರಕ್ಕಿರುತ್ತದೆ. ಅಕ್ಟೋಬರಿನಿಂದ ಮಾರ್ಚಿಯವರೆಗೆ ಎಲೆ ಉದುರಿ ಬೆತ್ತಲೆಯಾಗಿರುತ್ತದೆ. ಆದುದರಿಂದ ನೆರಳಿಗಾಗಿ ಈ ಮರ ಅಷ್ಟು ಯೋಗ್ಯವಲ್ಲ. ಸಾಲುಮರಕ್ಕೂ ಸೂಕ್ತವಲ್ಲ.

ಇದು ಸ್ವಲ್ಪ ಎತ್ತರದಲ್ಲಿ ರೆಂಬೆ ಒಡೆಯುವುದರಿಂದ, ಇದರ ನೆತ್ತಿ ಅಗಲವಾಗಿರುವುದರಿಂದ, ಈ ಮರವನ್ನು ಹೊಲ ಗದ್ದೆಗಳ ಬದುಗಳಲ್ಲಿ ಹಾಕಬಾರದು. ಬೆಳೆಗಳಿಲ್ಲದ ಕಡೆ – ಬಾವಿ ಪಕ್ಕ, ತಿಪ್ಪೆಗುಂಡಿ ಪಕ್ಕ ಹಾಕಬಹುದು.

ಇದು ಮಾರ್ಚಿ–ಏಪ್ರಿಲಿನಲ್ಲಿ ಹೂವು ಬಿಡುತ್ತದೆ–ಹಸಿರು ಹಳದಿ ಹೂವು ; ಒಳ್ಳೆಯ ವಾಸನೆ.

ಇದರ ಒಳಮರ ಕೆಂಪುಕಂದು. ಒಳ್ಳೆಯ ಪಾಲಿಷ್ ತೆಗೆದುಕೊಳ್ಳುತ್ತದೆ ; ಸುಮಾರು ಬಾಳಿಕೆ. ಕಟ್ಟಡಕ್ಕೆ ಯೋಗ್ಯವಾದ ಮರವಾದರೂ, ಅನಿಷ್ಟ ತರುತ್ತದೆ ಎಂಬ ನಂಬಿಕೆ ಇರುವುದರಿಂದ ಇದನ್ನು ಈ ಕೆಲಸಕ್ಕೆ ಉಪಯೋಗಿಸುವುದು ಕಡಿಮೆ. ಇದರ ತೂಕ ಜಾಲಿಯಷ್ಟೆ – 0.028 ಘನಮೀಟರ್ ತೂಕ $22\frac{1}{2}$–27 ಕೆ. ಜಿ. (50–60 ಪೌಂಡುಗಳು). ನಮ್ಮಲ್ಲಿ ಇದರ ಒಳಮರಕ್ಕೆ ಹೆಚ್ಚು ಪ್ರಾಶಸ್ತ್ಯ ಕೊಡದಿದ್ದರೂ, ಹೊರದೇಶದವರು ಪೀಠೋಪಾಸನ ತಯಾರಿಕೆಗಾಗಿ ಇದನ್ನು

ತರಿಸಿಕೊಳ್ಳುತ್ತಾರೆ. ಯಾಕೆಂದರೆ ಈ ಒಳಮರದ ಎಳೆಗಳು ಅಲಂಕಾರವಾಗಿರುತ್ತವೆ. ಕುರ್ಚಿ ಮೇಜುಗಳಿಗೆ ಒಪ್ಪು. ಸಾಲಮುದಕ್ಕೆ ಒಳ್ಳೆಯ ಮೆರಗು ತೆಗೆದುಕೊಳ್ಳುತ್ತದೆ.

ಇದರ ಒಳಮರ ವ್ಯವಸಾಯದ ಮುಟ್ಟುಗಳಿಗೂ ಒದಗುತ್ತದೆ. ಗಾಣಗಳಿಗೆ, ಚಕ್ರಗಳಿಗೆ, ಒದಗುವ ಮರ.

ಇದರ ಹಸುರೆಲೆಗಳನ್ನು ದನಗಳು ತಿನ್ನುತ್ತವೆ. ಕೆಲವೆಡೆ ಇದನ್ನು ಮೇವಿಗಾಗಿಯೇ ಬೆಳೆಸುವುದುಂಟು. ಇದರ ಗೋಂದು ಜಾಲಿ ಗೋಂದಿನಂತೆಯೇ ಉತ್ತಮ ದರ್ಜೆಯದು.

ಈ ಮರವನ್ನು, ಬೆಳೆಯುವ ಕಡೆ ಬೀಜವನ್ನು ಹಾಕಿ ಬೆಳೆಸಬಹುದು ; ಅಥವಾ ಸಸಿ ಎಬ್ಬಿಸಿ ನೆಡಬಹುದು ; ಅಥವಾ ರೆಂಬೆ ತುಂಡುಗಳನ್ನು ಬೇರೆ ಬಿಡಿಸಿ ಹೂಣಬಹುದು. ಆದರೆ ಬೀಜಗಳನ್ನು ನೇರವಾಗಿ ಊರಿ ಬೆಳೆಸುವುದು ಸುಲಭ ; ನಾಟಿ ಮಾಡಿದ ಸಸಿಗಳು ಅಷ್ಟು ಎತ್ತರಕ್ಕೆ ಬೆಳೆಯುವುದಿಲ್ಲ.

ಡಿಸೆಂಬರ್, ಜನವರಿಯಲ್ಲಿ ಕಾಯಿ ಬಲಿಯುತ್ತದೆ. ಮೇ ತನಕ ಮರದಲ್ಲೇ ನಿಲ್ಲುತ್ತದೆ. ಬೀಜಗಳಿಗೆ ಹುಳು ಹೊಡಿಯುವುದು ಜಾಸ್ತಿ. ಅಳಿಲು, ಇಲಿ ಕಾಟ ಹೆಚ್ಚು. ಆದುದರಿಂದ ಕಾಯಿಯಿಂದ ಆಗತಾನೆ ಬೀಜಗಳನ್ನು ಉದುರಿಸಿಕೊಂಡು ನೆಡಬೇಕು. 28 ಗ್ರಾಂ(1 ಔನ್ಸ್)ನಲ್ಲಿ ಸುಮಾರು 200 ಬೀಜವಿರುತ್ತದೆ.

ಒಟ್ಲು ಹಾಕುವುದಾದರೆ ಮಾರ್ಚಿ, ಏಪ್ರೈಲಿನಲ್ಲಿ ಸಸಿಗಳನ್ನು ಎಬ್ಬಿಸಿ, ನೀರು ಹಾಯಿಸುತ್ತ, ಕಳೆ ತೆಗೆಯುತ್ತ ಬೆಳೆಸಿ ಮಳೆಗಾಲದಲ್ಲಿ ಹೂಣಬಹುದು. ಆ ಕಾಲಕ್ಕೆ ಸಸಿಗಳು ಒಂದು ಅಡಿ ಎತ್ತರಕ್ಕೆ ಬೆಳೆದಿರುತ್ತವೆ.

ಬೀಜಗಳು ಸುಮಾರು 5 ದಿವಸದ ಮೇಲೆ ಮೊಳಕೆಯಾಗುತ್ತವೆ. ಕೆಲವು ಬಹಳ ಕಾಲದ ಮೇಲೆ ಮೊಳೆಯುವುದೂ ಉಂಟು.

ಬಾಗೆ ಗಿಡ ಬೇಗ ಬೆಳೆಯುತ್ತದೆ. 10 ವರ್ಷದಲ್ಲಿ ದಿಂಡಿನ ಸುತ್ತಳತೆ ಸುಮಾರು 75 ಸೆಂ. ಮೀ.(2½ ಅಡಿ) ನಷ್ಟು ಬರುತ್ತದೆ.

ಬಾಗೆ ಬಹಳ ಕಾಲ ಬೆಳೆದು ನಿಲ್ಲುವ ಮರವಲ್ಲ. ಬಿರುಗಾಳಿಗೆ ಬೀಳುವುದುಂಟು. ಆದುದರಿಂದ ಇದನ್ನು ಜನರು ಹೆಚ್ಚಾಗಿ ಓಡಾಡುವ ಕಡೆ ಹಾಕಬಾರದು.

ಇದರ ತೊಗಟೆ, ಎಲೆ ಮತ್ತು ಹೂಗಳನ್ನು ಅರೆದು ಹುಣ್ಣು, ಕುರಗಳಿಗೆ ಬಳಿಯುತ್ತಾರೆ.

ಈ ಮರದ ರೂಪಕ್ಕೆ 78 ನೆಯ ಚಿತ್ರ ನೋಡಿ.

(ii) ಬಿಲ್ವಾರ (ಬಿಳಿವಾರ, ಬಚಾರಿ, ಬೆಟ್ಟಸುಜ್ಜಲು, ಚೆಲಬಾಗಿ, ಬಿಲ್ಕುಂಬಿ) *Albizia odoratissima* (Linn.) Benth.

ಇದು ಕಪ್ಪು ಬಾಗೆ ; ದೊಡ್ಡ ಮರ ; ಎಲೆ ಅಚ್ಚ ಹಸುರು ; ಅಂದವಾಗಿ ಬಳುಕಿ ಬೆಳೆಯುತ್ತದೆ. ಈ ಮರ ರೈತರಿಗೆ ಬಹಳ ಉಪಯುಕ್ತವಾದದ್ದು. ರೈತರ

ನೆಚ್ಚಿನ ಮರವೆಂದೇ ಕರೆಯುವುದುಂಟು. ಹೀಗೆ ಕರೆಯಲು ಕಾರಣಗಳಿವೆ. ಒಳ್ಳೆಯ ಸೌದೆ ಕೊಡುತ್ತದೆ; ಬೇಗ ಬೆಳೆಯುತ್ತದೆ; ಅನೇಕ ಬಗೆಯ ಮಣ್ಣುಗಳಲ್ಲಿ ಬೆಳೆಯುತ್ತದೆ; ಆಗಾಗ್ಗೆ ಕಡಿಯಬಹುದು; ಕಡಿದರೂ ಚಿಗುರುತ್ತಿರುತ್ತದೆ. ಇದರ ಒಳಮರದ ನಾರು ಗಟ್ಟಿ; ಬಲವಾಗಿರುತ್ತದೆ; ಚೆನ್ನಾಗಿ ಹದ ಮಾಡಬಹುದು; ಒಳ್ಳೆಯ ಪಾಲಿಷ್ ತೆಗೆದುಕೊಳ್ಳುತ್ತದೆ; ತೇವ ಅಂಟದಿದ್ದರೆ ಬಹಳ ಕಾಲ ಬಾಳಿಕೆಗೆ ಬರುತ್ತದೆ. ಇದರ ತೂಕವೂ ಗೊಬ್ಬಳಿಯ ಒಳಮರದ ಹಾಗೆ; 0.028 ಘನ ಮೀಟರ್(ಒಂದು ಘನ ಅಡಿ)ನ ತೂಕ 22½–25 ಕೆ. ಜಿ. (50–55 ಪೌಂಡು.) ಇದನ್ನು ಅನೇಕ ಉದ್ದೇಶಗಳಿಗಾಗಿ ಉಪಯೋಗಿಸಬಹುದು – ಮನೆ ಕಟ್ಟಡಕ್ಕೆ, ವ್ಯವಸಾಯದ ಮುಟ್ಟುಗಳಿಗೆ, ಎಣ್ಣೆ ಗಾಣಗಳಿಗೆ, ಚಕ್ರದ ಗುಂಬಗಳಿಗೆ, ಪೀಠೋಪಾಸನಗಳಿಗೆ. ಇದರ ಎಲೆ, ದನಗಳ ಮೇವೂ ಕೂಡ. ಇದರ ತೊಗಟೆ ಔಷಧಿಗಳಿಗೆ ಒದಗುತ್ತದೆ. ಈ ಕಾರಣಗಳಿಂದ ಇದು ರೈತರು ಬೆಳೆಸಲು ಯೋಗ್ಯವಾದ ಮರ; ರೈತರ ವೃಕ್ಷಬಂಧು.

ಈ ಮರ, ಎತ್ತರಕ್ಕೆ ನೆಟ್ಟಗೆ ಬೆಳೆಯುತ್ತದೆ. ಅನುಕೂಲವಿದ್ದೆಡೆ ಸುಮಾರು 24 ಮೀಟರ್ (80 ಅಡಿ) ಎತ್ತರಕ್ಕೆ ಬೆಳೆಯುವುದುಂಟು. ಮರದ ತಾಳು ಉದ್ದ; 12 ಮೀಟರ್ (30–40 ಅಡಿ) ಎತ್ತರದಲ್ಲಿ ರೆಂಬೆ ಒಡೆಯುತ್ತದೆ. 15 ವರ್ಷದಲ್ಲಿ ಇದರ ತಾಳು ಸುಮಾರು 60 ಸೆಂ. ಮೀ. (2 ಅಡಿ) ದಪ್ಪಕ್ಕೆ ಬೆಳೆಯುತ್ತದೆ. ಈ ಕಾರಣಗಳಿಂದ ಹಲಗೆ ಕೊಯ್ಯಲು ಬಹಳ ಒಪ್ಪಾದ ಮರ. ಸಾಲದುದಕ್ಕೆ ಅಲಂಕಾರವಾಗಿ ಬೆಳೆಯುವ ಹೆಮ್ಮರ.

ಇದರ ಎಲೆ ಅಚ್ಚ ಹಸುರು. ತೊಗಟೆ ಸ್ವಲ್ಪ ಹಳದಿ ಛಾಯೆಯ ಕಂದು ಬಣ್ಣದ್ದು. ತೊಗಟೆ ಒಳಭಾಗ ಕೆಂಪು. ಇದರ ಹೂವು ಹಳದಿ; ಸುವಾಸನೆ; ಬೇಸಿಗೆ ದುಕ್ತಿ, ಏಪ್ರಿಲ್–ಜೂನಿನಲ್ಲಿ ಹೂಗೊಂಚಲು, ಡಿಸೆಂಬರಿನ ಹೊತ್ತಿಗೆ ಕಾಯಿ ಬಲಿತಿರುತ್ತವೆ. ಡಿಸೆಂಬರ್–ಮಾರ್ಚಿಯಲ್ಲಿ ಎಲೆ ಉದುರಿ ಬೆತ್ತಲೆಯಾಗಿರುತ್ತದೆ. 28 ಗ್ರಾಂ(1 ಔನ್ಸ್)ನಲ್ಲಿ ಸುಮಾರು 450 ಬೀಜ.

ಈ ಮರ, ಪಶ್ಚಿಮ ಮೈಸೂರಿನ ಅರಣ್ಯಗಳಲ್ಲಿ ಹೆಚ್ಚು. ಆದರೆ, ಫಲವತ್ತಿಲ್ಲದ ಜಮೀನುಗಳಲ್ಲಿ ಇದರ ಬೆಳವಣಿಗೆ ಕುಗ್ಗು. ಬಯಲು ಪ್ರದೇಶಗಳಲ್ಲಿ ಇವನ್ನು ಬೆಳೆಸುತ್ತಾರಾದರೂ, ಅನೇಕ ಕಡೆ ತನಗೆ ತಾನಾಗಿಯೇ ಬೆಳೆಯುವುದೂ ಉಂಟು.

ಇದನ್ನು ಬೀಜ ಹಾಕಿಯೋ, ಒಟ್ಲು ಹುಯ್ದು ಸಸಿ ಎಬ್ಬಿಸಿಯೋ ಅಥವಾ ರೆಂಬೆ ತುಂಡುಗಳನ್ನು ನೆಟ್ಟೋ ಬೆಳೆಸಬಹುದು.

ಸಸಿಗಳು ಬಹಳ ಕೋಮಲ; ಬಲಹೀನ. ಹೆಚ್ಚು ಮಳೆ ಬಿದ್ದರೆ ಸಾಯುತ್ತವೆ. ಅಲ್ಲದೆ, ನಾಟಿ ಕಷ್ಟ; ಬಹಳ ಎಚ್ಚರಿಕೆಯಿಂದ ಸಸಿಗಳನ್ನು ನೆಡಬೇಕು. ನೆಟ್ಟ ಸಸಿಯ ಎಲೆ ಉದುರುವುದುಂಟು. ಆಮೇಲೆ ಹೊಸ ಚಿಗುರು ಬರುತ್ತದೆ. ರೆಂಬೆ

ತುಂಡುಗಳನ್ನು ಹೂಣುವುದಾದರೆ ಚೆನ್ನಾಗಿ ಬೇರು ಬಿಟ್ಟ ತುಂಡುಗಳನ್ನೇ ಹೂಣಬೇಕು. ಇಲ್ಲದಿದ್ದರೆ ತುಂಡುಗಳು ಬೇಗ ಸಾಯುತ್ತವೆ.

ಈ ಕಾರಣಗಳಿಂದ ಈ ಜಿಲ್ವಾರದ ಮರವನ್ನು ಬೀಜ ಹಾಕಿ ಬೆಳೆಸುವುದೇ ಮೇಲು. ಇದಕ್ಕಾಗಿ, ಕಾಯಿಗಳನ್ನು ಏಪ್ರಿಲ್ ತಿಂಗಳಿನಲ್ಲಿ ಕೂಡುಹಾಕಿ ಒಣಗಿಸಬೇಕು. ಒಣಗಿದಾಗ ಬೀಜಗಳು ಸಿಡಿಯುತ್ತವೆ. ಈ ಬೀಜಗಳನ್ನು ತೂರಿ ಕೇರಿಟ್ಟುಕೊಂಡು ಮಳೆಗಾಲದಲ್ಲಿ ಹಾಕಬೇಕು.

ಇದರ ಬೀಜಗಳ ಮೊಳಕೆ ಅನಿಶ್ಚಿತ. ಕೆಲವು ಕೇವಲ 6 ದಿನಗಳಲ್ಲೆ ಮೊಳೆಯುತ್ತವೆ. ಮತ್ತೆ ಕೆಲವು ಹತ್ತು ತಿಂಗಳುಗಳಾದರೂ ಮೊಳೆಯುವುದಿಲ್ಲ.

ಬೀಜಗಳನ್ನು ಜುಲೈ ತಿಂಗಳಿನಲ್ಲಿ ಹೂಣಬೇಕು. ಗುಣಿಗಳ ಮೇಲೆ ಪುರಲೆ ಸುಟ್ಟು ಬೂದಿಯನ್ನು ಮಣ್ಣಿನೊಂದಿಗೆ ಬೆರೆಸಿ ಬೀಜ ಹಾಕಿದರೆ, ಅವು ಚೆನ್ನಾಗಿ ಬೆಳೆಯುತ್ತವೆ.

ಗಣಿಗಳನ್ನು ಸುಮಾರು 7.5–9 ಮೀಟರ್ (25–30 ಅಡಿ) ಅಂತರದಲ್ಲಿ, ಸ್ವಲ್ಪ ಅಗಲಕ್ಕೆ ತೋಡಬೇಕು.

ಈ ಮರದ ಬಗ್ಗೆ ಒಂದು ಎಚ್ಚರಿಕೆ. ಇದರ ಬೇರುಗಳು ಆಳಕ್ಕೆ ಹೋಗದೆ ಮಣ್ಣಿನ ಮೇಲ್ಪದರಗಳಲ್ಲಿಯೇ ಇರುತ್ತವೆ. ಆದುದರಿಂದ ಇವನ್ನು ಬೆಳೆಗಳಿಡುವ ಜಮೀನಿನಲ್ಲಿ ಹಾಕಿದರೆ ಬೆಳೆಗಳಿಗೆ ಕೇಡು.

ಈ ಮರ ತೋಪುಗಳಲ್ಲಿ ಹಾಕಲು ಯುಕ್ತವಾದದ್ದು. ಆದುದರಿಂದ ಇಂತಹ ಗುಣಗಳುಳ್ಳ, ಬಹಳ ಉಪಯುಕ್ತವಾದ ಮರವನ್ನು ಪ್ರತಿಯೊಂದು ಹಳ್ಳಿಯಲ್ಲೂ ಬಿಲ್ವಾರದ ತೋಪುಗಳಾಗಿ ಬೆಳೆಸುವುದು ಒಳ್ಳೆಯದು.

(iii) ಹೊಟ್ಟೆಬಾಗೆ: (ಕಲ್ಬಾಗಿ, **ಕೋಟೆಪಾಲೆ**) *Albizia chinensis* (Osbeck) Merr.

ಇದು ಮಲೆನಾಡಿನ ಬಾಗೆ. ಮೈದಾನದ ಬಾಗೆಯ ಬದಲು ಮಲೆನಾಡಿನಲ್ಲಿ ಅದೇ ಉದ್ದೇಶಗಳಿಗಾಗಿ ಹೊಟ್ಟೆಬಾಗೆಯನ್ನು ಬೆಳೆಸಬಹುದು.

ಇದು ದೊಡ್ಡ ಮರ; ಬೇಗ ಬೆಳೆಯುತ್ತದೆ. ಇದರ ಒಳಮರ ಅನೇಕ ಕೆಲಸಗಳಿಗೆ ಒದಗುತ್ತದೆ; ಆದರೆ ಬಾಳಿಕೆ ಕಡಿಮೆ. ಇದರಿಂದ ಉತ್ಕೃಷ್ಟವಾದ ಇದ್ದಿಲನ್ನು ತಯಾರು ಮಾಡಬಹುದು. ಈ ಮರದ ತೂಕ ಕಡಿಮೆ – 0.028 ಘನಮೀಟರ್ (ಒಂದು ಘನ ಅಡಿ) ಸುಮಾರು 15½ – 20 ಕೆ. ಜಿ. (34 – 44 ಪೌಂಡು) ತೂಗುತ್ತದೆ. ಇದರಿಂದ ಪಾತ್ರೆಗಳನ್ನು ಮಾಡಬಹುದು; ಪೀಠೋಪಕರಣಗಳನ್ನು ಮಾಡಬಹುದು. ಇದರ ಎಲೆಗಳೂ ದನಗಳಿಗೆ ಮೇವು.

ಈ ಮರ ಸುಲಕ್ಷಣವಾದ ಅಲಂಕಾರದ ಮರ. ಇದರ ತೊಗಟೆ ನಯ; ಕಪ್ಪು ಕಂದು. ಪುಕ್ಕಗಳಂತಿರುವ ಎಲೆ; ಹರಡಿ ಚಪ್ಪಟೆಯಾಗಿರುವ ನೆತ್ತಿ. ಎಲೆ,

ಬೇಸಿಗೆಯಲ್ಲಿ ಉದುರಿದರೂ ಒಂದು ತಿಂಗಳ ಮಟ್ಟಿಗೆ ಬೆತ್ತಲೆ. ಬೇಗನೆ ಹೊಸ ಎಲೆ ಹೊಮ್ಮುತ್ತದೆ. ಜೂನ್ ತಿಂಗಳಲ್ಲಿ, ಒಣ ಹುಲ್ಲಿನ ಬಣ್ಣದ ಅಂದದ ಹೂವುಗಳು ಬರುತ್ತವೆ. ಕಾಯಿಗಳು ನವೆಂಬರ್ – ಡಿಸೆಂಬರ್‌ನಲ್ಲಿ ಬಲಿಯುತ್ತವೆ.

ಈ ಮರವನ್ನು ಬೀಜ ನೆಟ್ಟು ಬೆಳೆಸಬೇಕು. ಇದು ದೊಡ್ಡ ಮರವಾದುದರಿಂದ, ಗುಣಿಗಳನ್ನು ಸುಮಾರು 10. 5 ಮೀಟರ್ (35 ಅಡಿ) ಅಂತರದಲ್ಲಿ ತೋಡಿ ಬೀಜಗಳನ್ನು ನೆಡಬೇಕು. ಒಟ್ಲು ಹಾಕಿ, ಸಸಿ ಎಬ್ಬಿಸಿ, ಸಸಿಗಳನ್ನು ನೆಡುವ ಕ್ರಮ ಅಷ್ಟೇನೂ ಅನುಕೂಲವಲ್ಲ. ಮಾರ್ಚಿ – ಏಪ್ರಿಲಿನಲ್ಲಿ ಒಟ್ಲು ಹುಯ್ದು, ಕಳೆ ಕೀಳುತ್ತಿದ್ದು ಮಳೆಗಾಲದಲ್ಲಿ ಸಸಿಗಳನ್ನು ನೆಡಬಹುದು.

ಮಲೆನಾಡಿನ ಕಡೆ ಇದನ್ನು ಸಾಲುಮರವಾಗಿಯೂ ಹಾಕಬಹುದು. ಇದನ್ನು ಅಸ್ಸಾಮಿನಲ್ಲಿ ಟೀ ತೋಟಗಳ ನೆರಳಿಗಾಗಿ ಬೆಳೆಸುತ್ತಾರೆ. ನಮ್ಮ ಕಾಫಿ ತೋಟಗಳಲ್ಲೂ ಹಾಕಬಹುದು.

ಈ ಮರದ ರೂಪಕ್ಕೆ 79ನೆಯ ಚಿತ್ರ ನೋಡಿ.

(iv) ಚುಗ್ಗಲು (ಸುಜ್ಜಲು, ಬಿಲ್ಕಂಬಿ, ಕಾಡ್ಸೀಗೆ) *Albizia amara* Boiv.

ಇದು ಚಿಕ್ಕಮಗಳೂರು, ಶಿವಮೊಗ್ಗ ಜಿಲ್ಲೆಗಳಲ್ಲಿ ಸಾಮಾನ್ಯವಾಗಿ ಬೆಳೆಯುವ ಜಾಗೆ. ಹೊಟ್ಟೆಬಾಗೆಯಂತೆ ಇದು ದೊಡ್ಡ ಮರವಲ್ಲ; ಸುಮಾರು ಎತ್ತರದ್ದು.

ಇದರ ಒಳಮರ ಹೆಚ್ಚು ಭಾರ; ಗಟ್ಟಿ; 0.028 ಘನಮೀಟರ್ (ಒಂದು ಘನಅಡಿ) ಸುಮಾರು 28 – 31½ ಕೆ. ಜಿ. (62 – 70 ಪೌಂಡು) ತೂಗುತ್ತದೆ. ಬಹಳ ಬಾಳಿಕೆಯ ಮರ. ಕೆಂಪುಕಂದು ಬಣ್ಣ.

ಇದರ ಸಣ್ಣ ರೆಂಬೆ ಮತ್ತು ಎಲೆಯ ಮಧ್ಯನರದ ಮೇಲೆ ಕೂದಲು ಇರುವುದರಿಂದ ಇದನ್ನು ಇತರ ಬಾಗೆಗಳಿಂದ ಗುರುತಿಸಬಹುದು. ಸಣ್ಣ ಎಲೆಗಳು.

ಇದರ ರೆಂಬೆಗಳು ನಾಡು ನೇಗಿಲಿಗೆ ಒದಗುತ್ತವೆ. ಒಳಮರವನ್ನು ಇತರ ವ್ಯವಸಾಯದ ಮುಟ್ಟುಗಳಿಗೆ ಮತ್ತು ಗಾಡಿಗಳಿಗೆ ಉಪಯೋಗಿಸಬಹುದು.

ಇದನ್ನು ಬೀಜ ಊರಿ ಬೆಳೆಸಬಹುದು. ಅಷ್ಟು ಬೇಗ ಬೆಳೆಯದಿದ್ದರೂ, ನಿಧಾನವಾದ ಮರವೇನೂ ಅಲ್ಲ.

47. ಸೀಮೆಹುಣಿಸೆ. (ಕೊರಾಕಾಪುಳಿ, ಕೊಟ್ಟಾಂಪುಳಿ, ಮನಿಲ್ಲಾ ಹುಣಿಸೆ) *Pithecellobium dulce* (Roxb.) Benth.

ಇದು ರೈತರಿಗೆ ಅನೇಕ ರೀತಿಯಲ್ಲಿ ಉಪಯೋಗಕ್ಕೆ ಒದಗುವ ಸಣ್ಣ ಮರ ಅಥವಾ ಪೊದೆ.

ಮೊದಲಾಗಿ, ಇದು ಬಹಳ ಗಟ್ಟಿಮುಟ್ಟಾದ ಗಿಡ. ಬೇಗ ಬೆಳೆಯುತ್ತದೆ. ಅನೇಕ ಕಡೆ, ಅನೇಕ ಸನ್ನಿವೇಶಗಳಿಗೆ ಹೊಂದಿಕೊಂಡು ಬೆಳೆಯುತ್ತದೆ. ಮಳೆ ಹೆಚ್ಚಾಗಿ ಇಲ್ಲದ ಕಡೆ, ತನು ಇರುವ ಕಡೆ, ನಾಲಾ, ನದಿಗಳ ಪಕ್ಕದಲ್ಲಿ ಬೆಳೆಯುತ್ತದೆ. ಕತ್ತರಿಸಿದರೂ ಚಿಗುರುತ್ತದೆ. ಆಳವಾಗಿ ಬೇರು ಬಿಟ್ಟುಕೊಂಡು, ಮಣ್ಣಿನ ತಳಪದರಗಳಿಂದ ಪೋಷಣೆ ಪಡೆದುಕೊಳ್ಳುತ್ತದೆ. ಎಲೆ ಸಣ್ಣ. ನೆತ್ತಿ ತೆಳುವಾಗಿ ಹರಡಿಕೊಂಡಿರುವುದರಿಂದ ನೆರಳು ಕಟ್ಟುವುದಿಲ್ಲ. ಅನುಕೂಲ ಪರಿಸ್ಥಿತಿ ಒದಗಿದರೆ ಸುಮಾರು ದೊಡ್ಡ ಮರವಾಗುತ್ತದೆ. ಇಲ್ಲದಿದ್ದರೆ ದಟ್ಟವಾದ ಪೊದೆಯಾಗುತ್ತದೆ. ಮುಳ್ಳುಗಳಿರುವುದರಿಂದ ಇದನ್ನು ಬೇಲಿಗಾಗಿ ಬೆಳೆಯುತ್ತಾರೆ. ಅಂತಹ ಬೇಲಿ ಮೂಲಕ ದನಗಳಾಗಲೀ, ಕಳ್ಳರಾಗಲೀ ತೂರುವುದು ಕಷ್ಟ.



ಚಿತ್ರ : 38. ಕೊರಕಾಪುಳಿ

ಈ ಮರ ದಕ್ಷಿಣ ಅಮೆರಿಕದ್ದು. ಆದರೆ ನಮ್ಮ ದೇಶದ ಅನೇಕ ಕಡೆಗಳಲ್ಲಿ ನೆಲೆಗೊಂಡಿದೆ. ಇದು ನಿತ್ಯ ಹಸುರಿನ ಮರ. ತನ್ನ ತವರಿನಲ್ಲಿ 12 – 15 ಮೀಟರ್ (40 – 50 ಅಡಿ) ಎತ್ತರಕ್ಕೆ ಬೆಳೆಯುತ್ತದಂತೆ.

ಈ ಮರದ ಪ್ರತಿಯೊಂದು ಭಾಗವೂ ರೈತರಿಗೆ ಉಪಯೋಗ. ಎಲೆ ಮತ್ತು ಹಣ್ಣು, ಕುರಿ, ಮೇಕೆ ಮತ್ತು ದನಗಳಿಗೆ ರುಚಿಯಾದ ಮೇವು. ಮೇಕೆಗಳಿಗಂತೂ ಇದರ ಚಿಗುರೆಲೆ ಬಹಳ ಇಷ್ಟ.

ಇದರ ಹಣ್ಣು ಉದ್ದ – 10 – 15 ಸೆಂ. ಮೀ. (4 – 5 ಅಂಗುಲ). ಡೊಂಕಾಗಿ ಬೆಳೆಯುತ್ತದೆ. ನವೆಂಬರಿನಿಂದ ಬೇಸಿಗೆಯವರೆಗೂ ಹೂವು; ಏಪ್ರಿಲಿನಿಂದ ಜುಲೈವರೆಗೆ ಕಾಯಿ. ಇದರ ಹಣ್ಣಿನ ತಿರುಳು ಬಹಳ ಸಿಹಿ; ತಿನ್ನಬಹುದು. ಮಕ್ಕಳಿಗೆ ಬಲು ಇಷ್ಟ; ಪುಷ್ಟಿಕರವಾದ ತಿರುಳು. ಇದರ ಬೀಜದಿಂದ ಎಣ್ಣೆ ಒಂಡಬಹುದು.

ಇದು ಒಳ್ಳೆಯ ಸೌದೆ. ಇಟ್ಟಿಗೆ ಸುಡಲು ಇದರ ಸೌದೆ ಶ್ರೇಷ್ಠ. ಇದರ ಒಳಮರ ಕೆಂಪು ಕಂದು; ಸುಮಾರು ಭಾರ. ಗಾಡಿಗಳಿಗೆ, ಪೆಟ್ಟಿಗೆಗಳಿಗೆ ಉಪಯೋಗಕ್ಕೆ ಬರುತ್ತದೆ.

ಒಳಮರದ ತೂಕ: 0. 028 ಘನಮೀಟರ್, 18 ಕಿ. ಜಿ. (1ಘನಅಡಿ– 40 ಪೌಂಡು) ; ಮರವನ್ನು ಕುಯ್ದಾಗ ಸ್ವಲ್ಪ ದುರ್ಗಂಧ.

ಇದನ್ನು ತಮಿಳುನಾಡಿನಲ್ಲಿ ಹೆಚ್ಚಾಗಿ ಬೇಲಿಗಳಿಗಾಗಿ ಹಾಕುತ್ತಾರೆ. ಬೇಲಿಗೆ ಬಹಳ ಸೂಕ್ತ, ಕತ್ತರಿಸಬಹುದು – ಯಾವ ಮಟ್ಟಕ್ಕಾದರೂ. ಒತ್ತಾಗಿ ಬೆಳೆಯುತ್ತದೆ. ಮುಳ್ಳು ಇರುತ್ತದೆ. ಹೀಗೆ ಬೆಳೆಯಲು ಮಳೆಗಾಲದಲ್ಲಿ ಕಾಲುವೆ ತೋಡಿ, 10 ಸೆಂ. ಮೀ. (4 ಅಂಗುಲ) ಅಂತರದಲ್ಲಿ ಬೀಜಗಳನ್ನು ನೆಡಬೇಕು. ಸ್ವಲ್ಪಕಾಲ ಮೇಕೆ ದನಗಳಿಂದ ಕಾಪಾಡಬೇಕು ಅಷ್ಟೆ.

ಇದು ಒಂದು ಕಡೆ ಬೆಳೆದ ಮೇಲೆ, ತನಗೆ ತಾನಾಗಿಯೇ ಸುತ್ತಲೂ ಹರಡುತ್ತದೆ.

ಸೌದೆ ಮರವಾಗಿ ಬೆಳೆಸಲು ಒಪ್ಪು. ಬೀಜಗಳನ್ನು 1.8 ಮೀಟರ್ (6 ಅಡಿ) ಅಂತರದಲ್ಲಿ ಹೂಣಿ, ಆಮೇಲೆ 3.6 ಮೀಟರ್ (12 ಅಡಿ) ಅಂತರವಿರುವಂತೆ ತೆಳು ಮಾಡಬೇಕು.

48. ಮಳೆ ಮರ *Samanea saman* (Jacq.) Merr.

ಇದು ಸೀಮೆ ಹುಣಿಸೆಯ ಹತ್ತಿರದ ನಂಟು. ಇದೂ ಕೂಡ ನಮ್ಮ ದೇಶದ ಮರವಲ್ಲ. ದಕ್ಷಿಣ ಅಮೆರಿಕದ್ದು. ಮೈಸೂರು ರಾಜ್ಯಕ್ಕೆ ಸುಮಾರು ಒಂದು ಶತಮಾನಕ್ಕೆ ಮುಂಚೆ ಬಂತು.

ಸೀಮೆ ಹುಣಿಸೆಯಂತೆ ಈ ಮರವು ರೈತರಿಗೆ ಅನೇಕ ರೀತಿಯಲ್ಲಿ ಒದಗಿಬರದಿದ್ದರೂ, ಇದರಿಂದ ಸ್ವಲ್ಪ ಅನುಕೂಲಗಳಿವೆ.

ಇದು ಬಹಳ ಬೇಗ ಬೆಳೆಯುವ ದೊಡ್ಡ ಮರ; 6 – 8 ವರ್ಷಗಳಲ್ಲಿ ದೊಡ್ಡದಾಗಿ ಬೆಳೆಯುತ್ತದೆ. ಅಗಲವಾದ ನೆತ್ತಿ, ಗಿಡ್ಡಾದ ದಿಂಡು ಇರುವುದರಿಂದ ಚೆನ್ನಾಗಿ

ನೆರಳು ಕೊಡುತ್ತದೆ. ಆದುದರಿಂದ ಇದನ್ನು ಸಾಲುಮರವಾಗಿ ಹಾಕಲು ಯೋಗ್ಯ. ಆದರೆ ಹಳೆಯ ಮರಗಳು, ಸುಮಾರು 40 – 50 ವರ್ಷದ ಹಳೆಯ ಮರಗಳು, ನೆತ್ತಿ ಭಾರದಿಂದ ಬಿರುಗಾಳಿಯಲ್ಲಿ ಬೀಳುವುದುಂಟು. ಅಲ್ಲದೆ, ಅಗಲಕ್ಕೆ ಹರಡಿ ಕೊಂಡಿರುವ ರೆಂಬೆಗಳು ಸೀಳಿ ಮುರಿಯುವುದುಂಟು. ಇದಕ್ಕೆ ಕಾರಣ, ಇದರ ಒಳಮರ ಗಟ್ಟಿಯಲ್ಲ; ಹಗುರ, ಮೃದು. ಇಂತಹ ಮರ ತಡೆದು ಉರಿಯು ದಿರುವುದರಿಂದ ಇದರ ಸೌದೆಯೂ ಶ್ರೇಷ್ಠವಲ್ಲ.



ಚಿತ್ರ : 39. ಮಳೆಮರ

ಆದರೆ, ಇದನ್ನು ಜೌಗುಪ್ರದೇಶಗಳಲ್ಲಿ ಜೌಗು ಬಸಿಯುವುದಕ್ಕಾಗಿ ಹಾಕ ಬಹುದು. ಇದರ ಬೇರುಗಳು ಮೇಲೆಯೇ ಇರುತ್ತವೆ; ಹರಡಿ ಬೆಳೆಯುತ್ತವೆ. ಆದುದರಿಂದ ಜೌಗನ್ನು ಚೆನ್ನಾಗಿ ಬಸಿಯುತ್ತವೆ.

ಇದು ಅಲಂಕಾರದ ಮರ, ತಾಳು ಮೋಟು; ಅಗಲವಾಗಿ ಹರಡಿಕೊಂಡು ಬೆಳೆಯುವ ನೆತ್ತಿ; ಅಚ್ಚ ಹಸುರು ಎಲೆ ; ಗುಲಾಬಿ ಬಣ್ಣದ ಹೂವುಗಳು ಹೊರ ಚಾಚಿಕೊಂಡು ಬೆಳೆಯುತ್ತವೆ.

ನೆರಳು ಮತ್ತು ಅಲಂಕಾರಕ್ಕೇ ಅಲ್ಲದೆ ಇದರ ಎಲೆ ಮತ್ತು ಹಣ್ಣೂ ಉಪಯೋಗ. ಎಲೆ ದನಗಳಿಗೆ ಮೇವು. ಹಣ್ಣಿನ ತಿರುಳು ಸಿಹಿ. ದನಗಳಿಗೆ, ಕುದುರೆಗಳಿಗೆ ಬಹಳ ಇಷ್ಟ. ಬರಗಾಲದಲ್ಲಿ ಇದನ್ನು ಜನರು ತಿನ್ನುತ್ತಾರೆ; ಆದರೆ ಇದರ ಬೀಜ ಸುಲಭವಾಗಿ ಜೀರ್ಣವಾಗುವುದಿಲ್ಲ.

ಮಾರ್ಚ್ – ಮೇ ತಿಂಗಳು ಹಣ್ಣಿನ ಕಾಲ.

ಈ ಮರವನ್ನು ಮಳೆ ಮರವೆಂದು ಕರೆಯಲು ಕಾರಣ : ಇವರ ಎಲೆಗಳು ರಾತ್ರಿಯ ಹೊತ್ತು ಅಥವಾ ತೇವದ ಹವಾಗುಣದಲ್ಲಿ ಮುದುರಿಕೊಳ್ಳುತ್ತವೆ. ಹೀಗೆ ಮುದುರಿದರೆ ಮಳೆ ಸೂಚನೆಯೆಂದು ತಿಳಿದು ಈ ಮರವನ್ನು ಹಾಗೆ ಕರೆದರು. ಇಬ್ಬನಿ ಕಾಲದಲ್ಲಿ ಎಲೆ ಮುದುಡಿದಾಗ ಇಬ್ಬನಿ ಕೆಳಕ್ಕೆ ತುಂತುರಾಗಿ ಬೀಳಬಹುದು, ತುಂತುರು ಮಳೆಯಂತೆ.

ಇದನ್ನು ಬೀಜದಿಂದ ನೆಟ್ಟೋ, ಸಸಿ ಎಬ್ಬಿಸಿಯೋ ಸುಲಭವಾಗಿ ಬೆಳೆಯಬಹುದು. ತುಂಡು ಕತ್ತರಿಸಿ ಬೇರು ಬಿಡಿಸಿ ಹೂಣಿ ಬೆಳೆಯಬಹುದು.

ದನಗಳ ಮೇವಿಗೆ ಮಳೆಮರದ ತೋಪುಗಳನ್ನು ಬೆಳೆಸುವುದು ಸೂಕ್ತ.

49. ಮತ್ತಿ ಕುಟುಂಬದ ಮರಗಳು – ಮತ್ತಿ ಮತ್ತು ಇದರ ನೆಂಟರು.

ಈ ಸಸ್ಯಕುಟುಂಬದಲ್ಲಿ ಹಲವಾರು ಉತ್ತಮ ಮತ್ತು ಉಪಯುಕ್ತ ಮರಗಳು, ಕೆಲವು ಅಲಂಕಾರದ ಹೂವಿನ ಬಳ್ಳಿಗಳು, ಕೂಡಿವೆ. ನಾಡು ಅಥವಾ ಕಂತ್ರಿ ಬಾದಾಮಿ, ತಾರೆ, ಅಳಲೆ, ಮತ್ತಿ, ಬಿಳಿ ಮತ್ತಿ (ಕಮತ್ತಿ), ಹುನಾಲು, ಅರ್ಜುನ ದಿಂಡಿಗ ಮುಂತಾದ ಬೆಲೆಬಾಳುವ ಮರಗಳು, ರಂಗೂನ್ ಕೆಂಪುಮಲ್ಲೆ ಎಂಬ ಹೂವಿನ ಬಳ್ಳಿ, ಮರಸದ ಬಳ್ಳಿ ಹಾಗೂ ಎಡತಿಗೆ ಬಳ್ಳಿ ಈ ಕುಟುಂಬಕ್ಕೆ ಸೇರಿದವು.

(i) ಮತ್ತಿ (ಕರೀಮತ್ತಿ, ಹೆಬ್ ಹುಲುವೆ) *Terminalia alata* Heyne ex Roth.

ಇದು, ಸಾಮಾನ್ಯವಾಗಿ, ಅನೇಕ ಅರಣ್ಯಗಳಲ್ಲಿ ಬೆಳೆಯುವ ಮರ. ಮಲೆನಾಡಿನಲ್ಲಿ ಹೆಚ್ಚು. ಬಯಲು ಸೀಮೆಯಲ್ಲೂ ಕೆಲವು ವೇಳೆ ಬೆಳೆಯುತ್ತದೆ. ಆದರೆ ಡೊಂಕುಡೊಂಕಾಗಿ ಬೆಳೆಯುತ್ತದೆ. 75 – 375 ಸೆಂ. ಮೀ (30 – 150 ಅಂಗುಲ) ಮಳೆ ಬೀಳುವ ಪ್ರದೇಶವೇ ಇದರ ತವರು. ಅಲ್ಲಿ, ಅದರಲ್ಲೂ, ಆಳವಾದ ಮೆಕ್ಕಲು ಮಣ್ಣಿನಲ್ಲಿ, ಘನವಾಗಿ ಬೆಳೆಯುತ್ತದೆ. ಹೆಮ್ಮರ. ತೆಟ್ಟೆ ಹಾಗೂ ಜಂಬಿಟ್ಟಿಗೆ ಮಣ್ಣುಗಳಲ್ಲಿ ಇದರ ಬೆಳವಣಿಗೆ ಕುಗ್ಗು. ಜಿಗಟು ಮಣ್ಣುಗಳಲ್ಲಿ, ಅದ

ರಲ್ಲೂ ತೇವವಿರುವ ಕಡೆ, ತೋಪುತೋಪಾಗಿಯೇ ಬೆಳೆಯುತ್ತಾರೆ. ಇವನ್ನು ಇಂತಹ ಮಣ್ಣುಗಳಲ್ಲಿ ವನಗಳ ಪುನರುತ್ಥಾನಕಾಗಿಯೇ ಬೆಳೆಯುವುದುಂಟು.

ಇದು, ಅದರ ಸ್ವಸ್ಥಾನದಲ್ಲಿ ಎತ್ತರಕ್ಕೆ ಬೆಳೆಯುತ್ತದೆ ; ನೇರವಾದ ದಿಂಡು ; ತುಂಬು ದುಂಡು ನೆತ್ತಿ ; ತೊಗಟೆ ಬೂದಿ ಅಥವಾ ಕಪ್ಪು ಆದುದರಿಂದಲೇ ಇದನ್ನು ಕೆಲವೆಡೆ ಕರಿಮತ್ತಿ ಎನ್ನುತ್ತಾರೆ.



ಚಿತ್ರ : 40. ಬಿಳಿಮತ್ತಿ

ಜನವರಿಯಿಂದ ಮೇ ತನಕ ಸುಮಾರು 4 ತಿಂಗಳು ಕಾಲ ಎಲೆ ಉದುರಿ ಬೆತ್ತಲೆ ಯಾಗಿರುತ್ತದೆ. ಎಲೆಗಳನ್ನು ಅಡಿಕೆ ತೋಟಗಳಲ್ಲಿ ಹಸುರು ಎಲೆ ಗೊಬ್ಬರವಾಗಿ

ಹಾಕುತ್ತಾರೆ. ಮೇ, ಜೂನಿನಲ್ಲಿ ಹೂವು ಕಚ್ಚುತ್ತದೆ ; ಬಿಳಿಯ ಹೂವು. ಮುಂದಿನ ಫೆಬ್ರುವರಿ-ಮಾರ್ಚಿಯಲ್ಲಿ ಕಾಯಿ ಬಲಿಯುತ್ತದೆ.

ಇದರ ಒಳಮರ ಕಪ್ಪು ಕಂದು. ಸುಮಾರು ಭಾರ, 0.028 ಘನಮೀಟರ್ (1 ಘನ ಅಡಿ) $22\frac{1}{2}$–$31\frac{1}{2}$ ಕಿ. ಜಿ. (50–70 ಪೌಂಡು). ಗಟ್ಟಿಯಾದರೂ ಬಾಳಿಕೆ ಕಡಿಮೆ. ಹೀಗಿದ್ದರೂ ಇದಕ್ಕೆ ಗಿರಾಕಿ ಹೆಚ್ಚು. ಕಾರಣ, ಇದು ನೀರಿನಲ್ಲಿ ನೆನೆದರೂ ಕೆಡುವುದಿಲ್ಲ. ಗಣಿಗಳಲ್ಲಿ ಊರೆಕಂಬಗಳಾಗಿ ಬಳಸುವುದು ಹೆಚ್ಚು. ಕಟ್ಟಡ ಹಾಗೂ ರೈಲ್ವೆ ಬೋಗಿಗಳಿಗೂ ಸೂಕ್ತ.

ಇದು ಒಳ್ಳೆಯ ಸೌದೆ ಮರವೂ ಕೂಡ.

ಇದನ್ನು ಬೀಜ ಊರಿಯೋ ಅಥವಾ ಒಂದು ವರ್ಷದ ಸಸಿಗಳನ್ನು ಹೂಣಿಯೋ ಬೆಳೆಸಬಹುದು. ಫೆಬ್ರುವರಿ – ಮಾರ್ಚಿಯಲ್ಲಿ ಕಾಯಿಗಳನ್ನು ಬಿಡಿಸಿ ಕೂಡಿಟ್ಟುಕೊಳ್ಳಬೇಕು. ಬಿದ್ದ ಕಾಯಿಗಳನ್ನು ಆರಿಸಿಕೊಳ್ಳಬಾರದು. ಹುಳ ಬಿದ್ದೋ ಹಕ್ಕಿ ಹೊಡೆದೋ ಕಾಯಿಗಳು ಬೀಳುವುದರಿಂದ ಇವು ಬಲಿತಿರುವುದಿಲ್ಲ. 28 ಗ್ರಾಂ(1 ಔನ್ಸು)ನಲ್ಲಿ ಸುಮಾರು 350 ಬೀಜಗಳಿರುತ್ತವೆ. ಅದರಲ್ಲಿ ಶೇಕಡ 60 ರಷ್ಟು ಮೊಳೆಯುತ್ತವೆ. ಮೊಳೆಯಲು 9 ರಿಂದ 25 ದಿವಸ ಬೇಕು. ಬೀಜ ಗಳನ್ನು ರಾಶಿ ಹಾಕಿ, ನೀರು ಚಿಮುಕಿಸಿ ಮೊಳಕೆ ಬಂದ ಮೇಲೆ ಬೀಜಗಳನ್ನು ಹಾಕುವುದು ಮೇಲು. ಸಸಿಗಳನ್ನು ಕಳೆಗಳಿಂದ ಕಾಪಾಡಬೇಕು.

ಒಟ್ಲನ್ನು ಏಪ್ರಿಲಿನಲ್ಲಿ ಹಾಕಿ, ಬೇಕಾದರೆ ಮಳೆಗಾಲಕ್ಕೆ ಸಸಿಗಳನ್ನು ನೆಡ ಬಹುದು. ಆದರೆ ಒಂದು ವರ್ಷ ಬೆಳೆಸಿ ದೊಡ್ಡ ಸಸಿಗಳನ್ನು ನೆಡುವುದು ಮೇಲು.

ಈ ಮರ, ಕತ್ತರಿಸಿದರೂ ಪುನಃ ಚಿಗುರು ಒಡೆದು ಬೆಳೆಯುತ್ತದೆ.

ಈ ಮರದ ರೂಪಕ್ಕೆ 80 ನೆಯ ಚಿತ್ರ ನೋಡಿ

(ii) ಬಿಳಿ ಮತ್ತಿ (ತೋರ ಮತ್ತಿ, ಹೊಳೆಮತ್ತಿ, ಕರುತ್ತಿ, ಅರ್ಜುನಮರ) *Terminalia arjuna* (Roxb.) Wight & Arn.

ಇದು ರೈತರಿಗೆ ಅಷ್ಟು ಉಪಯುಕ್ತವಾದ ಮರವೇನಲ್ಲ. ಇದರ ಒಳಮರ ಬಹಳ ಗಟ್ಟಿ; ಬಡಗಿಗೆ ತ್ರಾಸ. ಬೇಗ ಗೆದ್ದಲು ಬೀಳುತ್ತದೆ; ಸೀಳುತ್ತದೆ; ಡೊಂಕಾ ಗುತ್ತದೆ. ಕೆಲವೆಡೆ ಇದನ್ನು ದೋಣಿಗಳಿಗೆ, ಗಾಡಿಗಳಿಗೆ ಉಪಯೋಗಿಸುತ್ತಾರೆ ಯಾದರೂ ಇದರ ಒಳಮರ ಕೆಳ ದರ್ಜೆಯದು.

ಆದರೆ ಇದು ಸುಮಾರು ಅಲಂಕಾರದ ಮರವಾಗಿರುವುದರಿಂದ ಇದನ್ನು ಸಾಲು ಮರಗಳಾಗಿ ಹಾಕಬಹುದು. ಇದರ ತೊಗಟೆಯನ್ನು ಚರ್ಮ ಹದ ಮಾಡುವುದಕ್ಕೂ, ಬಣ್ಣ ಕಟ್ಟುವುದಕ್ಕೂ ಬಳಸುತ್ತಾರೆ. ಇದರ ಬೂದಿಯೂ ಬಣ್ಣ ಕಟ್ಟುವುದಕ್ಕೆ ಒದಗಿ ಬರುತ್ತದೆ. ಇದರ ಎಲೆಯನ್ನು **ಟಸ್ಸಾರ್ ರೇಶ್ಮೆ** ಹುಳುಗಳನ್ನು ಸಾಕಲು ಉಪ ಯೋಗಿಸುತ್ತಾರೆ.

ಇದರ ಮುಖ್ಯ ಉಪಯೋಗ ಔಷಧಿ. ಇದರ ಚಕ್ಕೆಯನ್ನು ಹೃದಯ ರೋಗ, ಮೂಳೇಮುರಿತ, ಹುಣ್ಣು ಹಾಗೂ ಪಿತ್ತಕ್ಕೆ ಆಯುರ್ವೇದದಲ್ಲಿ ಬಳಸು ಸುತ್ತಾರೆ. ಕಿವಿನೋವಿಗೆ ಇದರ ಎಲೆ ರಸವನ್ನು ಬಳಸುತ್ತಾರಂತೆ.

ಇದು ನದಿ ನಾಲಾ ದಂಡೆಗಳಲ್ಲಿ ಬೆಳೆಯುವ ಮರ ಇದಕ್ಕೆ ತೇವದ ಮಣ್ಣು ಅವಶ್ಯಕ. ಇದು ಸುಮಾರು ನಿತ್ಯ ಹಸುರಿನ ಮರ. ಎತ್ತರಕ್ಕೆ ಬೆಳೆಯುತ್ತದೆ. ಹೂವು ಏಪ್ರಿಲ್ – ಜುಲೈ ತಿಂಗಳಿನಲ್ಲಿ, ಬಿಳಿಹೂವು; ಸ್ವಲ್ಪ ದುರ್ಗಂಧ. ಫೆಬ್ರುವರಿ – ಮೇನಲ್ಲಿ ಕಾಯಿ ಬಲಿಯುತ್ತದೆ.

ಇದನ್ನು ಬೀಜ ಬಿತ್ತಿ ಹುಟ್ಟಿದ, ಒಂದು ವರ್ಷದ ಸಸಿಗಳನ್ನು ನಾಟಿ ಬೆಳೆಸಬಹುದು. ಇದರ ಬೇರು ಸ್ವಲ್ಪ ತೆಟ್ಟೆ. ಕಡಿದರೂ ಈ ಮರ ಪುನಃ ಚಿಗುರುತ್ತದೆ.

ಈ ಮರದ ರೂಪಕ್ಕೆ 81ನೆಯ ಚಿತ್ರ ನೋಡಿ.

(iii) ತಾರೆ. (ತಾರೆಮರ, ಶಾಂತಿಮರ) *Terminalia bellirica* (Gaertn.) Roxb.

ಇದು ದೊಡ್ಡ, ಎತ್ತರಕ್ಕೆ ಬೆಳೆಯುವ ಮರ, ಕೆಲವೆಡೆ ಸುಮಾರು 24 ಮೀಟರ್ (80 ಅಡಿ) ಎತ್ತರಕ್ಕೆ ಬೆಳೆಯುತ್ತದೆ. ಇದು ಮಲೆನಾಡಿನಲ್ಲಿ, ಬಯಲು ಸೀಮೆಯಲ್ಲಿ, ಅದರಲ್ಲೂ ಗುಡ್ಡಗಳಲ್ಲಿ, ಮತ್ತು ಗಡಿನಾಡಿ(ಮಲೆನಾಡು ಮೈದಾನದ ಮಧ್ಯಪ್ರದೇಶ)ನಲ್ಲಿ ಬೆಳೆಯುತ್ತದೆ. ತೇವವಿರುವ ಕಡೆ ಚೆನ್ನಾಗಿ ಬೆಳೆಯುತ್ತದೆ. ಬಡ ಮಣ್ಣುಗಳಲ್ಲಿಯೂ ಕೂಡ ಸುಮಾರಾಗಿ ಸಮರ್ಪಕವಾಗಿಯೇ ಬೆಳೆಯಬಲ್ಲದು. ಈ ಮರವನ್ನು ಕಾಲುವೆ ಪಕ್ಕಗಳಲ್ಲಿಯೂ, ಕೊಚ್ಚಿ ಕೊರಕಲು ಬಿದ್ದ ನೆಲಗಳನ್ನು ಸುಧಾರಿಸಲೂ ಹಾಕಬಹುದು.

ಇದರ ತಾಳು ನೇರ. ರೆಂಬೆಗಳು ಉದ್ದವಾಗಿ ಹರಡಿ ಬೆಳೆಯುತ್ತವೆ. ತೊಗಟೆ ದಪ್ಪ; ನೀಲಿ ನರೆ ಬಣ್ಣ; ಉದ್ದಕ್ಕೆ ಸೀಳಿರುತ್ತದೆ. ಎಲೆ ದಪ್ಪ, ಚರ್ಮ ದಂತೆ ದೊಡ್ಡದು ಮತ್ತು ಮೊನಚು; ಸಾಮಾನ್ಯವಾಗಿ ಸಣ್ಣ ರೆಂಬೆ ತುದಿಗಳಲ್ಲಿ ಗುಂಪು ಕಟ್ಟಿಕೊಂಡಿರುತ್ತದೆ. ನವೆಂಬರಿನಿಂದ – ಮೇ ತನಕ ಎಲೆ ಉದುರಿ ಬೆತ್ತಲೆ ಯಾಗಿರುತ್ತದೆ. ಏಪ್ರಿಲ್ – ಮೇ ತಿಂಗಳಿನಲ್ಲಿ ಬಿಳಿಹಸುರಿನ ಸಣ್ಣ ಹೂವುಗಳು ಬಿಡುತ್ತವೆ, ಇವುಗಳ ವಾಸನೆ ಜೇನುತುಪ್ಪದ ವಾಸನೆಯಂತೆ. ನವೆಂಬರ್ – ಫೆಬ್ರುವರಿ ಯಲ್ಲಿ ಹಣ್ಣು – ದುಂಡು ಅಥವಾ ಮೊಟ್ಟೆಯಂತೆ ; ಮೇಲೆ ಮೊಕಮಲ್ಲಿನಂತೆ ಕೂದಲು. ಒಂದು ಹಣ್ಣಿನಲ್ಲಿ ಒಂದು ಬೀಜ. ಕೋತಿಗಳು, ಅಳಿಲು, ಹಂದಿ, ಮೇಕೆ ಹಾಗೂ ಜಿಂಕೆಗಳಿಗೆ ಇದರ ಹಣ್ಣು ಪ್ರಾಣ. ಇದರ ಹಣ್ಣುಗಳನ್ನು ಬಣ್ಣ ಕಟ್ಟುವುದಕ್ಕೆ, ಶಾಯಿ ಮಾಡುವುದಕ್ಕೆ ಹಾಗೂ ಚರ್ಮ ಹದ ಮಾಡುವ ಒಗಚಿಗಾಗಿ

ಬಳಸುತ್ತಾರೆ. ಕೆಲವೆಡೆ ಇದನ್ನು ಮನುಷ್ಯರೂ ತಿನ್ನುವುದುಂಟು. ಇದರ ಎಲೆಗಳನ್ನು ಕರಾವಿನ ಹಸು(ಹೈನ)ಗಳಿಗೆ ತಿನ್ನಿಸುತ್ತಾರೆ.

ಇದರ ಹಣ್ಣನ್ನು ಕಣ್ಣು, ಮೂಗು, ಗಂಟಲು ರೋಗಗಳಿಗೆ ಔಷಧಿಯಾಗಿ ಬಳಸುತ್ತಾರೆ. ಬೀಜದ ಎಣ್ಣೆಯನ್ನು ತಲೆಕೂದಲಿಗೆ ಹಚ್ಚುತ್ತಾರೆ.



ಚಿತ್ರ : 41. ತಾರೆ

ಇದರ ಒಳಮರ ಗಟ್ಟಿ. ಆದರೆ ಬಾಳಿಕೆ ಕಡಿಮೆ; ಬೇಗ ಕುಟ್ಟು ಹಿಡಿಯುತ್ತದೆ. ಆದರೆ ನೀರಿನಲ್ಲಿ ಬಹುಕಾಲ ಕೆಡದೆ ನಿಲ್ಲುತ್ತದೆ. ಇದೇ ಇದರ ವಿಶೇಷ ಗುಣ. ಅದಕ್ಕಾಗಿಯೇ ಇದನ್ನು ದೋಣಿಗಳಿಗೆ ಹೆಚ್ಚಾಗಿ ಉಪಯೋಗಿಸುತ್ತಾರೆ.

ಇದರ ಒಳಮರ ಅಷ್ಟೇನು ಭಾರವಲ್ಲ. 0.028 ಘನಮೀಟರ್ (ಒಂದು ಘನಅಡಿ) ಸುಮಾರು 21$\frac{3}{4}$ ಕೆ.ಜಿ. (48 ಪೌಂಡು) ತೂಗುತ್ತದೆ. ಆದುದರಿಂದ ಇದನ್ನು ಹಲಗೆಗಳಿಗೆ, ಪ್ಯಾಕಿಂಗ್ ಪೆಟ್ಟಿಗೆಗಳನ್ನು ಮಾಡುವುದಕ್ಕೆ ಬಳಸುತ್ತಾರೆ.

ಈ ಮರಕ್ಕೆ ಒಳ್ಳೆ ಭವಿಷ್ಯವಿದೆ, ಪ್ಲೈವುಡ್ ಮಾಡಲು ಸೂಕ್ತ. ಪ್ಲೈವುಡ್ಡಿನ ಉದ್ಯಮ ಬೆಳೆದಂತೆಲ್ಲಾ, ತಾರೆ ಮುಂತಾದ ಮರಗಳಿಗೆ ಗಿರಾಕಿ ಹೆಚ್ಚುತ್ತ ಬರುತ್ತದೆ.

ಇದು ಒಳ್ಳೆಯ ಸಾಲುಮರ. ಕಾರಣ, ಇದರ ಎಲೆ ಚಳಿಗಾಲದಲ್ಲಿಯೇ ಉದುರಿ, ಬೇಸಿಗೆಯ ಹೊತ್ತಿಗೆ ಹೊಸ ಎಲೆ ಹೊಮ್ಮುತ್ತದೆ. 15 ವರ್ಷದಲ್ಲಿ ಸುಮಾರು 10.5 ಮೀಟರ್ (35 ಅಡಿ) ಎತ್ತರ, 60 ಸೆಂ. ಮೀ. (2 ಅಡಿ) ದಪ್ಪಕ್ಕೆ ನೇರವಾಗಿ ಬೆಳೆದು, ರೆಂಬೆಗಳು ಅಗಲವಾಗಿ ಹರಡಿ ರಸ್ತೆಗೆ ಚೆನ್ನಾದ ನೆರಳನ್ನು ಕೊಡುತ್ತದೆ. ಈ ಮರವನ್ನು ಕಡಿದರೂ ಪುನಃ ಚಿಗುರುತ್ತದೆ.

ಇಂತಹ ಗುಣಗಳಿದ್ದರೂ ಇದನ್ನು ಹೆಚ್ಚಾಗಿ ಬೆಳೆಯಲು ರೈತರು ಹಿಂದೇಟು ಹೊಡೆಯುತ್ತಾರೆ. ಕಾರಣ, ಇದರ ಬಗ್ಗೆ ಸಲ್ಲದ ಮೂಢ ನಂಬಿಕೆ ಇರುವುದರಿಂದ.

ಇವನ್ನು ಬೀಜ ಊರಿ ಬೆಳೆಯಬಹುದು. ಸಸಿಗಳನ್ನು ಎಬ್ಬಿಸಿಯೂ ನೆಡಬಹುದು. ಮಾರ್ಚಿ – ಏಪ್ರಿಲ್ ತಿಂಗಳಿನಲ್ಲಿ ಹಣ್ಣುಗಳನ್ನೇ ಹೂಣಬೇಕು. ಒಂದೆರಡು ತಿಂಗಳಲ್ಲಿ ಮೊಳಕೆ ಏಳುತ್ತದೆ. ಉದ್ದವಾದ ತಾಯಿ ಬೇರು ಬೆಳೆಯುವುದಕ್ಕೆ ಮುಂಚೆಯೇ ಸಸಿಗಳನ್ನು ನೆಡುವುದು ಒಳ್ಳೆಯದು. ಹಾಗೆ ಮಾಡಲು ಸಾಧ್ಯವಾಗದಿರಬಹುದು. ಏಕೆಂದರೆ ಸಸಿಯು ಬೆಳವಣಿಗೆ ಮೊದಲನೆಯ ವರ್ಷ ಅಷ್ಟು ಬಿರುಸಾಗಿರುವುದಿಲ್ಲ. ಒಂದೆರಡು ವರ್ಷದ ಸಸಿಗಳನ್ನು, ಸ್ವಲ್ಪ ಕಾಂಡ ಮತ್ತು ಬೇರು ಕತ್ತರಿಸಿ ಹೂಣಬಹುದು. ಇದು ದೊಡ್ಡ ಮರವಾದುದರಿಂದ 12 – 13.5 ಮೀಟರ್ (40 – 45 ಅಡಿ) ಅಂತರಕ್ಕೆ, ಸಸಿಗಳನ್ನು ನೆಡಬೇಕು.

ಈ ಮರದ ರೂಪಕ್ಕೆ 82 ನೆಯ ಚಿತ್ರವನ್ನು ನೋಡಿ.


(iv) ಹುಲ್ವೆ (ಹುಲುವೆ, ಹೊನಾಲ್, ಹುನಗಲು) *Terminalia paniculata* Roth.

ಇದು ಮತ್ತಿ ಮರದ ಹತ್ತಿರ ಸಂಬಂಧಿ. ಮೈಸೂರು ರಾಜ್ಯದ ಪಶ್ಚಿಮ ಜಿಲ್ಲೆಗಳಲ್ಲಿ, ಘಟ್ಟದ ಕೆಳಗೆ ಮತ್ತಿಯಂತೆಯೇ ಇದನ್ನು ವಿವಿಧ ಕೆಲಸಗಳಿಗಾಗಿ ಉಪಯೋಗಿಸುತ್ತಾರೆ. ಹಲಗೆ ಕಂಬ್ಯ್ಯಲು, ಗಾಡಿಗಳನ್ನು ಮಾಡಲು ಇದನ್ನು ಅಲ್ಲಿಯ ರೈತರು ಮೆಚ್ಚುತ್ತಾರಾದರೂ ಇದರ ಒಳಮರ ಮತ್ತಿಯಷ್ಟು ಗುಣಯುಕ್ತವಲ್ಲ. ಇದಕ್ಕೆ ಬೇಗ ಗೆದ್ದಲು ಹಿಡಿಯುತ್ತದೆ. ಒಳಮರ ಕಪ್ಪು; ಗಟ್ಟಿ. 0.028 ಘನಮೀಟರ್ $21\frac{3}{4}$ – 24 ಕೆ. ಜಿ. (ಒಂದು ಘನಅಡಿ – 48 ಪೌಂಡು) ತೂಗುತ್ತದೆ. ಒಳ್ಳೆಯ ಸೌದೆಮರ.

ಇದನ್ನು ಬೀಜ ನೆಟ್ಟು ಬೆಳೆಸಬಹುದು. ಇದಕ್ಕೆ ಆಳವಾದ ತೇವದ ಮಣ್ಣು ಬೇಕಾಗಿರುವುದರಿಂದ ಇದು ಬಯಲು ಸೀಮೆಯಲ್ಲಿ ಬೆಳೆಯಲು ಅಷ್ಟು ಯೋಗ್ಯವಾದ ಮರವಲ್ಲ.

(v) ನಾಡು ಬಾದಾಮಿ (ದೇಶಿ ಬಾದಾಮಿ) *Terminalia catappa* **Linn.**

ಇದರ ತವರು ಮಲಯ ದೇಶ. ಇದು ನಮ್ಮ ದೇಶದಲ್ಲಿ ಅನೇಕ ಕಡೆ – ಅದರಲ್ಲೂ ತೀರ ಪ್ರದೇಶಗಳಲ್ಲಿ ಬೆಳೆಯುತ್ತದೆ. ಎತ್ತರಕ್ಕೆ, ರೆಂಬೆಗಳು ವೃತ್ತಾಕಾರವಾಗಿ, ಅಗಲಕ್ಕೆ ಹರಡಿಕೊಂಡು, ನೇರವಾಗಿ ಬೆಳೆಯುವ ಮರ. ಉದ್ದವಾದ ಹೊಳಪಿನ ಎಲೆ – 15 ಸೆಂ. ಮೀ. – 25 ಸೆಂ. ಮೀ. (6 – 10 ಅಂಗುಲ) ಉದ್ದ. ಮೋಟು ಎಲೆಹಿಡಿ. ಎಲೆ ಉದುರುವುದಕ್ಕೆ ಮುಂಚೆ ಅಂದವಾದ ಕೆಂಪುಬಣ್ಣಕ್ಕೆ ತಿರುಗುತ್ತದೆ. ನೋಟಕ್ಕೆ ಚೆನ್ನಾಗಿರುತ್ತದೆ. ಡಿಸೆಂಬರ್ – ಜನವರಿಯಲ್ಲಿ ಬೆತ್ತಲೆ.



ಚಿತ್ರ : 42. ನಾಡು ಬಾದಾಮಿ

ಮಾರ್ಚಿ – ಏಪ್ರಿಲ್, ಪುನಃ, ಜೂನ್–ಜುಲೈನಲ್ಲಿ, ಕೆಲವು ಬಾರಿ ಮತ್ತೆ ಮಳೆಗಾಲದ ನಂತರ ಸಣ್ಣ ಬಿಳಿಯ ಹೂವುಗಳು ಕಚ್ಚುತ್ತವೆ. ಮೇ ಮತ್ತು ಅಕ್ಟೋಬರಿನಲ್ಲಿ ಹಣ್ಣು ಬಲಿಯುತ್ತದೆ. ಇದರ ಹಣ್ಣನ್ನು ತಿನ್ನಬಹುದು. ಬೀಜವ ತಿರಳು ಬಾದಾಮಿಯಂತೆ. ಹಣ್ಣಿನ ಕಾಲದಲ್ಲಿ ಗಿಣಿಗಳು ಮುತ್ತುವುದರಿಂದ ಹಣ್ಣು ಸಿಗುವುದು ಕಷ್ಟ. ಬೀಜದಿಂದ ಎಣ್ಣೆ ತೆಗೆಯಬಹುದು, ಇದು ಬಾದಾಮಿ ಎಣ್ಣೆಯಂತೆ. ಹಿಂಡಿಯೂ ಕೂಡ ಹಂದಿಗಳಿಗೆ ಒಳ್ಳೆಯ ತಿನಿಸು.

ಎಲೆ ಮತ್ತು ತೊಗಟೆಯಿಂದ ಕಪ್ಪು ತೆಗೆದು ಶಾಯಿ ಮಾಡಬಹುದು. ಕೆಲವರು ಹಲ್ಲನ್ನು ಕಪ್ಪು ಮಾಡಲು ಬಳಸುತ್ತಾರೆ. ಎಲೆ ತೊಗಟೆಯಿಂದ ಚರ್ಮ ಹದ ಮಾಡುವ ಒಗಚೂ ಸಿಗುತ್ತದೆ. ಎಲೆಯನ್ನು ಟಸ್ಸಾರ್ ರೇಶ್ಮೆಹುಳುಗಳಿಗೆ ಹಾಕುತ್ತಾರೆ. ಎಲೆಯ ರಸ ಕೆಲವು ಚರ್ಮವ್ಯಾಧಿಗಳಿಗೆ ಔಷಧಿ. ಚಕ್ಕೆಯನ್ನು ಆಮಶಂಕೆ ಮತ್ತು ಪಿತ್ತಜ್ವರಕ್ಕೆ ಬಳಸುತ್ತಾರಂತೆ.

ಇದರ ಒಳಮರ ಗಟ್ಟಿಯಾದರೂ ಹಗುರ. 0.028 ಘನಮೀಟರ್ ತೂಕ 14½ ಕಿ. ಜಿ. (1 ಘನ ಅಡಿ – 32 ಪೌಂಡು). ಸುಮಾರು ಬಾಳಿಕೆ; ಆದ್ದರಿಂದ ಹೆಚ್ಚಾಗಿ ಉಪಯೋಗಿಸುತ್ತಿಲ್ಲ.

ಇದನ್ನು ಮುಖ್ಯವಾಗಿ ಸಾಲುಮರವಾಗಿ, ಅಲಂಕಾರದ ಮರವಾಗಿ, ಹಣ್ಣು ಬೀಜಕ್ಕೋಸ್ಕರ ಬೆಳೆಸುತ್ತಾರೆ.

ಬೀಜಗಳನ್ನು ಗುಡ್ಡೆಹಾಕಿ ಮೊಳಕೆ ಹೊರಡಿಸಿ ದೊಡ್ಡ ಗುಣಿಗಳಲ್ಲಿ ನೆಡಬೇಕು.

(vi) ಅಳಲೆ. *Terminalia chebula* Retz.

ಇದನ್ನು ನಮ್ಮ ದೇಶದಲ್ಲಿ ಒಳ್ಳೆಯ ಔಷಧಿ ಮರವೆಂದು ಪರಿಗಣಿಸಿದ್ದಾರೆ. ಇದು ಒಂದು ಬಗೆಯ ಅಮೃತವೆಂದೇ ಹೇಳುವುದುಂಟು. ಇಂದ್ರ ಒಂದು ಬಾರಿ ಅಮೃತ ಕುಡಿಯುತ್ತಿದ್ದಾಗ ಒಂದು ತೊಟ್ಟು ನೆಲಕ್ಕೆ ಬಿದ್ದು ಈ ಮರವಾಯ್ತು ಎಂಬ ಕತೆ ಹೇಳುತ್ತಾರೆ. ಇದರ ಬಲಿಯುವ ಹಣ್ಣು ಆಮಶಂಕೆಗೂ, ಬಲಿತ ಹಣ್ಣು ಗೂರಲು, ಗಂಟಲು ಹುಣ್ಣು, ನಿಃಶಕ್ತತೆ, ಪಿತ್ತ ಮುಂತಾದ ರೋಗಗಳಿಗೂ ಔಷಧಿ. ಒಣಗಿದ ಹಣ್ಣನ್ನು ಕುಟ್ಟಿ ಹಲ್ಲುಪುಡಿ ಮಾಡಿಕೊಳ್ಳುತ್ತಾರೆ. ಹಣ್ಣನ್ನು ನೀರಿನಲ್ಲಿ ನೆನೆಸಿ, ನೆನೆದ ನೀರಿನಿಂದ ಕಣ್ಣನ್ನು ತೊಳೆದರೆ ತಂಪಂತೆ. ಕೆಲವರು ಹಾವು ಕಡಿತಕ್ಕೂ ಇದರ ಹಣ್ಣನ್ನು ಬಳಸುತ್ತಾರಂತೆ. ಕಾಲಿನ ಬೆರಳುಗಳಲ್ಲಿ, ಮಳೆಗಾಲದಲ್ಲಿ ಬರುವ ಶೀತದ ಹುಣ್ಣಿಗೆ ಇದರ ಹಣ್ಣಿನ ರಸ ಒಳ್ಳೆಯದು.

ನಮ್ಮಲ್ಲಿ ಇದು ಮದ್ದಿನ ಮರವಾದರೂ, ಹೊರದೇಶಗಳಲ್ಲಿ ಇದರ ಹಣ್ಣುಗಳಿಗೆ ಹೆಚ್ಚು ಗಿರಾಕಿ. ಕಪ್ಪು ಮೈರೊಬಲನ್ ಎಂಬ ಹೆಸರಿನಿಂದ ಇದು ರಫ್ತಾಗುತ್ತದೆ. ಚರ್ಮ ಹದ ಮಾಡುವುದಕ್ಕೆ ಇದನ್ನು ವಿಶೇಷವಾಗಿ ತರಿಸಿಕೊಳ್ಳುತ್ತಾರೆ.

ಇದು ಬಯಲು ಸೀಮೆಯ ಕಾಡಿನ ಮರ. ಸುಮಾರು ಎತ್ತರ. ತೊಗಟೆ ಕಪ್ಪು ಕಂದು; ಸೀಳಿರುತ್ತದೆ. ರೆಂಬೆಗಳು ಹೆಚ್ಚು. ಹರಡಿ ಇಳಿ ಬೀಳುತ್ತವೆ. ಎಲೆ ಅಗಲ; 7.5–20 ಸೆಂ. ಮೀ. (3–8 ಅಂಗುಲ) ಉದ್ದ. ಫೆಬ್ರವರಿ – ಮಾರ್ಚಿನಲ್ಲಿ ಎಲೆ ಉದುರುತ್ತದೆ. ಉದುರುವಾಗ ಎಲೆ ಸ್ವಲ್ಪ ಕೆಂಪೇರುವುದುಂಟು. ಏಪ್ರೆಲ್‌ನಿಂದ ಆಗಸ್ಟ್ ತನಕ ಸಣ್ಣ ಹಳದಿ-ಬಿಳಿಯ ಹೂವುಗಳು, ಸ್ವಲ್ಪ ಗಬ್ಬು ವಾಸನೆ. ನವೆಂಬರ್ – ಮಾರ್ಚಿಯಲ್ಲಿ ಕಾಯಿಗಳು ಬಲಿಯುತ್ತವೆ; ಉದುರಿ

ಮರದ ತಳ, ಹಣ್ಣಿನ ಒಗಚಿನಿಂದ ಕಪ್ಪಗಾಗುತ್ತದೆ. ಒಂದು ಹಣ್ಣಿನಲ್ಲಿ ಒಂದೇ ಬೀಜ.

ಇದರ ಒಳಮರ ಗಟ್ಟಿ. ಸುಮಾರು ಬಾಳಿಕೆ; ಸ್ವಲ್ಪ ಭಾರ – 0.028 ಘನಮೀಟರ್ 25½ ಕೆ. ಜಿ. (ಒಂದು ಘನ ಅಡಿ 56 ಪೌಂಡು) ತೂಗುತ್ತದೆ; ಒಳ್ಳೆಯ ಮೆರಗು ತೆಗೆದುಕೊಳ್ಳುತ್ತದೆ; ಕಪ್ಪು ಕಂದು. ಎಳೆ ಲಕ್ಷಣವಾಗಿರುತ್ತದೆ; ಪೀಠೋಪಕರಣಗಳಿಗೆ ಯೋಗ್ಯ; ಕಟ್ಟಡಕ್ಕೂ, ಗಾಡಿಗಳಿಗೂ ಒದಗಿಬರುತ್ತದೆ.

ಇದರ ಎಲೆಗಳ ಮೇಲೆ ಗಂಟು ಬೆಳೆಯುವುದುಂಟು. ಈ ಗಂಟಿನಿಂದ ಒಳ್ಳೆಯ ಶಾಯಿ ಮಾಡುತ್ತಾರೆ. ಇದರಿಂದ ಬಟ್ಟೆಗೆ ಹಾಕುವ ಹಳದಿ ಬಣ್ಣ ಸಿಗುತ್ತದೆ.

ಇದನ್ನೂ ತಾರೆ ಮರದ ರೀತಿಯಲ್ಲಿ ಬೆಳೆಸಬಹುದು. ರೈತರಿಗೆ ಉಪಯುಕ್ತವಾದ ಮರ.

50. ಡಿಂಡಿಗ. (ಬೆಜ್ಜಲು, ದಿಂಡ್ಲು) *Anogeissus latifolius* (Roxb.) Wall. ex Bedd.

ಸೌದೆಗೂ, ಇದ್ದಿಲಿಗೂ ಹೆಸರೆತ್ತಿದ ಮರ. ಇದರ ಒಳಮರ ಉದಾಕಂದು; ಬಹಳ ಗಟ್ಟಿ; ಮುರಿಯುವುದಿಲ್ಲ. ಈ ಒಳಮರ ಚೆನ್ನಾಗಿ ಪುಟವೇಳುವುದರಿಂದ, ಕೊಡಲಿ ಕಾವು ಮುಂತಾದ ಏಟು ತಿನ್ನುವ ಅಥವಾ ಬಡಿತಕ್ಕೆ ಸಿಗುವ ಹತ್ಯಾರುಗಳಿಗೆ ಬಹಳ ಒಪ್ಪಾದ ಕಾವು (ಹಿಡಿ). ನೊಗ, ಈಸು, ಕೊಟ್ಟಣ ಇವುಗಳಿಗೂ ಬಹಳ ಸೂಕ್ತವಾದ ಮರ. ಇದು ಭಾರದ ಮರ, 0.028 ಘನಮೀಟರ್ 28 – 29 ಕೆ. ಜಿ. (1 ಘನ ಅಡಿ 62 – 64 ಪೌಂಡು) ತೂಗುತ್ತದೆ.

ಈ ಡಿಂಡಿಗದ ಮರ ಬಯಲು ಸೀಮೆಯಲ್ಲಿ ಹೆಚ್ಚು. ಅದರಲ್ಲೂ, ಘಟ್ಟದ ಪೂರ್ವಭಾಗದ ಬಯಲುಸೀಮೆಯಲ್ಲಿ ನೆಟ್ಟಗೆ, ಹೆಮ್ಮರವಾಗಿ ಬೆಳೆಯುತ್ತದೆ, ಸುಮಾರು 18 ಮೀಟರ್ (60 ಅಡಿ) ಎತ್ತರಕ್ಕೆ. ಇದರ ನೆತ್ತಿ ದುಂಡು; ರೆಂಬೆಗಳು ಇಳಿಬಿದ್ದಿರುತ್ತವೆ; ತೊಗಟೆ ದಪ್ಪ – 1.25 ಸೆಂ. ಮೀ. (ಅರ್ಧ ಅಂಗುಲ). ನಯ, ತಿಳಿಬೂದಿ ಬಣ್ಣ; ಅಗಲವಾದ ಎಲೆ; ಏಪ್ರಿಲ್ – ಮೇ ತಿಂಗಳುಗಳಲ್ಲಿ ಉದುರುತ್ತವೆ.

ಕೆಲವು ಕಡೆಗಳಲ್ಲಿ ಈ ಮರಗಳು ಗುಂಪುಗುಂಪಾಗಿ ಬೆಳೆಯುವುದುಂಟು. ಮೈಸೂರಿನ ಪೂರ್ವ ಜಿಲ್ಲೆಗಳಲ್ಲಿ – ಕೋಲಾರ, ಬೆಂಗಳೂರು ಮುಂತಾದ ಕಡೆ ಇದು ಸಣ್ಣಮರ. ಸಣ್ಣ ಮರವಾದರೂ ಒಳಮರ ಗಟ್ಟಿ.

ಈ ಮರದಿಂದ ಗೋಂದು ಸಿಗುತ್ತದೆ, ಗೊಬ್ಬಳಿ ಗೋಂದಿನಷ್ಟೇ ಉಪಯುಕ್ತ. ಇದರ ಎಲೆಗಳಿಂದ ಚರ್ಮ ಹದಮಾಡುವ ಒಗಚು ಸಿಗುತ್ತದೆ. ಗೋಂದು ಮತ್ತು ಎಲೆಗಾಗಿಯೇ ಇದನ್ನು ಹೆಚ್ಚಾಗಿ ಬೆಳೆಸಬೇಕು – ಅವು ಅಷ್ಟು ಉಪಯುಕ್ತ.

ಈ ಮರದ ಎಲೆಯನ್ನು ಕೆಲವೆಡೆ ಟಸ್ಸಾರ್ ಜಾತಿಯ ರೇಷ್ಮೆಹುಳುಗಳನ್ನು ಸಾಕಲು ಬಳಸುತ್ತಾರೆ. ಇದರ ಒಳಮರವನ್ನು ಕಡೆಯುವ ಕೆಲಸಕ್ಕೂ, ಪೀಠೋಪಕರಣಗಳಿಗೂ, ಕಟ್ಟಡಗಳಿಗೂ ಉಪಯೋಗಿಸಬಹುದು.

ಇದರ ಇದ್ದಿಲು ಹೆಸರುವಾಸಿ. ಇದರ ಸೌದೆ ಸರ್ಜೆಮರದಷ್ಟೆ ಉತ್ಕೃಷ್ಟವಾದದ್ದು ; ಅಷ್ಟೇ ಕಾವು ಕೊಡುತ್ತದೆ.

ಈ ಮರ ಕತ್ತರಿಸಿದರೂ ಚಿಗುರುತ್ತದೆ. ಎಲೆ ತರಿದಷ್ಟು ಹೆಚ್ಚು ಎಲೆ ಬೆಳೆಯುತ್ತದೆ.

ಇದನ್ನು ಬೀಜದಿಂದ ಬೆಳೆಸುವುದಕ್ಕಿಂತ, ಬೇರಿನಿಂದ ಹೊರಡುವ ಬೇರು ಕಂದುಗಳಿಂದ ಬೆಳೆಸುವುದು ಸೂಕ್ತ. ಬೀಜವನ್ನು ಒಟ್ಲುಹಾಕಿ ಸಸಿ ಎಬ್ಬಿಸಿ ನೆಡಬಹುದು.

51 **ಕರ್ಪೂರದ ಮರ** (ನೀಲಗಿರಿ ತೈಲದ ಮರ, ಯೂಕಲಿಪ್ಟಸ್)
Eucalyptus sp.



ಚಿತ್ರ : 43. ಕರ್ಪೂರದ ಮರ

ಇತ್ತೀಚಿಗೆ ಎಲ್ಲೆಡೆಗಳಲ್ಲಿ ಕರ್ಪೂರದ ಮರಗಳನ್ನು ವಿಶಾಲ ಪ್ರದೇಶದಲ್ಲಿ ಬೆಳೆಯುತ್ತಿರುವುದು ಕಂಡುಬರುತ್ತದೆ. ಈ ಧೋರಣೆ ಅಷ್ಟೊಂದು ಸಮಂಜಸವಲ್ಲ.

ನಮ್ಮ ದೇಶದಲ್ಲಿ ವನವೃಕ್ಷಗಳು ಬಹಳ ರಭಸದಿಂದ ಮಾಯವಾಗುತ್ತಿವೆ. ಜನಸಂಖ್ಯೆ ಹೆಚ್ಚಿ ಸೌದೆ ಮರಮುಟ್ಟುಗಳ ಬೇಡಿಕೆ ಏರುತ್ತಿದೆ. ಈ ಕರ್ಪೂರ ಮರ, ಈ ಬೇಡಿಕೆಯನ್ನು ತಾತ್ಕಾಲಿಕವಾಗಿ ಪೂರೈಸಲು ಸೂಕ್ತವಾದದ್ದು. ಹೀಗೆಂದ ಮಾತ್ರಕ್ಕೆ ನಮ್ಮ ದೇಶದ್ದೇ ಆದ ಮರಗಳನ್ನು ಬೆಳೆಸಕೂಡದೆಂದಲ್ಲ. ನಮ್ಮ ವೃಕ್ಷ ವೈವಿಧ್ಯ ಅಪಾರ. ಈ ವೈವಿಧ್ಯವನ್ನೂ, ಸಂಪತ್ತನ್ನೂ ಉಳಿಸಿಕೊಂಡು ಬರಬೇಕಾದದ್ದು ಪ್ರತಿಯೊಬ್ಬ ಪ್ರಜೆಯ ಕರ್ತವ್ಯ. ಕಾಡುಗಳನ್ನು ಕಡಿದು, ಬೋಳುಮಾಡಿ ಕರ್ಪೂರದ ಮರಗಳನ್ನು, ಅವು ಶೀಘ್ರವಾಗಿ ಬೆಳೆಯುವ ಕಾರಣ, ಹಾಕುವುದು ಅಪಾಯಕರ. ಆದಷ್ಟುಮಟ್ಟಿಗೆ ಕಾಡುಗಳನ್ನು ಉಳಿಸಿಕೊಂಡು, ಆದಷ್ಟು ಕಡೆ ನಮ್ಮ ದೇಶದ ಮರಗಳನ್ನು ನೆಡುವುದು ಸರಿಯಾದ ಕ್ರಮ. ಆದರೆ ಗೋಮಾಳಗಳಲ್ಲಿ, ಬಂಜರುಗಳಲ್ಲಿ, ಕೊರಕಲು ಬಿದ್ದ, ಕೊಚ್ಚಿಹೋದ ನೆಲಗಳಲ್ಲಿ ಅವಕ್ಕೆ ಬೇಗ ರಕ್ಷಣೆ ಕೊಡಲು ಮತ್ತು ಇದ್ದಬದ್ದ ಕಾಡುಗಳನ್ನು ಕಡಿಯುವುದಕ್ಕೆ ಎಡೆಕೊಡದೆ ಶೀಘ್ರಕಾಲದಲ್ಲಿ ಸೌದೆ ಸರಬರಾಜು ಮಾಡಲು ಮಾತ್ರ ಕರ್ಪೂರದ ಮರವನ್ನು ಹಾಕಬೇಕು.

ಈ ಕರ್ಪೂರದ ಮರ ನಮ್ಮ ದೇಶದ್ದಲ್ಲ. ಇದರ ತವರು ಆಸ್ಟ್ರೇಲಿಯ. ಅಲ್ಲಿ ಸುಮಾರು 140 ಬಗೆ ಕರ್ಪೂರ ಮರಗಳ ಜಾತಿ ಇವೆಯಂತೆ. ಅಲ್ಲಿಯ ಅರಣ್ಯಗಳಲ್ಲಿ ಇವು ಮುಖ್ಯವಾದ ವೃಕ್ಷಗಳು. ಅಲ್ಲಿ ಇವು ಎಲ್ಲ ಬಗೆಯ ಮಣ್ಣುಗಳಲ್ಲೂ ಬೆಳೆಯುತ್ತವೆ.

ಈ ಕರ್ಪೂರ ಮರಗಳನ್ನು ನಮ್ಮ ದೇಶಕ್ಕೆ ಒಂದು ಶತಮಾನದ ಹಿಂದೆ ತರಲಾಯಿತು. ನೀಲಗಿರಿಯಲ್ಲಿ ಇದು ಚೆನ್ನಾಗಿಯೇ ಬೆಳೆದು ಬೇರೂರಿತು. ಅಂದಿನಿಂದ ಇದರ ತೈಲಕ್ಕೆ ನೀಲಗಿರಿತೈಲವೆಂಬ ಹೆಸರು ಬಂತು.

ನಮ್ಮ ಮೈಸೂರು ರಾಜ್ಯಕ್ಕೂ ಇದನ್ನು ಕಳೆದ ಶತಮಾನದಲ್ಲಿ ತರಲಾಯಿತು, ಸುಮಾರು ನೂರಕ್ಕೂ ಮೇಲ್ಪಟ್ಟ ಜಾತಿಗಳನ್ನು ತರಿಸಿ ಪರೀಕ್ಷಿಸಿದರು. ಈಗ ಇಲ್ಲಿ ಸುಮಾರು 15 ಜಾತಿಗಳು ಬೆಳೆಯುತ್ತಿವೆ.

ಕರ್ಪೂರದ ಮರಗಳಲ್ಲಿ ಅನೇಕ ಗುಣಗಳಿವೆ.

ಇವುಗಳಲ್ಲಿ ಅತಿ ಮುಖ್ಯವಾದದ್ದು ಇವುಗಳ ಹೊಂದಾಣಿಕೆ. ಅನೇಕ ಬಗೆಯ ಮಣ್ಣುಗಳಲ್ಲಿ ಅನೇಕ ಪರಿಸ್ಥಿತಿಗಳಲ್ಲಿ ಈ ಮರಗಳು ಬೆಳೆಯಬಲ್ಲವು. ಇಂತಹ ಗುಣ ನಮ್ಮ ಗೊಬ್ಬಳಿ ಮುಂತಾದ ಕೆಲವು ವೃಕ್ಷಗಳಿಗೇ ಮಾತ್ರ ಇದೆ.

ಎರಡನೆಯ ಹೆಗ್ಗುಣ, ಇವುಗಳ ಶೀಘ್ರ ಬೆಳವಣಿಗೆ. ಇವುಗಳನ್ನು ನೆಟ್ಟ 7 ರಿಂದ 10 ವರ್ಷಗಳಲ್ಲಿ ಇವನ್ನು ಸೌದೆ ಮುಂತಾದ ಉದ್ದೇಶಗಳಿಗಾಗಿ ಕಡಿಯ

ಬಹುದು. ಸರ್ವೆಮರ ಬಿಟ್ಟರೆ ಇಷ್ಟುಬೇಗ ಬೆಳೆದು ಸೌದೆ ಕೊಡುವ ಮರಗಳಿಲ್ಲ ವೆನ್ನಬಹುದು.

ಮೂರನೆಯ ಗುಣ, ಇವು ನೆರಳು ಕಟ್ಟುವುದಿಲ್ಲ; ತಳದಲ್ಲಿ ಹುಲ್ಲು ಬೆಳೆಯುತ್ತದೆ. ಆದುದರಿಂದ ಹೊಲಗಳಲ್ಲಿ, ಬದುಗಳಲ್ಲಿ ಹಾಕಲು ಯೋಗ್ಯ. ನೆತ್ತಿ ವಿರಳ. ಎಲೆ ರೆಂಬೆಗಳು ಇಳಿಬಿದ್ದು, ಸೂರ್ಯನ ಬೆಳಕನ್ನು ತಡೆಗಟ್ಟುವುದಿಲ್ಲ.

ನಾಲ್ಕನೆಯದು, ಕಡಿದ ಮರಗಳಿಂದ ಹೊಸಚಿಗುರು ತಳ್ಳುತ್ತದೆ. ಆದುದ ರಿಂದ ಪುನಃ ಮರಗಳನ್ನು ನೆಡಬೇಕಿಲ್ಲ.

ಇವನ್ನು ಹೊಲದ ಅಂಚಿನಲ್ಲಿ ಹಾಕಬಹುದು. ಅಲಂಕಾರಕ್ಕಾಗಿ ಹಾಕ ಬಹುದು; ಬಿಡಿಯಾಗಿ ಬೆಳೆಸಬಹುದು; ತೋಪುಗಳಾಗಿ ಬೆಳೆಸಬಹುದು.

ಕರ್ಪೂರದ ಮರ ಎತ್ತರಕ್ಕೆ ಬೆಳೆಯುವ ಮರ. ಕೆಲವು ಜಾತಿಗಳು, ಇವುಗಳ ತವುರಾದ ಆಸ್ಟ್ರೇಲಿಯದಲ್ಲಿ ಸುಮಾರು 120 ಮೀಟರ್ (400 ಅಡಿ) ಎತ್ತರಕ್ಕೂ ಬೆಳೆಯುವುದುಂಟು. ಕರ್ಪೂರದ ಮರಗಳಲ್ಲಿ ಸದಾ ಕಾಲದಲ್ಲಿಯೂ ಎಲೆಗಳಿರುವುದ ರಿಂದ, ಚೆತ್ತಾಲೆ ಸಿಲ್ಲದಿರುವುದರಿಂದ ಇವನ್ನು ನಿತ್ಯ ಹಸುರು ಮರಗಳೆನ್ನಬಹುದು.

ಇದರ ಎಲೆಗಳಲ್ಲಿ ವಾಸನೆ ಎಣ್ಣೆಯ ಗ್ರಂಥಿಗಳಿವೆ. ಈ ಎಲೆಗಳನ್ನು ಹಿಂಡಿ ಕರ್ಪೂರದ ತೈಲ ಅಥವಾ ನೀಲಗಿರಿ ತೈಲವನ್ನು ಬಟ್ಟಿ ಇಳಿಸುತ್ತಾರೆ. ಮೈಸೂರಿನ ಬಯಲು ಸೀಮೆಯಲ್ಲಿ ಬೆಳೆಯುವ ಕರ್ಪೂರದ ಮರದ ಜಾತಿಯಲ್ಲಿ ಈ ಎಣ್ಣೆ ಅಂಶ ಕಡಿಮೆ. ಆದರೆ ನೀಲಗಿರಿಯಲ್ಲಿ ತೋಪುಗಳಲ್ಲಿ ಬೆಳೆಸಿರುವ ಜಾತಿಯಲ್ಲಿ ಈ ಎಣ್ಣೆ ಅಂಶ ಹೆಚ್ಚು.

ಕರ್ಪೂರ ಮರಗಳಲ್ಲಿ ಮೈಸೂರು ಬಯಲುಸೀಮೆಯಲ್ಲಿ ಬೆಳೆಸಲು ಅನುಕೂಲ ವಾದ ಜಾತಿ ಚಿಕ್ಕಬಳ್ಳಾಪುರದ ಜಾತಿ. ಇದನ್ನೇ ಈಗ ಭದ್ರಾವತಿ ಮುಂತಾದೆಡೆ ಅರಣ್ಯ ಇಲಾಖೆಯವರು ಕಬ್ಬಿಣದ ಕಾರ್ಖಾನೆಗೆ ಇದ್ದಿಲು ಒದಗಿಸಲು ಹೆಚ್ಚು ಕ್ಷೇತ್ರದಲ್ಲಿ ಬೆಳೆಸುತ್ತಿರುವುದು. ನಮ್ಮ ರೈತರೂ ಇದೇ ಜಾತಿಯನ್ನೇ ಬೆಳೆಸಬೇಕು.

ಆಳವಿಲ್ಲದ, ಸುರುಜು ಹೆಚ್ಚಾಗಿರುವ ಕೆಂಪು ಮಣ್ಣುಗಳಲ್ಲಿ ಸರ್ವೆ (ಕ್ಯಾಸರಿಕೆ) ಮರ ಊರ್ಜಿತವಾಗುವುದಿಲ್ಲ. ಅಂತಹ ಕಡೆ ಕರ್ಪೂರದ ಮರ ಹಾಕಬಹುದು.

ಕರ್ಪೂರದ ಮರದ ಬೀಜ ಸಣ್ಣದು. ಆದುದರಿಂದ ಇದನ್ನು ನೇರವಾಗಿ ಹೂಣಲು ಅನಾನುಕೂಲ. ಇದನ್ನು ಸಣ್ಣ ಮಡಿಗಳಲ್ಲಿ, ಹಸನುಗೊಳಿಸಿದ ಮಣ್ಣಿ ನಲ್ಲಿ, ಒಟ್ಟು ಹುಯ್ದು, ಬಹಳ ಎಚ್ಚರಿಕೆಯಿಂದ ತುಂತುರುದಾನಿಯಿಂದ ನೀರೆರೆದು ಸಸಿ ಎಬ್ಬಿಸಬೇಕು. $1\frac{1}{2}$ ತಿಂಗಳಿನ ಸಸಿಗಳನ್ನು ಸಣ್ಣ ಬುಟ್ಟಿ ಅಥವಾ ಕುಂಡಗಳಿಗೆ ವರ್ಗಾಯಿಸಿ, ಅಲ್ಲಿ ಬೇರೂರಿ ಬೆಳೆದನಂತರ, ಸುಮಾರು 9 ತಿಂಗಳ ನಂತರ, $3\frac{1}{2}$ಮೀಟರ್ (12 ಅಡಿ) ಅಂತರದಲ್ಲಿ ಬುಟ್ಟಿ ಸಮೇತ ಅಥವಾ ಕುಂಡ ಒಡೆದು ನೆಡ ಬೇಕು. ಹೆಚ್ಚಾಗಿ ಬಲಿತುಹೋಗಿರುವ ಸಸ್ಯಗಳನ್ನು ನೆಡಬಾರದು.

ಚಿಕ್ಕಬಳ್ಳಾಪುರದ ಜಾತಿ ಕರ್ಪೂರದ ಮರ ಅನೇಕ ಬಗೆಯ ಮಣ್ಣುಗಳಲ್ಲಿ ಬೆಳೆಯುತ್ತದೆಯಾದರೂ, ಆಳವಾದ, ನೀರು ಚೆನ್ನಾಗಿ ಬಸಿಯುವ, ನುರುಜು ತಳವಿರುವ ನೆಲಗಳಲ್ಲಿ ಚೆನ್ನಾಗಿ ಬೆಳೆಯುತ್ತದೆ. ಈ ಜಾತಿಗೆ ನೀರು ತಂಗುವ ನೆಲ ಕೇಡು. ಈ ಜಾತಿಗೆ ಗೆದ್ದಲು ಹಿಡಿಯುವುದಿಲ್ಲ. ಸ್ವಲ್ಪ ಒಣ ಸ್ಥಿತಿಯನ್ನು ಎದುರಿಸಬಲ್ಲದು.


ಇದರ ದಿಂಡು ನೆಟ್ಟಗಿರುತ್ತದೆ. ಎಲೆ ವಿರಳ; ಸುವಾಸನೆ. ಮೇ – ಜೂನಿನಲ್ಲಿ ಹೂವು. ಜನವರಿಯಲ್ಲಿ ಬೀಜ ಬಲಿಯುತ್ತದೆ.

ಬೀಜದ ರೆಂಬೆಯನ್ನು ಒಣಗಿಸಿ ತರಿದು ಬೀಜ ಸಿಡಿಸಿ ಕೂಡಿಟ್ಟುಕೊಳ್ಳಬೇಕು. 28 ಗ್ರಾಂ (1 ಔನ್ಸ್) ಬೀಜದಿಂದ 1 ಎಕರೆಗೆ ಆಗುವಷ್ಟು ಬೀಜ ಸಿಗುತ್ತದೆ.

ಇದು ಸೌದೆಗಲ್ಲದೆ, ಇದರ ಒಳಮರ, ಚಕ್ರಗಳಿಗೆ, ಹಿಡಿಗಳಿಗೆ, ಸಣ್ಣ ಕೈ ಮುಟ್ಟುಗಳಿಗೆ ಒದಗುತ್ತದೆ. ಈಚೆಗೆ ಈ ಮರವನ್ನು ಕಾಗದ ಮತ್ತು ರೇಯಾನ್ ದಾರವನ್ನು ತಯಾರು ಮಾಡಲು ಅನೇಕ ಕಡೆ ಬೆಳಸುತ್ತಿದ್ದಾರೆ.

ಈ ಮರದ ರೂಪಕ್ಕೆ 83 ನೆಯ ಚಿತ್ರ ನೋಡಿ.

52 **ಗೋರಂಟಿ** (ಮದರಂಗಿ) *Lawsonia inermis* Linn.



ಚಿತ್ರ : 44. ಗೋರಂಟಿ

ಇದು ಮರ ಅನ್ನುವುದಕ್ಕಿಂತ ದೊಡ್ಡ ಪೊದೆಯೆನ್ನಬೇಕು. ಇದರ ಒಳಮರವನ್ನು ಕೈಮುಟ್ಟುಗಳ ಹಿಡಿಗಳಿಗೆ ಮತ್ತು ಇತರೆ ಚಿಲ್ಲರೇ ಕೆಲಸಕ್ಕೆ ಬಳಸಿಕೊಳ್ಳಬಹುದು.

ಇದನ್ನು ಬೇಲಿಗಳಲ್ಲಿ ಹಾಕಬಹುದು. ಇದರ ಮುಖ್ಯ ಉಪಯೋಗ, ದೇಹಾಲಂಕಾರಕ್ಕಾಗಿ. ಇದರ ಎಲೆಗಳನ್ನು ಜಜ್ಜಿ ಉಗುರುಗಳಿಗೆ ಹಚ್ಚುತ್ತಾರೆ; ಕೆಂಪಾಗುತ್ತದೆ. ಇದನ್ನು ಉತ್ತರ ಭಾರತದಲ್ಲಿ ಹೆಂಗಸರು ತಮ್ಮ ಹಸ್ತ ಮತ್ತು ಪಾದಗಳನ್ನು ಸಿಂಗರಿಸಿಕೊಳ್ಳಲು ಬಳಸುತ್ತಾರೆ. ಅವರು ಇದನ್ನು 'ಮೆಹಂದಿ' ಎಂದು ಕರೆಯುತ್ತಾರೆ. ಇದಕ್ಕಾಗಿ ಎಲೆಗಳನ್ನು ಸುಣ್ಣ ಅಥವಾ ಕಾಚುಪಿನೊಂದಿಗೆ ಕುಟ್ಟಿ ರಾತ್ರಿಯ ವೇಳೆ ಉಗುರು ಮತ್ತು ಕೈಕಾಲುಗಳಿಗೆ ಬಳಿದುಕೊಳ್ಳುತ್ತಾರೆ. ಈ ಕೆಂಪು ಸ್ವಲ್ಪ ಕಾಲ ನಿಲ್ಲುತ್ತದೆ. ಇದನ್ನು ಹೆಚ್ಚಾಗಿ ಮುಸಲ್ಮಾನ ಹೆಂಗಸರು ಉಪಯೋಗಿಸುತ್ತಾರೆ.

ಇದರ ಹೂವು ಕೆನೆಬಣ್ಣ; ಸುವಾಸನೆ. ಇದನ್ನು, ಸುಗಂಧ ದ್ರವ್ಯಗಳನ್ನು ತಯಾರುಮಾಡಲು ಉಪಯೋಗಿಸುತ್ತಾರೆ.

ಇದರ ಎಲೆ, ತೊಗಟೆ ಮತ್ತು ಹೂವು ಔಷಧಿ. ಮೇ ಜೂನ್ ತಿಂಗಳಲ್ಲಿ ಹೂವು. ಹೊಸ ಎಲೆ ಫೆಬ್ರುವರಿ ಮಾರ್ಚಿಯಲ್ಲಿ.

ಇದನ್ನು ಬೀಜ ನೆಟ್ಟು ಬೆಳೆಸಿಕೊಳ್ಳಬಹುದು.

53 **ಹೊಳೆ ದಾಸವಾಳ** (ಚಿಲ್ಲ, ಚಲ್ಲ, ಚಲ್ಲುಮರ) *Lagerstroemia speciosa* (Linn.) Pers.

ಬಹಳ ಅಲಂಕಾರದ ಮರ. ಇದರ ಹೂವು ಬಲು ಚೆಂದ. ಆದುದರಿಂದಲೇ ಇದನ್ನು 'ಭಾರತದ ಹೆಮ್ಮೆ' ಎಂದು ಕರೆಯುತ್ತಾರೆ. ಪಶ್ಚಿಮಘಟ್ಟದಲ್ಲಿ ಸಾಮಾನ್ಯ. ಇತರ ಕಡೆ ಅಲಂಕಾರದ ಮರವಾಗಿ ಬೆಳೆಸುತ್ತಾರೆ. ಇದು ನದಿ, ಹೊಳೆ ದಡಗಳಲ್ಲಿ, ಕೆಳ ಭೂಮಿಗಳಲ್ಲಿ ಬೆಳೆಯುವುದರಿಂದ ಇದಕ್ಕೆ ಹೊಳೆದಾಸವಾಳ ಎಂದಿದ್ದಾರೆ.

ಇದು ಸುಮಾರು ದೊಡ್ಡ ಮರ. 18 ಮೀಟರ್ (60ಅಡಿ) ಎತ್ತರಕ್ಕೂ ಬೆಳೆದಿರುವುದುಂಟು. ನೆತ್ತಿ ದುಂಡು. ನಯವಾದ ಹಳದಿ ಕಂದಿನ ತೊಗಟೆ. ಫೆಬ್ರವರಿ – ಮಾರ್ಚಿಯಲ್ಲಿ ಎಲೆಕೆಂಪೇರಿ ಉದುರುತ್ತವೆ. ಎಲೆ 10 – 20 ಸೆ.ಮೀ. (4 – 8 ಅಂಗುಲ) ಉದ್ದ, 3.75 – 7.5 ಸೆ. ಮೀ. (1½ – 3ಅಂಗುಲ) ಅಗಲ. ತುದಿ ಮೊನಚು.

ಏಪ್ರಿಲಿನಿಂದ ಜೂನಿನ ತನಕ ನೀಲಿಗೆಂಪಿನ ಬೆಡಗಿನ ಹೂವುಗಳು, ಗೊಂಚಲು ಗೊಂಚಲಾಗಿ ಬಿಡುತ್ತದೆ. ಹೂವಿನಿಂದ ತುಂಬಿದಾಗ ಈ ಮರದ ಸೊಬಗು ವರ್ಣನಾತೀತ.

ಕಾಯಿಗಳು ದುಂಡು. ಬೀಜ ಹಗುರ ; ರೆಕ್ಕೆ ಇರುತ್ತದೆ.



ಚಿತ್ರ : 45. ಹೊಳೆದಾಸವಾಳದ ರೆಂಬೆ, ಎಲೆ, ಹೂವು

ಇದರ ಒಳಮರಕ್ಕೆ ನಮ್ಮ ಕಡೆ ಅಷ್ಟು ಪುರಸ್ಕಾರವಿಲ್ಲ. ಆದರೆ ಬಂಗಾಳ, ಅಸ್ಸಾಮ್ ಈ ಕಡೆ ಜಾರೂಲ್ ಎಂಬ ಹೆಸರಿನ ಈ ಮರವನ್ನು ಬಹಳವಾಗಿ ಮೆಚ್ಚುತ್ತಾರೆ. ಒಳಮರದ ಬಣ್ಣ ತಿಳಿಗೆಂಪು. ತೇಗಕ್ಕಿಂತ ಹಗುರ. 0.028ಘನಮೀಟರ್ ತೂಕ 18–20 ಕೆ.ಜಿ. (1 ಘನ ಅಡಿ, 40 – 44 ಪೌಂಡು) ಗಟ್ಟಿ; ಬಲಯುತ; ಚೆನ್ನಾದ ಬಾಳಿಕೆ; ಮನೆ ಕಟ್ಟಡಕ್ಕೆ, ದೋಣಿಕಟ್ಟುವುದಕ್ಕೆ, ಗಾಡಿಗಳಿಗೆ, ಸೈನ್ಯದಪೆಟ್ಟಿಗೆಗಳಿಗೆ ಇನ್ನೂ ಇತರ ಕೆಲಸಗಳಿಗೆ ಈ ಮರ ಯೋಗ್ಯ. ನೀರಿನಲ್ಲಿಯೂ ಬಾಳಿಕೆ.

ಇದರ ಒಳ ತೊಗಟೆಯಿಂದ ಕಚ್ಚಾ ನಾರು ತೆಗೆಯುತ್ತಾರೆ. ಇದರ ಹಣ್ಣನ್ನು ಕೆಲವೆಡೆ ತಿನ್ನುತ್ತಾರೆ. ತೊಗಟೆ, ಎಲೆ, ಬೇರು ಔಷಧಿಗಾಗಿ ಒದಗಿ ಬರುತ್ತವೆ.

ಈ ಮರಕ್ಕೆ ನೀರಿನ ವಸತಿ ಇರಬೇಕು. ಇದನ್ನು ಕತ್ತರಿಸಿದರೂ ಚಿಗುರುತ್ತದೆ.

ಇದನ್ನು ಬೀಜ ಒಟ್ಲು ಹಾಕಿ. ಸಸಿಗಳನ್ನು ಕಿತ್ತು, ನೆಟ್ಟು ಬೆಳಸಿಕೊಳ್ಳಬಹುದು. ಮೊಳೆಯುವ ಬೀಜ ಸಿಗುವುದು ಕಷ್ಟ. ಇದಕ್ಕಾಗಿ, ಡಿಸೆಂಬರ್–ಜನವರಿಯಲ್ಲಿ ಚೆನ್ನಾಗಿ ಬಲಿತ ಹಣ್ಣುಗಳನ್ನು ಆರಿಸಿ, ಒಣಗಿಸಬೇಕು. ಬೀಜ ಸಿಡಿಯುತ್ತದೆ. ಈ ಬೀಜಗಳನ್ನು ಒಟ್ಲು ಹಾಕಬೇಕು.

ಇದರ ಬೆಳವಣಿಗೆ ಮೊದಲನೆಯ ವರ್ಷ ನಿಧಾನ. ಅನಂತರ ವೇಗ ಬೆಳೆಯುತ್ತದೆ.

ಸಾಲು ಮರಗಳಾಗಿ, ಅಲಂಕಾರದ ಮರಗಳಾಗಿ ಈ ಮರವನ್ನು ಹಾಕಬಹುದು.


54 ನಂದಿ. (ಬೋಳಂದರು. ಬೆಲ್ಮತ್ತಿ.) *Lagerstroemia lanceolata* Wall. ex Wt. Arn.

ಇದು ಸರ್ಕಾರದ ಮೀಸಲು ಮರ. ಕಟ್ಟಡಗಳಿಗೆ, ಪೀಠೋಪಾಸನಗಳಿಗೆ, ಗಾಡಿಗಳಿಗೆ, ಗಾಣಗಳಿಗೆ, ಯೋಗ್ಯವಾದ ಮರ.

ಇದು ಮಲೆನಾಡಿನಲ್ಲಿ, ಅದರಲ್ಲೂ ಕೊಡಗಿನಲ್ಲಿ, ಹೆಚ್ಚಾಗಿ ಬೆಳೆಯುವ ಮರ. ಇದಕ್ಕೆ ಹೆಚ್ಚು ಮಳೆ ಬೇಕು. ಅದಕ್ಕೋಸ್ಕರವೇ ವರ್ಷಕ್ಕೆ 185 – 250 ಸೆ. ಮೀ. (75 – 100 ಅಂಗುಲ) ಮಳೆ ಬೀಳುವ ಘಟ್ಟ ಪ್ರದೇಶದಲ್ಲಿ ಇದನ್ನು ವಿಶೇಷವಾಗಿ ಕಾಣಬಹುದು.

ಇದು ಸುಮಾರು ಎತ್ತರದ, ಗಾತ್ರದ ಮರ. ಬೇಸಿಗೆಯಲ್ಲಿ ಎಲೆ ಉದುರಿಸುತ್ತದೆ. ಈ ಮರದ ತೊಗಟೆ ಬಿಳುಪು; ಮೃದು; ನಯ; ಚಕ್ಕೆ ಎದ್ದು ಉದುರುತ್ತದೆ.

ಎಲೆಯ ತಳ ಬೆಳ್ಳಗಿರುತ್ತದೆ. ಹೂವು ಗುಲಾಬಿ ಬಣ್ಣದ್ದು.



ಚಿತ್ರ : 46. ನಂದಿಯ ರೆಂಬೆ, ಎಲೆ, ಕಾಯಿ

ಒಳಮರ ಹಳದಿ ಕಂದು ; ಮಧ್ಯದಲ್ಲಿ ಕೆಂಪು ; ಎಳೆಗಳು ಕ್ರಮವಾಗಿರುತ್ತವೆ. ತೇಗಕ್ಕಿಂತ ಸ್ವಲ್ಪ ಹಗುರ ; 0.028 ಘನಮೀಟರ್ 18–22 ಕೆ. ಜಿ. (1 ಘನಅಡಿ, 40 – 48 ಪೌಂಡು) ತೂಗುತ್ತದೆ. ನಾರುಗಟ್ಟಿ. ಪುಟವೇಳುವ ಮರ. ನಂದಿದೂಲಗಳು ಬಹಳ ಬಲಯುತವಾದವು ; ಬಹಳ ಬಾಳಿಕೆ. ಹಿಂದೆ ಇವನ್ನು ಅರಮನೆಗಳಲ್ಲೂ ಉಪಯೋಗಿಸುತ್ತಿದ್ದರು. ಚೆನ್ನಾಗಿ ಹದ ಮಾಡಬಹುದು ; ಆದರೆ, ತೇವ ತಗುಲಿದರೆ ಬಾಳಿಕೆ ಕಡಿಮೆಯಾಗುತ್ತದೆ.

ಇತ್ತೀಚೆಗೆ ಆಟದ ದಾಂಡುಗಳನ್ನು – ಬ್ಯಾಟುಗಳನ್ನು ತಯಾರಿಸಲು ಯೋಗ್ಯ

ವಾದ ಮರವೆಂದು ತಿಳಿದುಬಂದಿದೆ.

ಇದನ್ನು ಹೆಚ್ಚು ಮಳೆ ಬೀಳುವ ಕಡೆ ಬೀಜ ನೆಟ್ಟು ಬೆಳೆಸಬಹುದು.

55 ಚನ್ನಂಗಿ. (ಚೆನ್ನಂಗಿಮರ, ಚನಿಂಗೆ) *Lagerstroemia parviflora* Roxb.

ಇದು ಹೆಸರೆತ್ತಿದ ಸಂದಿ ಮತ್ತು ಹೊಳೆ ದಾಸವಾಳದ ಹತ್ತಿರದ ನೆಂಟ. ಮೈಸೂರಿನಲ್ಲಿ, ಅದರಲ್ಲೂ ಬಯಲು ಸೀಮೆಯಲ್ಲಿ, ಇದು ಸಣ್ಣಮರ. ಆದರೆ ಉತ್ತರ ಭಾರತದ ಕೆಲವೆಡೆ (ಪಶ್ಚಿಮ ಹಿಮಾಲಯದಲ್ಲಿ) ಸುಮಾರು 18 ಮೀಟರ್ (60 ಅಡಿ) ಎತ್ತರಕ್ಕೆ ಬೆಳೆಯುತ್ತದೆ. ಮೈಸೂರಿನಲ್ಲಿ ಗುಡ್ಡಗಾಡುಗಳಲ್ಲಿ, ಪೂರ್ವ ಘಟ್ಟಗಳಲ್ಲಿ ಸುಮಾರು ಚೆನ್ನಾಗಿಯೇ ಬೆಳೆಯುತ್ತದೆ.

ಇದರ ಒಳಮರ ತಿಳಿಬೂದಿ: ಕೆಂಪುಛಾಯೆ; ಈ ಒಳಮರದ ಎಳೆಗಳು ನೇರವಾಗಿರುವುದರಿಂದ, ನೇಗಿಲಿನ ಈಸು ಮುಂತಾದುವುಗಳಿಗೆ ಬಹಳ ಯೋಗ್ಯ. ಈ ಮರ ಗಟ್ಟಿಯಾಗಿರುವುದರಿಂದ ಮತ್ತು ಪುಟ ಕೊಡುವುದರಿಂದ ಅನೇಕ ವ್ಯವಸಾಯದ ಮುಟ್ಟುಗಳಿಗೆ ಯೋಗ್ಯ; ಬಾಳಿಕೆ ಜಾಸ್ತಿ. ಈ ಮರದ ತೂಕ : 0.028 ಘನಮೀಟರ್‌ಗೆ ಸುಮಾರು 20 – 27 ಕಿ. ಜಿ. (1 ಘನಅಡಿ, 44 – 60 ಪೌಂಡು) ಇದನ್ನು ರೈಲ್ವೆ ಸ್ಲೀಪರಿಗಾಗಿಯೂ ಬಳಸುತ್ತಾರೆ.

ಇದರ ತೊಗಟೆ, ಬೂದಿಕೆಂಪು. ಇದರಿಂದ ನಾರನ್ನು ತೆಗೆಯಬಹುದು. ಅಲ್ಲದೆ ಗೋಂದು, ಚರ್ಮ ಹದಮಾಡುವ ಒಗಚು ಮತ್ತು ಬಣ್ಣ ಸಿಗುತ್ತದೆ. ಇದರ ಗೋಂದನ್ನು ತಿನ್ನಬಹುದು.

ಇದರ ಎಲೆ ಸುಮಾರು 7.5–17.5 ಸೆ.ಮೀ (3–5 ಅಂಗುಲ) ಉದ್ದ, 3.75–4.75 ಸೆಂ.ಮೀ. ($1\frac{1}{2}$–$1\frac{3}{4}$ ಅಂಗಲ) ಅಗಲ. ಮೇಲ್ಭಾಗ ಹೊಳಪು ; ತಳಬಾಗದಲ್ಲಿ ತುಪ್ಪಳ. ಹೂವು ಬಿಳಪು : ಕಾಯಿ ದುಂಡು.

ಈ ಮರದ ಮೇಲೆ ಕೆಲವೆಡೆ ಟಸ್ಸಾರ್ ರೇಷ್ಮೆ ಹುಳುಗಳನ್ನು ಸಾಕುತ್ತಾರೆ.

ಇದು ನಿಧಾನವಾಗಿ ಬೆಳೆಯುವ ಮರ. ಇದನ್ನು ಹಗುರವಾದ, ನೀರು ಬಸಿಯುವ ಮಣ್ಣುಗಳಲ್ಲಿ ಬೀಜ ಊರಿ ಬೆಳೆಸಬೇಕು. ನೀರು ತಂಗುವ ಕಡೆ ಬೆಳವಣಿಗೆ ಚೆನ್ನಾಗಿರುವುದಿಲ್ಲ.

56 ಅಂಕೋಲೆ (ಅಂಕಲಿಗೆ, ಅಸ್ಪೊರಳಿ) *Alangium salvifolium* (Linn. f.) Wang.

ಇದು ಉತ್ತಮವಾದ ಸೌದೆಯನ್ನು ಕೊಡುವ ಮರ. ಆದರೆ, ಸಣ್ಣ ಮರ. ಹೆಚ್ಚು ಸೌದೆ ಸಿಗದು. ಕೆಲವೆಡೆ ಇದು ಪೊದೆಯಾಗಿ ಬೆಳೆಯುವುದೂ ಉಂಟು. ಇದರ ಒಳಮರ ಗಾಣಗಳಿಗೆ, ಒನಕೆ ಮುಂತಾದುವಕ್ಕೆ ಬಹಳ ಒಪ್ಪು. ಇದರಿಂದ



ಚಿತ್ರ : 47. ಅಂಕೋಲೆಯ ರೆಂಬೆ, ಹೂವು, ಕಾಯಿ

ದನದ ಗಂಟೆಗಳನ್ನು ಮಾಡುತ್ತಾರೆ; ಒಳ್ಳೆಯ ನಾದವನ್ನು ಕೊಡುತ್ತದೆ. ಈ ಕಾರಣದಿಂದಲೇ ಈ ಮರ ಸಂಗೀತವಾದ್ಯಗಳನ್ನು ಮಾಡಲು ಬಹಳ ಒಪ್ಪು. ಕೆತ್ತನೆ ಕೆಲಸಕ್ಕೂ ಒದಗುತ್ತದೆ.

ಇದರ ಬೇರಿನ ಚಕ್ಕೆ ಸುಗಂಧ : ಇದನ್ನು ವೈದ್ಯರು ಭೇದಿಗೆ, ವಾಂತಿಗೆ, ಹೊಟ್ಟೆಹುಳ ತೆಗೆಯುವುದಕ್ಕೆ, ಕೆಲವು ಬಗೆಯ ಚರ್ಮವ್ಯಾಧಿಗಳಿಗೆ ಉಪಯೋಗಿಸುತ್ತಾರೆ. ಇದರ ಹಣ್ಣನ್ನು ತಿನ್ನಬಹುದು ; ಆದರೆ ಹುಳಿ. ಇದರ ಹಣ್ಣು, ಎಲೆ, ಮರದ ಎಲ್ಲಾ ಭಾಗಗಳು ಔಷಧಿಗೆ ಒದಗುತ್ತವೆ.

ಇದು ಚಿಕ್ಕಮರ ಅಥವಾ ಪೊದೆಯಾಗಿರುವುದರಿಂದ ಮತ್ತು ಮುಳ್ಳು ಇರುವುದರಿಂದ ಇದನ್ನು ಬೇಲಿಗಳಿಗೂ ಹಾಕಬಹುದು. ಇದನ್ನು ಆಗಾಗ್ಗೆ ತರಿಯುತ್ತಿರಬಹುದು ; ಚೆನ್ನಾಗಿ ಮರ ಚಿಗುರಿ ಬೆಳೆಯುತ್ತದೆ.

ಇದರ ಒಳಮರದ ಹೊರಭಾಗ ಸ್ವಲ್ಪ ತಿಳಿಹಳದಿ; ಒಳಭಾಗ ಕಂದು ; ಗಟ್ಟಿ ; ಬಾಳಿಕೆ ; ಇದರ ಭಾರ ಸುಮಾರು ಗೊಬ್ಬಳಿಯದಷ್ಟೆ. 0.028 ಘನಮೀಟರ್

22½–24½ ಕೆ.ಜಿ. (1 ಘನಅಡಿ, 50–54 ಪೌಂಡು) ತೂಗುತ್ತದೆ. ಚೆನ್ನಾಗಿ ಹದ ಮಾಡಿದರೆ ಚಿತ್ತಾರವಾಗಿ ಅಲಂಕಾರವಾಗಿ ಇರುತ್ತದೆ. ಹಿತವಾದ ಗಂಧ; ಮೈ ನಯ ಮತ್ತು ಹೊಳಪು; ಸುಲಭವಾಗಿ ಮೆರಗು ಹಿಡಿಯುತ್ತದೆ. ಕೊಟ್ಟಣ, ಒನಕೆ ಮತ್ತು ಗಾಣಗಳಿಗೆ ಅನುಕೂಲ.

ಹೂವಿನ ಕಾಲದಲ್ಲಿ ಎಲೆ ಸ್ವಲ್ಪ ಉದುರುತ್ತದೆ. ಮಿಕ್ಕೆಲ್ಲ ಕಾಲಗಳಲ್ಲಿಯೂ ಎಲೆಗಳಿಂದ ಕೂಡಿರುತ್ತದೆ. ಇದರ ಹೂವು ಬಿಳಿ ಹಸಿರು; ಸುವಾಸನೆ, ಹೂವಿನಿಂದ ತುಂಬಿದಾಗ ಈ ಮರ ಚೆನ್ನಾಗಿಯೇ ಕಾಣುತ್ತದೆ. ಫೆಬ್ರವರಿ–ಏಪ್ರಿಲಿನಲ್ಲಿ. ಜೂನ್-ಜುಲೈನಲ್ಲಿ ಹಣ್ಣು ಬಲಿಯುತ್ತದೆ.

ಇದನ್ನು ಬೀಜಗಳಿಂದಲೋ, ಸಣ್ಣ ರೆಂಬೆ ತುಂಡುಗಳಿಂದಲೋ ಬೆಳೆದುಕೊಳ್ಳಬೇಕು. ಮರದ ತಲೆ ಕತ್ತರಿಸಿದಾಗ ಪಕ್ಕಗಳಿಂದ ಅನೇಕ ಚಿಗುರುಗಳು ಒಡೆಯುತ್ತವೆ. ಇವನ್ನು ನೆಟ್ಟು ಬೆಳೆಯಿಸಿಕೊಳ್ಳಬಹುದು.

ಇದು ಬೇಗ ಬೆಳೆಯುವ ಮರವಲ್ಲ. ಆದುದರಿಂದ ಇದನ್ನು ಹಾಕಿದವರು ಸ್ವಲ್ಪ ತಾಳ್ಮೆಯಿಂದ ಇರಬೇಕು.

57 ಕದಂಬ (ಕದಂಬ ವೃಕ್ಷ. ಕಡವಾಲಮರ, ಕೊಡೆಯಾಲ, ದಾರು ಕದಂಬ, ಎತ್ತರದ ಕಡಹದ ಮರ, ಕಡವ, ಕಡವಳ) *Anthocephalus cadamba* (Roxb.) Miq.

ಕೃಷ್ಣ ರಾಧೆಯೊಡನೆ ಕ್ರೀಡೆಯಾಡುತ್ತಿದ್ದ ವನದ ವೃಕ್ಷವೇ ಕದಂಬ. ಮಲೆನಾಡಿನಲ್ಲಿ ಸುಮಾರು 9–12 ಮೀಟರ್ (30-40 ಅಡಿ) ಎತ್ತರ ಹಾಗೂ ಸುಮಾರು 1.5 – 2.5 ಮೀಟರ್ (5–8 ಅಡಿ) ಸುತ್ತಳತೆಗೆ ಬೆಳೆಯುವ ಸುಲಕ್ಷಣವಾದ ಮರ. ತಾಳು ನೇರು; ರೆಂಬೆಗಳು ಸ್ವಲ್ಪ ಜೋತಿರುತ್ತವೆ. ನೆತ್ತಿ ಅಗಲಕ್ಕೆ ಹರಡಿ, ದಟ್ಟವಾದ ನೆರಳನ್ನು ಕೊಡುತ್ತದೆ. ಎಳೆಯ ಮರ ಮಾತ್ರ ಅಡಕವಾಗಿದ್ದು ಶಂಕುವಿನ ಆಕಾರಕ್ಕೆ ಇರುತ್ತದೆ.

ಇದರ ತೊಗಟೆ ನರೆ ಬಣ್ಣ; ದೊಡ್ಡ ಮರದಲ್ಲಿ ಸ್ವಲ್ಪ ಕಪ್ಪು ನರೆ; ನಯ; ಸೀಳಿರುತ್ತದೆ; ತೊಗಟೆ ಸುಲಿಯುತ್ತದೆ.

ಎಲೆ ಅಂಡಾಕೃತಿ; ಹೊಳೆಯುತ್ತಿರುತ್ತದೆ; ತಳಭಾಗದಲ್ಲಿ ತುಪ್ಪಳವಿರುತ್ತದೆ.

ಹೂವು ಜೂನ್ – ಆಗಸ್ಟ್‌ನಲ್ಲಿ; ದುಂಡು; ಕಿತ್ತಳೆ ಬಣ್ಣದ ಚೆಂಡು; ಸುವಾಸನೆ; ರಾತ್ರಿ ಇನ್ನೂ ಸುವಾಸನೆ.

ಹಣ್ಣು ಸಣ್ಣ ಕಿತ್ತಳೆಯಂತೆ; ದಪ್ಪ ಅಷ್ಟೆ; ಮಳೆಗಾಲದ ಕೊನೆಯಲ್ಲಿ ಬಲಿಯುತ್ತದೆ; ಒಳ್ಳೆಯ ವಾಸನೆ; ಸ್ವಲ್ಪ ಹುಳಿ; ಪಕ್ಷಿಗಳಿಗೆ ಬಹಳ ಪ್ರಿಯ; ಹಸಿಯಾಗಿಯೋ ಬೇಯಿಸಿಯೋ ತಿನ್ನಬಹುದು.

ಒಳಮರ ಬಿಳಪು; ಹಳದಿ ಛಾಯೆ; ಮೃದು; ಎಳೆಗಳು ದೂರ ದೂರಕ್ಕೆ;

ಆದರೆ ಕ್ರಮಬದ್ಧವಾಗಿರುತ್ತವೆ: ಸ್ವಲ್ಪ ಹಗುರವೆನ್ನಬಹುದು. 0.028 ಘನ ಮೀಟರ್ ಸುಮಾರು 15½–18 ಕೆ. ಜಿ. (ಒಂದು ಘನ ಅಡಿ 34–40 ಪೌಂಡು) ತೂಗುತ್ತದೆ ; ಆದರೆ ಬೇಗ ಸೀಳುತ್ತದೆ.

ಚಕ್ಕೆ, ಔಷಧಿ ; ಹಣ್ಣು ಕೂಡ ಔಷಧಿಗೆ ಆಗುತ್ತದೆ.

ಇದನ್ನು ದೊಂಬರು ಕಂಬವಾಗಿ ಬಳಸುವುದು ಹೆಚ್ಚು ; ಆದರೂ ಗಟ್ಟಿ ಮರವಲ್ಲ ; ಕಟ್ಟಡಕ್ಕೆ ಅಷ್ಟು ಅನುಕೂಲವಿಲ್ಲ. ಈಚೆಗೆ ಇದರಿಂದ ಟೀ ಪೆಟ್ಟಿಗೆ ಗಳನ್ನು ಮಾಡುತ್ತಿದ್ದಾರೆ ; ಕಾಗದದನ್ನು ಮಾಡಬಹುದು ; ತೊಲೆ ರಿಪೀಸುಗಳಿಗೂ ಆಗುತ್ತದೆ ; ಹಲಗೆ ಕುಯ್ಯಬಹುದು.

ಎಲೆಗಳನ್ನು ದನಗಳಿಗೆ ತಿನ್ನಿಸಬಹುದು.

ಈ ಮರಕ್ಕೆ ತೇವವಿರಬೇಕು ; ಇಲ್ಲದಿದ್ದರೆ ಚೆನ್ನಾಗಿ ಬೆಳೆಯುವುದಿಲ್ಲ. ಬಹಳ ಸುಲಕ್ಷಣ ಮರ : ಅಲಂಕಾರ ; ದೇವಸ್ಥಾನಗಳ ಪಕ್ಕದಲ್ಲಿ ಹಾಕುತ್ತಾರೆ.

ಇದನ್ನು ಬೀಜಗಳಿಂದಲೂ ಹಾಗೂ ಮರಿಸಸಿಗಳಿಂದಲೂ ಬೆಳೆಸಬಹುದು.

ಬೀಜಗಳನ್ನು ಹಸನಾದ ಪಾತಿಯಲ್ಲಿ ಮಾರ್ಚಿ - ಮೇ ತಿಂಗಳಿನಲ್ಲಿ ಹುಯ್ದು, ಸಣ್ಣ ಸಸಿಗಳನ್ನು ಬುಟ್ಟಿಗಳಿಗೆ ವರ್ಗಾಯಿಸಿ ಅನಂತರ ಬುಟ್ಟಿ ಸಮೇತ ನೆಡಬಹುದು.

ಈ ಮರದ ರೂಪಕ್ಕೆ 85 ನೆಯ ಚಿತ್ರವನ್ನು ನೋಡಿ.

58 ಹೆತ್ತೇಗ (ಅರಿಶಿನ ತೇಗ, ಎಟ್ಟೆಗ, ಎತ್ತಾಗ, ಹೆದ್ದ, ಮೊಡ್ಡಕಡಗ, ಹೆದ್ದೆ, ಬಾಚಣಿಗೆ) *Adina cordifolia* (Roxb.) Hook. f. ex Brandis.

ಇದು ಪಶ್ಚಿಮ ಘಟ್ಟದ ಕಾಡು ಮತ್ತು ಅದರ ಪಕ್ಕದ ಬಯಲು ಸೀಮೆಯಲ್ಲಿ ಬೆಳೆಯುವ ಮರ ; ಪೂರ್ವ ಘಟ್ಟದಲ್ಲಿಯೂ ಬೆಳೆಯುತ್ತದೆ.

ಇದು ಎತ್ತರಕ್ಕೆ, ಗಾತ್ರಕ್ಕೆ ಬೆಳೆಯುವ ಮರ. ತೊಗಟೆ ನರೆ ಬಣ್ಣ.

ಎಲೆ ಹೃದಯಾಕಾರ ; ದಪ್ಪ, ಚಕ್ಕಳದಂತೆ. ಎಲೆ ಉದುರುತ್ತದೆ.

ಇದರ ಒಳಮರ ಹಳದಿ ; ಕುಯ್ದ ಮೇಲೆ ಕೆಂಪು ಕಂದು ಬಣ್ಣಕ್ಕೆ ತಿರುಗುತ್ತದೆ ; ತೂಕ, 0.028 ಘನಮೀಟರ್ 19–22½ ಕೆ. ಜಿ. (ಒಂದು ಘನ ಅಡಿ, 42–50 ಪೌಂಡು) ಒಳಮರ ಒಣಗಿದ ಮೇಲೆ ಸ್ವಲ್ಪ ಡೊಂಕಾದರೂ, ಸೀಳಿದರೂ, ಚೆನ್ನಾಗಿ ಹದಮಾಡಬಹುದು ; ಒಳ್ಳೆಯ ಪಾಲಿಷ್ ತೆಗೆದುಕೊಳ್ಳುತ್ತದೆ; ಸುಮಾರು ಬಾಳಿಕೆ ; ನೀರಿನಲ್ಲಿ ಹೆಚ್ಚು ಬಾಳಿಕೆ ; ಆದುದರಿಂದ ಬೆಸ್ತರು ಇದರ ಗೂಟವನ್ನು ಬಹಳ ಒಪ್ಪುತ್ತಾರೆ. ಇದನ್ನು ಚೆನ್ನಾಗಿ ಕೊರೆಯಬಹುದು. ಬಾಚಣಿಗೆಗೆ ಬಹಳ ಒಪ್ಪು. ಇದು ಸಣ್ಣ ಡಬ್ಬಿ, ಪೆಟ್ಟಿಗೆಗಳು, ಪೀಠಾಸನಗಳು, ಮುಟ್ಟುಗಳ ಹಿಡಿ ಮುಂತಾದವಕ್ಕೆ ಸೂಕ್ತ.

ಚಕ್ಕೆ ಕಹಿ; ಜ್ವರಕ್ಕೆ ಕೊಡುತ್ತಾರೆ. ಇದನ್ನು ಹುಣ್ಣು ರಣವಾಗದಿರಲು ಬಳಸುತ್ತಾರೆ.

ಇದನ್ನು ಬೀಜ ಊರಿಯೋ, ಒಟ್ಲು ಹಾಕಿ ಸಸಿ ಎಬ್ಬಿಸಿಯೋ, ಮರಿಸಸಿ ಗಳಿಂದಲೋ, ತುಂಡುಗಳನ್ನು ಊರಿಯೋ ಬೆಳೆಸಬಹುದು.

ಬೀಜವನ್ನು 1.75 ಮೀಟರ್ (6 ಅಡಿ) ಅಂತರದಲ್ಲಿ ನೆಡಬೇಕು. ಬಿತ್ತುವಾಗ ಸ್ವಲ್ಪ ಬೂದಿಯೊಡನೆ ಬೆರೆಸುವುದು ಒಳ್ಳೆಯದು.

ಒಟ್ಲನ್ನು ದಪ್ಪಮರಳಿನ ಮಡಿಯಲ್ಲಿ ಹುಯ್ಯಬೇಕು. ಮಡಿಯ ಮೇಲೆ ಪುರಲೆಸತ್ತೆ ಸುಟ್ಟು ಬೂದಿಯೊಡನೆ ಬೆರೆಸುವುದು ಒಳ್ಳೆಯದು, ಬಿತ್ತಿದ ಮೇಲೆ ಹುಲ್ಲು ಹೊದಿಸಿ, ತುಂತುರುದಾನಿಯಿಂದ ನೀರು ಹಾಕುತ್ತ ಕಳೆ ತೆಗೆಯುತ್ತ ಕಾಪಾಡ ಬೇಕು.

25 ಸೆಂ.ಮೀ. (10 ಅಂಗುಲ) ಎತ್ತರದ ಸಸಿಗಳನ್ನು ನೆಡಬೇಕು.

ಇದು ಚೆನ್ನಾಗಿ ಬೆಳೆಯುವುದು ಆಳವಾದ ಮಣ್ಣುಗಳಲ್ಲಿ ಹಾಗೂ 180 ರಿಂದ 250 ಸೆಂ.ಮೀ. (75-100 ಅಂಗುಲ) ಮಳೆ ಬೀಳುವ ಕಡೆ.

ಈ ಮರದ ರೂಪಕ್ಕೆ 85 ನೆಯ ಚಿತ್ರ ನೋಡಿ.

59 ಇಪ್ಪೆಮರಗಳು

(i) ಇಪ್ಪೆ (ಹಿಪ್ಪೆ; ದೊಡಿಪೆ) *Madhuca longifolia* (Linn.) Macbride.

ಇದು ಭಾರತದ ಉತ್ತರ ಭಾಗದಲ್ಲಿ ಕಾಡು ಮರ. ನಮ್ಮ ಬಯಲು ಸೀಮೆ ಯಲ್ಲಿ ಸಾಮಾನ್ಯವಾಗಿ ತೋಪುಗಳಲ್ಲಿ ಸಾಲುಮರವಾಗಿ ಬೆಳೆಸುತ್ತಾರೆ.

ಈ ಮರವನ್ನು ಕಲ್ಲುನೆಲಗಳಲ್ಲಿ ಮರಳು ಮಣ್ಣಿನಲ್ಲಿ ಬೆಳೆಸಲು ಸೂಕ್ತ.

ಇದು ದೊಡ್ಡಮರ; ದಿಂಡು ಮೋಟು: ರೆಂಬೆಗಳು ಅಗಲವಾಗಿ ಹರಡುತ್ತವೆ. ನೆತ್ತಿ ದುಂಡು, ಇದರ ತೊಗಟೆ ಬೂದು ಬಣ್ಣಕ್ಕೆ ಇರುತ್ತದೆ; ಉದ್ದುದ್ದಕ್ಕೆ ಸೀಳಿರು ತ್ತದೆ. ಫೆಬ್ರುವರಿಯಿಂದ ಏಪ್ರಿಲ್ ತನಕ ಎಲೆ ಉದುರಿರುತ್ತದೆ. ಹೊಸ ಎಲೆ ಮೇ ತಿಂಗಳಲ್ಲಿ ತಳ್ಳುತ್ತದೆ. ಹೊಸ ಚಿಗುರು ಕೆಂಪಗಿರುತ್ತದೆ. ಹೂವು ಮಾರ್ಚಿ – ಏಪ್ರಿಲ್ ತಿಂಗಳಿನಲ್ಲಿ. ಜೂನ್, ಅಗಸ್ಟಿನಲ್ಲಿ ಹಣ್ಣು.

ಇದನ್ನು ಮುಖ್ಯವಾಗಿ ಹೂವಿಗಾಗಿ, ಹಣ್ಣಿಗಾಗಿ ಬೆಳೆಸುತ್ತಾರೆ. ಇದರ ಹೂವಿನ ವಾಸನೆ ಅನೇಕರಿಗೆ ಹಿಡಿಸುವುದಿಲ್ಲ; ಆದರೆ ಇದನ್ನು ಆಹಾರವಾಗಿ ಬಳಸುವ ವರಿಗೆ ಇದು ಬಲು ಒಪ್ಪು. ಇದರ ದಪ್ಪಹೂವಿನ ದಳಗಳನ್ನು ಅನೇಕ ಕಡೆ ಹಸಿ ಯಾಗಿಯೋ, ಬೇಯಿಸಿಯೋ ತಿನ್ನುತ್ತಾರೆ; ಮಿಠಾಯಿ ಮಾಡುತ್ತಾರೆ. ಇದಕ್ಕಾಗಿ, ಮರದ ತಳವನ್ನು ಕಳೆ, ಸತ್ತೆ ತೆಗೆದು, ಚೆನ್ನಾಗಿ ಗುಡಿಸಿಡುತ್ತಾರೆ. ರಾತ್ರಿ ಅರಳಿದ ಹೂವುಗಳು ಬೆಳಿಗ್ಗೆ ಬಿದ್ದಿರುತ್ತವೆ. ಅವನ್ನು ಆರಿಸಿಕೊಳ್ಳುತ್ತಾರೆ. ಇದರ ಹೂವು ಗಳು ಮನುಷ್ಯರಿಗೇ ಅಲ್ಲದೆ, ಜಿಂಕೆ ಮುಂತಾದ ಅನೇಕ ಪ್ರಾಣಿಗಳಿಗೂ ಇಷ್ಟ.

ಇದರ ಹಣ್ಣನ್ನೂ ಕೂಡ ತಿನ್ನುತ್ತಾರೆ. ಹೊರ ಭಾಗವನ್ನು ಹಸಿಯಾಗಿಯೋ, ತರಕಾರಿಯಾಗಿಯೋ, ಬೇಯಿಸಿಯೋ ಬಳಸುತ್ತಾರೆ. ಇದರ ಒಳಭಾಗವನ್ನು ಕುಟ್ಟಿ



ಚಿತ್ರ : 48. ಇಪ್ಪೆಯ ರೆಂಬೆ, ಎಲೆ, ಹೂವು, ಕಾಯಿ

ಹಿಟ್ಟು ಮಾಡಿಕೊಳ್ಳುತ್ತಾರೆ. ಬೀಜದಿಂದ ಬೆಣ್ಣೆಯಂತಿರುವ ಎಣ್ಣೆಯನ್ನು ಹಿಂಡುತ್ತಾರೆ. ಕರಿಯುವುದಕ್ಕೆ ಯೋಗ್ಯ. ಕೆಲವರು ಇದನ್ನು ತುಪ್ಪದೊಂದಿಗೆ ಬೆರೆಸಿ ದುರುಪಯೋಗ ಮಾಡುವುದೂ ಉಂಟು. ಇದರ ಹಿಂಡಿ ಒಳ್ಳೆಯ ಗೊಬ್ಬರ.

ಇದರ ಒಳಮರ ಬಹಳ ಗಟ್ಟಿ. ತೇಗಕ್ಕಿಂತಲೂ ಭಾರ; 0.028 ಘನಮೀಟರ್ ಸುಮಾರು 27 ಕೆ.ಜಿ. (1 ಘನ ಅಡಿ, 60 ಪೌಂಡ್) ತೂಗುತ್ತದೆ. ಪೀಠೋಪಾಸನಗಳಿಗೆ, ಚಕ್ರದ ಗುಂಬಗಳಿಗೆ ಒದಗುತ್ತದೆ. ಆದರೆ, ಮರದ ಹಣ್ಣು, ಹೂವು, ಬೀಜ ಬಹಳ ಉಪಯುಕ್ತವಾಗಿರುವುದರಿಂದ ಇವನ್ನು ಮರಕ್ಕಾಗಿ ಕಡಿಯುವುದು ಕಡಿಮೆ.

ಇದರ ತೊಗಟೆ, ದಿಂಡಿನ ರಸ, ಹೂವು, ಹಣ್ಣು ಅನೇಕ ಬಗೆಯ ಔಷಧಿಗಳಿಗಾಗಿ ಒದಗುತ್ತವೆ.

ಈ ಮರವನ್ನು ನೇರವಾಗಿ ಬೀಜ ಹೂಣಿ ಬೆಳೆಯಬಹುದು. ಇಲ್ಲವೇ ಒಟ್ಲು ಹುಯ್ದು, ಸಸಿ ಬೆಳೆಸಿ ನೆಡಬಹುದು. ಬೀಜವನ್ನು ಊರಿ ಬೆಳೆಸುವುದು ಮೇಲು. ಬೀಜಗಳನ್ನು ಜುಲೈ – ಆಗಸ್ಟ್ ತಿಂಗಳಿನಲ್ಲಿ ಹೂಣಿ ಅದರ ಮೇಲೆ 1.25 ಸೆ.ಮೀ. ($\frac{1}{2}$ ಅಂಗುಲ) ದಪ್ಪ ಮಣ್ಣನ್ನು ಮುಚ್ಚಬೇಕು. ಸಸಿಯೆಬ್ಬಿಸುವುದಾದರೆ ಸಣ್ಣ ಸಸಿಗಳನ್ನು ಕುಂಡಗಳಿಗೆ ವರ್ಗಾಯಿಸಿ, ಮುಂದಿನ ಮಳೆಗಾಲದಲ್ಲಿ ಹೂಣಬಹುದು. ಸಣ್ಣ ಸಸಿಗಳನ್ನು ದನಗಳಿಂದ ಕಾಪಾಡಬೇಕು.

ಸಾಲು ಮರವಾಗಿ ನೆಡುವುದಾದರೆ ಇವನ್ನು 13.5 ಮೀಟರ್ (45 ಅಡಿ) ಅಂತರದಲ್ಲಿ ಹಾಕಬೇಕು.

(ii) **ಕಾಡು ಹಿಪ್ಪೆ** *Madhuca indica* Gmel.

ಇದು ಇಪ್ಪೆಯ ಹತ್ತಿರದ ನೆಂಟ. ಗುಣ ಮತ್ತು ಉಪಯೋಗಗಳಲ್ಲಿ ಇವೆರಡೂ ಒಂದೇ ಎನ್ನಬಹುದು. ಒಂದರಲ್ಲಿ ಎಲೆ ಕಿರಿದು, ಮತ್ತೊಂದರಲ್ಲಿ ಅಗಲ.

ಈ ಮರಗಳಿಗೆ ಉತ್ತರ ಭಾರತದಲ್ಲಿ ಬಹಳ ಪ್ರಶಸ್ತಿ. ನಮ್ಮವರು, ಈ ಮರಗಳಿಂದ, ಅಲ್ಲಿಯವರು ಪಡೆಯುತ್ತಿರುವಂತೆ ಅಷ್ಟು ಪ್ರಯೋಜನಗಳನ್ನು ಪಡೆಯುತ್ತಿಲ್ಲ.

ಈ ಮರದ ಪ್ರತಿಯೊಂದು ಭಾಗವೂ ಯಾವುದಾದರೂ ಒಂದು ಉಪಯೋಗಕ್ಕೆ ಬರುವುದರಿಂದ, ನಮ್ಮ ರೈತರೂ ಕೂಡ ಈ ಮರವನ್ನು ಹೆಚ್ಚಾಗಿ, ಸಾಲುಮರವಾಗಿಯೋ, ತೋಪುಗಳಲ್ಲಿಯೋ ಬೆಳೆಸಬೇಕು.

60 ಜಗಳಗಂಟಿ ಮರಗಳು

(i) **ಜಗಳಗಂಟಿಮರ ;** (ಕಲೆನಂದಿ, ಬಿಲ್ಲುನಿಕ) *Diospyros montana* **Roxb.**



ಚಿತ್ರ : 49. ಜಗಳಗಂಟಿ ಮರದ ರೆಂಬೆ, ಎಲೆ

ಈ ಮರದಿಂದ ರೈತರಿಗೆ ಅನೇಕ ತರಹದ ಉಪಯೋಗಗಳಿದ್ದರೂ, ಇದನ್ನು ಬೆಳೆಸಲು ಅವರು ಹಿಂಜರಿಯುತ್ತಾರೆ; ಇದಕ್ಕೆ ಕಾರಣ, ಈ ಮರದ ಬಗ್ಗೆ ಇರುವ ಒಂದು ಬಗೆಯ ಅಪವಾದ; ಈ ಮರ ಮನೆಯೊಳಗಿದ್ದರೆ, ಅಥವಾ ಅದರ ಕಾಯಿಯನ್ನು ಒಳತಂದರೆ ಮನೆಯವರಲ್ಲಿ ಮನಸ್ತಾಪ, ಕಲಹಗಳು ಹುಟ್ಟಿಕೊಳ್ಳುತ್ತವೆ ಎಂಬ ನಿರಾಧಾರದ ನಂಬಿಕೆ.

ಇದು ಒಳ್ಳೆಯ ಸೌದೆಮರ. ಇದರ ಒಳಮರ ಕೆಂಪು ಹಳದಿ ಅಥವಾ ಹಳದಿ ಬಿಳುಪು; ಗಟ್ಟಿ; 0.028 ಘನ ಮೀಟರ್. ಸುಮಾರು 22 ಕೆ.ಜಿ. (1 ಘನ ಅಡಿ 46 ಪೌಂಡು) ತೂಗುತ್ತದೆ. ಇದನ್ನು ಚಾವಣಿ ತೊಲೆ (ದೂಲ) ಗಳಿಗೆ, ಪೀಠಾಸನಗಳಿಗೆ ಬಳಸಬಹುದು. ಬಡಗಿಗಳು ಮೆಚ್ಚುವ ಮರ.

ಇದು ಸಣ್ಣ ಮರ; ಆದರೆ ಹರಡಿಕೊಂಡು ಬೆಳೆಯುತ್ತೆ. ಕಪ್ಪುಕಂದು ತೊಗಟೆ, ಸಣ್ಣ ಚೂರುಗಳಾಗಿ ಎಬ್ಬುತ್ತದೆ. ಎಲೆ ಮೊನಚು; ತೆಳುವು; ತಳಭಾಗದಲ್ಲಿ ತುಪ್ಪಳ. ಬಿಳಿಹೂವು; ಬೇಸಿಗೆಯಲ್ಲಿ ಬರುತ್ತವೆ.

ಹಣ್ಣು ದುಂಡು, ಹಳದಿ; ಸುಮಾರು ಬೀಜಗಳಿರುತ್ತವೆ. ಇವು ವಿಷ. ಬೀಜ ಕಚ್ಚಲು ಒಂದು ವರ್ಷ ಬೇಕು.

ಇದು ಹೆಚ್ಚಾಗಿ ಒಣಪ್ರದೇಶಗಳಲ್ಲಿ, ಗುಡ್ಡಗಳಲ್ಲಿ, ಕಲ್ಲುನೆಲಗಳಲ್ಲಿ ಬೆಳೆಯುತ್ತದೆ. ಮೈಸೂರಿನಲ್ಲಿ ಸಾವನದುರ್ಗ, ಬನ್ನೇರುಘಟ್ಟ ಮುಂತಾದ ಕಡೆ ಹೆಚ್ಚು.

ಇದರ ಹಣ್ಣನ್ನು ಕೈ ಕುರುಗಳಿಗೆ ಬಳಸುವುಂಟು. ತೊಗಟೆಯೂ ಕೂಡ ಔಷಧಿಗೆ ಒದಗುತ್ತದೆ.

ಕತ್ತರಿಸಿದರೂ ಪುನಃ ಚಿಗುರುವ ಈ ಮರ ಬಯಲುಸೀಮೆಯಲ್ಲಿ ಸಣ್ಣ

ಮರವಾದರೂ ಮಲೆಸೀಮೆ ಅಂಚಿನಲ್ಲಿ ದೊಡ್ಡದಾಗಿ ಬೆಳೆಯುತ್ತದೆ.

ಇದನ್ನು ಬೀಜಗಳಿಂದ ಬೆಳೆಯಬಹುದು; ಅಥವಾ ಸಸಿ ಎಬ್ಬಿಸಿ 30 ಸೆಂ.ಮೀ. ಎತ್ತರದ ಸಸಿಗಳನ್ನು ನೆಡಬಹುದು. ತೋಪುಗಳಲ್ಲಿ 3 – 4.5 ಮೀಟರ್ (10–15 ಅಡಿ) ಅಂತರದಲ್ಲಿ ನೆಡುವುದು ಒಳ್ಳೆಯದು.

(ii) **ಮಲ್ಲಾಳಿ** (ಅಬನಾಸಿ ; ತುಂಬುರುಸು) *Diospyros ebenum* Koen.

ಇದು ಜಗಳಗಂಟಿ ಮರದ ಹತ್ತಿರದ ನೆಂಟ. ಇದು ಮುಖ್ಯವಾಗಿ ಮಲೆನಾಡಿನ ಮರ. ಅಲ್ಲಿ ದೊಡ್ಡದಾಗಿ ಸುಮಾರು 18–24 ಮೀಟರ್ (60–80 ಅಡಿ) ಎತ್ತರಕ್ಕೆ ಬೆಳೆಯುತ್ತದೆ. ಬಯಲುಸೀಮೆಯಲ್ಲಿ ಇದು ಕುಂಟಿತವಾಗಿ ಪೊದೆಯಾಗಿ ಬೆಳೆಯುತ್ತದೆ.

4.5-6 ಮೀಟರ್ (15-20 ಅಡಿ) ವರೆವಿಗೆ ಇದರ ತಾಳು ನೇರವಾಗಿ ಬೆಳೆಯುತ್ತದೆ.

ಇದರ ಒಳಮರ ಕಪ್ಪು ; ತೂಕ 0.028 ಘನ ಮೀಟರಿಗೆ 23½–24½ ಕೆ. ಜಿ. (1 ಘನ ಅಡಿ, 52-54 ಪೌಂಡು). ಆದರೆ ಬಾಳಿಕೆ ಕಡಿಮೆ; ಹುಳ ಬೀಳುತ್ತದೆ.

ಇದರ ಎಲೆಗಳನ್ನು ಬೀಡಿ ಕಟ್ಟುವುದಕ್ಕೆ ಬಳಸುತ್ತಾರೆ. ಮಧ್ಯಭಾರತದ ತೂಪ್ರಬೀಡಿ ಎಲೆ ಈ ಮರದ್ದೇ. ಹಣ್ಣುಗಳನ್ನು ತಿನ್ನಬಹುದು. ತೊಗಟೆ ಮತ್ತು ದೋರುಕಾಯಿನಲ್ಲಿ ಚರ್ಮ ಹದಮಾಡುವ ಒಗಚಿದೆ. ಹೂವು, ತೊಗಟೆಯನ್ನು ಔಷಧಿಗಾಗಿ ಬಳಸುತ್ತಾರೆ.

ಈ ಮರದ ರೂಪಕ್ಕೆ 86 ನೆಯ ಚಿತ್ರವನ್ನು ನೋಡಿ.

61. ಬೆಪ್ಪಾಲೆ (ಕುಡ, ಕೊಡ್ಸಿಗೆ, ಪಾಲೆ, ಹಾಲೆ, ಕೊಡಮುರಕ) *Wrightia tinctoria* R. Br.

ಇದು ಮೈಸೂರಿನಲ್ಲಿ ಅನೇಕ ಕಡೆ ಬೆಳೆಯುತ್ತದೆ. ಇದರ ಬಿಳಿ ಸುಗಂಧ ಪುಷ್ಪಗಳಿಗಾಗಿ ದೇವಸ್ಥಾನಗಳ ಪಕ್ಕದಲ್ಲಿ ಹಾಕುವುದುಂಟು.

ಚಳಿಗಾಲದಲ್ಲಿ ಎಲೆ ಉದುರಿಸುತ್ತದೆ, ಮಾರ್ಚಿ – ಏಪ್ರಿಲಿನಲ್ಲಿ ಹೊಸ ಎಲೆ ; 7.5 – 15 ಸೆಂ. ಮೀ (3 – 6 ಅಂಗುಲ) ಉದ್ದದ ಎಲೆ. ಅದೇ ಕಾಲದಲ್ಲಿ ಹೂ ಬಿಟ್ಟು ಜೂನಿನ ತನಕ ಮುಂದುವರಿಯುತ್ತದೆ. ಸಾಮಾನ್ಯವಾಗಿ ಬಿಳಪು ಅಥವಾ ತೆಳುಹಳದಿ ; ಪರಿಮಳಯುಕ್ತ ; ಗೊಂಚಲು ಗೊಂಚಲಾಗಿ ಬಿಡುತ್ತದೆ.

ಇದರ ಒಳಮರ ಬೆಳ್ಳಗಿರುತ್ತದೆ, ದಂತದಂತೆ ; ಅಥವಾ ಹಾಲಿನಂತೆ. ಅದಕ್ಕಾಗಿಯೇ ಇದನ್ನು ಪಾಲೆ, ಹಾಲೆ, ಹಾಲುಮರ ಎಂದು ಕರೆಯುವುದು. ಇದು ಸುಮಾರು ಭಾರ 0.028 ಘನ ಮೀಟರಿಗೆ 22½ ಕೆ.ಜಿ. (1 ಘನಅಡಿ, 50 ಪೌಂಡ್)




ಚಿತ್ರ : 51. ಬೆಪ್ಪಾಲೆಯ ರೆಂಬೆ, ಎಲೆ, ಹೂವು, ಕಾಯಿ

ತೂಗುತ್ತದೆ. ಇದರ ಎಳೆಗಳು ಕ್ರಮವಾಗಿರುವುದರಿಂದ ಕೊರೆಯುವುದಕ್ಕೂ ಕೆತ್ತುವುದಕ್ಕೂ ಬಹಳ ಒಪ್ಪ. ಮರ ಗಟ್ಟಿಯಾಗಿರುತ್ತದೆ. ಚೆನ್ನಪಟ್ಟಣದ ಬೊಂಬೆಗಳನ್ನು ಇದರಿಂದಲೇ ಮಾಡುತ್ತಿದ್ದರು. ವಿಗ್ರಹಗಳನ್ನು ಕೂಡ ಇದರಿಂದಲೇ ಕೆತ್ತುತ್ತಿದ್ದರು.

ಇದರ ಎಲೆ ಒಣಗಿದಾಗ ಕಪ್ಪು ತಿರುಗುತ್ತದೆ, ಇದರಿಂದ ಹಿಂದೆ ನೀಲಿಬಣ್ಣ ತೆಗೆಯುತ್ತಿದ್ದರು. ಕೆಲವೆಡೆ ಎಳೆಯ ಎಲೆ, ಕಾಯಿಗಳನ್ನು ತರಕಾರಿಯಾಗಿ ಬಳಸುತ್ತಾರೆ. ಇದರ ಚಕ್ಕೆ, ಬೀಜ ಔಷಧಿಗಾಗಿ ಒದಗುತ್ತವೆ.

ಇದನ್ನು ಬೀಜ ಊರಿ ಬೆಳಸಬೇಕು. ಈ ಮರ ಬಡಮಣ್ಣುಗಳಲ್ಲಿ ಒಣ ಪ್ರದೇಶಗಳಲ್ಲಿಯೂ ಬೆಳೆಯುತ್ತದೆ; ಆದರೆ ಬೆಳೆ ಕುಂಠಿತವಾಗುತ್ತದೆ. ಪೊದೆಯಾಗಿ ಬೆಳೆಯುವುದೂ ಉಂಟು.

62. ಸೊಳ್ಳೆ (ಚೆಳ್ಳೆ; ಕೆಂದಲ್; ಮಣ್ಣಡಿಕೆ; ಚಿಡ್ಲು, ಕೆಂಡಾಲ, ಕಾಡುಸೊಳ್ಳೆ) *Cordia dichotoma* Forst. f.



ಚಿತ್ರ: 52. ಸೊಳ್ಳೆ ಮರದ ರೆಂಬೆ, ಎಲೆ, ಹೂವು, ಕಾಯಿ

ಇದು ಸುಮಾರು 9 – 10.5 ಮೀಟರ್, (30 – 35 ಅಡಿ) ಎತ್ತರದ ಸಾಧಾರಣ ಗಾತ್ರದ ಮರ; ನೆತ್ತಿ ಹರಡಿ ಬೆಳೆಯುತ್ತದೆ; ತಾಳು ಡೊಂಕು; ತೊಗಟೆ

ಒರಟು, ಕಂದುಬಣ್ಣ; ಎಲೆಗಳೂ ಒರಟು. ಕುರೂಪಿ ಮರವಾದರೂ ಇದರ ಸಣ್ಣ ಬಿಳಿ ಹೂವುಗಳು ಪರಿಮಳಯುಕ್ತ.

ಇದರ ಹಣ್ಣು ಲೋಳೆ, ಅಂಟು. ಹಣ್ಣನ್ನು ಮಕ್ಕಳು ತಿನ್ನುವುದುಂಟು. ಮಳೆಗಾಲದಲ್ಲಿ ಬಿಡುತ್ತದೆ. ಹಣ್ಣನ್ನು ಒಣಗಿಸಿ ಔಷಧಿಯಾಗಿ ಉಪಯೋಗಿಸುತ್ತಾರೆ. ಕೆಲವೆಡೆ ಹಣ್ಣನ್ನು ಉಪ್ಪಿನಕಾಯಿಗೆ ಬಳಸುತ್ತಾರೆ.

ಇದರ ಒಳಮರ ಸುಮಾರು ಬಲವಾದದ್ದೇ; ಬೇಗ ಹದಗೊಳಿಸಬಹುದು. ತಿಳಿಗಂದು ಬಣ್ಣ; ಸ್ವಲ್ಪ ಮೃದು; ಆದುದರಿಂದ ಹುಳು ಕೊರೆಯುವುದು ಸುಲಭ; ಹೆಚ್ಚು.

ಇದನ್ನು ವ್ಯವಸಾಯದ ಮುಟ್ಟುಗಳಿಗೆ, ಕಬ್ಬಿನ ಗಾಣಗಳಿಗೆ, ದೋಣಿ ಕಟ್ಟು ವುದಕ್ಕೆ ಬಳಸುತ್ತಾರೆ. ಸೌದೆಗೂ ಆಗುತ್ತದೆ.

ಇದರ ತೊಗಟೆಯಿಂದ ನಾರನ್ನೂ ತೆಗೆಯಬಹುದು, ಹಗ್ಗಹುರಿಗಳನ್ನು ಹೊಸೆಯಬಹುದು. ಎಲೆಗಳನ್ನು ಬಣ್ಣ ಕಟ್ಟುವುದಕ್ಕೆ ಬಳಸಬಹುದು. ಎಲೆ ದನಗಳಿಗೆ ಮೇವಿನ ಸೊಪ್ಪು.

ಬರ್ಮ ದೇಶದಲ್ಲಿ ಸುರಟು (ಚುಟ್ಟಾ) ಸುತ್ತಲು ಇದರ ಎಲೆಯನ್ನು ಉಪಯೋಗಿಸುತ್ತಾರೆ. ಎಲೆ, ತೊಗಟೆ ಮತ್ತು ಹಣ್ಣು ಔಷಧಿಗೆ ಒದಗುತ್ತವೆ.

ಬೀಜಗಳನ್ನು ಒಟ್ಲುಹುಯ್ದು, ಸಸಿಗಳನ್ನು ನೆಡಬೇಕು. ಸಸಿಗಳು ಬೇಗ ಬೆಳೆಯುತ್ತವೆ.


ಮರ ಕುರೂಪಿಯಾಗಿರುವುದರಿಂದ ಸಾಲುಮರಕ್ಕೆ ಯೋಗ್ಯವಲ್ಲ.

63. ಕೂಲಿ. (ಕುಮತಿ, ಕುಮಲಿ, ಕಾಶ್ಮೀರಿ ಮರ, ಹುಚ್ಚುನವರೆ, ಗುಲುಡು ಮರ.) *Gmelina arborea* Roxb,

ಇದು ಗಡಿನಾಡು* ಹಾಗೂ ಘಟ್ಟದ ತಪ್ಪಲು ಪ್ರದೇಶಗಳಲ್ಲಿ ಹೆಚ್ಚು. ಅನುಕೂಲ ಸನ್ನಿವೇಶಗಳಲ್ಲಿ ಇದು ಸುಮಾರು 18 ಮೀಟರ್ (60 ಅಡಿ) ಎತ್ತರಕ್ಕೆ ಬೆಳೆಯುವುದುಂಟು. ಇದರ ತೊಳು ನೇರವಾಗಿರುತ್ತದೆ. ತೊಗಟೆ ನುಣುಪಾಗಿ, ಬೂದಿ ಅಥವಾ ಬಿಳಿಯ ಬಣ್ಣಕ್ಕೆ ಇರುತ್ತದೆ. ಇದರ ನೆತ್ತಿ ದುಂಡು ಅಥವಾ ಹರಡಿ ಕೊಂಡಿರುತ್ತದೆ; ಎಲೆ ಅಗಲ, ಹೃದಯಾಕಾರಕ್ಕೆ ಇರುತ್ತದೆ. ಜೂನ್ ಮತ್ತೆ ನವೆಂಬರಿನಲ್ಲಿ ಅಂದವಾದ ಹೂವುಗಳು ಗೊಂಚಲು ಗೊಂಚಲಾಗಿ ಬಿಡುತ್ತವೆ. ಹೂವಿನ ಒಳಭಾಗ ಹಳದಿ; ಹೊರಭಾಗ ಕಂದುಹಳದಿ; ಒಳ್ಳೆಯ ಪರಿಮಳ. ಇದು ಅಲಂಕಾರದ ಮರ.

ಇದರ ಒಳಮರ ಹಗುರ; ಆದರೂ ಗಟ್ಟಿ. 0.028 ಘನಮೀಟರ್ $13\frac{1}{2}$ – 18

* ಮಲೆನಾಡು ಮೈದಾನಸೀಮೆ ಮಧ್ಯದ ಪ್ರದೇಶ.



ಚಿತ್ರ : 53. ಕೂಲಿ ಮರದ ರೆಂಬೆ, ಎಲೆ, ಹೂವು, ಕಾಯಿ

ಕೆ.ಜಿ. (1 ಘನ ಅಡಿ, 30 – 40 ಪೌಂಡು) ತೂಗುತ್ತದೆ. ನೀರು, ತೇವ, ಬಿಸಿಲನ್ನು ಎದುರಿಸಬಲ್ಲ ಮರ. ಬಣ್ಣ ಹಳದಿ ಅಥವಾ ಬೂದು ; ಎಲೆಗಳು ಒತ್ತು.

ಈ ಒಳಮರ ಬಡಗಿ ಕೆಲಸಕ್ಕೆ ಒಪ್ಪು. ಸುಲಭವಾಗಿ ಹತ್ತರಿ ಹಿಡಿಯಬಹುದು, ಕುಯ್ಯಬಹುದು, ಕತ್ತರಿಸಬಹುದು ; ಒಳ್ಳೆ ಹೊಳಪು ; ಪಾಲಿಷನ್ನು ಚೆನ್ನಾಗಿ ತೆಗೆದುಕೊಳ್ಳುತ್ತದೆ ; ಬಣ್ಣವನ್ನು ತೆಗೆದುಕೂಳ್ಳುತ್ತದೆ; ಇದಕ್ಕೆ ತೇಗದ ಮರದ ಅನೇಕ ಗುಣಗಳಿವೆ ; ಬಾಳಿಕೆ ಹೆಚ್ಚು ; ಸೀಳುವುದಿಲ್ಲ : ಡೊಂಕಾಗುವುದಿಲ್ಲ ; ಅಲಂಕಾರದ ಸಾಮಾನುಗಳನ್ನು ಮಾಡಲು ಯೋಗ್ಯ. ಹಗುರವಾಗಿರುವುದರಿಂದ, ಗಟ್ಟಿಯಾಗಿರುವುದರಿಂದ ಕೃತಕ ಕೈಕಾಲುಗಳನ್ನು ಮಾಡಲು ಈ ಮರವನ್ನು ಬಳಸುತ್ತಾರೆ. ಮರ ಹಗುರವಾಗಿ ಗಟ್ಟಿಯಾಗಿರುವುದರಿಂದ, ನೊಗಕ್ಕೂ ಒಪ್ಪು; ರೈಲ್ವೆ ಗಾಡಿಗೂ ಬಳಸುತ್ತಾರೆ.

ಈ ಮರದಿಂದ ಬಾಚಣಿಗೆ ಮಾಡುತ್ತಾರೆ. ಅಂತೆಯೇ ಇದನ್ನು ಬಾಚಣಿಗೆ ಮರವೆಂದು ಕೆಲವೆಡೆ ಕರೆಯುವುದುಂಟು. ತಬಲ, ತಮಟೆಗಳನ್ನು ತಯಾರು ಮಾಡುತ್ತಾರೆ. ಇದನ್ನು ಹಲಗೆಗಳಿಗೆ, ಪೀಠಾಸನಗಳಿಗೆ, ಬಾಗಿಲುಗಳಿಗೆ, ದೋಣಿಗ

ಳಿಗೆ, ತೂಬು ಬಾಗಿಲುಗಳಿಗೆ ಉಪಯೋಗಿಸಬಹುದು. ನೀರಿನಲ್ಲಿ ನೆನೆದರೂ ಕೆಡದು.

ಇದನ್ನು ಬೆಂಕಿಕಡ್ಡಿಗಾಗಿಯೂ ಬಳಸುತ್ತಿದ್ದಾರೆ. ಮರದ ತಿರುಳನ್ನು ಕಾಗದದ ತಯಾರಿಕೆಯಲ್ಲಿ ಉಪಯೋಗಿಸುತ್ತಾರೆ.

ಒಣ ಪ್ರದೇಶಗಳಲ್ಲಿ ಇದು ಎಲೆಯನ್ನು ಉದುರಿಸಿ ಬೆತ್ತಲೆಯಾಗುತ್ತದೆ. ಆದರೆ ತೇವವಿರುವ ಕಡೆ, ಹಳೆ ಎಲೆಗಳು ಉದುರಿದಂತೆಲ್ಲಾ ಹೊಸ ಎಲೆಗಳು ಬರುತ್ತಿರುತ್ತವೆ. ಆದುದರಿಂದ ಇದನ್ನು ಆಳವಾದ, ತೇವ ಉಳಿಸಿಕೊಳ್ಳುವ ಮಣ್ಣುಗಳಿರುವ ಕಡೆ ಸಾಲುಮರವಾಗಿ ಹಾಕಬೇಕು. ಉಳಿದೆಡೆ, ಇದು ಸೂಕ್ತವಾದ ಸಾಲುಮರವಲ್ಲ.

ಈ ಮರ ಚೌಗು ನೆಲಗಳಲ್ಲಿ, ನೀರು ಬಸಿಯದ ಕಡೆ ತಲೆಯೆತ್ತುವುದಿಲ್ಲ.

ಇದರ ಹಣ್ಣನ್ನು ಕೆಲವು ಗಿರಿಜನರು ತಿನ್ನುತ್ತಾರೆ. ತಿರುಳು ಹಳದಿ, ತಿನ್ನುವಾಗ ಬೆರಳುಗಳನ್ನು ಹಳದಿಗೊಳಿಸುತ್ತದೆ. ಈ ಬಣ್ಣ ಬೇಗ ಹೋಗುವುದಿಲ್ಲ.

ಇದರ ಎಲೆಯನ್ನು ಮೇವಾಗಿ ಉಪಯೋಗಿಸಬಹುದು. ಬೇರು, ಎಲೆ, ಹೂವು, ಹಣ್ಣು ಔಷಧಿಗೆ ಒದಗುತ್ತವೆ. ಇದರ ಹಣ್ಣು ಕೇಶವರ್ಧಕವಂತೆ.

ಹೂವಿನ ಕಾಲ ಫೆಬ್ರುವರಿ – ಏಪ್ರಿಲ್. ಏಪ್ರಿಲ್‌ನಿಂದ ಜುಲೈತನಕ ಕಾಯಿಗಳು ಬಲಿಯುತ್ತವೆ. ಬಲಿತ ಕಾಯಿಗಳಿಂದ ಬೀಜವನ್ನು ಪಡೆದು ನೇರವಾಗಿ ಬಿತ್ತಿಯೋ, ಸಸಿಮಾಡಿ ನೆಟ್ಟೋ ಬೆಳೆಸಬಹುದು. ನೇರವಾಗಿ ಬಿತ್ತುವುದು ಒಪ್ಪು. ಒಟ್ಲು ಹುಯ್ಯುವುದಾದರೆ, ಕಾಯಿ ಬಲಿತೊಡನೆ ಕೊಟ್ಟೆಯನ್ನು ಸಾಲಾಗಿ ಹೂಣಬೇಕು. ನೀರು ಎರೆದು ಒಟ್ಲನ್ನು ಆರೈಕೆ ಮಾಡಬೇಕು.

ರೈತರಿಗೆ ಬಹಳ ಉಪಯುಕ್ತವಾದ, ಒಪ್ಪಾದ ಮರ.

ಈ ಮರದ ರೂಪಕ್ಕೆ 87 ನೆಯ ಚಿತ್ರನೋಡಿ.

64. ಸಿಲ್ವರ್ ಓಕ್ (ನಾಟ್ ಓಕ್‌ಮರ) *Grevillea robusta* A Cunn.

ಇದು ಸುಮಾರು ಎತ್ತರದ ನಿತ್ಯ ಹಸುರಿನ ಮರ ; ಉದ್ದಕ್ಕೆ ಬೆಳೆಯುತ್ತದೆ. ಬೆಂಗಳೂರಿನ ಲಾಲ್‌ಬಾಗಿನಲ್ಲಿ 15 ಮೀಟರ್ (50 ಅಡಿ) ಎತ್ತರದ ಮರವಿದೆ. 24 – 27 ಮೀಟರ್ (80 - 90 ಅಡಿ) ಎತ್ತರಕ್ಕೆ ಬೆಳೆದಿರುವ ಮರಗಳೂ ಇವೆಯಂತೆ.

ಇದರ ನೆತ್ತಿ ಗೋಪುರದಾಕಾರದಲ್ಲಿ ಇರುತ್ತದೆ. ಎಲೆ ಕಿರಿದು. ಮಾರ್ಚಿ – ಮೇ ತಿಂಗಳಿನಲ್ಲಿ ಹಳದಿ ಕೊಳವೆ ಹೂವುಗಳು ಹಂತ ಹಂತವಾಗಿ ರೆಂಬೆಗಳನ್ನು ತುಂಬುತ್ತವೆ.

ಇದರ ಎಲೆ ತಳ ಬಿಳುಪು. ಆದಕ್ಕೇ ಇದನ್ನು ಸಿಲ್ವರ್‌ಓಕ್ (ಬೆಳ್ಳಿ ಓಕ್)



ಚಿತ್ರ : 54. ಸಿಲ್ವರ್ ಓಕ್ ರೆಂಬೆ, ಎಲೆ, ಹೂಗೊಂಚಲು

ಎನ್ನುವುದು. ಎಲೆಯ ಮೇಲ್ಭಾಗ ಅಚ್ಚಹಸುರು.

ಇದು ಅಲಂಕಾರದ ಮರವಾದುದರಿಂದ, ಅಲಂಕಾರಕ್ಕಾಗಿ ಗುಂಪು ಗುಂಪಾಗಿ ಬೆಳೆಸಬಹುದು.

ಇದು ಬಹಳ ಬೇಗ ಬೆಳೆಯುವ ಮರ; ಆದರೆ 15 – 20 ವರ್ಷ ಮಾತ್ರ ವಯಸ್ಸು. ಇದು ನೋಟಕ್ಕೆ ಚೆಂದ. ನಂತರ ರೂಪ ಕೆಡುವುದಲ್ಲದೆ ಸಾಯುತ್ತದೆ. ಆದುದರಿಂದ ಇದನ್ನು ಸಾಲುಮರವಾಗಿ ಕೆಲವೆಡೆ ಬೆಳಸಿದ್ದರೂ, ಆ ಉದ್ದೇಶಕ್ಕೆ ಅಷ್ಟು ತಕ್ಕುದಲ್ಲ. ಆದರೆ ನಿಧಾನವಾಗಿ ಬೆಳೆಯುವ ಸಾಲುಮರಗಳ ಮಧ್ಯೆ ಹಾಕಿದಲ್ಲಿ ಅವು ಬೆಳೆಯುವತನಕ ಇದನ್ನು ಉಳಿಸಿಕೊಂಡು ಆಮೇಲೆ ಕಡಿದುಹಾಕಬಹುದು.

ಹುಲ್ಲುಹಾಸುಗಳ ಮಧ್ಯೆ ಹಾಕಲು ಈ ಮರ ಯೋಗ್ಯ. ಇದರ ತಳಗೆ ಹುಲ್ಲು ಬೆಳೆಯುತ್ತದೆ. ಇದು ಸಿಲ್ವರ್‌ಕಿನ ವಿಶಿಷ್ಟ ಗುಣ. ಬೇಗ ಬೆಳೆಯುವುದರಿಂದ ಇದನ್ನು ತೋಟಗಳಲ್ಲಿ ಗಾಳಿ ತಡೆಗಾಗಿ ಬೆಳೆಸಬಹುದು. ಕಾಫಿ ತೋಟಗಳಲ್ಲಿ

ಇವನ್ನು ನೆರಳಿಗಾಗಿ ಬೆಳೆಸುತ್ತಾರೆ.

ಇದರ ಒಳ ಮರ ಹೆಚ್ಚು ಕೆಲಸಕ್ಕೆ ಒದಗುವುದಿಲ್ಲ. ಆದರೆ ಇದರ ತವುರಿನಲ್ಲಿ ಇದನ್ನು ಪೀಠಾಸನಗಳಿಗಾಗಿ ಬಳಸುವುದುಂಟು. ಮರವನ್ನು ಸೌದೆಗಾಗಿ ಬಳಸಬಹುದು.

ಎಚ್ಚರಿಕೆ ; ಈ ಮರ ಬಿರುಗಾಳಿಯಲ್ಲಿ ಮುರಿಯುವುದುಂಟು.

ಸಿಲ್ವರ್ ಓಕನ್ನು ನೇರವಾಗಿ ಬೀಜ ಬಿತ್ತಿ ಬೆಳಸಬಹುದು ; ಇಲ್ಲವೇ ಸಸಿಗಳನ್ನೆಬ್ಬಿಸಿ ನೆಡಬಹುದು.

65. ಗೊಬ್ಬನೇರಳೆ (ನೀಲಿಮರ, ಗೊವರ್‌ನೆಲ್ಲು) *Bischofia javanica* Blume.



ಚಿತ್ರ : 55. ಗೊಬ್ಬನೇರಳೆ ಎಲೆ, ಹೂವು, ಗೊಂಚಲು, ಕಾಯಿ

ಇದು ಚಿಕ್ಕಮಗಳೂರು, ಹಾಸನ, ಶಿವಮೊಗ್ಗ ಜಿಲ್ಲೆಗಳ ಕಾಡುಗಳಲ್ಲಿ ಬೆಳೆಯುವ ಮರ. ಅಲ್ಲಿ ಇದರ ಎಲೆಗಳನ್ನು ಹಸುರುಗೊಬ್ಬರವಾಗಿ ಗದ್ದೆಗಳಿಗೆ ಹೂಡಿ ತುಳಿಯುವುದರಿಂದ ಇದನ್ನು ಗೊಬ್ಬನೇರಳೆ ಎಂದು ಕರೆಯುತ್ತಾರೆ. ಕಾಫಿ ತೋಟಗಳಲ್ಲಿ ನೆರಳಿಗೋಸ್ಕರ ಹಾಕುತ್ತಾರೆ. ನೆರಳು ಸ್ವಲ್ಪ ದಟ್ಟ.

ಇದು ಸುಮಾರು 9 – 12 ಮೀಟರ್ (30 – 40 ಅಡಿ) ಎತ್ತರಕ್ಕೆ ಬೆಳೆಯುತ್ತದೆ. ಇದರ ನೆತ್ತಿ ದುಂಡು. ಎಲೆ ಮೂರು ಪತ್ರ – ತ್ರಿಪತ್ರ.

ಬೇಸಿಗೆಯ ಆದಿಯಲ್ಲಿ ಎಲೆ ಉದುರುತ್ತದೆ. ಉದುರುವುದಕ್ಕೆ ಮುಂಚೆ ಕೆಂಪೇರುತ್ತದೆ. ಹೀಗೆ ಬಣ್ಣ ಬದಲಾಯಿಸುವ ಮರಗಳು, ಪಾಶ್ಚಾತ್ಯ ದೇಶಗಳಲ್ಲಿ ಸಾಮಾನ್ಯವಾದರೂ ನಮ್ಮ ದೇಶದಲ್ಲಿ ವಿರಳ.

ಹಣ್ಣುಗಳು ಏಪ್ರಿಲಿನಲ್ಲಿ ; ಬಟಾಣಿ ಕಾಳಿನಷ್ಟು ಗಾತ್ರ ; ನೀಲಿಕಪ್ಪು.

ಇದರ ಒಳಮರ ಸ್ವಲ್ಪ ಕೆಂಪು. ಆದುದರಿಂದಲೇ ಇದನ್ನು ಜಾವಸೆಡರ್, ಎಂದು ಕರೆಯುವುದು. ಒಳ್ಳೆ ಪಾಲಿಷ್ ತೆಗೆದುಕೊಳ್ಳುತ್ತದೆ. ಇದರ ಎಳೆಗಳು ಒತ್ತಾಗಿರುವುದರಿಂದಲೂ, ಸುಲಭವಾಗಿ ಹದವಾಗುವುದರಿಂದಲೂ, ಬಾಳಿಕೆ ಇರುವುದರಿಂದಲೂ, ಒಳ್ಳೆಯ ವಿನೀಗರ್ ವಾಸನೆ ಇರುವುದರಿಂದಲೂ ಮರದ ಸಾಮಾನುಗಳಿಗೆ ಬಹಳ ಉಪಯುಕ್ತ. ಸುಮಾರು ಭಾರ ; 0.028 ಘನ ಮೀಟರ್ 21¾ ಕೆ.ಜಿ. (1 ಘನ ಅಡಿ 48 ಪೌಂಡು) ತೂಗುತ್ತದೆ ; ವಿನೀಗರ್ ವಾಸನೆ.

ಇದು ಒಳ್ಳೆಯ ಸೌದೆ ಮರ. ಸರ್ವೆ ಮರಕ್ಕಿಂತಲೂ ಹೆಚ್ಚು ಶಾಖವನ್ನು ಕೊಡುತ್ತದೆ.

ಈ ಮರವನ್ನು ಸೇತುವೆಗಳಿಗೆ, ರೈಲ್ವೆ ಸ್ಲೀಪರುಗಳು, ಹಲಗೆಗಳು ಮೊದಲಾದವುಗಳಿಗಾಗಿ ಬಳಸುತ್ತಾರೆ.


ನೀರಿನ ವಸತಿ ಇಲ್ಲದ ಕಡೆ ಇದು ಅಷ್ಟು ಎತ್ತರಕ್ಕೆ ಬೆಳೆಯುವುದಿಲ್ಲ. 4.5 – 6 ಮೀಟರ್ (15 – 20 ಅಡಿ) ಎತ್ತರಕ್ಕೆ ಬೆಳೆಯುತ್ತದೆ ಅಷ್ಟೆ. ನದಿ ತಟಗಳಲ್ಲಿ ಎತ್ತರಕ್ಕೆ ಬೆಳೆಯುತ್ತದೆ.

ಇದನ್ನು ಸಸಿ ಎಬ್ಬಿಸಿ 3 – 4 ತಿಂಗಳುಗಳ ಸಸಿಗಳನ್ನು ಹೂಣಿ ಬೆಳೆಸಬಹುದು; ಬೆಳವಣಿಗೆ ಚುರುಕು ; ಸ್ವಲ್ಪ ನೆರಳಿನಲ್ಲಿಯೂ ಬೆಳೆಯುತ್ತದೆ ; ಕತ್ತರಿಸಿದರೂ ಚಿಗುರುತ್ತದೆ.

66.˙ ಕಾಟ್ ಕುಂಬಳ (ಕಾಡು ಕುಂಬಳ) *Trewia nudiflora* Linn.

ಇದರ ಒಳಮರ ಹಗುರ ; ಬಿಳಪು ; ಮೃದು, ತೇಗದ ಮುಕ್ಕಾಲರಷ್ಟು ಅಥವಾ ಅದಕ್ಕಿಂತ ಕಡಿಮೆ. ಈ ಕಾರಣದಿಂದ, ಉತ್ತರ ಭಾರತದಲ್ಲಿ – ಬಂಗಾಳ, ಬಿಹಾರದ ಕಡೆ, ಮದ್ದಳೆ, ನಗಾರಿಗಳಿಗೆ ಇದನ್ನು ಬಳಸುತ್ತಾರೆ. ನೊಗ ಮುಂತಾದ ಹಗುರ ವ್ಯವಸಾಯದ ಮುಟ್ಟುಗಳನ್ನು ಮಾಡಲು ಯೋಗ್ಯವಾದ ಮರ. ಈ ಮರ ಮೃದುವಾಗಿರುವುದರಿಂದ ಇದನ್ನು ಬೆಂಕಿ ಕಡ್ಡಿಗಳ ತಯಾರಿಕೆಯಲ್ಲಿ ಬಳಸುತ್ತಾರೆ. ಒಳಮರ ಉಪ್ಪುನೀರಿನಲ್ಲಿ ನೆನೆದರೂ ಕೆಡುವುದಿಲ್ಲ.

ಇದು ಎತ್ತರಕ್ಕೆ ಬೆಳೆಯುವ ಮರ, 18 – 24 ಮೀ. (60 – 80 ಅಡಿ) ಎತ್ತರಕ್ಕೂ ಬೆಳೆಯಬಲ್ಲದು. ಕೇವಲ ಸ್ವಲ್ಪ ಕಾಲ, ಸುಮಾರು 20 ದಿವಸ, ಫೆಬ್ರ



ಚಿತ್ರ : 56. ಕಾಟ್ ಕುಂಬಳದ ರೆಂಬೆ, ಎಲೆ, ಹೂವು, ಕಾಯಿ

ವರಿ – ಮಾರ್ಚಿ ತಿಂಗಳಿನಲ್ಲಿ, ಎಲೆ ಉದುರಿ ಬೆತ್ತಲೆಯಾಗುತ್ತದೆ. ಆದುದರಿಂದ ಇದನ್ನು ಹಳ್ಳಿ ರಸ್ತೆಗಳಲ್ಲಿ ನೆರಳು ಮರವಾಗಿ ಹಾಕಬಹುದು. ಇವರ ಎಲೆ ಅಗಲ. ತೊಟ್ಟು ಉದ್ದ. ಅದಕ್ಕೋಸ್ಕರವೇ ಇದನ್ನು ಕಾಡು ಕುಂಬಳವೆಂದು ಕರೆದಿರ ಬೇಕು. ಇವರ ಹೂವಿನ ವೈಶಿಷ್ಟ್ಯವೇನೆಂದರೆ ಇದಕ್ಕೆ ದಳಗಳು ಇರುವುದಿಲ್ಲ. ನೆಲ್ಲಿಕಾಯಿನ ಗಾತ್ರದ ಹಣ್ಣುಗಳು ಯಥೇಚ್ಚ. ಸಿಹಿಯಾಗಿಯೇ ಇರುತ್ತವೆ. ಆದರೆ ಜನ ತಿನ್ನುವುದಿಲ್ಲ. ಇದರ ಭಾಗಗಳು ಔಷಧಿಗಾಗಿ ಉಪಯೋಗಕ್ಕೆ ಬರುತ್ತವೆ.

ಇದನ್ನು ಬೀಜಗಳಿಂದ ಸುಲಭವಾಗಿ ಬೆಳೆಯಬಹುದು. ಇದರ ಹಣ್ಣುಗಳು ಗಟ್ಟಿಯಾಗಿದ್ದು ಕೆಳಗೆ ಉದರುತ್ತವೆ. ಇವನ್ನು ಆರಿಸಿ ಬೀಜ ಮಾಡಿಕೊಳ್ಳಬಹುದು. ಎತ್ತರಕ್ಕೆ ಬೆಳೆಯುವುದರಿಂದ 15 ಮೀಟರ್ (50 ಅಡಿ) ಅಂತರದಲ್ಲಿ ಹಾಕಬೇಕು.

67 ಬೆಂಡು ಮರ (ಗೋರ್ಕಲು, ಗೂರ್‌ಕಲ್, ಕರುಹಾಲೆ, ಗೊರಕಲು)

Trema orientalis (Linn.) Blume

ಬಹಳ ಉತ್ಕೃಷ್ಟವಾದ ಇದ್ದಿಲನ್ನು ಕೊಡುವುದರಿಂದ ಇದನ್ನು 'ಇದ್ದಿಲುಮರ' ವೆಂದು ಕರೆಯುವುದುಂಟು. ಇದು ಮುಖ್ಯವಾಗಿ ತೇವದ ಪ್ರದೇಶಗಳಲ್ಲಿ ತನಗೆ ತಾನಾಗಿಯೇ ಬೆಳೆಯುತ್ತದೆ. ಹಾಸನ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ, ಬಾಬಾ ಬುಡನ್ ಬೆಟ್ಟಗಳಲ್ಲಿ, ದಟ್ಟವಾದ ಅರಣ್ಯಗಳಲ್ಲಿ ಬೆಳೆಯುತ್ತದೆ.

ಇದು ಸಣ್ಣ ಅಥವಾ ಸುಮಾರು ಗಾತ್ರದ ನಿತ್ಯಹಸುರಿನ ಮರ. ಇದರ ಎಲೆಗಳ ತಳ, ಬೆಳ್ಳಿ ಬಿಳುಪು. ಹೂವು ಸಣ್ಣ; ಬಿಳುಪು; ಡಿಸೆಂಬರ್ – ಏಪ್ರಿಲ್‌ನಲ್ಲಿ. ಕಾಯಿ ಲಾಂಟಾನ (ಲಟವಾಣಿ) ಕಾಯಿನಂತೆ. ಇದರ ಹಣ್ಣನ್ನು ತಿನ್ನಬಹುದು; ಸಿಹಿಯಾಗಿರುತ್ತದೆ.

ಇದು ಹೆಚ್ಚು ಕಾಲ ಬದುಕದ ಮರ. ಅದರ ಆಯುಸ್ಸು ಸುಮಾರು 30–40 ವರ್ಷ ಮಾತ್ರ.

ಇದರ ಒಳಮರ ಮೃದು; ಬಹಳ ಹಗುರ; ಬೆಂಡು; ಆದುದರಿಂದ ನೊಗಗಳಿಗೆ ಬಹಳ ಅನುಕೂಲ; ಕೆಲವೆಡೆ ತೊಲೆಗಳಿಗೂ ಬಳಸುತ್ತಾರೆ. ಮರದ ತಿರುಳಿನಿಂದ ಕಾಗದ ತಯಾರು ಮಾಡಬಹುದು. ಇದರ ಒಳಚಕ್ಕೆಯಿಂದ ನಾರು ತೆಗೆಯುತ್ತಾರೆ. ಹಗ್ಗ ಹೊಸೆಯುವುದಕ್ಕೆ ತೊಲೆ ಅಥವಾ ತೀರುಗಳನ್ನು ಬಿಗಿಯುವುದಕ್ಕೆ ಒದಗುತ್ತದೆ. ಕೆಲವೆಡೆ ಇದರಿಂದ ಒಂದು ಬಗೆಯ ಒರಟು ಬಟ್ಟೆಯನ್ನು ನೇಯುತ್ತಾರೆ.

ಇದನ್ನು ಬೀಜದಿಂದ ಬೆಳೆಸುವುದು ಕಷ್ಟ. ಮಳೆಗಾಲದಲ್ಲಿ ಇದರ ಬೇರಿನಿಂದ ಹೊರಟ ಮರಿಗಳನ್ನು ವಿಂಗಡಿಸಿ ನಾಟಿಮಾಡಬೇಕು.

68 ತಪಸಿ (ಕಾಲಾವ್ರಿ, ರಸಬೀಜ, ಥಪ್ಸಿ) *Holoptelea integrifolia* (Roxb.) Planch.

ಇದು ಬೆಂಡುಮರದ ಹತ್ತಿರದ ನೆಂಟ; ಆದರೆ ದೊಡ್ಡಮರ. ಅನುಕೂಲ ಸನ್ನಿವೇಶಗಳಲ್ಲಿ ಬಹಳ ಎತ್ತರಕ್ಕೂ ಬೆಳೆಯುತ್ತದೆ. ಮಲೆನಾಡಿನ ಒಣಭಾಗಗಳಲ್ಲಿ, ಹಾಸನ, ಚಿಕ್ಕಮಗಳೂರು, ಶಿವಮೊಗ್ಗ ಜಿಲ್ಲೆಗಳಲ್ಲಿ, ಬಯಲುಸೀಮೆಯ ಕಾಡುಗಳಲ್ಲಿ ಬೆಳೆಯುತ್ತದೆ. ಈ ಮರ ಚೆನ್ನಾಗಿ ನೀರು ಬಸಿಯುವ ಮಣ್ಣುಗಳಲ್ಲಿ ಉತ್ತಮವಾಗಿ ಬೆಳೆಯುತ್ತದೆಯಾದರೂ ಹೆಚ್ಚು ತೇವವಿಲ್ಲದ ಕಡೆಯೂ ಬೆಳೆಯಬಲ್ಲದು. ಆದರೆ ಮಣ್ಣು ಆಳವಾಗಿರಬೇಕು; ಕಾರಣ, ಇದರ ಬೇರುಗಳು ವಿಸ್ತಾರವಾಗಿ ಹರಡುತ್ತವೆ.

ಇದರ ರೆಂಬೆಗಳು ಮೇಲಕ್ಕೆ, ಅಗಲಕ್ಕೆ ಬೆಳೆಯುತ್ತವೆ. ಎಲೆ ಅಂಡಾಕಾರ. ಎಲೆಯ ಬುಡ ದುಂಡು; ತುದಿ ಸ್ವಲ್ಪ ಚೂಪು. ಹೂವು ಹಸುರು ಹಳದಿ, ಫೆಬ್ರುವರಿ –ಏಪ್ರಿಲಿನಲ್ಲಿ. ಕಾಯಿಗಳಿಗೆ ನವುರಾದ ರೆಕ್ಕೆ ಇರುತ್ತದೆ, ಏಪ್ರಿಲ್–ಮೇನಲ್ಲಿ ಕಾಯಿ ಕಚ್ಚುತ್ತದೆ. ಫೆಬ್ರುವರಿಯಿಂದ ಮೇ ತನಕ ಎಲೆ ಉದುರಿರುತ್ತದೆ. ಬೀಜ ಚಪ್ಪಟೆಯಾಗಿರುತ್ತದೆ.

ಇದರ ತೊಗಟೆ ಬೂದು; ನುಮಾರು ನಯ.

ಇದರ ಒಳಮರ ಹಗುರವೆಂದೇ ಹೇಳಬೇಕು. 0.028 ಘನಮೀಟರ್. ಸುಮಾರು 16¼ ಕೆ. ಜಿ. (ಒಂದು ಘನಅಡಿ 36 ಪೌಂಡ್) ತೂಗುತ್ತದೆ. ಇದು

ವ್ಯದು. ಇದರ ಎಲೆಗಳು ಒತ್ತಾಗಿರುವುದಿಲ್ಲ. ಇದರ ಬಣ್ಣ ಹಳದಿ ಬೂದು; ಗಟ್ಟಿ.

ವ್ಯವಸಾಯದ ಮುಟ್ಟುಗಳಿಗೆ ಯುಕ್ತವಾದ ಮರ. ಕಟ್ಟಡದ ಕೆಲಸಕ್ಕೂ, ಗಾಡಿ ಕಟ್ಟುವುದಕ್ಕೂ ಸೂಕ್ತ. ಇದನ್ನು ಕೊರೆಯಬಹುದು; ಕೆತ್ತಲು ಕೊರೆಯಲು ಒಪ್ಪು: ಬ್ರಷುಹಿಡಿಗಳಿಗೆ ಅನುಕೂಲ. ಈಚೆಗೆ ಇದನ್ನು ಪ್ಲೈವುಡ್ ಮಾಡಲು ಬಳಸುತ್ತಿದ್ದಾರೆ. ಇದೂ ಕೂಡ ಒಳ್ಳೆಯ ಇದ್ದಿಲನ್ನು ಕೊಡುತ್ತದೆ.

ಇದರ ಎಲೆ, ಚಿಗುರು ಸ್ವಲ್ಪ ಗಬ್ಬು ವಾಸನೆ; ಅದರೂ ದನಗಳು ಇವನ್ನು ಆತುರದಿಂದ ತಿನ್ನುತ್ತವೆ.


ಇದನ್ನು ನೇರವಾಗಿ ಬೀಜ ಊರಿ ಅಥವಾ ಸಸಿ ಎಬ್ಬಿಸಿ ಬೆಳೆಸಬಹುದು. ಹೊಸ ಬೀಜವನ್ನೆ ಏಪ್ರಿಲ್ – ಮೇ ತಿಂಗಳುಗಳಲ್ಲಿ ಕೂಡಿಹಾಕಿ ಬಿತ್ತಬೇಕು. ಕ್ರಮ ವಾಗಿ ಕಳೆ ಕಿತ್ತು, ಸಸಿಗಳಿಗೆ ನೀರು ಎರದು ಕಾಪಾಡಬೇಕು. ಸಣ್ಣರೆಂಬೆಗಳನ್ನು ಊರಿ ಬೇರು ಬಿಡಿಸಿ ನೆಡಬಹುದು.

69. ಕ್ಯಾಸರಿಕೆ (ಕೇಸರಿಕೆ, ಸರ್ವೆಮರ, ಕ್ಯಾಷುರಿನ) *Casuarina equisetifolia* Forest.

ಸರ್ವೆಮರ ನಮ್ಮಲ್ಲಿ ಸಾಮಾನ್ಯವಾಗಿದ್ದರೂ ಇದರ ತವರು ಆಸ್ಟ್ರೇಲಿಯ. ಇಂಡಿಯಕ್ಕೆ 150 ವರ್ಷಗಳ ಹಿಂದೆಯೇ ಒಳಸೇರಿತು. ಆಸ್ಟ್ರೇಲಿಯದಲ್ಲಿ ಇದು ಒಣಪ್ರದೇಶಗಳಲ್ಲಿ ಬೆಳೆಯುತ್ತದೆಯಂತೆ: ಆದರೆ ನಮ್ಮ ದೇಶದಲ್ಲಿ ಇದು ಮುಖ್ಯ ವಾಗಿ ಸಮುದ್ರದ ಕರೆಯಲ್ಲಿ, ಸಡಿಲ ಮರಳು ಮಣ್ಣುಗಳಲ್ಲಿ, ಚೆನ್ನಾಗಿ ಬೆಳೆಯುತ್ತದೆ. ಇದರ ಬೇರುಗಳು ಮರಳು ಕಣಗಳನ್ನು ಬಂಧಿಸಬಲ್ಲವು. ಆದುದರಿಂದ ಇದನ್ನು ಹೆಚ್ಚಾಗಿ ಮರಳು ಮಣ್ಣಿನಲ್ಲಿ ಬೆಳೆಯುತ್ತಾರೆ. ರಾಜಾಸ್ಥಾನದ ಮರಭೂಮಿ ಹರಡದೆ ತಡೆಗಟ್ಟಲು ಈ ಮರವನ್ನು ಬೆಳೆಸುತ್ತಿದ್ದಾರೆ.

ಇದು ಒಳಪ್ರದೇಶಗಳಲ್ಲೂ ಬೆಳೆಯಬಲ್ಲುದು. ನಮ್ಮ ಮೈಸೂರಿನಲ್ಲಿ, ಅದರಲ್ಲೂ ಬೆಂಗಳೂರು ಜಿಲ್ಲೆಯಲ್ಲಿ, ಇದನ್ನು ಸಾಗುವಳಿಯಾಗಿ, ಅನೇಕ ಕಡೆ ತೋಪು ಗಳಲ್ಲಿ ಬೆಳೆಯುತ್ತಾರೆ. ಉತ್ತರ ಭಾರತದ ಕೆಲವೆಡೆ ಇದನ್ನು ಸಾಲುಮರವಾಗಿಯೂ ಬೆಳೆಯುವುದುಂಟು. ಇದಕ್ಕೆ ಮಣ್ಣಿನ ಜಲ ಉಪ್ಪೇರಿರಬಾರದು. ಇದನ್ನು ಚೆನ್ನಾಗಿ ಬೆಳೆಸಲು ನೀರು ಬಸಿಯುವ ನೆಲಗಳನ್ನೆ ಆರಿಸಿಕೊಳ್ಳಬೇಕು. ಮಣ್ಣಿನ ಜಲ ಮೇಲೆಯೇ ಇರಬೇಕು. ತೋಪುಗಳನ್ನು ಎಬ್ಬಿಸಲು ನೀರಿನ ಸೌಕರ್ಯವಿರ ಬೇಕು.

ಇದು 'ಮಣ್ಣಿನ ಜಲವನ್ನು ಹೀರಿ ಶುಷ್ಕಗೊಳಿಸುತ್ತದೆ, ಬಾವಿ ನೀರಿನ ಧ್ರುವಜಲವನ್ನು ಕುಗ್ಗಿಸುತ್ತದೆ' ಎಂಬ ಮಾತು ಅಲ್ಲಲ್ಲೇ ಕೇಳಿಬರುತ್ತದೆ. ಆದರೂ ಹೊಸ ಹೊಸ ತೋಪುಗಳು ಏಳುತ್ತಲೇ ಇವೆ.



ಚಿತ್ರ : 57. ಸರ್ವೆಮರದ ರೂಪು, ರೆಂಬೆ, ಎಲೆ, ಕಾಯಿ

ಎತ್ತರವಾಗಿ - ಸರಿಯಾಗಿ ಬೆಳೆದರೆ 15 – 21 ಮೀಟರ್ (50 – 70 ಅಡಿ) ಎತ್ತರ ಬೆಳೆಯುತ್ತದೆ. ಎತ್ತರವಾಗಿ, ನೇರವಾಗಿ, ಶೀಘ್ರವಾಗಿ, ನಿತ್ಯಹಸುರಾಗಿ ಬೆಳೆಯುವುದರಿಂದ ಲಾಭದಾಯಕವಾದ ಮರದ ಬೆಳೆ. ಸೌದೆ ಬೆಳೆಯಾಗಿ ಬೇಗ ಬೆಳೆಸಲು ನಮ್ಮ ದೇಶದಲ್ಲಿ ತಲೆದೋರಿರುವ ಸೌದೆ ಕೊರತೆಯನ್ನು ಕೆಲವು ವರ್ಷ ಗಳಲ್ಲೇ ತುಂಬಬಲ್ಲ ಮರಗಳೆಂದರೆ, ಯೂಕಲಿಪ್ಟಸ್ (ಕರ್ಪೂರದ ಮರ), ಮತ್ತು ಕ್ಯಾಸರಿಕೆ ಮಾತ್ರ.

ಇದರ ಎಲೆಗಳು ಸೂಜಿಯಂತಿರುತ್ತವೆ. ಇದರ ತೊಗಟೆ ಕಂದು ; ಒರಟು ; ಚೆಕ್ಕೆ ತೆಗೆದರೆ ಒಳಭಾಗ ಮಾಂಸದ ಬಣ್ಣವಿರುವುದರಿಂದ ಇದನ್ನು ಇಂಗ್ಲೀಷಿನಲ್ಲಿ ಬೀಫ್‌ವುಡ್ ಎನ್ನುತ್ತಾರೆ.

ಇದು ಬಹಳ ಒಳ್ಳೆಯ ಸೌದೆಮರ ; ಬಹಳ ಕಾವು ಕೊಡುತ್ತದೆ. ಕೆಲವು ದಶಕಗಳ ಹಿಂದೆ, ರೈಲುಗಾಡಿಗಳನ್ನು ಈ ಕ್ಯಾಸರಿಕೆ ಸೌದೆ ಉರಿಸಿ ನಡೆಸುತ್ತಿದ್ದರಂತೆ. ಸೌದೆಗಲ್ಲದೆ ಕಂಬಗಳಿಗಾಗಿಯೂ, ತೊಲೆಗಳಿಗಾಗಿಯೂ ಬಳಸುತ್ತಾರೆ. ಆದರೆ

ಇದಕ್ಕೆ ಬೇಗ ಗೆದ್ದಲು ಹತ್ತುತ್ತದೆ. ಇದು ಬಾಳಿಕೆಯ ಮರ. ಗಣಿಗಳಲ್ಲಿ ಇದನ್ನು ಊರುಗಂಬಗಳಾಗಿಯೂ ಬಳಸುತ್ತಾರೆ. ಇದರ ಒಳಮರ ಬಿಳುಪು ; ಮದ್ಯೆ ಕಂದು ; ಭಾರ; 0.028 ಘನಮೀಟರ್ 27 ಕೆ.ಜಿ. (1 ಘನ ಅಡಿ 60 ಪೌಂಡು) ತೂಗುತ್ತದೆ. ಇದರಲ್ಲಿ ರಾಳ ಇದೆ ; ಆದುದರಿಂದಲೇ ಇದು ಚೆನ್ನಾಗಿ ಉರಿಯುತ್ತದೆ. ಚಕ್ಕೆಯಲ್ಲಿ ಚರ್ಮ ಹದಮಾಡುವ ಒಗಚಿದೆ.

ಕ್ಯಾಸರಿಕೆ ವರ್ಷಕ್ಕೆ ಎರಡು ಬಾರಿ, ಫೆಬ್ರವರಿ—ಏಪ್ರಿಲ್, ಮತ್ತೆ ಸೆಪ್ಟಂಬರ್—ಅಕ್ಟೋಬರಿನಲ್ಲಿ ಪಾಂಡು ಕೆಂಪಿನ ಹೂವು ಬಿಡುತ್ತದೆ. ಕಾಯಿ, ಜೂನ್ ಮತ್ತು ಡಿಸೆಂಬರಿನಲ್ಲಿ ಬಲಿಯುತ್ತದೆ. ಇದರ ಕಾಯಿ ಶಂಕುವಿನಂತೆ ಇರುತ್ತದೆ. ಇದರ ಬೀಜಗಳು ಇಲಿ ಮತ್ತು ಗುಬ್ಬಚ್ಚಿಗೆ ಬಹಳ ಪ್ರಿಯ ; ಆದುದರಿಂದ ಇವನ್ನು ಸ್ವಲ್ಪ ಆಳವಾಗಿ ಬಿತ್ತಬೇಕು.

ಕ್ಯಾಸರಿಕೆಗಳನ್ನು ಬಿಡಿ ಬಿಡಿಯಾಗಿ ಹಾಕುವುದರ ಬದಲು ತೋಪಿನಲ್ಲಿ ಮರದ ಬೆಳೆಯಾಗಿ ಬೆಳೆಸುವುದು ಸೂಕ್ತ. ಇದಕ್ಕಾಗಿ ಸಸಿಗಳನ್ನು ಒಟ್ಲಿನಲ್ಲಿ ಬೆಳೆಸಿ ನೆಡಬೇಕು.

ಒಟ್ಲು ಪಾತಿಯನ್ನು ಏರಿಸಿ ಕಟ್ಟಬೇಕು. ಮಣ್ಣು ಹಗುರವಾಗಿ ನೀರು ಬಸಿಯುವಂತೆ, ಕಳಿತ ಗೊಬ್ಬರ, ಎಲೆಪುಡಿ ಮತ್ತು ಬೂದಿಯೊಂದಿಗೆ ಬೆರೆಸಬೇಕು. ಪಾತಿಮಣ್ಣನ್ನು ಹಸನುಮಾಡಿ, ಮಟ್ಟ ಮಾಡಿ ಬೀಜಗಳನ್ನು ಮರಳೊಂದಿಗೆ ಬೆರೆಸಿ ತೆಳುವಾಗಿ ಚೆಲ್ಲಿ ಹಗುರವಾಗಿ ಅದುಮಬೇಕು. ಅನಂತರ ಹುಲ್ಲಿನಿಂದಲೋ, ಈಚಲು ಅಥವಾ ತೆಂಗಿನ ಸೋಗೆಯಿಂದಲೋ ಇವನ್ನು ಮುಚ್ಚಬೇಕು. ನೀರನ್ನು ನವುರು ತೂತುರು ದಾಸಿಯಿಂದ ಹುಯ್ಯಬೇಕು. ಇಲ್ಲದಿದ್ದರೆ ಹಗುರವಾದ ಬೀಜಗಳು ಕೊಚ್ಚಿಹೋಗುತ್ತವೆ. ಸಸಿಗಳು ಮೊಳೆತಮೇಲೆ, ಇವನ್ನು ಬೇರೊಂದು ದೊಡ್ಡ ಒಟ್ಲಿಗೆ, 7·5 – 15 ಸೆಂ. ಮೀ. (3 – 6 ಅಂಗುಲ) ಅಂತರದಲ್ಲಿ ಚುಚ್ಚಬೇಕು. 10 – 15 ಸೆಂ. ಮೀ. (4 - 6 ಅಂಗುಲ) ಎತ್ತರಕ್ಕೆ ಬೆಳೆದಾಗ ನೆಡಬೇಕು. ಇವನ್ನು ದೊಡ್ಡ ಗುಣಿ ತೋಡಿ ನೆಡುವುದು ಒಳ್ಳೆಯದು. ನೆಟ್ಟ ಸಸಿಗಳು ಆಡದಂತೆ ನೆಟ್ಟಗೆ ಬೆಳೆಯಲು ಕಡ್ಡಿ ಊರಿ ಕಟ್ಟಬೇಕು. ಮಳೆಗಾಲಾನಂತರ ಸಸಿಗಳಿಗೆ ನೀರು ಹುಯ್ಯುತ್ತಿರಬೇಕು, 2 - 3 ವರ್ಷಗಳ ತನಕ. 4 - 5 ವರ್ಷದಲ್ಲಿ ಅಕ್ಕಪಕ್ಕದ ರೆಂಬೆಗಳನ್ನು ಕಡಿದರೆ ನೆಟ್ಟಗೆ ಬೆಳೆಯುತ್ತದೆ. 10 ವರ್ಷದೊಳಗೆ ಕಡಿಯಬಹುದು.

ಎಕರೆಯಲ್ಲಿ ಸುಮಾರು ಸಾವಿರ ಮರಗಳನ್ನು ಬೆಳಸಬಹುದು.

70 ನೀರಂಜಿ (ನಿರಂಜಿ. ನೀರವಂಜಿ, **ಹೊಳೆಬೋಸಿ**) *Salix* sp. ಇದು ಹೊಳೆ, ಕಾಲುವೆ, ಹಳ್ಳಗಳಲ್ಲಿ ಹಾಕುವ ಮರ. ದಂಡೆ ಕೊರೆಯುವ

ದನ್ನು ತಪ್ಪಿಸುತ್ತದೆ. ತೇವದ ಜಾಗಳಲ್ಲೂ ಬೆಳೆಸಲು ಯೋಗ್ಯವಾದ ಮರ.

ಇದು ಸಣ್ಣಮರ; ಸುಮಾರು 6 – 12 ಮೀಟರ್ (20 – 40 ಅಡಿ) ಬೆಳೆಯುತ್ತದೆ. ಎಲೆ ಕಿರಿದು; ಆದರೆ ಸುಮಾರು 12.5 ಸೆಂ. ಮಿ (5 ಅಂಗುಲ) ಉದ್ದ. ಇದು ಕೂಡ ಬೇಸಿಗೆಯಲ್ಲಿ ಎಲೆ ಉದುರಿಸುತ್ತದೆ. ಹೂವು ಬಿಳುಪು, ಗೊಂಚಲಾಗಿ ಬಿಡುತ್ತದೆ.

ಇದರ ಒಳಮರ ಹಗುರ; 0.028 ಘನ ಮೀಟರ್ 15½ – 18 ಕೆ. ಜಿ. (1 ಘನಅಡಿ 34 – 40 ಪೌಡು) ತೂಗುತ್ತದೆ. ಬಣ್ಣ ಒಳಗೆ ಕಂದು; ಹಗುರವಾಗಿರುವುದರಿಂದ, ನಯವಾಗಿರುವುದರಿಂದ ಎತ್ತಿನ ನೊಗಗಳಿಗೆ ಬಹಳ ಒಪ್ಪು. ಇದರಿಂದ ಪೆಟ್ಟಿಗೆಗಳನ್ನು ಪೀಠೋಪಾಸನಗಳನ್ನು ಮಾಡಬಹುದು.

ಇದು ಒಳ್ಳೆಯ ಸೌದೆಮರ; ಶ್ರೇಷ್ಠವಾದ ಇದ್ದಿಲು ಸಿಗುತ್ತದೆ. ಸಣ್ಣ ರೆಂಬೆ ಮುಂತಾದುವುಗಳಿಂದ ಬುಟ್ಟಿ ಮುಂತಾದುವುಗಳನ್ನು ಹೆಣೆಯಬಹುದು. ಇದರ ಎಲೆ ದನಗಳ ಮೇವು.

ರೈತರಿಗೆ ಬಹಳ ಒಪ್ಪಾದ ಮರ.

71. ಕಲ್‌ಹೊನ್ನೆ (ಕಲ್‌ಮುತ್ತುಗ, ಕರಿಹೊನ್ನೆ) *Ougeinia ougeinensis* (Roxb.) Hochr.

ಇದರ ಒಳಮರ ಗಟ್ಟಿ; ವ್ಯವಸಾಯದ ಮುಟ್ಟು, ಗಾಡಿಚಕ್ರ, ಮನೆ ಕಂಬಗಳಿಗೆ ಯೋಗ್ಯ: ಕಡಿದರೂ ಪುನಃ ಚಿಗುರುತ್ತದೆ. ಇದನ್ನು ಬೆಟ್ಟದ ಕೊಚ್ಚಿಹೋದ ಇಳಿಕಲುಗಳನ್ನು ಸುಧಾರಿಸಲು ಹಾಕಬಹುದು. ಸುರುಜು, ಕರಿ ಎರೆಮಣ್ಣು, ಕೆಂಪು ಜಿಗಟು ಮಣ್ಣುಗಳಲ್ಲೂ ಬೆಳೆಯಬಹುದು.

ಇದನ್ನು ಬೀಜ ಊರಿ ಬೆಳೆಯಬೇಕು.

72. ಕಿರಿಬಿದರು (ಗಂಡು ಬಿದಿರು) *Dendrocalamus strictus.*

ಗಂಡುಬಿದರು ಮರವಲ್ಲದಿದ್ದರೂ, ಹುಲ್ಲಿನ ಜಾತಿಗೆ ಸೇರಿದ್ದರೂ, ಎತ್ತರಕ್ಕೆ, ದಪ್ಪಕ್ಕೆ ಮರದಂತೆ ಬೆಳೆಯುವುದರಿಂದಲೂ, ರೈತರಿಗೆ ಅನೇಕಾನೇಕ ಕೆಲಸಗಳಿಗೆ ಒದಗಿಬರುವುದರಿಂದಲೂ ಇದರ ವಿವರಗಳನ್ನು ಸ್ವಲ್ಪ ಕೊಟ್ಟಿದೆ.

ಬಿದರಿನಲ್ಲಿ ಅನೇಕ ಜಾತಿಗಳಿವೆ. ಆದರೆ ರೈತರು ಬೆಳೆಸಲು ಯೋಗ್ಯವಾದದ್ದು ಕಿರಿಬಿದಿರು. ಇದು ಒತ್ತಾಗಿ 2.5–7.5 ಸೆಂ. ಮೀ (1 ರಿಂದ 3 ಅಂಗುಲ) ದಪ್ಪಕ್ಕೆ, 6–15 ಮೀಟರ್ (20–50 ಅಡಿ) ಎತ್ತರಕ್ಕೆ ಬೆಳೆಯುವ ಬೊಂಬು. ಇದು ಎಳೆಯದಾಗಿದ್ದಾಗ ಇದರ ಬಣ್ಣ ಹಸುರು ; ಬಲಿತಾಗ ಹಳದಿ. ಹೆಚ್ಚಾಗಿ, ಅನೇಕ ಕಡೆ ಬೆಳೆಯುವ, ಬೆಳೆಸಬಹುದಾದ ಬೊಂಬೇ ಇದು. ಕಿರಿಬಿದರು ಗುಡ್ಡ

ಗಾಡುಗಳಲ್ಲಿ ಹೆಚ್ಚಾಗಿ ಬೆಳೆಯುತ್ತದೆ. ಭಾರತದ ಬೊಂಬುಗಳ ಪೈಕಿ, ಇದೇ ಬಹು ಗಟ್ಟಿಮುಟ್ಟಾದ ಬೊಂಬು. ಮಳೆ ಅಭಾವವಿರುವ ಕಡೆಯೂ ಬೆಳೆಯುವುದುಂಟು, ತೇವ ಹೆಚ್ಚಾಗಿರುವ ಕಡೆ ಚೆನ್ನಾಗಿ ಬೆಳೆಯುವುದಿಲ್ಲ.


ಕಟ್ಟಡಗಳಿಗೆ, ಬುಟ್ಟಿ ಮತ್ತು ಚಾಪೆ ಹೆಣಿಗೆಗೆ, ಊರುಕೋಲಿಗೆ, ದೋಣಿಗಳಿಗೆ, ಪೀಠಾಸನಗಳಿಗೆ, ಮುಟ್ಟುಗಳಿಗೆ ಹಾಗೂ ಹಿಡಿಗಳಿಗೆ ಬಹಳ ಯೋಗ್ಯವಾದ ಬೊಂಬು. ಇದರ ಎಲೆಯನ್ನು ಮೇವಿಗಾಗಿ ಹಾಕಬಹುದು. ಎಳೆಯ ಬುಡಗಳನ್ನು ತರಕಾರಿಯಾಗಿ ಉಪಯೋಗಿಸಬಹುದು. ಕಾಗದವನ್ನು ತಯಾರು ಮಾಡುತ್ತಿರುವುದು ಮುಖ್ಯವಾಗಿ ಈ ಬೊಂಬಿನಿಂದಲೇ.

ಇದನ್ನು ಬೀಜಗಳಿಂದ, ಸಸಿಗಳಿಂದ, ತುಂಡುಗಳಿಂದ ಹಾಗೂ ಕಂದುಮರಿಗಳಿಂದ ಬೆಳೆಸಬಹುದು. ಈ ಬೊಂಬು ಆಗಾಗ್ಗೆ ಕೆಲವು ಅಥವಾ ಒಟ್ಟಾರೆ ಎಲ್ಲವೂ ಹೂವು ಬಿಡುತ್ತದೆ. ಒಟ್ಟಾರೆ ಬಿಟ್ಟರೆ ಹೂವಿನ ಅನಂತರ ಬಿದರುಮೆಳೆ ಸಾಯುತ್ತದೆ.


ಇದರ ಬೀಜ ಗೋಧಿ ಅಥವಾ ಬತ್ತದಂತೆ ಇರುತ್ತದೆ. 28 ಗ್ರಾಂ (1 ಔನ್ಸ್)ನಲ್ಲಿ ಸುಮಾರು 1000 ಬೀಜಗಳಿರುತ್ತವೆ. ಸುಮಾರು ಶೇಕಡ 45 ಬೀಜಗಳು ಮಾತ್ರ ಮೊಳೆಯುತ್ತವೆ. ಮೊಳಕೆ 11 ರಿಂದ 48 ದಿನಗಳ ತನಕ. ಸಸಿಗಳನ್ನು ಮಳೆಗಾಲದ ಆದಿಯಲ್ಲಿ ಹದಗೊಳಿಸಿದ ಗುಣಿಗಳಲ್ಲಿ ನೆಡಬೇಕು. ಆಗಾಗ್ಗೆ ಕಳೆ ತೆಗೆಯಬೇಕು. ನೀರು ಎರೆಯುತ್ತಿರಬೇಕು. ಬುಡವನ್ನು ಕತ್ತರಿಸಿ, ಒಂದೊಂದರಲ್ಲೂ ಚೆನ್ನಾಗಿರುವ ಕಣ್ಣಿರುವಂತೆ ತುಂಡುಗಳನ್ನು ಮಾಡಿ ಹೂಣಬಹುದು.

73. ಗೋರವಿ (ಕಿಸ್ಸರ, ಹೆದ್ದರಣೆ, ಕನ್ಸುರಗಿ, ಗೂರಿಜಿ, ಹೆಣ್ಣುಗೊರವಿ)
Ixora parviflora Vahl.


ಮಲೆನಾಡಿನಲ್ಲಿ ರಾತ್ರಿಹೊತ್ತು ಪಂಜು ಹತ್ತಿಸಿ ಹಿಡಿದು ಓಡಾಡುವ ಮರ. ನಿತ್ಯ ಹಸುರು. ಸುಮಾರು ಎತ್ತರ. ಮಾರ್ಚಿ ಎಪ್ರಿಲಿನಲ್ಲಿ ಜೇನುತುಪ್ಪದ ವಾಸನೆಯ ಹೂವುಗಳು. ಚೇಗು ಗಟ್ಟಿ : ಎಳೆಗಳು ಏಕಪ್ರಕಾರವಾಗಿರುತ್ತವೆ. ಭಾರ. ಹೂವನ್ನು ಔಷಧಿಗಾಗಿ ಬಳಸುತ್ತಾರೆ. ಬೀಜದಿಂದ ಬೆಳೆಸಬೇಕು. ಬಯಲುಸೀಮೆಯಲ್ಲಿ ಕೆರೆ ನಾಲೆ ಪಕ್ಕಗಳಲ್ಲಿ ಹಾಕಬಹುದು.



ಚಿತ್ರ : 58. ಗೊರವಿ ಮರದ ರೆಂಬೆ. ಎಲೆ. ಹೂವು. ಕಾಯಿ.



ಚಿತ್ರ : 59. ಹೆತ್ತೇಗ ಅಥವಾ ಅರಿಸಿನ ತೇಗ. ನೋಡಿ : ಪುಟ 156.




ಚಿತ್ರ : 60. ಬೂರುಗದ ಮರದ ರೂಪ. ನೋಡಿ : ಪುಟ 46.




ಚಿತ್ರ : 61. ದೊಡ್ಡಮರದ ರೂಪ. ನೋಡಿ : ಪುಟ 55.



ಚಿತ್ರ : 62. ದೂಪದಮರದ ರೂಪ. ನೋಡಿ : ಪುಟ 17.




ಚಿತ್ರ : 63. ಬೇವಿನಮರದ ರೂಪ. ನೋಡಿ : ಪುಟ 57.




ಚಿತ್ರ : 64. ಹುಚ್ಚಬೇವುಮರದ ರೂಪ. ನೋಡಿ : ಪುಟ 60.




ಚಿತ್ರ : 65. ಕೆಂಪುಗಂಧಗರಿಮರದ ರೂಪ. ನೋಡಿ : ಪುಟ 62.




ಚಿತ್ರ : 66. ಕೆಂಪಾಕೀಮರದ ರೂಪ. ನೋಡಿ : ಪುಟ 66.




ಚಿತ್ರ : 67. ಅಂಟುವಾಳಮರದ ರೂಪ. ನೋಡಿ : ಪುಟ 68.




ಚಿತ್ರ : 68. ಉಡಿಮರದ ರೂಪ. ನೋಡಿ : ಪುಟ 71.




ಚಿತ್ರ : 69. ಬಿಂದಿಮರದ ರೂಪ. ನೋಡಿ : ಪುಟ 80.



ಚಿತ್ರ : 70. ಹೊಂಗೆಮರದ ರೂಪ. ನೋಡಿ : ಪುಟ 90.



ಚಿತ್ರ : 71. ಕ್ಯಾಷಿಯಜವಾನಿಕ. ಜಾವಾಕಕ್ಕೆ. ನೋಡಿ : ಪುಟ 99.



ಚಿತ್ರ : 72. ಹುಣಿಸೆಮರದ ರೂಪ. ನೋಡಿ : ಪುಟ 40.




ಚಿತ್ರ : 73. ಉಳಿಪೆ ಮರದ ರೂಪ. ನೋಡಿ : ಪುಟ 108.




ಚಿತ್ರ : 74. ಜಾಲಿ ಮರದ ರೂಪ. ನೋಡಿ : ಪುಟ 115




ಚಿತ್ರ : 75. ಜಾಲಿ, ಕಂಪ್ರೆಸಿಫಾರ್ಮಿಸ್; ಜಾಲಿಯ ಒಂದು ಪ್ರಭೇದ.



ಚಿತ್ರ : 76. ಬಿಡ್ಡೆ ಜಾಲಿಯ ರೂಪ. ನೋಡಿ : ಪುಟ 125



ಚಿತ್ರ : 77. ಕಗ್ಗಲಿ ಮರದ ರೂಪ. ನೋಡಿ : ಪುಟ 122




ಚಿತ್ರ : 78. ಬಾಗೆ ಮರದ ರೂಪ. ನೋಡಿ : ಪುಟ 128




ಚಿತ್ರ : 79. ಹೊಟ್ಟೆಬಾಗೆ ಮರದ ರೂಪ. ನೋಡಿ : ಪುಟ 131



ಚಿತ್ರ : 80. ಮತ್ತಿ ಮರದ ರೂಪ. ನೋಡಿ : ಪುಟ 136




ಚಿತ್ರ : 81. ಬಿಳಿಮತ್ತಿ (ಅರ್ಜುನ) ಮರದ ರೂಪ. ನೋಡಿ : ಪುಟ 138




ಚಿತ್ರ : ೪೭. ಹಿರ ಮರದ ರೂಪ. ನೋಡಿ : ಪುಟ 139



ಚಿತ್ರ : 83. ಕರ್ಪೂರದ ಮರದ ರೂಪ. ನೋಡಿ : ಪುಟ 148



ಚಿತ್ರ : 84. ಕದಂಬ ಮರದ ರೂಪ. ನೋಡಿ : ಪುಟ 155



ಚಿತ್ರ : 85. ಹೆತ್ತೇಗ ಮರದ ರೂಪ. ನೋಡಿ: ಪುಟ 58



ಚಿತ್ರ : 86. ಜಗಳಗಂಟಿ ಮರದ ರೂಪ. ನೋಡಿ : ಪುಟ 159



ಚಿತ್ರ : 87. ಸಿಲ್ವರ್‌ಓಕ್ ಮರದ ರೂಪ. ನೋಡಿ : ಪುಟ 166

Scientific names ; synonyms ; common names in English, Hindi and Kannada

Illustration numbers in italics

Hindi words are marked (H)

ಮರಗಳ ಆಕಾರಾದಿ ಹೆಸರುಗಳು ಮತ್ತು ಸಮಾನ ನಾಮಗಳು ಇತ್ಯಾದಿ

ಚಿತ್ರ ಸಂಖ್ಯೆಯನ್ನು ಇಟಾಲಿಕ್ಸ್‌ನಲ್ಲಿ ತೋರಿಸಿದೆ

3 ನೆಯ ಕಾಲಮ್ಮಿನಲ್ಲಿ ಬಳಸಿರುವ ಸಂಕೇತಾಕ್ಷರಗಳ ಅರ್ಥ. ದೊ – ದೊಡ್ಡಮರ ; ಮ – ಮಧ್ಯಮಗಾತ್ರದ ಮರ ; ಸ – ಸಣ್ಣಮರ ಅಥವಾ ಹೊದರು ; ಎಉ – ಎಲೆ ಉದುರಿಸುವ ಮರ ; ನಿಹ – ನಿತ್ಯಹಸುರಿನ ಮರ ; ಅ – ಅಲಂಕಾರದ ಮರ ; ಮೇ–ಎಲೆಕಾಯಿ ಮೇವು ; ಹ – ಹಣ್ಣು ಕೊಡುತ್ತದೆ ; ಚೌ – ಚೌಬೀನೆ ಕೆಲಸಗಳಿಗೆ ಒದಗುತ್ತದೆ ; ಸೌ – ಸೌದೆ ಮರ ; ಸಾ – ಸಾಲುಮಾರವಾಗಿ ಬೆಳೆಸಬಹುದು ; ಬಿ – ಬಿಡಿಬಿಡಿಯಾಗಿ ಬೆಳೆಸಬಹುದು ; ತೋ – ತೋಪುಗಳಲ್ಲಿ ಬೆಳೆಸಬಹುದು ; ಕಾ – ವನಗಳಾಗಿ ಅಥವಾ ಕಾಡಿನಲ್ಲಿ ಬೆಳೆಸಬಹುದು ; ಮಕ – ಮಳೆ ಕಡಿಮೆ ಇರುವ ಶುಷ್ಕ ಪ್ರದೇಶಗಳಿಗೆ ಸೂಕ್ತ ; ತೇ – ತೇವ ಪ್ರದೇಶದಕ್ಕೆ ಒಪ್ಪು ; ಸುತೇ – ಸುಮಾರು ತೇವವಿರುವುದು ಒಪ್ಪು ; ಮೆ – ಮೆಕ್ಕಲು ಮಣ್ಣಿನಲ್ಲಿ ಬೆಳೆಯತಕ್ಕದ್ದು ; ಕರೆ; ಸಮುದ್ರದ ಕರೆಯಲ್ಲಿ ಸಾಮಾನ್ಯ ; ಮಲೆ – ಮಲೆನಾಡಿನ ಮರ ; ಕೈ – ಕೈಗಾರಿಕೆಗೆ ಕಚ್ಚಾವಸ್ತು ; ಔ – ಔಷಧಿಗೆ ಒದಗುತ್ತದೆ ; ಮು : ವ್ಯವಸಾಯದ ಮುಟ್ಟುಗಳಿಗಾಗಿ ಉಪಯೋಗಿಸುತ್ತಾರೆ.

ಕ್ರಮ ಸಂಖ್ಯೆ	ಮರದ ಸಂಖ್ಯೆ	ಮರದ ಹೆಸರು	ಮರದ ಇತರ ಹೆಸರುಗಳು	ಮರದ ವೈಜ್ಞಾನಿಕ ಮತ್ತು ಇತರ ನಾಮಗಳು	ಮರದ ಕುಲ ಇಂಗ್ಲಿಷ್ ಮತ್ತು ಕನ್ನಡ	ಪುಟ ವಿವರ	ಚಿತ್ರ ಸಂಖ್ಯೆ
1	2	3	4	5	6	7	8
1	29	ಅಗಸೆ ಸ/ಮ, ಮೇ, ಸೌ, ತೇ, ತೋ. ತರಕಾರಿ	ಚಿಟ್ಟಗಚೆ	*Sesbania grandiflora* (Linn) Poir ಸೆಸ್ಬೇನಿಯಾ ಗ್ರ್ಯಾಂಡಿಫ್ಲೋರ Syn. Aeschynomene grandiflora *Roxb.* Swamp pea (Hin) Agasti, basta, hatiya	Leguminosae ಲೆಗೂಮಿನೋಸೀ 1. Papilionaceae ಪ್ಯಾಪಿಲಿಯೋನೇಸೀ	74	*21*

1	2	3	4	5	6	7	8
2	**49 (vi)**	ಅಳಲೆ ಮ/ದೊ, ಎಲು, ಚೌ, ಬಿಡಿ, ಕಾ. ಮು. ಔ.		*Terminalia chebula* Retz ಟರ್ಮಿನೇಲಿಯ ಚೆಬುಲ Black myrabolan. Chebulic myrabolan. Negroes' olive tree (Hin) Har. harara	Combretaceae ಕಾಂಬ್ರಿಟೇಸೀ	143	
3	**56**	ಅಂಕೋಲೆ ಸ, ಎಲು/ಸಿಹ ಚೌ, ಸೌ, ಬಿಡಿ ಮು.	ಅಂಕಲಿಗೆ ಅನ್ಸೂರಳಿ	*Alangium salvi-folium* (Linn ff) Wang ಅಲಾಂಗಿಯಂ ಸಾಲ್ವಿ ಫೋಲಿಯಂ Syn: A. Lamarckii *Thw* A. hexapetalum *Roxb*	Alangiaceae or Cornacae ಅಲಾಂಗಿಯೇಸೀ ಅಥವಾ ಕಾರ್ನೇಸೀ	153	*47*
4	**25**	ಅಂಟುವಾಳ ದೊ, ಎಲು, ಅ, ಮಕ. ಮು.	ಅಟ್ಟಾಲ ಅರ್ತಲ ಕುಗತಿ ತೊಗಟೆಮರ ನೊರೆಕಾಯಿ	*Sapindus emarginatus* Vahl ಸ್ಯಾಪಿಡಸ್ ಎಮಾರ್ಜಿನೇಟಸ್ Syn. S. laurifolius *Vahl* S. trifoliatus *Linn* Soapnut (Hin) Ritha	Sapindacacea ಸ್ಯಾಪಿಂಡೇಸೀ	68	*16* *67*
5	**59 (i)**	ಇಪ್ಪೆ ದೊ,ಎಲು,ಹ,ಚೌ.ಸಾ, ಮು, ತೊ. ತರಕಾರಿ	ದೊಡಿಪೆ ಹಿಪ್ಪೆ	*Madhuca longifolia* (Linn) Macbride	Sapotaceae ಸಪೋಟೇಸೀ	157	*48*

1	2	3	4	5	6	7	8
6	**27**	ಉಡಿಮರ ಎಲು, ಮಕ, ಕೈ, ಸಾ, ಮೇ, ಮು.	ಊದಿಮರ ಕುರಟಿಗೆ, ಗೋಗಲ್ ಶಿಂತಿ, ಸಿಂಟಿಮರ ಹೆಣ್ಣುಗೊಡ್ಡ	*Lanea coramandelica* (Houtt) Merr ಲ್ಯಾನಿಯ ಕೋರಮಂಡೆಲಿಕ Syn: Odina wodier	Anacardiaceae ಅನಾಕಾರ್ಡಿಯೇಸೀ	71	*19* *68*
7	**41 (ii)**	**ಉಳಿಪೆ** ಮ, ಎ ಉ, ಅ, ಸೌ, ಮಕ, ಸಾ, ಕಾ, ಚೌ,	ಬಿಳಿ ಕಂಚುವಾಳ	*Bauhinia variegata* Linn ಬಾಹೀನಿಯ ವೆರಿಗೇಟ Syn. B. candida *Roxb* Hin. Kachnar, Kural, Kadan	Leguminosae ಲೆಗೂಮಿನೋಸಿ 2. Ceasalpinieae ಸಿಸಾಲ್‌ಪಿನಿಯೀ	108	*34* *73*
8	**38 ii**	ಒಳ್ಳೆತಂಗಡಿ ಸ, ಮಕ, ಕೈ	ಆವರಿಕೆ ತಂಗಡಿ	*Cassia auriculata* Linn ಕ್ಯಾಷಿಯಾ ಆರಿಕ್ಯುಲೇಟ Tanners' Cassia	Leguminosae ಲೆಗೂಮಿನೋಸಿ 2. Ceasalpinieae ಸಿಸಾಲ್‌ಪಿನಿಯೀ		99
9	**97**	**ಕಕ್ಕೆ** ಸ, ಎಉ, ಅ, ಚೌ, ಸೌ, ಮಕ, ಸಾ, ತೋ, ಕಾ.		*Cassia fistula* Linn ಕ್ಯಾಷಿಯ ಫಿಸ್ಟುಲ	,,		97
10	**45 (ii)**	**ಕಗ್ಗಲಿ** ಮ, ಎಉ, ಚೌ, ಸಾ, ಮೊ, ಕಾ	ಕಾಚು ತಾರ ತೆರೆ	*Acacia catechu* (Linn ff) Willd.	Leguminosae ಲೆಗೂಮಿನೋಸೀ 3. Mimosae ಮಿಮೋಸೀ	*122*	*36* 77

1	2	3	4	5	6	7	8
11	**57**	**ಕದಂಬ** ದೊ, ಎಉ, ಚೌ, ತೇ, ಮ, ಸಾ, ಕಾ	ಎತ್ತರದ ಕಡಗದ ಮರ ಕಡವ ಕಡವಳ ಕಡವಾಲಮರ ಕದಂಬವೃಕ್ಷ ಕೊಡೆಯಾಲ ದಾರುಕದಂಬ	*Anthocephalus cadamba* (Roxb) Miq ಅಂತೋಕೆಫಾಲಸ್ ಕದಂಬ Syn. Nauclea cadamba *Roxb* (Hin) Kadamba, Karm	Rubiaceae ರೂಬಿಯೇಸಿ	155	85
12	**51**	**ಕರ್ಪೂರದ ಮರ** ದೊ, ಎಉ, ಲ, ಚೌ ಸಾ, ಮಕ, ಸಾ, ಕಾ,	ನೀಲಗಿರಿ ತೈಲದ ಮರ ಯೂಕಲಿಪ್ಟಸ್ ವಂಶಗಳು	*Eucalyptus* sp	Myrtaeceae ಮಿರ್ಟೇಸೀ	145	*43* *83*
13	**15**	**ಕರಿಬೇವು** ಸ, ಎಉ/ನಿಹ ತರಕಾರಿ, ಮು		*Murraya koenigii* (Linn) Spreng ಮರ್ರಯ ಕೊಎನ್‌ಜೈ Syn. Bergera koenigii *Linn* Curry leaf tree. (Hin) Harri, Katnim barsanga, gandela	Rutaceae ರೂಟೇಸೀ	54	*12*
14	**71**	**ಕಲ್‌ಹೊನ್ನೆ,** ಮ/ಸ, ಮಕ, ಮು,	ಕರೀ ಹೊನ್ನೆ ಕಲ್‌ಮುಕ್ಕುಗ ನೇಹಿ	***Ougeinia ougeinensis*** (Roxb) Hochr ಔಜಿನೀಯ ಔಜಿನೆನ್ಸಿಸ್ Syn. O. dalbergiodcs *Benth*	Leguminosae ಲೆಗೂಮಿನೋಸಿ	175	

1	2	3	4	5	6	7	8
15	2	ಕಲ್ತೇಗ ದೊ, ಎಉ, ಮಕ, ಸೊಪ್ಪು	ಕಾಡುಗಣಗಲು ಮದತೇಗ ಮಳೆಗೇರು	*Dillenia pentagyna* Roxb ಡಿಲ್ಲೇನಿಯ ಪೆಂಟಗೈನ	Dilleniaceae ಡಿಲ್ಲೇನಿಯೇಸೀ	36	
16	66	ಕಾಟ್ ಕಂಬಳ ಮ/ದೊ, ಎಉ, ಸಾ, ಔ. ಮು, ಕೈ	ಕಾಡುಕುಂಬಳ	*Trewia nudiflora* Linn ಟ್ರೆವಿಯ ನೂಡಿಫ್ಲೋರ (Hin) Tumri, gamhar, Pindara	Euphorbiaceae ಯೂಫರ್‌ಬಿಯೇಸೀ	169	*56*
17	59 (ii)	ಕಾಡುಹಿಪ್ಪೆ ದೊ, ಎಉ, ಹ, ಚೌ, ಮಕೆ, ತೊ		*Madhuca indica* Gmel ಮಧುಕ ಇಂಡಿಕ Syn: M. latifolia *(Roxb)* *Macbride* Bassia latifolia *Roxb* Butter tree, Mohwa (Hin) Mohwa, jangli moha, mahula	Sapotaceae	159	
18	39	ಕಾರಾಚಿ ಮ/ದ, ನಿಹ, ಮಕ, ಚೌ, ಮು. ಮೇ. ಸೊಪ್ಪು.	ಆಸನಗುರ್ಗಿ ಕಮ್ಮಾರ ಕಮ್ಮಾರ್ ಕಮ್ರ	*Hardwickia binata* Roxb ಹಾರ್ಡ್ವಿಕಿಯ ಬಿನಾಟ	Leguminosac ಲೆಗೂಮಿನೋಸೀ	103	*32*

1	2	3	4	5	6	7	8
9	38 iii	ಕ್ಯಾಷಿಯ	ದೊಡ್ಡದಗರೆ	*Cassia grandis h·f*	Leguminosac	101	
	ಉ	ಗ್ರಾಂಡಿಸ್		ಕ್ಯಾಷಿಯ ಗ್ರಾಂಡಿಸ್	ಲೆಗೂಮಿನೋಸೀ		
		ಮ/ದೋ. ಎಉ,		Horse cassia	Ceasalpinieae		
		ಅ.		Pink cassia	ಸಿಸಾಲ್‌ಪಿನಿಯೀ		
20	38 iii	ಕ್ಯಾಷಿಯ	ಜಾವಾತಂಗಡಿ	*Cassia javanica* Linn	,,	99	*31*
	ಅ	ಜವಾನಿಕ		ಕ್ಯಾಷಿಯ ಜವಾನಿಕ	,,		*71*
		ಮ, ಎಉ, ಅ, ತೇ,		Syn: C. bacillus *Roxb*	,,		
		ಸ.ತೇ, ಸಾ, ತೋ,		Java cassia	,,		
21	38 iii	ಕ್ಯಾಷಿಯ	ಗುಲಾಬಿ ಕ್ಯಾಷಿಯ	*Cassia nodosa*	,,	99	
	ಅ	ನೋಡೋಸ	ಗುಲಾಬಿ ಮೊಹರ್	Buch Ham ex Roxb	,,		
		ಮ, ಎಉ, ಅ,		ಕ್ಯಾಷಿಯ ನೊಡೋಸ	,,		
		ತೇ, ಸುತೇ, ಸಾ,		Pink cassia	,,		
		ತೋ		Pink mohur	,,		
22	38 iii	ಕ್ಯಾಷಿಯ	ಕೆಂಪು ಕ್ಯಾಷಿಯ	*Cassia marginata* Roxb	,,	101	
	ಈ	ಮಾರ್ಜಿನೇಟ	ಕೆಂಪು ಲಾಬರ್ನಮ್	ಕ್ಯಾಷಿಯ ಮಾರ್ಜಿನೇಟ	,,		
		ಸ, ಎಉ, ಅ		Syn. C. roxburghii *DC*	,,		
				Red cassia	,,		
				Red Indian laburnum	,,		
23	38 iii	ಕ್ಯಾಷಿಯ	ಬರ್ಮಾ ಕ್ಯಾಷಿಯ	*Cassia renigera* wall	,,	100	
	ಇ	ರೆನೀಜಿರ		ಕ್ಯಾಷಿಯ ರೆನೀಜಿರ	,,		
		[illegible]		Burmese Pink cassia			

1	2	3	4	5	6	7	8
24	69	ಕ್ಯಾಸರಿಕೆ ದೊ, ನಿಹ, ಅ, ಸೌ, ಕರೆ, ಸಾ, ತೊ, ಕಾ	ಕ್ಯಾಷುರೀನ ಕೇಸರಿಕೆ ಸರ್ವೆ ಮರ	*Casuarina equiseti-folia* Forest ಕ್ಯಾಷುರೀನ ಈಕ್ವಿಸೆಟಿಫೋಲೀಯ Syn. C. muricata *Roxb* Australian oak, Beefwood, Casuarina, She-oak, Tinian pine	Casuarinaceae ಕ್ಯಾಷುರಿನೇಸೀ	172	*57*
25	9	ಕಿರಲ್ ಬೋಗಿ ದೊ, ನಿಹ, ತೇ (ಮಲೆನಾಡು) ಚೌ, ಮು ಕಾ	ಕರ್ಪರ ಕಲ್‌ಬಾನೆ ತಿರ್ಪುಬೋಗಿ ಬೋವುಮರ ಸಣ್ಣಲೆಬೋಗಿ ಬಿಳಿಬೋಗಿ	*Hopea parviflora* Bedd ಹೋಪಿಯ ಪಾರ್ವಿಫ್ಲೋರ Ironwood of Malabar	Diptero-carpaceae ಡಿಪ್ಟರೋಕಾರ್ಪೇಸೀ	45	
26	72	ಕಿರಿಬಿದರು ಮ, ಎಉ, ಮೋ, ಚೌ, ಇ, ಕಮು, ಕಾ	ಗಂಡುಬಿದರು	*Dendrocalamus strictus* Nees ಡೆಂಡ್ರೊಕಲಾಮಸ್ ಸ್ಟ್ರಿಕ್ಟಸ್ Male bamboo (Hin) Bans	Graminae ಗ್ರಾಮಿನೀ	175	
27	63	ಕೂಲಿ ದೋ, ಮಲೆನಾಡು, ಸುತೀ, ಎಉ,	ಕಾಶ್ಮೀರಿಮರ ಕುಮುತಿ ಕುಮುರಿ	*Gmelina arborea* Roxb ಮೆಲೀನ ಆರ್ಬೋರಿಯ Candahar tree	Verbenaceae ವರ್ಬಿನೇಸೀ	164	*53* *87*

1	2	3	4	5	6	7	8
		ಸಾ, ಕಾ, ಚೌ, ಕೈ, ಮೋ, ಮಂ	ಗುಲುಡುಮರ ಹುಚ್ಚುನವರೆ	Coomb teak Kashmir tree White teak (Hin) Gamhar, Sewan, Khamara			
3	**24**	**ಕೆಂದಾಳೆ** ಮಂ, ಅ, ಎಉ, ಕೈ, ಮು, ಸಾ, ಕಾ, ಮೋ	ಅರಗಿನಮರ ಚಕ್ಕೋತ ಚೆಂಡಾಲಿ ಸಗದೆ ಸಗಡೆಕೆಂದಾಳ	*Sehleichera oleosa* (Lour) Oken ಶ್ಲೀಚೇರ ಓಲಿಯೋಸ Syn. S. trijuga Ceylon oak ; Gum lac tree Honeytree, lac tree (Hin) Kusam, ganasagh	Sapindaceae ಸ್ಯಾಪಿಂಡೇಸಿ	66	17
[illegible]	**22**	**ಕೆಂಪುಗಂಧಗರಿ** ದೊ, ಎಉ, ಚೌ, ಮೋ, ತೇ, ಸುತೇ, ಸಾ, ಕಾ	ನಂದಿವೃಕ್ಷ ನಂದುರಿ ನಂದುರಿಕೆ ನೊಗ್ಗ ಟೂನಮರ ತುಂಡ ಬಿಳಿಂದಿಗಂಧ ಬೇಲುಂದಿ	*Toona ciliata* Roem ಟೂನ ಸಿಲಿಯೇಟ Syn. Cedrella toona *Roxb* Happy tree, Indian Mahogany, Moulmein cedar. Singapore cedar Toon (Hin) Tun, mahalimbu tunkajhar	Meliaceae ಮಿಲಿಯೇಸೀ	62	*16* 45

1	2	3	4	5	6	7	8
30	**41 (i)**	**ಕಂಚುವಾಳ** ಮ, ನಿಹ, ಅ, ಚೌ, ಮೇ, ಸುತೇ, ಮಕ, ಸಾ, ತೋ	ಕೆಂಪುಮಂದಾರ ಸರುಳ್	*Bauhinia purpurea* Linn ಬಾಹೀನಿಯ ಪರ್ಪೂರಿಯ Camel's foot tree Geranium tree Mountain ebony Tree Bean (Hin) Kachnar, kandar Kaliar	Leguminosae ಲೆಗೂಮಿನೋಸೀ Ceasalpinieae ಸಿಸಾಲ್‌ಪಿನೀಯೀ	108	*34*
31	**35**	**ಗ್ಲಿರಿಸಿಡಿಯಾ** ಸ, ಎಲು, ಅ, ಸೌ, ಸೊಪ್ಪು, ಸುತೇ, ಮಕ, ತೋ, ಶಾ	ನಾಗಕೇಸರಿ	*Gliricidia sepium* (Jacq) Walp ಗ್ಲಿರಿಸಿಡಿಯಾ ಸೆಪಿಯಂ Syn. G. maculata *HBK* Madre tree Mother of Cocoa Madura shade tree	Leguminosae ಲೆಗೂಮಿನೋಸೀ Papilionaceae ಪ್ಯಾಪಿಲಿಯೊನೇಸೀ	86	*27*
32	**65**	**ಗೊಬ್ರನೇರಳೆ** ಮ, ತೇ, ಎಲು, ಚೌ, ವು, ಸಾ, ಸೊಪ್ಪು	ಗೋವರ್‌ನೆಲ್ಲು ನೀಲಮರ	*Bischofia javanica* Blume ಬಿಸ್‌ಚೋಫಿಯ ಜವಾನಿಕ Syn. Micraelus raeperianus *Wtearn*	Euphorbiaceae ಯೂಫರ್‌ಬಿಯೇಸೀ	168	55
33	**73**	**ಗೊರವಿ** ಸ, ಅ, ತೇ	ಕನ್ನುರಗಿ ಕಿಸ್ಸರ	*Ixora parviflora* Vahl ಇಕ್ಸೋರ ಪಾರ್ವಿಫ್ಲೋರ	Rubiaceae ರೂಬಿಯೇಸೀ	177	58

1	2	3	4	5	6	7	8
			ಗೊರಿಜಿ ಹೆದ್ದರಣೆ ಹೆಣ್ಣುಗೊರವಿ	Indian torch tree Hin. Kotagondhal nevari			
4	**52**	ಗೋರಂಟಿ ಸ, ಅ, ಔ, ಮು, ಮಕ	ಮದರಂಗಿ	*Lawsonia inermis* Linn ಲಾಸೋನಿಯ ಇನರ್‌ಮಿಸ್ Syn : L. alba Camphirce Egyptian privet Henna. Indian privet Mignonette tree (Hin) Mehndi	Lythraceae ಲೈಥ್ರೇಸೀ	148	*44*
5	**55**	ಚನ್ನಂಗಿ ಸ, ಮಕ, ಮು	ಚನ್ನಂಗಿಮರ ಚನಂಗೆ	*Lagerstroemia parvi-* *flora ROXB* ಲಾಗರ್‌ಸ್ಟ್ರೋಮಿಯ ಪಾರ್ವಿಫ್ಲೋರ	Lythraceae ಲೈಥ್ರೇಸೀ	153	
6	**46 (iv)**	ಚುಗ್ಗಲು ಮ, ಮು, ಮಕ, ತೇ, ಸುತೇ	ಕಾಡ್ಸೀಗೆ ಚಿಗರಿ ಬಿಲ್ಕಂಬಿ ಸುಜ್ಜಲು	*Albizia amara* Boir ಆಲ್‌ಬೀಸಿಯ ಅಮಾರ	Leguminosae ಲೆಗೂಮಿನೋಸಿ 3. Mimosae ಮಿಮೋಸೀ	132	
7	**60 (i)**	ಜಗಳಗಂಟಿಮರ ಸ, ಮಕ, ಔ, ಸೌ	ಕಲಿನಂದಿ ಬಿಲ್ಕುನಿಕ	*Diospyros montana* Roxb ಡಯೋಸ್ಪೈರಸ್ ಮೊಂಟಾನ Syn. D. cordifolia *Roxb*	Ebenaceae ಎಬಿನೇಸೀ	159	*49*

1	2	3	4	5	6	7	8
				Mottled ebony (Hin) Bistendu, tendu lohari			
38	45 (i)	ಜಾಲಿ ಮ, ನಿಹ, ಚೌ, ಸೌ, ವೇ, ಮಕ, ಸಾ,	ಕರಿಜಾಲಿ ಗೊಬ್ಬಳಿ ಪ್ರಭೇಧಗಳು a. ಗೋಡಿ, ತೇಲಿ, ಅಥವಾ ತೇಲಿಯ b. ವೇದಿ, ಕಾವಡಿ ಕೆಯೂರು ಅಥವಾ ಕಾರಿಯ c. ರೆಂಕಂಟ, ಕಾಬೂಲಿ, ಕಿಕಾರ್, ರಾಮಕಂಟ ಅಥವಾ ರಾಮಕಾಟ	*Acacia nilotica* subsp *indica* Benth ಅಕೇಷಿಯ ನಿಲೋಟಿಕ ಉಪ ವರ್ಗ ಇಂಡಿಕ Syn. A. arabica *Willd* Mimosa arabica *Linn* Black babool, babul, Indian gum arabic tree Kikar	Leguminosae ಲೆಗೂಮಿನೋಸೀ Moimosae ಮಿಮೋಸೀ	115 117	35
39	42	ಜಂಬೆ ದೊ, ತೇ, ಚೌ, ಸೌ, ಕೈ, ಎಲು	ಇರುಳ್‌ಮರ ತಿರುವ ಶಿಲ್ವೆ	*Xylia xylocarpa* (Roxb) Taub ಕ್ಸೈಲಿಯ ಕ್ಸೈಲೋಕಾರ್ಪ Irul tree	Leguminosae ಲೆಗೂಮಿನೋಸೀ	110	
40	50	ಡಿಂಡಿಗ ಮ, ಮಕ, ಮು, ತೋ, ಸೌ, ಇದ್ದಿಲು	ದಿಂಡ್ಲು ಬೆಜ್ಜಲು	*Anogeissus latifolius* Roxb Wall ex Bedd ಅನೋಜೀಸಸ್ ಲಾಟಿಫೋಲಿಯಸ್ Axle wood	Combretaceae ಕಾಂಬ್ರಿಟೇಸೀ	144	

1	2	3	4	5	6	7	8
41	**14**	ತಡಸಾಲು ಸುತೇ, ಕರೆ, ಸ, ಕೈ, ಮು, ಬಿಡಿ	ಶಡ್ಸಾಲ್ ತಡಸಲು ತದಸಲು	*Grewia tiliaefolia* Vahl ಗ್ರೀವಿಯ ಟಿಲಿಯೆಫೋಲಿಯ	Tiliaceae ಟಿಲಿಯೇಸೀ	53	
42	**68**	ತಪಸಿ ದೊ. ತೇ. ಮಕ, ಎಉ, ಮು, ಕೈ, ಮೇ	ಕಾಲಾದ್ರಿ ಥಪ್ಸಿ ರಸಬೀಜ	*Holoptela integrifolia* (Roxb) Planch ಹೊಲೊಪ್ಟೆಲ ಇಂಟೆಗ್ರಿಫೋಲಿಯ	Ulmaceae ಉಲ್ಮೇಸೀ	171	
43	**49 (iii)**	ತಾರೆ ದೊ, ಎಉ. ಅ, ಚೌ. ಮಕ, ತೇ, ಕಾ	ತಾರೆವ:ರ ಶಾಂತಿ	*Terminalia bellirica* (Gaertn) Roxb ಟರ್ಮಿನೇಲಿಯ ಬೆಲ್ಲಿರಿಕ Balleric myrabolan Bastard myrobolan Beddanut (Hin) Bahera, Sagona	Combretaceae ಕಾಂಬ್ರಿಟೇಸೀ	139	*41* *82*
44	**16**	ದೊಡ್ಡಮರ ದೊ. ಎಉ, ಚೌ, ಮೇ. ಮೆ. ಸಾ, ತೋ, ಕಾ	ಮಹಾವೃಕ್ಷ ಹಿರೇಮರ ಹೆಮ್ಮರ	*Ailanthus excelsa* Roxb ಐಲಾಂಥಸ್ ಎಕ್ಸೆಲ್ಸ (Hin) Maharuk. mahanim	Simarubaceae ಸಿಮರೂಬೇಸೀ	55	*13* *61*
45	**17**	ಧೂಪದಮರ ಮ, ಎಉ, ಮಕ, ಕೈ	ಗುಗ್ಗಳ ಧೂಪ ಚಿಲಕಡಿ ಚಿಲಕ ಧೂಪ	*Boswellia serrata* Roxb Colebr ಬಾಸ್ವೆಲ್ಲಿಯ ಸೆರ್ರಾಟ	Burseraceae ಬರ್ಸೆರೇಸೀ	56	*62*

1	2	3	4	5	6	7	8
			ಮಡ್ಡಿಮರ ಮಾದಿಚತ್ರ				
46	**8**	ನಾಗಸಂಪಿಗೆ ಅತಿಭಾರ, ಮಲೆ ನಾಡು, ತೇ, ದೊ, ಕೈ, ಚೌ, ಮು	ಕಸರ ನಾಗಕೇಸರಿ ನಾಗಚಂದ	*Mesua ferrea* Linn ಮೆಸೂಯ ಫೆರಿಯ Ironwood tree	Guttiferae ಗಟ್ಟಿಫರೀ	44	*6*
47	**49 (v)**	ನಾಡು ಬಾದಾಮಿ ದೊ, ಎಉ, ಹ, ಕೈ, ಅ, ಸಾ	ದೇಶೀ ಬಾದಾಮಿ	*Terminalia catappa* Linn ಟರ್ಮಿನೇಲಿಯ ಕಟಪ್ಪ Almendro, Country almond, Indian almond. Malabar almond, Tropical almond. Avola nut (Hin) Hindi badam Jungli badam	Combretaceae ಕಾಂಬ್ರಿಟೇಸೀ	142	*42*
48	**70**	ನೀರಂಜಿ ಸ, ತೇ, ಎಉ, ಸೌ, ಮು, ಚೌ, ಮೇ	ನೀರವಂಜಿ ಹೊಳೆಬೋಸಿ	*Salix* SP ಸಾಲಿಕ್ಸ್ ವಂಶಗಳು South Indian Willow	Salicaceae ಸಾಲಿಸೇಸೀ	174	
49	**28**	ನುಗ್ಗೆ ಸ/ಮ, ಎಉ,	ಮೋಚಕಮರ	*Moringa oleifera* Lamk ಮೊರಿಂಗ ಓಲಿಫೆರ	Moringaceae ಮೊರಿಂಗೇಸೀ	70	*20*

1	2	3	4	5	6	7	8
		ಅ, ಹ, ವೇ. ತೇ, ಮಕ, ತೋ		Syn. M. Pterygosperma *Gaertn* Hyperanthera moringa *Willd* Ben tree Drumstick tree Horse radish tree			
50	54	ನಂದಿ ಮ/ದೋ. ಎಉ, ತೇ, ಚೌ, ಮು, ಕೈ	ಬೆಲ್ಮತ್ತಿ ಬೋಳಂದರು	*Lagerstroemia lanceolata* Wall ex. Wt Arn ಲಾಗರ್‌ಸ್ಟ್ರೋಮಿಯ ಲಾನ್ಸಿಯೋಲಾಟ Venteak	Lythraceae ಲೈಥ್ರೇಸೀ	151	46
51	4	ಪುತ್ರಜೀವಿ ದೊ, ನಿಹ, ಅ, ತೇ, ಸಾ, ತೋ	ಮದರಾಸ್ ಅಶೋಕ ವೃಬ್ಬಿನಕಂಬದ ಮರ	*Polyalthia longifolia* (Sonner) Thw ಪಾಲಿಯಾಲ್ತಿಯ ಲಾಂಗಿಫೋಲಿಯ Syn. Guatteria longi- folia *Wall* Debdar, Mast tree, Indian fir (Hin) Asok, Devidari	Annonaceae ಅನೊನೇಸೀ	38	3
52	44	ಪ್ರೊಸೊಪಿಸ್ ಸ/ಮ,ಮಕ, ಅ, ವೇ, ಮು, ಸೌ, ತೋ	ಬಳ್ಳಾರಿ ಜಾಲಿ ಸೀಮೆ ಜಾಲಿ	*Prosopis juliflora* DC ಪ್ರೊಸೊಪಿಸ್ ಜೂಲಿಫ್ಲೋರ Mesquite	Leguminosae ಲೆಗೂಮಿನೋಸೀ	112	

1	2	3	4	5	6	7	8
53	**45 (vi)**	ಬನ್ನಿ ದೊ, ಮಕ, ಎಉ, ಮು		*Acacia farruginea* DC . ಅಕೇಷಿಯ ಫೆರುಜೀನಿಯ	Leguminosae ಲೆಗೂಮಿನೋಸೀ	127	
54	**26**	ಬಂದರಿಕೆ ಸ, ಸೌ, ಮು	ಬಂದರೆ ಬಂಡಾರೆ ಹಂಗರಿಕೆ	*Dodonea viscosa* Jacq ಡೊಡೋನಿಯ ವಿಸ್ಕೋಸ	Sapindaceae ಸ್ಯಾಪಿಂಡೇಸಿ	70	
55	46 (i)	ಬಾಗೆ ದೊ, ಎಉ, ಚೌ, ವೋ, ತೇ, ಸಾ, ತೋ,	ಕಲ್ಬಾಗೆ ಶಿರೀಷ ಸೀತೆ ಶಿರೀಷ ಹೊಂಬಾಗೆ	*Albizia lebbeck* (Linn) Benth ಆಲ್‌ಬೀಸಿಯ ಲೆಬೆಕ್ Syn. Mimosa sirissa Block siris; Fry wood tree ; Parrot tree ; Sizzling tree; Siris, Woman's tongue (Hin) Siris, Sirasa, Kalshish	Leguminosae ಲೆಗೂಮಿನೋಸೀ 3. Mimosae ಮಿಮೋಸೀ	128	78
56	46 (ii)	ಬಿಲ್ವಾರ ದೊ, ಎಉ, ಚೌ, ಸೌ, ತೇ, ಕಮ, ಸಾ, ಶಾ	ಚಿಲಬಾಗಿ ಬಿಲ್ಕಂಬಿ ಬೀವಾರ ಬಜಾರಿ ಬಿಟ್ಟಸುಜ್ಜಲು	*Albizia odorotissima* (Linn) Benth ಆಲ್‌ಬೀಸಿಯ ಒಡೋರೋಟಿಸ್ಸೀಮ.	Leguminasae ಲೆಗೂಮಿನೋಸೀ 3. Mimosae ಮಿಮೋಸೀ	129	

1	2	3	4	5	6	7	8
57	45 (ii)	ಬಿಳಿಜಾಲಿ ಮ, ಮಕ, ಮು. ಸೌ, ಮೇ, ಕೈ	ತುಂಬಿಮರ ತೊಪ್ಪಾಲೆ ಸಾರಾಯಿ ಬೇಲ	*Acacia leucophloea* Willd ಅಕೇಪಿಯ ಲ್ಯೂಕೊಫ್ಲೋಯಿಯ	Leguminosae ಲೆಗೂಮಿನೋಸೀ Mimosae ಮಿಮೋಸೀ	121	
58	(ii)	ಬಿಳಿಬೂರಗ ಎಲು, ಅ, ಕೈ, ಸುತೇ,	ಬಿಳೀ ಬರ‍್ಲು	*Ceiba pentandra* (Linn) Gaertn. ಸೀಬಾ ಪೆಂಟಾಂಡ್ರ Syn. Eriodendron anfructosun *DC* E. Pentandrum *Kurz* Bombax pentandrum *Willd* White cotton tree Kapok tree (Hin) Hattian, Katan, Safed Simal	Malvaceae ಮಾಲ್ವೇಸೀ	49	9
59	49 (ii)	ಬಿಳಿಮತ್ತಿ ದೊ, ಎಲು/ನಿಹ ಅ, ಚೌ, ಮಕ, ಸಾ,	ತೋರಮತ್ತಿ, ಕರುತ್ತಿ ಅರ್ಜುನ ಮರ	*Terminalia arjuna* (Roxb) Wt & Arn ಟರ್ಮಿನೇಲಿಯ ಅರ್ಜುನ Syn. Pentaptera arjuna White Murdah. (Hin) Arjuna, jamla Anjan, Kawa.	Combretaceae ಕಾಂಬ್ರಿಟೇಸೀ	138	81

1	2	3	4	5	6	7	8
60	**32**	ಬಿಂದಿ ದೊ, ಎಬು, ಚಾ, ಸೌ, ತೇ, ಮೊ, ಸಾ, ಕಾ	ಬಿಂಡಿಮರ ಶಿಸ್ಸು ಶಿಷ್ಪುಬಾಗೆ ಇರುಗುಂಡಿಮಾವು ಅಗರ	*Dalbergia sissoo* Roxb ಡಾಲ್‌ಬರ್ಜಿಯ ಸಿಸ್ಸೂ Sissoo, South Indian redwood (Hin) Shishan, Sissu	Leguminosae ಲೆಗೂಮಿನೋಸೀ Papilionaceae ಪಾಪಿಲಿಯೋನೇಸೀ	80	*24* *25* *69*
61	**33**	ಬೀಟಿ ದೊ, ಎಬು, ಚಾ, ತೇ, ಸುತೇ, ಸಾ, ಕಾ	ಕರೀಮರ ಕರೇವ್ಯಾಡಿ ಬೀಟಿ ಬೀಟೆ ತೊಡೆಗಟ್ಟು	*Dalbergia latifolia* Roxb ಡಾಲ್‌ಬರ್ಜಿಯ ಲ್ಯಾಟಿಫೋಲಿಯ Black wood ; Dark black wood ; Indian Rose wood (Hin) Bilyati Shisham	Leguminosae ಲೆಗೂಮಿನೋಸೀ Papilionaceae ಪಾಪಿಲಿಯೋನೇಸೀ	83	*26*
62	**45 (iv)**	ಬುಡ್ಡೆಜಾಲಿ ಮು, ಎಬು, ಸುತೇ, ಸೌ, ಕೈ	ಕೊಡೆಮುಳ್ಳುಜಾಲಿ ಹೊಡೆಜಾಲಿ	*Acacia planifrons* Wt & Arn ಅಕೇಷಿಯ ಪ್ಲೇನಿಫ್ರಾನ್ಸ್ Umbrella thorn	Leguminosae ಲೆಗೂಮಿನೋಸೀ Mimosae ಮಿಮೋಸೀ	125	*75* *76*
63	**10**	ಬೂರುಗ ದೊ, ಎಬು, ಅ, ಚಾ, ತೇ, ಮುಕ, ಸಾ, ಕಾ	ಬೂರಗ ಕೆಂಪುಬೂರುಗ ಶಾಲ್ಮಲಿ	*Bombax ceiba* Linn ಬೊಂಬಾಕ್ಸ್ ಸೀಬ Syn. Bombax malabaricum *DC* B. heptaphyllum *Car*	Malvaceae ಮಾಲ್ವೇಸೀ	46	7

1	2	3	4	5	6	7	8
				Salmalia malabarica *Schott et Enal* Cotton tree ; Red silk cotton tree ; (Hin) Simal, Semar, Shimbal			
64	1	ಬೆಟ್ಟದಕಣಗಲು ಮ/ ದೊ, ಅ, ಕೈ, ಚಾ, ಮು	ಬೆಟ್ಟದಗಣಗಲು	*Dillenia indica* Linn ಡಿಲ್ಲೇನಿಯ ಇಡಿಕ Syn : D. speciosa *Thunb* Elephant apple (Hin) Chalta, girnar	Dilleniaceae ಡಿಲ್ಲೇನಿಯೇಸೀ	35	1
65	61	ಬೆಪ್ಪಾಲೆ ಸ, ಎಖ, ಕೈ, ತರಕಾರಿ	ಕುಡ ಕೊಡ ಕೊಡ್ಸಿಗೆ ಕೊಡೆಮುರುಕ ಪಾಲೆ ಹಾಲೆ	*Wrightia tinctoria* R. Br ರೈಟಿಯ ಟಿಂಕ್ಟೋರಿಯಂ Syn. Nerium tinctorium Roxb Ivory wood (Hin) Dudhi, Khirni Indarjan	Apocyanaceae ಅಪೋಸೈನೇಸೀ	161	51
66	67	ಬೆಂಡುಮರ ಇದ್ದಿಲಿನಮರ ತೇ, ಮ, ನಿಹ, ಕೈ	ಕರುಹಾಲೆ ಗೊರಕಲು ಗೋರ್ಕಲ್ ಗೋರ್ಕಲ್ಲು	*Trema orientalis* (Linn) Blune ಟ್ರೆಮಾ ಓರಿಯಾಂಟಾಲಿಸ್ Syn. Celtis orientalis *Roxb* Charcoal tree; Indian nettle tree.	Ulmaceac ಉಲ್ಮೇಸೀ	170	

1	2	3	4	5	6	8	8
67	**18**	ಬೇವು ಮ, ನಿಹ, ಚೌ, ಸೌ, ಮೋ, ಮಕ, ಸಾ, ಕಾ		*Azadirachta indica* Juss ಅಸಾಡಿರಕ್ಟ ಇಂಡಿಕ Syn· Melia azadirachta *Linn* Indian lilac, Margosa, Neem tree (Hin) Balamimb, neem, nimb	Meliaceae ಮಿಲಿಯೇಸೀ	57	*14* *63*
68	**49 (i)**	ಮತ್ತಿ ದೊ, ಎಲು, ಚೌ, ಸೌ, ಮಕ, ತೇ, ಕಾ	ಕರಿಮತ್ತಿ, ಹೆಬ್‌ಹಲುವೆ	*Terminalia alata* Heyne ex Roth ಟರ್ಮಿನೇಲಿಯ ಅಲಾಟ Syn. T. tomentosa. *W & A*	Combretaceae ಕಾಂಬ್ರಿಟೇಸೀ	136	*80*
69	**60 (ii)**	ಮಲ್ಲಾಳಿ ಮಲೆನಾಡಿನ ಮರ ತೇ, ದೋ, ಕೈ	ಅಬನಾಸಿ ತುಂಬುರುಸು	*Diospyros ebenum* Koen ಡಯೋಸ್ಪೈರೊಸ್ ಎಬಿನಂ Syn. D. melanoxylon *Roxb*	Ebenaceae ಎಬಿನೇಸೀ	161	*86*
70	**48**	ಮಳೆಮರ ದೊ, ನಿಹ, ಅ, ಮೋ, ಸುತೇ, ಸಾ, ಕಾ		*Samanea Saman* (Jacq) Merr ಸಮಾನಿಯ ಸಮಾನ್ Syn. Enterolobiun saman *Prain* Pithecellobium saman *Benth* Mimosa saman *Jacq* Raintree, guango, saman	Leguminosae ಲೆಗೂಮಿನೋಸೀ Mimosae ಮಿಮೋಸೀ	134	*39*

1	2	3	4	5	6	7	8
71	**45 (v)**	ವುಂಗಳಿ ಮ, ತೇ, ಸೌ, ಮು,	ಮುಗ್ಗಿ	*Acacia polycantha* Willd ಅಕೇಷಿಯ ಪಾಲಿಕಾಂತ Syn. Acacia Suma *Buch & Ham*	Leguminosae ಲೆಗೂಮಿನೋಸೀ Mimosae ಮಿಮೋಸೀ	125	*37*
72	**30**	ಮುತ್ತುಗ ಸ/ಮ, ಅ, ಎಲು, ಅ, ಕೈ, ಇದ್ದಿಲು, ಸೌ		*Butea monosperma* (Lamk) Taub ಬೂಟಿಯ ಮಾನೋಸ್ಪರ್ಮ Syn. Butea frondosa *Koen* Bastard teak, Bengal Kino, Flame of the Forest Parrot tree (Hin) dhak, palas, kakria	Leguminosae ಲೆಗೂಮಿನೋಸೀ Papilionaceae ಪ್ಯಾಪಿಲಿಯೊನೇಸೀ	77	23 *23 a*
73	**13**	ರುದ್ರಾಕ್ಷಿ ಮ, ಮಕ, ಸುತೇ, ಎಲು, ಚೌ, ಕೈ, ಮೋ, ತೋ	ಜೇನುಮರ ಭದ್ರಾಕ್ಷಿ	*Guazuma ulmifolia* Lamk ಗುಯಾಸೂಮ ಅಲ್ಮಿಫೋಲಿಯ Syn. G. tomentosa *Kunth* Buboma tomentosa *Spreng* Bastard cedar Honey-fruit tree Musket tree	Sterculariaceae ಸ್ಟರ್ಕ್ಯೂಲೇರಿಯೇಸೀ	52	*11*

1	2	3	4	5	6	7	8
74	43	ವುಣ್ಣೆ ಸ, ಮಕ, ಸೌ, ಮೇ, ಮು	ಪೆರುಂಬೆ ಉಣ್ಣೆ	*Prosopis cineraria* (Linn) Mackr ಪ್ರೊಸೋಪಿಸ್ ಸಿನಿರೇರಿಯ Syn. P. spicegera	Leguminosae ಲೆಗೂಮಿನೋಸೀ	111	
75	37	ಸಣ್ ಕತ್ರಿ ಸ, ಮಕ, ಔ, ಅ, ಎಲು	ಕೆಂಪುಕೆಂಜಿಗ ನಿರಂಗಿ ವಾತನಾರಾಯಣ ಸಂಕೇಶ್ವರಿ ಸುಂಕತ್ರಿ	*Delonix elata* (Linn) Gamble ಡೆಲೊನಿಕ್ಸ್ ಎಲಾಟ	Leguminosae ಲೆಗೂಮಿನೋಸೀ Ceasalpinieae ಸಿಸಾಲ್‌ಪಿನಿಯೀ	96	
76	3	ಸಂಪಿಗೆ ದೊ, ನಿಹ, ಅ, ಚೌ, ಸೌ, ತೇ, ಸಾ	ಚಂಪಕ	*Michelia champaca* Linn ಮೈಕೀಲಿಯ ಚಂಪಕ Syn. M. aurantiaca *Wall* Golden champa Yellow champa (Hin) champa, champaka	Magnoliaceae ಮ್ಯಾಗ್ನೋಲಿಯೇಸೀ	37	2
77	21	ಸ್ವಾಮಿಮರ ದೊ, ತೇ, ಮು, ಕೈ	ಕಲ್ಲರಿಗೆ ಕೆಮ್ಮರ ಸೋಮೆಮರ	*Soymidia febrifuga* A. Juss ಸಾಯ್‌ಮಿಡಿಯ ಫೆಬ್ರಿಫ್ಯೂಗ Indian red wood	Meeliaceae ಮಿಲಿಯೇಸೀ	62	

1	2	3	4	5	6	7	8
78	6	ಸುರಗಿ ದೊ, ತೇ, ನಿಹ, ಅ, ಮು, ಕೈ	ಸುರ್ಗಿ ಗರ್ದುಂಡಿ ಪುನ್ನಾಗ ಪುನೆ ವುಂಡಿ	*Mammea suriga* (Buch-Ham. ex Roxb) Kosterm ಮ್ಯಾಮಿಯ ಸುರಿಗ Syn· Ochrocarpus longifolius *Benth & Hook* Calysaccion longifolium (Hin) Nagkeshar, Surgi Suringi	Guttiferae ಗಟ್ಟಿಫರೀ	41	4
79	7	ಸುರಂಹೊನ್ನೆ ಮ, ನಿಹ, ಅ, ಕೈ, ಚೌ, ಮು, ಔ, ಸಾ.	ಉಮ ಓನ್ನೆಕಾಯಿ ಪುನ್ನಾಗ ಸುಡಾಬು ಹೂಹೊಮ್ಮೆ	*Calophyllum iono-* *phyllum* Linn ಕ್ಯಾಲೋಫೈಲಂ ಐನೋಫೈಲಂ Alexandrian laurel Dilo oil tree	Guttiferae ಗಟ್ಟೀಫರೀ	42	5
80	64	ಸಿಲ್ವರ್ ಓಕ್ ಮ, ನಿಹ, ಅ, ಚೌ, ಸೌ, ತೇ, ಸಾ, ಶಾ	ನಾಟ್ಓಕ್ ಮರ	*Grevillea robusta* A Cunn ಗ್ರೆವೀಲಿಯ ರೋಬಸ್ಟ Silky oak, Silver oak	Proteaceae ಪ್ರೋಟಿಯೇಸೀ	166	54
81	38 iv	ಸೀಮೆತಂಗಡಿ ಮ, ನಿಹ, ಅ,	ಹಿರೇ ತಂಗಡಿ	*Cassia siamea* Lamk ಕ್ಯಾಷಿಯ ಸಯಾಮಿಯ	Leguminosae ಲೆಗೂಮಿನೋಸೀ	101	30

1	2	3	4	5	6	7	8
		ಸೌ, ಮಕ, ಸುತೇ, ಸಾ, ಕಾ.		Syn. C. Senna sumatrana.	Ceasalpinieae ಸಿಸಾಲ್‌ಪಿನಿಯೀ		
82	47	ಸೀಮೆ ಹುಣಿಸೆ ಸ, ಮಕ, ಮೇ, ಮು, ಸೌ, ಬೇಲಿ, ಚೌ.	ಕೊರಕಾಪ್ಪುಳಿ ಕೊಟಾಂಪುಳಿ ಮನಿಲಾ ಹುಣಿಸೆ	*Pithecellobium dulce* (Roxb) Benth ಪಿತೆಸೆಲ್ಲೋಬಿಯಂ ಡಲ್ಸಿ Syn. Mimosa dulcis *Roxb* Inga dulcis *Willd* Guayamochil Madras thorn Manilla tamarind (Hin) Biliyati imli Dakhani babul.	Leguminosae ಲೆಗೂಮಿನೋಸೀ Mimosae ಮಿಮೋಸೀ	132	*38*
83	62	ಸೊಳ್ಲೆ ಮ, ಮು, ಕೈ.	ಕಾಡುಸೊಳ್ಳೆ ಕೆಂದಲ್ ಕೆಂಡಾಲ ಚೆಡ್ಲು ಚೆಳ್ಳ ಮಣ್ಣಡಿಕೆ	*Cordia dichotoma* Forst f ಕಾರ್ಡಿಯ ಡೈಕೋಟೋಮ Syn. Cordia myxa *Linn* C. obliqua *Willd* Clammy cherry, Indian cherry, Sebestan.	Boraginaceae ಬೋರಾಜಿನೇಸೀ	163	*52*
84	10	ಹಳದಿ ಬೂರುಗ ಸ, ಅ, ಕೈ.		*Cochlospermum* *gossypium* ಕಾಕ್ಲೋಸ್ಪರ್ಮಮ್ ಗಾಸೀಪಿಯಮ್	Bixaceae ಬಿಕ್ಸೇಸೀ	49	*8*

1	2	3	4	5	6	7	8
				Syn. Bombax gossypium *Willd* Buttercup tree Torchwood tree Yellow silk cotton (Hin) Kumbi, godbi, ganiar			
85	30	ಹಾಲಿವಾಣ ಮ, ಎಱ, ಅ, ಚೌ, ತೇ, ತೋ, ಕಾ.	ಬಳಿವಾರ್ಜಪೆ ವಾರ್ಜಪೆ ಹಾಲುವಾಣ	*Erythrina indica* Lamk ಎರಿಥ್ರೈನ ಇಂಡಿಕ Coral tree, Mochi wood (Hin) Pangra, dadap	Leguminosae ಲೆಗೂಮಿನೋಸೀ Papilionaceae ಪಾಪಿಲಿಯೋನೇಸೀ	75	*22*
86	19	ಹುಚ್ಚುಬೇವು ಮ, ಎಱ, ಅ, ಚೌ, ತೇ, ಮಕ, ಸಾ.	ಅರೆಬೇವು ಕಾಡ್ಬೇವು ಚಿಕ್ಕಬೇವು	*Melia azedarach* Linn ಮೀಲಿಯ ಅಸೆಡರಾಕ್ Bead tree, Barbados lilac, China tree Persian lilac, Pride of China, Pride of India, (Hin) Bakain, Mahanimb drekbetain	Meliaceae ಮಿಲಿಯೇಸೀ	60	*15* *64*
87	40	ಹುಣಿಸೆ ದೊ, ನಿಹ,		*Tamarindus indica* Linn ಟಾಮರಿಂಡಸ್ ಇಂಡಿಕ	Leguminosae ಲೆಗೂಮಿನೋಸೀ	105	*33*

1	2	3	4	5	6	7	8
		ಅ, ಹ, ಚೌ, ಎಲ್ಲಾಕಡೆ, ಸಾ, ತೋ.		Tamarind (Hin) Imli	Ceasalpinieae ಸಿಸಾಲ್‌ಪಿನೀಯೀ		
88	23	ಹುರಗಲು ಮರ ಮ, ತೀ, ಸುತೀ, ಮಕ, ಚೌ, ಕೈ, ಮು.	ಬಿಟ್ಟುಲ ಮಲಸಿ ಮಾಸಿ ಮಾಸುಲು ಮುಷದ್ಗ ಮೂಷೂಡ್ಲ ಹುರಿಹುಲಿ	*Chlorxylon swietiana* DC ಕ್ಲೋರೋಕ್ಸೈಲಾನ್ ಸ್ವೈಟಿಯಾನ	Meliacae ಮಿಲಿಯೇಸೀ	65	
89	49 (Iv)	ಹುಲ್ತೈ ತೇ, ಮು.	ಹುನುಗಲು ಹುಲುವೆ ಹೊನಾರ್	*Terminalia paniculata* Roth ಟರ್ಮಿನೇಲಿಯ ಪ್ಯಾನಿಕ್ಯುಲೇಟ	Combretaceae ಕಾಂಬ್ರಿಟೇಸೀ	141	
90	12	ಹೂವರಸಿ ಸ/ಮ, ನಿಹ, ಅ, ಚೌ, ಕರ, ಸಾ.	ಆಶ ಜೋಗಿಯರಳೆ ಬುಗುರಿ ಹೂರ್ವಪಿ ಹೂವರಾಷಿ ಕಂಡಸೋಲ	*Thespesia populnea* (Linn) Suland ex corr ತೇಸ್‌ಪೀಸಿಯ ಪಾಪುಲ್‌ನಿಯ Syn. Hibiscus populneus *Linn* Tulip tree, Portia tree, Umbrella tree (Hin) Paras, pital-gajahand	Malvaceae ಮಾಲ್ವೇಸೀ	50	*10*

1	2	3	4	5	6	7	8
91	**58**	ಹೆತ್ತೀಗ ದೊ. ತೇ. ಕೈ. ಔ. ಚಾ.	ಅರಿಶಿನ ತೇಗ ಎಟ್ಟಿಗ ಎತ್ತಾಗ ಬಾಚಣಿಗೆ ದೊಡ್ಡ ಕಡಕ ಹೆಡ್ಡ	*Adina cordifolia* (Roxb) Hook f. ex Brandis ಅಡೀನ ಕಾರ್ಡಿಫೋಲಿಯ	Acanthaceae ಅಕಾಂಥೇಸೀ	156	*85*
92	**20**	ಹೆಬ್ಬೇವು ಮಲೆನಾಡು. ದೊ. ತೇ. ಮು. ಅ, ಸಾ.	ಬೆಟ್ಟಬೇವು ತುರುಕ ಬೇವು	*Melia composita* Willd. ಮೀಲಿಯ ಕಂಪೊಸಿಟ Great neem	Meliaceae ಮಿಲಿಯೇಸೀ	61	
93	**5**	ಹೆಸ್ಸರೆ ಮ. ಸುತೇ. ಅ, ಸೌ. ಸಾ.	ಕರಿಹೆಸ್ಸರೆ ಮರ ಹೆಸ್ಸಾರಿ	*Miliusa tomentosa* Roxb. ಮಿಲಿಯೂಸ ಟೊಮೆಂಟೋಸ Syn. Saccopetallum tomentosum	Annonaceae ಅನೊನೇಸೀ	40	
94	**46** (iii)	ಹೊಟ್ಟೆಬಾಗೆ ಮಲೆನಾಡು, ತೇ ದೊ, ಇದ್ದಿಲು, ಚಾ, ಕೈ, ಅ, ಸಾ. ತೋ. ಬಿ.	ಕಾಲ್ಬಾಗಿ ಕೊಟಿಪಾಲೆ	*Albizia chinensis* (Osbeck) Merr ಆಲ್‌ಬೀಸಿಯ ಚೈನೆನ್ಸಿಸ್ Syn. A. marginata *Merr*	Leguminosae ಲೆಗೂಮಿನೋಸೀ Mimosae ಮಿಮೋಸೀ	131	79

1	2	3	4	5	6	7	೮
95	35	**ಹೊನ್ನೆ** ದೊ, ಸುತೇ, ಎಉ, ಚೌ, ಮು.	ಒಳ್ಳೆಹೊನ್ನೆ ಬಿಲ್ಲು ಹನೆ	*Pterocarpus marsupium* Roxb Indian Kino	Leguminosae ಲೆಗೂಮಿನೋಸೀ Papilionaceae ಪ್ಯಾಪಿಲಿಯೋನೇಸೀ	85	
96	53	**ಹೊಳೆದಾಸವಾಳ** ದೊ/ಮು, ಎಉ, ಅ, ಚೌ, ತೇ, ಸಾ.	ಚಲ್ಲೆ ಚೆಲ್ಲುಮರ ಚಿಲ	*Lagerstroemia* *speciosa* (Linn) Pers. ಲಾಗರ್‌ಸ್ಟ್ರೋಮಿಯ ಸ್ಪೀಷಿಯೋಸ Syn. L. Reginae *Roxb* L. flos Reginae *Ritz* Queen flower Pride of India	Lythraceae ಲೈಥ್ರೇಸೀ	149	45
97	36	ಹೊಂಗೆ ಮ, ಎಉ/ನಿಹ, ಅ, ಸೌ, ಮಕ, ಸಾ, ತೋ, ಕಾ.	ಉಗ್ಗಮರ ಕರಂಜ ಬಟ್ಟೆ ಹುಲುಗುಲು ಹುಲಿಗಿಲಿ	*Pongamia pinnata* (Linn) Pierre. ಪೊಂಗೇಮಿಯ ಪಿನ್ನಾಟ Syn. P. glabra *vent* Galedupa indica *Lamk* Indian beech Poong oil plant (Hin) Karanj. papar, Kirmal	Leguminosae ಲೆಗೂಮಿನೋಸೀ Papilionaceae ಪ್ಯಾಪಿಲಿಯೋನೇಸೀ	90	*28* *70*

ಮರಗಳ ಅಕಾರಾದಿ ಸೂಚಿ

(ಚಿತ್ರದ ಸಂಖ್ಯೆಯನ್ನು ದಪ್ಪ ಅಚ್ಚಿನಲ್ಲಿ ಕಾಣಿಸಿದೆ)

ಕೃಷಿ ವಿಶ್ವವಿದ್ಯಾನಿಲಯದ ಪ್ರಕಟಣೆಗಳು

1.	ಸುಭಿಕ್ಷತೆಗೆ ತೆರೆದಬಾಗಿಲು.		1–50
2.	ಪೀಡೆನಿರ್ವಹಣೆ.		3–75
3.	ಕೀಟಗಳ ವಿಂಗಡಣೆ.		12–00
4.	ಕೀಟ ಹತೋಟಿ.		10–00
5.	ಸಾಕುಪ್ರಾಣಿಗಳ ಶರೀರಕ್ರಿಯಾ ಶಾಸ್ತ್ರ (ಭಾಗ–1)		5–00
6.	ತರಕಾರಿ ಬೇಸಾಯ.		10–00
7.	ಕೃಷಿ ರಸಾಯನಶಾಸ್ತ್ರ ಶಬ್ದಾರ್ಥ	ಸಾದಾ ಪ್ರತಿ	3–75
	ನಿರೂಪಣಾವಳಿ.	ಕ್ಯಾಲಿಕೊ ಪ್ರತಿ	5–00
8.	ಮಣ್ಣು ಮತ್ತು ನೀರು ಸಂರಕ್ಷಣಾ	ಸಾದಾ ಪ್ರತಿ	12–00
	ಕೈಪಿಡಿ.	ಕ್ಯಾಲಿಕೊ ಪ್ರತಿ	15–00
9.	ರೈತರ ನೆಚ್ಚುಮೆಚ್ಚಿನ ಮರಗಳು.	ಸಾದಾ ಪ್ರತಿ	12–00
		ಕ್ಯಾಲಿಕೊ ಪ್ರತಿ	15–00

ಅಚ್ಚಿನಲ್ಲಿವೆ :

1. ಸಾಕುಪ್ರಾಣಿಗಳ ಶರೀರಕ್ರಿಯಾ ಶಾಸ್ತ್ರ (ಭಾಗ–2).
2. ಮಣ್ಣು ಮತ್ತು ಮಣ್ಣುನಿರ್ವಹಣೆ.
3. ಬೀಜಗಣಿತ ಪರಿಚಯ.
4. ಕಳೆಗಳು ಮತ್ತು ಕಳೆಗಳ ನಿಯಂತ್ರಣ.
5. ಕೃಷಿ ಸಹಕಾರ.

ಈ ಲೇಖಕರ ಪ್ರಕಟಿತವಾದ ಪುಸ್ತಕಗಳು

1. ಮೈಸೂರಿನ ವ್ಯವಸಾಯ. ಮೈ. ವಿ. ವಿ.
2. ಇದು ಯಾವ ಮರ *
3. ಮಣ್ಣು, ಅದರ ಹುಟ್ಟು, ಬದುಕು, ಸಾವು *
4. ವನಮಾಲಿ *
5. ಇದು ಯಾವ ನಾಯಿ.
6. ನಮ್ಮ ಹಣ್ಣುಗಳು. (ಮೈ. ವಿ. ವಿ. ಗೃಹಸರಸ್ವತಿ ಗ್ರಂಥಮಾಲೆ)
7. ನಮ್ಮ ವನಗಳು (")
8. ಶ್ರೀ ಎಂ. ಆರ್. ಆನಂದರಾಮಯ್ಯನವರೊಂದಿಗೆ,
   "ತೋಟಗಾರಿಕೆ" ಸಂಪುಟ 1. ಮೂಲತತ್ವಗಳು. ಮೈ. ವಿ. ವಿ.

ಮೈ. ವಿ. ವಿ. – ಮೈಸೂರು ವಿಶ್ವವಿದ್ಯಾನಿಲಯದ ಪ್ರಕಟನೆ.

* ಕೇಂದ್ರ ಶಿಕ್ಷಣ ಮಂತ್ರಾಲಯದವರು ನಡೆಸುವ ಪುಸ್ತಕ ಸ್ಪರ್ಧೆಗಳಲ್ಲಿ ಬಹುಮಾನ ಪಡೆದ ಪುಸ್ತಕಗಳು.

ಮ. ಲ. ನರಸಿಂಹ ಅಯ್ಯಂಗಾರ್, B.A., L.Ag., B.T.

ಚನ್ನಪಟ್ಟಣದ ಬಳಿಯ ಮಳೂರಿನ ಹಸುರುವಾಣ ವಂಶಕ್ಕೆ ಸೇರಿದ ಇವರು ಮೈಸೂರಿನಲ್ಲಿ ಹುಟ್ಟಿ ಬೆಳೆದರು. ಸೆಂಟ್ರಲ್ ಕಾಲೇಜು, ಮೈಸೂರು ವ್ಯವಸಾಯದ ಸ್ಕೂಲು ಮತ್ತು ಮಹಾರಾಜಾ ಕಾಲೇಜಿನಲ್ಲಿ ಓದಿ, 10 ವರ್ಷ ಎಸ್. ಎಲ್. ಎನ್. ಹೈಸ್ಕೂಲು, ಹೆಬ್ಬಾಳಿನ ವ್ಯವಸಾಯದ ಸ್ಕೂಲು ಮತ್ತು ಕಾಲೇಜಿನಲ್ಲಿ ಪಾಠ ಹೇಳಿದರು. 10 ವರ್ಷ ಕಾಲ, ಮೈಸೂರು ವ್ಯವಸಾಯದ ಇಲಾಖೆಯ ನಿರ್ದೇಶಕರ ಬಳಿ ತಾಂತ್ರಿಕ ಸಹಾಯಕರಾಗಿದ್ದರು. ಅನಂತರ ದೆಹಲಿಯಲ್ಲಿ ಕೇಂದ್ರ ಕೃಷಿ ಮಂತ್ರಾಲಯದಲ್ಲಿ ಫಾರಂ ರೇಡಿಯೋ ಆಫಿಸರ್ ಆಗಿ ಇದ್ದು ಈಗ ನಿವೃತ್ತರಾಗಿ ಬೆಂಗಳೂರಿನಲ್ಲಿದ್ದಾರೆ.

ಮೈಸೂರಿನ ವ್ಯವಸಾಯದ ಪತ್ರಿಕೆ, ವ್ಯವಸಾಯದ ಪಂಚಾಂಗ ಮತ್ತು ವಾರ್ಷಿಕ ಪುಸ್ತಕ, ದೆಹಲಿಯ ರೂರಲ್ ಬ್ರಾಡ್‌ಕಾಸ್ಟರ್, ಹೋಮ್ ಸೈನ್ಸ್ ಪತ್ರಿಕೆಗಳ ಸಂಪಾದಕರಾಗಿದ್ದರು. ಅಗ್ರಿಕಲ್ಚರಲ್ ಇನ್‌ಫರ್‌ಮೇಷನ್ ಕಮ್ಯೂನಿಕೇಟರ್ಸ್ ಅಸೋಸಿಯೇಷನ್ ಆಫ್ ಇಂಡಿಯ ದ (AICA) ಸ್ಥಾಪಕರಲ್ಲಿ ಒಬ್ಬರು. ಕೆಲವಾರು ವರ್ಷ ಆ ಸಂಘದ ಕಾರ್ಯದರ್ಶಿಯಾಗಿದ್ದರು. ತೋಟಗಾರಿಕೆ, ಸ್ಟಾಂಪು ಕಲೆಹಾಕಿಕೆ, ಓದು, ಬರಹ ಇವರ ಹವ್ಯಾಸಗಳು.